# ಇತಿಹಾಸ ಮತ್ತು ರಾಜ್ಯಶಾಸ್ತ್ರ

## ಒಂಬತ್ತನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿ. 3.3.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ನಿರ್ಧಾರಿತಗೊಳಿಸಲಾಗಿದೆ.

# ಇತಿಹಾಸ ಮತ್ತು ರಾಜ್ಯಶಾಸ್ತ್ರ

## ಒಂಬತ್ತನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

C1GZQU

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವQ.R. Codeದ ಮೂಲಕ ಆ ಪಾಠಕ್ಕೆಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ: 2017
ಪುನರ್ಮುದ್ರಣ :
ಸೆಪ್ಟೆಂಬರ 2021

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ 411004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಕಡೆಗೆ ಈ ಪುಸ್ತಕದ ಎಲ್ಲ ಹಕ್ಕುಗಳು ಇರುತ್ತವೆ. ಈ ಪುಸ್ತಕದಲ್ಲಿಯ ಯಾವುದೇ ಭಾಗವನ್ನು ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಉದ್ಧೃತಗೊಳಿಸಬಾರದು.

**ಇತಿಹಾಸ ವಿಷಯ ಸಮಿತಿ**

ಡಾ. ಸದಾನಂದ ಮೋರೆ, ಅಧ್ಯಕ್ಷ
ಶ್ರೀ. ಮೋಹನ ಶೇಟೆ, ಸದಸ್ಯ
ಶ್ರೀ. ಪಾಂಡುರಂಗ ಬಲಕವಡೆ, ಸದಸ್ಯ
ಶ್ರೀ. ಬಾಪುಸಾಹೇಬ ಶಿಂದೆ, ಸದಸ್ಯ
ಶ್ರೀ. ಬಾಳಕೃಷ್ಣ ಚೋಪಡೆ, ಸದಸ್ಯ
ಶ್ರೀ. ಪ್ರಶಾಂತ ಸರೂಡಕರ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ-ಸಚಿವ

**ನಾಗರಿಕಶಾಸ್ತ್ರ ವಿಷಯ ಸಮಿತಿ**

ಡಾ. ಶ್ರೀಕಾಂತ ಪರಾಂಜಪೆ, ಅಧ್ಯಕ್ಷ
ಪ್ರಾ. ಸಾಧನಾ ಕುಲಕರ್ಣಿ, ಸದಸ್ಯ
ಡಾ. ಮೋಹನ ಕಾಶೀಕರ, ಸದಸ್ಯ
ಶ್ರೀ. ವೈಜನಾಥ ಕಾಳೆ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ-ಸಚಿವ

**ಇತಿಹಾಸ ಮತ್ತು ನಾಗರಿಕಶಾಸ್ತ್ರ ಅಭ್ಯಾಸಗಟ**

| | |
|---|---|
| ಶ್ರೀ. ರಾಹುಲ ಪ್ರಭು | ಡಾ. ರಾವಸಾಹೇಬ ಶೆಳಕೆ |
| ಶ್ರೀ. ಸಂಜಯ ವಝರೇಕರ | ಶ್ರೀ. ಮರಿಬಾ ಚಂದನಶಿವೆ |
| ಶ್ರೀ. ಸುಭಾಷ ರಾಠೋಡ | ಶ್ರೀ. ಸಂತೋಷ ಶಿಂದೆ |
| ಸೌ. ಸುನೀತಾ ದಳವಿ | ಡಾ. ಸತೀಶ ಚಾಪಲೆ |
| ಪ್ರಾ. ಶಿವಾನಿ ಲಿಮಯೆ | ಶ್ರೀ. ವಿಶಾಲ ಕುಲಕರ್ಣಿ |
| ಶ್ರೀ. ಭಾವುಸಾಹೇಬ ಉಮಾಟೆ | ಶ್ರೀ. ಶೇಖರ ಪಾಟೀಲ |
| ಶ್ರೀ. ನಾಗನಾಥ ಯೆವಲೆ | ಶ್ರೀ. ಸಂಜಯ ಮೆಹತಾ |
| ಶ್ರೀ. ಸದಾನಂದ ಡೊಂಗರೆ | ಶ್ರೀ. ರಾಮದಾಸ ಠಾಕರ |
| ಶ್ರೀ. ರವೀಂದ್ರ ಪಾಟೀಲ | ಡಾ. ಅಜಿತ ಆಪಟೆ |
| ಶ್ರೀ. ವಿಕ್ರಮ ಅಡಸೂಳ | ಡಾ. ಮೋಹನ ಖಡಸೆ |
| ಸೌ. ರೂಪಲಿ ಗಿರಕರ | ಸೌ. ಶಿವಕನ್ಯಾ ಕದೇರಕರ |
| ಡಾ. ಮೀನಾಕ್ಷಿ ಉಪಾಧ್ಯಾಯ | ಶ್ರೀ. ಗೌತಮ ಡಾಂಗೆ |
| ಸೌ. ಕಾಂಚನ ಕೇತಕರ | ಡಾ. ವೆಂಕಟೇಶ ಖರಾತ |
| ಸೌ. ಶಿವಕನ್ಯಾ ಪಟವೆ | ಶ್ರೀ. ರವೀಂದ್ರ ಜಿಂದೆ |
| ಡಾ. ಅನಿಲ ಸಿಂಗಾರೆ | ಡಾ.ಪ್ರಭಾಕರ ಲೊಂಡೆ |

**ಲೇಖಕರು**

ಡಾ. ಗಣೇಶ ರಾವುತ, ಡಾ. ವೈಭವಿ ಪಳಸುಲೆ

**ಮುಖಪುಟ ಮತ್ತು ಅಲಂಕಾರ**

ಶ್ರೀ. ಮುಕೀಮ ಶೇಖ

**ನಕಾಶೆಕಾರ**

ಶ್ರೀ. ರವಿಕಿರಣ ಜಾಧವ

**ಅಕ್ಷರಜೋಡಣೆ**

ಕ್ವಿಂಟೆಕ್ಸ್, ಫೋರ್ಟ್, ಮುಂಬಯಿ-1

**ಕಾಗದ :** 70 ಜಿಎಸ್‌ಎಮ್. ಕ್ರೀಮವೋವ್ವ

**ಮುದ್ರಣಾದೇಶ:**

**ಮುದ್ರಕ :**

**ಕನ್ನಡ ಸಂಯೋಜನ ಪ್ರಮುಖರು**

ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿ, ಕನಡ
ಶ್ರೀ. ಆರ್.ಎಮ್. ಗಣಾಚಾರಿ, ವಿಷಯ ಸಹಾಯಕ, ಕನ್ನಡ,
ಇತಿಹಾಸ
ಭಾಷಾಂತರ:- ಶ್ರೀ. ಎನ್‌ಎಮ್ ಕುಲಕರ್ಣಿ
ಸಮೀಕ್ಷೆ: ಶ್ರೀ. ಆರ್‌ಎಸ್ ಪಾಟೀಲ
ರಾಜ್ಯಶಾಸ್ತ್ರ
ಭಾಷಾಂತರ:- ಶ್ರೀ. ಪ್ರಕಾಶ ಎಲ್. ಪ್ರಧಾನ
ಸಮೀಕ್ಷೆ: ಶ್ರೀಮತಿ ವಿಜಯಲಕ್ಷ್ಮಿ ಆರ್. ರೇವಣಕರ

**ನಿರ್ಮಿತಿ**

ಶ್ರೀ. ಸಚ್ಚಿತಾನಂದ ಆಫಳೆ,
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಪ್ರಭಾಕರ ಪರಬ,
ನಿರ್ಮಿತಿ ಅಧಿಕಾರಿ
ಶ್ರೀ. ಶಶಾಂಕ ಕಣಿಕದಳೆ,
ಸಹಾಯಕ ನಿರ್ಮಿತಿ ಅಧಿಕಾರಿ

**ಪ್ರಕಾಶಕ**

ಶ್ರೀ. ವಿವೇಕ ಉತ್ತಮ ಗೋಸಾವಿ, ನಿಯಂತ್ರಕ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ವಿದ್ಯಾರ್ಥಿ ಮಿತ್ರರೇ,

ಕ್ರಿ.ಶ. 1961 ರಿಂದ 2000ದ ವರೆಗಿನ ಕಾಲಾವಧಿಯ ಸಮಾವೇಶವಿರುವ 9ನೆಯ ಇಯತ್ತೆಯ ಇತಿಹಾಸ ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ನಮಗೆ ತುಂಬಾ ಹರ್ಷವೆನಿಸುತ್ತದೆ. ಇತಿಹಾಸದ ಅಭ್ಯಾಸಕ್ರಮವನ್ನು ಹೆಚ್ಚಿಗೆ ಹೆಚ್ಚು ಸುವ್ಯವಸ್ಥಿತವಾಗಿ ಮಾಡುವ ಪ್ರಯತ್ನದ ಒಂದು ಭಾಗವೆಂದರೆ ಈ ಪಠ್ಯಪುಸ್ತಕವಾಗಿದೆ.

ಈ ಪಠ್ಯಪುಸ್ತಕದಲ್ಲಿ ಕ್ರಿ.ಶ. 1961ರ ನಂತರದ ಕಾಲದಲ್ಲಿ ಭಾರತದಲ್ಲಾದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಅನ್ಯಕ್ಷೇತ್ರಗಳಲ್ಲಿಯ ವಿಕಾಸದ ಪರಿಶೀಲನೆ ಮಾಡಲಾಗಿದೆ. ಆದಾಗ್ಯೂ ಈ ಪರಿಶೀಲನೆಯು ಪರಿಪೂರ್ಣವಲ್ಲವೆಂಬುದರ ಪ್ರಜ್ಞೆಯಿರುವುದು ಅವಶ್ಯವಾಗಿದೆ. ಪಠ್ಯಪುಸ್ತಕಕ್ಕಿರುವ ಪುಟಗಳ ನಿರ್ಬಂಧವನ್ನು ಲಕ್ಷ್ಯದಲ್ಲಿಟ್ಟು ಸಾಮಾನ್ಯವಾಗಿ ನಾಲ್ವತ್ತು ವರ್ಷಗಳ ಸಂಕ್ಷಿಪ್ತ ಪರಿಶೀಲನೆಯನ್ನು ಮಾಡಲಾಗಿದೆ. ಉದ್ಯೋಗ ಮತ್ತು ಕೃಷಿ ಇವುಗಳ ಸಮಾವೇಶವಿರುವ ಭಾರತದ ಆರ್ಥಿಕ ನೀತಿಯ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿಯ ಬದಲಾವಣೆಯ, ಮಹಿಳೆಯರ ಸಬಲೀಕರಣದ ಮತ್ತು ಸಮಾಜದಲ್ಲಿಯ ಕೊನೆಯ ಘಟಕಗಳಿಗೆ ಸಂಬಂಧಿತವಾದ ವಿಕಾಸದ ಘಟನೆಗಳ ಉಲ್ಲೇಖವು ಈ ಪುಸ್ತಕದಲ್ಲಿದೆ. ಶಿಕ್ಷಣ ಕ್ಷೇತ್ರದಲ್ಲಿಯ ಪ್ರಗತಿ ಮತ್ತು ಬದಲಾಗುತ್ತಿರುವ ಭಾರತ ಇವುಗಳ ಮೇಲೆ ಈ ಪುಸ್ತಕವು ಬೆಳಕನ್ನು ಚೆಲ್ಲುತ್ತದೆ. ಈ ವಿಷಯವು ಚೆನ್ನಾಗಿ ತಿಳಿಯಬೇಕೆಂದು ನಕಾಶೆ, ಚಿತ್ರಗಳು, ಅಂಕಿ ಅಂಶಗಳು ಮತ್ತು ಪೂರಕ ಚೌಕಟ್ಟುಗಳ ಬಳಕೆ ಮಾಡಲಾಗಿದೆ. ಇದಲ್ಲದೆ ವಿವಿಧ ಉಪಕ್ರಮಗಳನ್ನು ಸೂಚಿಸಲಾಗಿದೆ.

ಈ ಪಠ್ಯಪುಸ್ತಕದ ಮೂಲಕ ನೀವು ಭವಿಷ್ಯದಲ್ಲಿಯ ಸ್ಪರ್ಧಾಪರೀಕ್ಷೆಗಳ ಅಭ್ಯಾಸದ ಮತ್ತು ಇತಿಹಾಸದ ಕ್ಷೇತ್ರದಲ್ಲಿಯ ಉನ್ನತ ಶಿಕ್ಷಣಗಳ ಅಡಿಪಾಯವನ್ನು ರಚಿಸಬಹುದು. ನಿಮ್ಮ ಪೋಷಕರು ಈ ಇತಿಹಾಸದ ಸಾಕ್ಷಿದಾರರಾಗಿದ್ದಾರೆ. ಅವರ ಕಡೆಯಿಂದ ನೀವು ಪಠ್ಯಪುಸ್ತಕವನ್ನು ಹೆಚ್ಚು ವಿಸ್ತೃತವಾಗಿ ತಿಳಿದುಕೊಳ್ಳಬಹುದು.

ರಾಜ್ಯಶಾಸ್ತ್ರ ವಿಷಯದ ಅಂತರ್ಗತವಾಗಿ 1945 ರಿಂದ ಜಗತ್ತಿನಲ್ಲಿಯ ಪ್ರಮುಖ ಪ್ರವಾಹಗಳು, ಭಾರತ ವಿದೇಶ ನೀತಿಯ ಮುನ್ನಡೆ, ಭಾರತದ ಭದ್ರತೆಯ ವ್ಯವಸ್ಥೆ ಮತ್ತು ಭದ್ರತಾ ವ್ಯವಸ್ಥೆಯ ಮುಂದಿನ ಆಹ್ವಾನ ಅಭ್ಯಾಸ ಮಾಡುವುದಿದೆ. ಭಾರತ ಮತ್ತು ಅನ್ಯ ದೇಶಗಳ ರಾಜಕೀಯ ಸಂಬಂಧ, ಸಂಯುಕ್ತ ರಾಷ್ಟ್ರಗಳು ಮತ್ತು ಸಂಯುಕ್ತ ರಾಷ್ಟ್ರಗಳ ಶಾಂತತಾ ರಕ್ಷಣೆಯ ಕಾರ್ಯದಲ್ಲಿ ಭಾರತದ ಕೊಡುಗೆ ಇತ್ಯಾದಿ ವಿಷಯಗಳನ್ನು ಚರ್ಚಿಸಲಾಗಿದೆ.

ಅದೇ ರೀತಿ ಮಾನವ ಹಕ್ಕುಗಳ ಸಂರಕ್ಷಣೆ, ಪರಿಸರ ಸಂರಕ್ಷಣೆ ಮತ್ತು ಆತಂಕವಾದಗಳಂತಹ ಅಂತರರಾಷ್ಟ್ರೀಯ ಸಮಸ್ಯೆಗಳ ಪರಿಚಯವನ್ನು ಪ್ರಸ್ತುತ ಪಠ್ಯಪುಸ್ತಕದಲ್ಲಿ ಮಾಡಿಕೊಡಲಾಗಿದೆ. ಅಂತರರಾಷ್ಟ್ರಿಯ ಮಟ್ಟದಲ್ಲಿಯ ಎಲ್ಲ ಪ್ರಕಾರದ ಸ್ಥಿತ್ಯಂತರಗಳ ಆಕಲನ ಮಾಡಿಕೊಳ್ಳುವ ಸಲುವಾಗಿ ಪ್ರಸ್ತುತ ಪಠ್ಯಪುಸ್ತಕದಲ್ಲಿಯ ಆಶಯವು ಉಪಯುಕ್ತವಾಗಲಿದೆ.

ಇತಿಹಾಸದ ಅಭ್ಯಾಸದಿಂದ ಭೂತಕಾಲದ ಆಕಲನವಾಗುತ್ತದೆ. ಮತ್ತು ವರ್ತಮಾನದ ಪ್ರಜ್ಞೆ ಬರುತ್ತದೆ. ರಾಜ್ಯಶಾಸ್ತ್ರದ ಅಭ್ಯಾಸದಿಂದ ಭವಿಷ್ಯದಲ್ಲಿ ನಮಗೆ ಯಾವ ದಿಶೆಯಲ್ಲಿ ಮುನ್ನಡೆಯಬೇಕಾಗಿದೆಯೆಂಬುದು ತಿಳಿಯುತ್ತದೆ. ಅದಕ್ಕಾಗಿಯೇ ಈ ಸಂಯುಕ್ತ ಪಠ್ಯಪುಸ್ತಕವು ಆಧಾರವಾಗಲಿದೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ 28 ಎಪ್ರಿಲ 2017
ಅಕ್ಷಯ ತೃತೀಯಾ
ಭಾರತೀಯ ಸೌರ ದಿನಾಂಕ:8 ವೈಶಾಖ, ಶಕೆ 1939

## - ಶಿಕ್ಷಕರಿಗಾಗಿ -

ಮೊಟ್ಟಮೊದಲು ನಾನು ನಿಮ್ಮನ್ನು ಅಭಿನಂದಿಸುತ್ತೇವೆ. ಏಕೆಂದರೆ ನೀವು ಇತಿಹಾಸ ವಿಷಯದ ಅಧ್ಯಯನ ಮತ್ತು ಅಧ್ಯಾಪನ ಮಾಡುತ್ತಿದ್ದೀರಿ. ಈ ವರ್ಷ ಕ್ರಿ.ಶ. 1961 ರಿಂದ 2000ದ ವರೆಗಿನ ಕಾಲಖಂಡವನ್ನು ನಿಮಗೆ ಒಂಬತ್ತನೆಯ ಇಯತ್ತೆಯ ಪುಸ್ತಕದ ಮೂಲಕ ಕಲಿಸುವುದಿದೆ. ಈ ಪುಸ್ತಕವನ್ನು ಕಲಿಸುವುದು ನಿಮಗಾಗಿ ಅತ್ಯಂತ ಆನಂದದಾಯಕವಾಗಲಿದೆ ಏಕೆಂದರೆ ಈ ಪುಸ್ತಕದಲ್ಲಿಯ ಕೆಲವು ಘಟನೆಗಳಿಗೆ ನೀವು ಸಾಕ್ಷಿದಾರರಾಗಿದ್ದೀರಿ. ಯಾವ ಘಟನೆಗಳು ನಿಮ್ಮ ಸುತ್ತಮುತ್ತ ಸಂಭವಿಸಿದವೋ ಅವೇ ಘಟನೆಗಳ ಸಮಾವೇಶವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ. ಮತ್ತೊಮ್ಮೆ ಆ ಕಾಲವು ನಿಮ್ಮ ಸಲುವಾಗಿ ಜೀವಂತವಾಗಲಿದೆ.

ಇದು ಭಾರತದ ವ್ಯಾಪಕ ಇತಿಹಾಸವಿದೆ. ಪಠ್ಯಪುಸ್ತಕಕ್ಕಿರುವ ಪುಟಗಳ ಸೀಮಿತ ಸಂಖ್ಯೆಯನ್ನು ಗಮನಿಸಿ ನಾಲ್ವತ್ತು ವರ್ಷಗಳ ಅಖಂಡ ಮತ್ತು ಸಂಪೂರ್ಣ ಇತಿಹಾಸವನ್ನು ಈ ಪುಸ್ತಕದಲ್ಲಿ ಮಂಡಿಸುವುದು ಕಠಿಣವಾದ ಕಾರ್ಯವಾಗಿದೆ. ವಿದ್ಯಾರ್ಥಿಗಳ ವಯಸ್ಸನ್ನು ಲಕ್ಷ್ಯದಲ್ಲಿರಿಸಿ ಅವರಿಗೆ ಹಿಡಿಸುವ ಘಟನೆಗಳ ಸಮಾವೇಶವನ್ನು ಈ ಪುಸ್ತಕದಲ್ಲಿ ಮಾಡುವ ಪ್ರಯತ್ನ ಮಾಡಿದೆ. ಕೆಲವು ಪ್ರಮುಖ ಘಟನೆಗಳನ್ನು ಆಧಾರಕ್ಕಾಗಿ ತೆಗೆದುಕೊಂಡು ಅನ್ಯ ಘಟನೆಗಳ ಮಾಹಿತಿಯನ್ನು ಅಂತರಜಾಲದ ಸಹಾಯದಿಂದ ತಿಳಿದುಕೊಳ್ಳುವುದಕ್ಕೆ ನೀವು ವಿದ್ಯಾರ್ಥಿಗಳನ್ನು ಪ್ರವೃತ್ತಗೊಳಿಸಬಹುದು.

ಇದೀಗ ಸ್ವತಂತ್ರವಾದ ದೇಶವು ವಿಕಾಸದ ಕಡೆಗೆ ಹೇಗೆ ಮುನ್ನಡೆಯುತ್ತದೆಯೆಂಬುದು ಈ ಪಠ್ಯಪುಸ್ತಕದ ಮಧ್ಯವರ್ತಿ ಆಶಯವಾಗಿದೆ. ಜಗತ್ತಿನಲ್ಲಿಯ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವ ದೇಶ ಇದಾಗಿದೆ. ಈ ದೇಶದ ಪ್ರಗತಿಯಲ್ಲಿ ರಾಜಕೀಯ ನೇತೃತ್ವ, ಆಡಳಿತಾತ್ಮಕ ನೇತೃತ್ವ ಮತ್ತು ವೈಜ್ಞಾನಿಕ, ಶಿಕ್ಷಣ ತಜ್ಞ, ಕಲಾವಿದ ಮುಂತಾದವರ ಕೊಡುಗೆ ಏನೆಂಬುದನ್ನು ಮಂಡಿಸುವ ಪ್ರಯತ್ನಮಾಡಲಾಗಿದೆ. ಇದರ ಜೊತೆಗೆ ಪ್ರಜಾಪ್ರಭುತ್ವದ ಮೇಲೆ ಇರುವ ಭಾರತೀಯ ನಾಗರಿಕರ ಶ್ರದ್ಧೆ ಮತ್ತು ಅದರ ರಕ್ಷಣೆಗಾಗಿ ಇಲ್ಲಿಯ ಸರ್ವಸಾಮಾನ್ಯ ಜನರು ನಡೆಸಿದ ಹೋರಾಟ ಇದು ಈ ಪುಸ್ತಕದಲ್ಲಿಯ ಮಹತ್ವದ ಭಾಗವಾಗಿದೆ. ವ್ಯಕ್ತಿಗಿಂತ ಸಮಾಜವು ಶ್ರೇಷ್ಠವಾಗಿದೆ. ರಾಜಕೀಯ ನೇತೃತ್ವಕ್ಕಿಂತ ದೇಶ ದೊಡ್ಡದಾಗಿದೆ. ಇದೇ ಸಂದೇಶವನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನರು ನೀಡಿದ್ದಾರೆ. ಘಟನೆಗಳ ಹಿಂದಿರುವ ಆಶಯವನ್ನು ವಿದ್ಯಾರ್ಥಿಗಳವರೆಗೆ ತಲುಪಿಸುವುವ ಒಂದು ದೊಡ್ಡ ಆಹ್ವಾನ ನಿಮ್ಮ ಮುಂದಿದೆ. ಸಧ್ಯದ ಕಾಲದಲ್ಲಿಯ ಆಧುನಿಕ ತಂತ್ರಜ್ಞಾನದ ಸಹಾಯದಿಂದ ಈ ಆಹ್ವಾನವನ್ನು ಶಿಕ್ಷಕವೃಂದವು ಸುಲಭವಾಗಿ ಸ್ವೀಕರಿಸುವುದೆಂಬ ವಿಶ್ವಾಸವಿದೆ.

ನಾವು ಯಾವ ಕಾಲವನ್ನು ಅನುಭವಿಸಿವೆಯೋ ಅದನ್ನೇ ಕಲಿಸುವ ಕಾರ್ಯ ಮೊದಲಬಾರಿಗೆ ಆಗಲಿದೆ. ಇದು ಐತಿಹಾಸಿಕ ಕಾರ್ಯವಾಗಿದೆ. ಸ್ವಾತಂತ್ರ್ಯೋತ್ತರ ಭಾರತದ ನಿರ್ಮಾಣ ಕಾರ್ಯದಲ್ಲಿ ನಾವು ಕೂಡ ಕೊಡುಗೆಯನ್ನು ನೀಡಬಹುದೆಂಬ ಮಹತ್ವದ ತತ್ವವನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಿಂಬಿಸುವ ಸಲುವಾಗಿ ಈ ಪುಸ್ತಕವು ಉಪಯುಕ್ತ ವೆನಿಸಲಿದೆ. ಅದಕ್ಕಾಗಿ ನಕಾಶೆ, ಚಿತ್ರಗಳು, ಚೌಕಟ್ಟುಗಳು ಮತ್ತು ಉಪಕ್ರಮಗಳಂತಹ ಸಾಧನಗಳನ್ನು ಬಳಸುವುದಿದೆ; ಆದರೆ 'ಸಾರೆ ಜಹಾಂಸೆ ಅಚ್ಛಾ ಹಿಂದೋಸ್ತಾಂ ಹಮಾರಾ' ಎಂಬ ಆಶಯವನ್ನು ವಿದ್ಯಾರ್ಥಿಗಳ ಮುಂದೆ ಪ್ರಭಾವಶಾಲಿಯಾಗಿ ಮಂಡಿಸುವುದೇ ನಮ್ಮ ಗುರಿಯಾಗಿದೆ.

ರಾಜ್ಯಶಾಸ್ತ್ರ ವಿಷಯದ ಅಂತರ್ಗತವಾಗಿ ನಾವು ಈ ಇಯತ್ತೆಯಲ್ಲಿ 'ಭಾರತ ಮತ್ತು ಜಗತ್ತು' ಇವುಗಳಲ್ಲಿಯ ಪರಸ್ಪರ ಸಂಬಂಧದ ಪರಿಶೀಲನೆ ಮಾಡುವವರಿದ್ದೇವೆ. ಆಧುನಿಕ ಕಾಲದಲ್ಲಿ ಜಾಗತಿಕ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿಯ ಸ್ಥಿತ್ಯಂತರಗಳ ಪರಿಣಾಮವು ಎಲ್ಲಾ ದೇಶಗಳ ಮೇಲೆ ಆಗುತ್ತದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿಯ ಪ್ರಗತಿಯಿಂದಾಗಿ ರಾಷ್ಟ್ರಗಳಲ್ಲಿಯ ವ್ಯವಹಾರ ಮತ್ತು ಕೊಡುಕೊಳ್ಳುವಿಕೆಯು ಹೆಚ್ಚಿದೆ. ಭಾರತವನ್ನು ಕೇಂದ್ರ ಸ್ಥಾನದಲ್ಲಿಟ್ಟು ಈ ತೊಡಕಿನ ಅಂತರರಾಷ್ಟ್ರೀಯ ಸಂಬಂಧದ ಅರಿವನ್ನು ವಿದ್ಯಾರ್ಥಿಗಳಿಗೆ ನಾವು ಮಾಡಿಕೊಡಬೇಕಾಗಿದೆ. ಅದರ ಆರಂಭವನ್ನು ಸಮೀಪದ ಇತಿಹಾಸದಲ್ಲಿಯ ಮಹತ್ವದ ಅಂತರರಾಷ್ಟ್ರೀಯ ಘಟನೆ ಹಾಗೂ ಪ್ರವಾಹಗಳ ಆಕಲನೆಯ ಮುಖಾಂತರ ಮಾಡಿಕೊಡಬೇಕಾದೀತು. ಪ್ರಸ್ತುತ ಪಠ್ಯಪುಸ್ತಕದಲ್ಲಿಯ ಆಶಯವು ಹೊಸದಾಗಿದೆ. ಅದು ಸುಲಭವಾಗಿ ತಿಳಿಯಬೇಕೆಂದು ಆಶಯದ ರಚನೆಯನ್ನು ಜ್ಞಾನರಚನಾವಾದಿ ದೃಷ್ಟಿಯಿಂದ ಮಾಡಲಾಗಿದೆ. ವಿಷಯದಲ್ಲಿ ರುಚಿ ನಿರ್ಮಾಣವಾಗುವ ಸಲುವಾಗಿ ಆಶಯವನ್ನು ಬೇರೆ ಪದ್ಧತಿಯಿಂದ ಮಂಡಿಸಿದೆ. ಅಂತರರಾಷ್ಟ್ರೀಯ ಸಂಬಂಧವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ವಿದ್ಯಾರ್ಥಿಗಳು ಪ್ರಥಮವಾಗಿ ಮಾಡುತ್ತಿರುವುದರಿಂದ ಶಿಕ್ಷಕರು ಅಧ್ಯಾಪನ ಮಾಡುವಾಗ ವೈವಿಧ್ಯಪೂರ್ಣ, ಅಪರಂಪರಾಗತ ಸಾಧನಗಳ ಆಧಾರವನ್ನು ಪಡೆಯಬೇಕು. ಇಂಥ ಪರಿಣಾಮಕಾರಕ ಪದ್ಧತಿಗಳ ಉಪಯೋಜನೆಗೆ ಪ್ರಸ್ತುತ ಪಠ್ಯಪುಸ್ತಕದಲ್ಲಿ ತುಂಬಾ ಅವಕಾಶವಿದೆ. ಜಾಗತಿ ಶಾಂತಿ ಮತ್ತು ಸುರಕ್ಷತೆಯ ರಕ್ಷಣೆ, ಮಾನವೀ ಹಕ್ಕುಗಳ ಬಗ್ಗೆ ಆದರ, ಶಾಂತಿ ಮತ್ತು ಪರಸ್ಪರರ ಮೇಲಿನ ವಿಶ್ವಾಸ ಈ ಮೂಲ್ಯಗಳ ಮೇಲಿನ ಮತ್ತು ಅದರ ಮೂಲಕ ಉಂಟಾಗುವ ಕೃತಿಯ ಮೇಲಿನ ವಿಶ್ವಾಸವನ್ನು ದೃಢವಾಗಿರಿಸುವ ಪ್ರಯತ್ನವನ್ನು ಶಿಕ್ಷಕರು ಮಾಡಬಹುದು ಎಂಬ ಅಪೇಕ್ಷೆ ಇದೆ.

# ಅನುಕ್ರಮಣಿಕೆ

## ಸ್ವಾತಂತ್ರ್ಯೋತ್ತರ ಭಾರತ
## (ಕ್ರಿ.ಶ. 1961 ರಿಂದ ಕ್ರಿ.ಶ. 2000)


| ಅ.ಕ್ರ. | ಪಾಠದ ಹೆಸರು | ಪುಟಸಂಖ್ಯೆ |
|---|---|---|
| 1. | ಇತಿಹಾಸದ ಸಾಧನಗಳು ...................... | 1 |
| 2. | ಭಾರತ: 1960ರ ನಂತರದ ಸ್ಥಿತ್ಯಂತರಗಳು...... | 5 |
| 3. | ಭಾರತದ ಮುಂದಿರುವ ಅಂತರ್ಗತ ಆಹ್ವಾನಗಳು | 10 |
| 4. | ಆರ್ಥಿಕ ಅಭಿವೃದ್ಧಿ........................... | 15 |
| 5. | ಶೈಕ್ಷಣಿಕ ಪ್ರಗತಿ.............................. | 23 |
| 6. | ಮಹಿಳಾ ಮತ್ತು ಇತರ ದುರ್ಬಲ ಘಟಕಗಳ ಸಬಲೀಕರಣ | 31 |
| 7. | ವಿಜ್ಞಾನ ಮತ್ತು ತಂತ್ರಜ್ಞಾನ.................... | 37 |
| 8. | ಉದ್ಯೋಗ ಮತ್ತು ವ್ಯಾಪಾರ.................. | 43 |
| 9. | ಬದಲಾಗುತ್ತಿರುವ ಜೀವನ: ಭಾಗ 1............ | 47 |
| 10. | ಬದಲಾಗುತ್ತಿರುವ ಜೀವನ: ಭಾಗ 2 ........... | 52 |



**S.O.I. Note :** The following foot notes are applicable : (1) © Government of India, Copyright : 2017. (2) The responsibility for the correctness of internal details rests with the publisher. (3) The territorial waters of India extend into the sea to a distance of twelve nautical miles measured from the appropriate base line. (4) The administrative headquarters of Chandigarh, Haryana and Punjab are at Chandigarh. (5) The interstate boundaries amongst Arunachal Pradesh, Assam and Meghalaya shown on this map are as interpreted from the "North-Eastern Areas (Reorganisation) Act. 1971," but have yet to be verified. (6) The external boundaries and coastlines of India agree with the Record/Master Copy certified by Survey of India. (7) The state boundaries between Uttarakhand & Uttar Pradesh, Bihar & Jharkhand and Chattisgarh & Madhya Pradesh have not been verified by the Governments concerned. (8) The spellings of names in this map, have been taken from various sources.


## ಕ್ಷಮತಾ ವಿಧಾನಗಳು

| ಕ್ರ. | ಘಟಕಗಳು | ಕ್ಷಮತೆಗಳು |
|---|---|---|
| 1. | ಇತಿಹಾಸದ ಸಾಧನಗಳು | □ ಐತಿಹಾಸಿಕ ಸಾಧನಗಳ ವರ್ಗೀಕರಣ ಮಾಡಲು ಬರುವುದು.<br>□ ಐತಿಹಾಸಿಕ ಸಾಧನಗಳ ಅಭ್ಯಾಸದಲ್ಲಿ ತತ್ಕಾಲಿಕ ಘಟನೆಗಳ ಕಲ್ಪನೆ ಮಾಡಲು ಬರುವುದು ಮತ್ತು ಅಂದಾಜು ವ್ಯಕ್ತಪಡಿಸಲು ಬರುವುದು.<br>□ ಐತಿಹಾಸಿಕ ಸಂದರ್ಭಗಳ ಯೋಗ್ಯವಾಚನ ಮಾಡಿ ಅದರ ಅರ್ಥವನ್ನು ಹೇಳಲು ಬರುವುದು.<br>□ ಐತಿಹಾಸಿಕ ವಸ್ತುಗಳು, ಕಾಗದಪತ್ರಗಳು, ಪುಸ್ತಕಗಳು, ನಾಣ್ಯಗಳು ಮತ್ತು ಇಲೆಕ್ಟ್ರಾನಿಕ್ ಮಾಹಿತಿಯನ್ನು ಕೂಡಿ ಹಾಕಿ ಸಂಗ್ರಹ ಮಾಡಲು ಬರುವುದು. ಅದರಂತೆ ಬೇರೆ ಪದ್ಧತಿಯಿಂದ ಅದರವರ್ಗೀಕರಣ ಮಾಡಲು ಬರುವುದು.<br>□ ವಸ್ತು ನಿಷ್ಠ ರೀತಿಯಿಂದ ಐತಿಹಾಸಿಕ ಘಟನೆಗಳನ್ನು ಅರ್ಥೈಸುವುದು. |
| 2. | ರಾಷ್ಟ್ರನಿರ್ಮಿತಿಯ ಆಹ್ವಾನ: ಭಾಗ 1 | □ ಭಾರತದ ಸ್ವಾತಂತ್ರ್ಯದ ನಂತರದ ಪ್ರಗತಿಯ ಐತಿಹಾಸಿಕ ಘಟನೆಗಳ ಕ್ರಮವನ್ನು ಯೋಗ್ಯ ಪದ್ಧತಿಯಿಂದ ಹೇಳಲು ಬರುವುದು.<br>□ ಭಾರತದ ಮುಂದಿನ ಅಂತರ್ಗತ ಆಹ್ವಾನಗಳ ಅಭ್ಯಾಸವನ್ನು ಚಿಕಿತ್ಸಕ ರೀತಿಯಿಂದ ಮಾಡಲು ಬರುವುದು.<br>□ ಭಾರತದಲ್ಲಿಯ ಆರ್ಥಿಕ ನೀತಿಗಳು ಕಾಲಕ್ಕನುಸಾರ ಬದಲಾಗುತ್ತ ಹೋದವು ಎಂಬುದನ್ನು ಸ್ಪಷ್ಟೀಕರಿಸಲು ಬರುವುದು.<br>□ ಜಾಗತೀಕರಣದಿಂದಾಗಿ ಬಂದ ಆರ್ಥಿಕ ಸುಧಾರಣೆಗಳ ಪರಿಣಾಮಗಳ ಪರಿಶೀಲನೆ ಮಾಡಲು ಬರುವುದು.<br>□ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣಗಳಿಂದಾಗಿ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಉಂಟಾದ ಬದಲಾವಣೆಗಳ ಕಾರಣ ಮೀಮಾಂಸೆ ಮಾಡಲು ಬರುವುದು. |
| 3. | ರಾಷ್ಟ್ರನಿರ್ಮಿತಿಯ ಆಹ್ವಾನ: ಭಾಗ 2 | □ ಭಾರತೀಯ ಶಿಕ್ಷಣ ಪ್ರಣಾಲಿಯ ವಿಕಾಸದ ಹಂತಗಳನ್ನು ಹೇಳಲು ಬರುವುದು.<br>□ ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಲು ಶಿಕ್ಷಣವು ಮಹತ್ವದ ಮಾಧ್ಯಮವಾಗಿದೆ ಎಂಬುದನ್ನು ಹೇಳಲು ಬರುವುದು.<br>□ ಸಮಾಜದಲ್ಲಿಯ ದುರ್ಬಲ ಘಟಕಗಳ ವಿಕಾಸದ ಬಗೆಗಿನ ವಿವಿಧ ಪ್ರಯತ್ನ ಮತ್ತು ಅವುಗಳ ಮಹತ್ವವನ್ನು ಗುರುತಿಸುವುದು.<br>□ ಸ್ವಾತಂತ್ರ್ಯೋತ್ತರ ಭಾರತದಲ್ಲಿಯ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿಯ ಪ್ರಗತಿಯ ಉದಾಹರಣೆಗಳನ್ನು ಹೇಳಲು ಬರುವುದು.<br>□ ಉದ್ಯೋಗ ಮತ್ತು ವ್ಯಾಪಾರ ಕ್ಷೇತ್ರಕ್ಕೆ ಸಂಬಂಧಿಸಿದ ಸಂಘಟನೆಗಳ ಮಾಹಿತಿಯನ್ನು ಪಡೆದು ಭಾರತೀಯ ಅರ್ಥವ್ಯವಸ್ಥೆಯ ಮೇಲಿನ ಅದರ ಪರಿಣಾಮವನ್ನು ಹೇಳಲು ಬರುವುದು.<br>□ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿಯ ಪ್ರಗತಿಯ ವಿಷಯವಾಗಿ ಅಭಿಮಾನವನ್ನಿಡುವುದು.<br>□ ಇಂಟರ್ನೆಟ್ ಸಹಾಯದಿಂದ ಹೊಸ ಹೊಸ ಶೋಧಗಳ ಮಾಹಿತಿ ಪಡೆಯುವುದು. |
| 4. | ಬದಲಾಗುತ್ತಿರುವ ಜೀವನ | □ ಜನಮತ ನಿರ್ಮಿತಿಯಲ್ಲಿ ಮತ್ತು ನಾಗರಿಕ ಸಮಾಜವನ್ನು ಕ್ರಿಯಾಶೀಲವನ್ನಾಗಿ ಮಾಡುವುದರಲ್ಲಿ ಪ್ರಸಾರ ಮಾಧ್ಯಮಗಳ ಪಾತ್ರ ಮತ್ತು ಜವಾಬ್ದಾರಿಯನ್ನು ಗುರುತಿಸುವುದು.<br>□ ನಾಗರೀಕರಣ ಮತ್ತು ಗ್ರಾಮೀಣ ಜೀವನಗಳ ತುಲನೆ ಮಾಡಿ ಹೇಳಲು ಬರುವುದು.<br>□ ಸಾಮಾಜಿಕ ಸಮತೆಯನ್ನು ಪ್ರತಿಪಾದಿಸುವ ವಿಷಯದ ಅರಿವನ್ನು ನಿರ್ಮಾಣ ಮಾಡುವುದು.<br>□ ವೈಜ್ಞಾನಿಕ ದೃಷ್ಟಿಕೋನವನ್ನು ಸ್ವೀಕಾರ ಮಾಡಲು ಬರುವುದು. |

# 1 ಇತಿಹಾಸದ ಸಾಧನಗಳು

ಇಲ್ಲಿಯ ವರೆಗೆ ನಾವು ಪ್ರಾಚೀನ, ಮಧ್ಯಯುಗೀನ ಮತ್ತು ಆಧುನಿಕ ಭಾರತದ ಇತಿಹಾಸವನ್ನು ಅಭ್ಯಸಿಸಿದೆವು. ಈ ವರ್ಷ ನಾವು ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿಯ ಭಾರತದ ಇತಿಹಾಸವನ್ನು ಅಭ್ಯಸಿಸುವುದಿದೆ. ಆಧುನಿಕ ಕಾಲದಲ್ಲಿಯ ಇತಿಹಾಸದ ಸಾಧನಗಳು ಪ್ರಾಚೀನ ಮತ್ತು ಮಧ್ಯಯುಗೀನ ಸಾಧನಗಳಿಗಿಂತ ಭಿನ್ನವಾಗಿವೆ. ಲಿಖಿತ ಸಾಧನಗಳು, ಭೌತಿಕ ಸಾಧನಗಳು, ಮೌಖಿಕ ಸಾಧನಗಳು ಮತ್ತು ದೃಕ್-ಶ್ರಾವ್ಯ ಮಾಧ್ಯಮದಲ್ಲಿಯ ಸಾಧನಗಳ ಆಧಾರದಿಂದ ಇತಿಹಾಸದ ಅಭ್ಯಾಸ ಮಾಡಲು ಬರುತ್ತದೆ. ಆಧುನಿಕ ಕಾಲದಲ್ಲಿ ನಾವು ಪ್ರಾದೇಶಿಕ, ರಾಜ್ಯಮಟ್ಟದ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಗಳಲ್ಲಿಯ ಸಾಧನಗಳ ವಿಚಾರ ಮಾಡಬೇಕಾಗುತ್ತದೆ. ಈ ಸಾಧನಗಳ ಸಹಾಯದಿಂದ ನಮಗೆ ಇತಿಹಾಸದ ಲೇಖನ ಮಾಡಲುಬರುತ್ತದೆ.

**ಲಿಖಿತ ಸಾಧನಗಳು:** ಕೆಳಗಿನ ಸಾಧನಗಳು ಲಿಖಿತ ಸಾಧನಗಳಲ್ಲಿ ಸಮಾವೇಶವಾಗುತ್ತವೆ.






**ಗೊತ್ತಿದೆಯೇ ನಿಮಗೆ?**

ಐತಿಹಾಸಿಕ ದಾಖಲೆ ಯಾವ ಸ್ಥಳದಲ್ಲಿ ಕಾಯ್ದಿಡಲಾಗುತ್ತದೆಯೋ, ಆ ಸ್ಥಳಕ್ಕೆ 'ದಾಖಲಾಗೃಹ' ಎನ್ನುತಾರೆ. ಭಾರತದ ರಾಷ್ಟ್ರೀಯ ದಾಖಲಾಗೃಹವು ಹೊಸದಿಲ್ಲಿಯಲ್ಲಿದೆ. ಇದು ಏಷ್ಯ ಖಂಡದಲ್ಲಿಯ ಎಲ್ಲಕ್ಕಿಂತ ದೊಡ್ಡ ದಾಖಲಾಗೃಹವಾಗಿದೆ.

ಆಧುನಿಕ ಕಾಲಖಂಡದಲ್ಲಿಯ ವರ್ತಮಾನ ಪತ್ರಗಳು ಪ್ರಜಾಪ್ರಭುತ್ವದ ನಾಲ್ಕನೆಯ ಸ್ತಂಬವಾಗಿದ್ದಂತೆ, ಅವು ಮಾಹಿತಿಯನ್ನು ನೀಡುವ ಪ್ರಮುಖ ಸಾದನಗಳೂ ಆಗಿವೆ. 1961 ರಿಂದ 2000ದ ವರೆಗಿನ ಕಾಲಖಂಡದ ವಿಚಾರ ಮಾಡಿದರೆ ಆರಂಭದಲ್ಲಿ ಮುದ್ರಿಸಿದ ಮಾಧ್ಯಮಗಳಿಗೆ ವಿಶೇಷವಾಗಿ ವರ್ತಮಾನ ಪತ್ರಗಳಿಗೆ ಪರ್ಯಾಯ ವಿಲ್ಲವೆಂದೇ ಕಾಣುತ್ತದೆ. ಭಾರತದಲ್ಲಿ ಉದಾರೀಕರಣ ಆರಂಭವಾಯಿತು ಹಾಗೂ ಇಂಟರ್‌ನೆಟ್‌ನ (ಅಂತರಜಾಲ) ಸಾರ್ವತ್ರಿಕ ಪ್ರಸಾರ ಆರಂಭವಾದ ಮೇಲೆ ಮುದ್ರಿಸಿದ ಮಾಧ್ಯಮಗಳಿಗೆ ಪರ್ಯಾಯ ಲಭ್ಯವಾಯಿತು. ಹೀಗಾದರೂ ಕೂಡ ಮುದ್ರಿಸಿದ ಪ್ರಸಾರ ಮಾಧ್ಯಮಗಳ ಸಾಮರ್ಥ್ಯ ಇನ್ನೂ ಶಾಶ್ವತವಾಗಿದೆ.

**ವರ್ತಮಾನ ಪತ್ರಗಳು:** ವರ್ತಮಾನ ಪತ್ರಗಳಿಂದ ನಮಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘಟನೆಗಳು, ರಾಜಕಾರಣ, ಕಲೆ, ಕ್ರೀಡೆ, ಸಾಹಿತ್ಯ, ಸಮಾಜಕಾರಣ ಹಾಗೂ ಸಾಂಸ್ಕೃತಿಕ ಘಟನೆಗಳು ತಿಳಿಯುತ್ತವೆ. ಮಾನವೀ ಜೀವನದ ಜೊತೆ ಸಂಬಂಧಪಟ್ಟ ವಿಷಯಗಳು ವರ್ತಮಾನ ಪತ್ರಗಳಲ್ಲಿ ಬರುತ್ತವೆ. ರಾಷ್ಟ್ರಮಟ್ಟದಲ್ಲಿ ಕಾರ್ಯಮಾಡುವ ವರ್ತಮಾನ ಪತ್ರಗಳು ತಮ್ಮ ತಮ್ಮ ಪ್ರಾದೇಶಿಕ ಆವೃತಿಗಳನ್ನು ಆರಂಭಿಸಿವೆ. ವಿವಿಧ ವಿಷಯಗಳ ಮಾಹಿತಿ ನೀಡುವ ಅವುಗಳ ಪುರವಣಿಗಳು ಇರುತ್ತವೆ. ಮುದ್ರಿಸಿದ ಮಾಧ್ಯಮಗಳಲ್ಲಿ ಚಳುವಳಿಯ ಮುಖಪತ್ರಗಳು, ರಾಜಕೀಯ ಪಕ್ಷಗಳ ದೈನಿಕಗಳು ಹಾಗೂ ವಾರಪತ್ರಿಕೆಗಳು, ಮಾಸಪತ್ರಿಕೆಗಳು, ವಾರ್ಷಿಕಪತ್ರಿಕೆಗಳು, ಮಹತ್ವದ್ದಾಗಿರುತ್ತವೆ.

ಕೆಲವು ವರ್ತಮಾನಪತ್ರಗಳು ವರ್ಷದ ಕೊನೆಗೆ ಇಡೀ ವರ್ಷದಲ್ಲಿಯ ಮಹತ್ವದ ಘಟನೆಗಳ ಪರಿಶೀಲನೆ ಮಾಡುವ ಪುರವಣಿಗಳನ್ನು ಪ್ರಕಟಿಸುತ್ತವೆ. ಅದರಿಂದ ನಮಗೆ ಇಡೀ ವರ್ಷದಲ್ಲಿಯ ಪ್ರಮುಖ ಘಟನೆಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ.

**ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (PTI):** 1953ರ ನಂತರ ಭಾರತದಲ್ಲಿಯ ಬಹುಸಂಖ್ಯ ವರ್ತಮಾನ ಪತ್ರಗಳಿಗಾಗಿ ಎಲ್ಲ ಮಹತ್ವದ ಘಟನೆಗಳ ಪ್ರಾಥಮಿಕ ವಿವರಗಳು, ಮಹತ್ವದ ವಿಷಯಗಳ ಮೇಲಿನ ಲೇಖಗಳು ಮುಂತಾದವುಗಳಿಗಾಗಿ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಇದು ಮಹತ್ವದ ಮೂಲವಾಗಿದೆ. ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಇದು ಸಮಾಚಾರ ಲೇಖನ, ಛಾಯಾಚಿತ್ರಗಳು, ಆರ್ಥಿಕ ಮತ್ತು ವೈಜ್ಞಾನಿಕ ವಿಷಯಗಳ ಮೇಲಿನ ಲೇಖನಗಳನ್ನು ವರ್ತಮಾನ ಪತ್ರಗಳಿಗೆ ಒದಗಿಸಿದೆ. ಈಗ (ಪಿಟಿಆಯ್) ಇದು ಆನ್‌ಲೈನ್ ಸೇವೆಯನ್ನು ಆರಂಭಿಸಿದೆ. 1990ರ ದಶಕದಲ್ಲಿ ಪಿಟಿಆಯ್ ಇದು ಟೆಲಿಪ್ರಿಂಟರ್ಸ್ ಬದಲಾಗಿ 'ಉಪಗ್ರಹ ಪ್ರಸಾರಣೆ'ಯ ತಂತ್ರದ ಮೂಲಕ ದೇಶದ ತುಂಬೆಲ್ಲ ವಾರ್ತೆಗಳನ್ನು ಕಳುಹಿಸಲು ಆರಂಭಿಸಿತು. ಆಧುನಿಕ ಭಾರತದ ಇತಿಹಾಸಲೇಖನಕ್ಕಾಗಿ ಈ ವಿಷಯವು ಮಹತ್ವದ್ದಾಗಿದೆ.

**ಗೊತ್ತಿದೆಯೇ ನಿಮಗೆ?**

ಮುದ್ರಿಸಿದ ಮಾಧ್ಯಮದಲ್ಲಿ ಭಾರತ ಸರಕಾರದ ಪ್ರಕಾಶನ ವಿಭಾಗದ ವತಿಯಿಂದ ಪ್ರಕಟಿಸಲಾಗುವ ವಾರ್ಷಿಕ ಪತ್ರಿಕೆಗಳಲ್ಲಿಯ ಮಾಹಿತಿಯು ವಿಶ್ವಾಸಾರ್ಹವಾಗಿರುತ್ತದೆ. ಉದಾ., ಮಾಹಿತಿ ಮತ್ತು ಪ್ರಸಾರಣೆ ಇಲಾಖೆಯು 'INDIA 2000' ಎಂಬ ವಾರ್ಷಿಕ ಸಂದರ್ಭ ಗ್ರಂಥವನ್ನು ಪ್ರಕಟಿಸಿದೆ. ಈ ಗ್ರಂಥವನ್ನು 'ಸಂಶೋಧನೆ', ಸಂದರ್ಭ ಮತ್ತು ತರಬೇತಿ ವಿಭಾಗದ ವತಿಯಿಂದ ತಯಾರಿಸಲಾಗಿದೆ.

ಈ ಗ್ರಂಥದಲ್ಲಿ ಭೂಮಿ, ಜನರು, ರಾಷ್ಟ್ರೀಯ ಪ್ರತೀಕಗಳು, ರಾಜಕೀಯ ವ್ಯವಸ್ಥೆ, ಸಂರಕ್ಷಣೆ, ಶಿಕ್ಷಣ, ಸಾಂಸ್ಕೃತಿಕ ಘಟನೆಗಳು, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿಯ ಘಟನೆಗಳು, ಪರಿಸರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ, ಪ್ರಸಾರ ಮಾಧ್ಯಮಗಳು, ಮೂಲಭೂತ ಆರ್ಥಿಕ ಮಾಹಿತಿ, ವಿತ್ತ ಪೂರೈಕೆ, ಯೋಜನೆ, ಕೃಷಿ, ಜಲ ಸಂರಕ್ಷಣೆ, ಗ್ರಾಮೀಣ ವಿಕಾಸ, ಆಹಾರ ಮತ್ತು ನಾಗರಿಕಪೂರೈಕೆ, ಉದ್ಯೋಗ, ವ್ಯಾಪಾರ, ಸಾರಿಗೆ, ಸಂಪರ್ಕ, ಶ್ರಮ, ಗೃಹಯೋಜನೆ, ನ್ಯಾಯ ಮತ್ತು ಕಾಯ್ದೆ, ಯುವಕ ಮತ್ತು ಕ್ರೀಡಾ ವಿಭಾಗ ಮುಂತಾದ ಕ್ಷೇತ್ರಗಳಲ್ಲಿಯ ಘಟನೆಗಳ ಪರಿಶೀಲನೆ ಹಾಗೂ ಸರ್ವಸಾಮಾನ್ಯ ಉಪಯುಕ್ತ ಮಾಹಿತಿ ಇವುಗಳ ಸಮಾವೇಶವಾಗಿರುತ್ತದೆ. ಇಂಥ ಮಾಹಿತಿಯ ಆಧಾರದಿಂದ ನಮಗೆ ಇತಿಹಾಸ ಬರೆಯಲು ಸಾಧ್ಯವಾಗುತ್ತದೆ. ವೆಬ್‌ಸೈಟ್: www.publicationsdivision.nic.in

**ಅಂಚೆ ತಿಕೀಟುಗಳು:** ಅಂಚೆ ತಿಕೀಟುಗಳು ತಾವಾಗಿ ಏನೂ ಮಾತನಾಡದಿದ್ದರೂ ಇತಿಹಾಸಕಾರನು ಅವುಗಳನ್ನು ಮಾತನಾಡುವಂತೆ ಮಾಡುತ್ತಾನೆ. ಭಾರತವು ಸ್ವತಂತ್ರವಾದಂದಿನಿಂದ ಹಿಡಿದು ಇಂದಿನ ವರೆಗೆ ಅಂಚೆ ತಿಕೀಟುಗಳಲ್ಲಿ ವಿವಿಧ ಬದಲಾವಣೆಗಳು ಸಂಬವಿಸಿವೆ. ತಿಕೀಟುಗಳ ಆಕಾರದಲ್ಲಿಯ ವೈವಿಧ್ಯ, ವಿಷಯಗಳಲ್ಲಿಯ ಹೊಸತನ, ಬಣ್ಣಗಳಿಂದಾಗಿ ಅಂಚೆ ತಿಕೀಟುಗಳು ನಮಗೆ ಬದಲಾಗುತ್ತಿರುವ ಕಾಲದಬಗ್ಗೆ ಹೇಳುತ್ತಿರುತ್ತವೆ.

ಅಂಚೆ ಇಲಾಖೆಯು ರಾಜಕೀಯ ಮುಖಂಡರ ಮೇಲೆ, ಹೂಗಳ ಮೇಲೆ, ಪ್ರಾಣಿಪಕ್ಷಿಗಳ ಮೇಲೆ ಯಾವುದೊಂದು ಘಟನೆಯ ಮೇಲೆ, ಯಾವುದೊಂದು ಘಟನೆಯ ರಜತ, ಸುವರ್ಣ, ಅಮೃತ ಮಹೋತ್ಸವ, ಶತಮಾನ, ದ್ವಿಶತಮಾನ, ತ್ರಿಶತಮಾನ ಪೂರ್ಣವಾದ ನಿಮಿತ್ತವಾಗಿ ತಿಕೀಟುಗಳನ್ನು ತೆಗೆಯುತ್ತದೆ. ಅದು ಇತಿಹಾಸದ ಅಮೂಲ್ಯವಾದ ಆಸ್ತಿಯಾಗಿರುತ್ತದೆ.


**ಗೊತ್ತಿದೆಯೇ ನಿಮಗೆ?**

1977ರಲ್ಲಿ ಭಾರತ ಸರಕಾರವು ಜಾಲ ಕೂಪರ ಈ ಅಂಚೆ ತಿಕೀಟನ್ನು ಪ್ರಕಟಿಸಿತು. ಜಾಲ ಕೂಪರ ಇವರು 'ಅಂಚೆ ತಿಕೀಟು' ಈ ವಿಷಯದಲ್ಲಿಯ ಜಾಗತಿಕ ಮಟ್ಟದಲ್ಲಿಯ ಅಭ್ಯಾಸಕರಾಗಿದ್ದರು. ಮುಂಬಯಿಯ ಪಾರಶೀ ಕುಟುಂಬದಲ್ಲಿ ಜನಿಸಿದ ಕೂಪರ ಇವರು 'ಇಂಡಿಯಾಜ ಸ್ಟ್ಯಾಂಪ್ ಜರ್ನಲ್'ದ ಸಂಪಾದಕರಾಗಿದ್ದರು. ಅವರು ಭಾರತದಲ್ಲಿಯ ಪ್ರಥಮ ಅಂಚೆ ತಿಕೀಟು ಸಂಗ್ರಾಹಕ ಬ್ಯೂರೋದ ಸಂಸ್ಥಾಪಕ (**First Philatelic Bureau**) ರಾಗಿದ್ದರು. ಅವರು 'ಎಂಪಾಯರ, ಆಫ್ ಇಂಡಿಯಾ ಫಿಲಾಟೆಲಿಕ್ ಸೊಸೈಟಿ'ಯ ಸ್ಥಾಪನೆ ಮಾಡಿದರು. ಈ ವಿಷಯವನ್ನು ಕುರಿತು ನಂತರ ಅವರು ಪುಸ್ತಕಗಳನ್ನು ಬರೆದರು. ಈ ಹವ್ಯಾಸಕ್ಕೆ ಅವರು ಶಾಸ್ತ್ರೀಯ ಸ್ವರೂಪವನ್ನು ನೀಡಿದರು. ಭಾರತೀಯ ಅಂಚೆ ತಿಕೀಟುಗಳ ಅಭ್ಯಾಸವನ್ನು ಜಾಗತಿಕ ಮಟ್ಟಕ್ಕೆ ತಲುಪಿಸುವುದರಲ್ಲಿ ಅವರದು ಸಿಂಹಪಾಲು. ಅಂಚೆ ತಿಕೀಟು ಸಂಗ್ರಾಹಕರೆಂದು ತಮ್ಮ ಈ ಕಾರ್ಯವನ್ನು ಆರಂಭಿಸಿ ಜಾಗತಿಕ ಮಟ್ಟವನ್ನು ತಲುಪುವ ಕೂಪರ ಅವರ ಕೊಡುಗೆಯನ್ನು ತಿಳಿದುಕೊಳ್ಳಲು ಅವರ ಹೆಸರಿನಲ್ಲಿ ತೆಗೆದ ಅಂಚೆ ತಿಕೀಟು ಮಹತ್ವದ ಸಾಧನವಾಗಿದೆ.



ಜಾಲ ಕೂಪರ ಅಂಚೆ ತಿಕೀಟು

**ಭೌತಿಕ ಸಾಧನಗಳು:** ಕೆಳಗೆ ಕೊಟ್ಟ ಸಾಧನಗಳು ಭೌತಿಕ ಸಾಧನಗಳಲ್ಲಿ ಸಮಾವೇಶವಾಗುತ್ತವೆ.



**ನಾಣ್ಯಗಳು:** ನಾಣ್ಯಗಳ ಮೂಲಕ ಮತ್ತು ಬದಲಾಗುತ್ತ ಹೋದ ನೋಟುಗಳ ಮುದ್ರಣದಿಂದ ನಮಗೆ ಇತಿಹಾಸ ತಿಳಿಯುತ್ತದೆ. ನೋಟುಗಳನ್ನು ಮುದ್ರಿಸುವ ಕಾರ್ಯವನ್ನು ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ ಮಾಡುತ್ತದೆ. ಅದರ ಮುಖ್ಯ ಕಚೇರಿ ಮುಂಬಯಿಯಲ್ಲಿ ಇದೆ.



ನಾಣ್ಯಗಳು

1950ರಿಂದ ಹಿಡಿದು ಇಂದಿನ ವರೆಗಿನ ನಾಣ್ಯಗಳು, ಅವುಗಳಲ್ಲಿ ಬಳಸಿದ ಲೋಹ, ಅವುಗಳ ಅಕಾರ, ಅವುಗಳ ಮೇಲಿನ ವಿಷಯ ವೈವಿಧ್ಯತೆ, ಇವುಗಳ ಮೇಲಿಂದ ನಮಗೆ ಸಮಕಾಲೀನ ಭಾರತದಲ್ಲಿಯ ಮಹತ್ವದ ಪ್ರಶ್ನೆಗಳು ತಿಳಿಯುತ್ತವೆ. ಉದಾ., ಜನಸಂಖ್ಯೆಯನ್ನು ನಿಯಂತ್ರಣದಲ್ಲಿಡುವ ಸಂದೇಶವನ್ನು ನೀಡುವ ನಾಣ್ಯಗಳು, ಕೃಷಿ ಮತ್ತು ರೈತರ ಮಹತ್ವ ತಿಳಿಸುವ ನಾಣ್ಯಗಳು.

**ಸಂಗ್ರಹಾಲಯಗಳು:** ಭಾರತದಲ್ಲಿಯ ಎಲ್ಲ ರಾಜ್ಯಗಳಲ್ಲಿ ಆ ರಾಜ್ಯಗಳ ವೈಶಿಷ್ಟ್ಯಗಳನ್ನು ತಿಳಿಸುವ ವಸ್ತು ಸಂಗ್ರಹಾಲಯಗಳು ಇವೆ. ಇದರ ಮೇಲಿಂದ ನಮಗೆ ಇತಿಹಾಸ ತಿಳಿದುಕೊಳ್ಳಲು ಬರುತ್ತದೆ. (ಉದಾ. ಮುಂಬಯಿಯಲ್ಲಿಯ ಛತ್ರಪತಿ ಶಿವಾಜಿ ಮಹಾರಾಜ ವಸ್ತು ಸಂಗ್ರಹಾಲಯ) ಸರಕಾರದ ಸಂಗ್ರಹಾಲಯಗಳಲ್ಲದೆ ಕೆಲವು ಸಂಗ್ರಹಕಾರರು ತಮ್ಮ ಸ್ವಂತದ ಕೆಲವು ಸಂಗ್ರಹಾಲಯಗಳನ್ನು ಸ್ಥಾಪಿಸುತ್ತಾರೆ. ಅವು ಅತ್ಯಂತ ವೈಶಿಷ್ಯಪೂರ್ಣವಾಗಿರುತ್ತವೆ. ಉದಾ. ನಾಣ್ಯಗಳು, ನೋಟುಗಳು, ವಿವಿಧ ಅಕಾರದಲ್ಲಿಯ ದೀಪಗಳು, ಅಡಕೊತ್ತುಗಳು, ಕ್ರಿಕೆಟ್ಟಿನ ಸಾಹಿತ್ಯ ಇತ್ಯಾದಿ.

**ಮೌಖಿಕ ಸಾಧನಗಳು:** ಈ ಸಾಧನಗಳಲ್ಲಿ ಜಾನಪದ ಕತೆಗಳು, ಜಾನಪದಗೀತೆಗಳು, ಗಾದೆಮಾತುಗಳು, ಬೀಸುವಕಲ್ಲಿನ ಹಾಡುಗಳು ಮುಂತಾದವುಗಳ ಸಮಾವೇಶವಾಗುತ್ತದೆ. ಉದಾ. ಸಂಯುಕ್ತ ಮಹಾರಾಷ್ಟ್ರ ಚಳುವಳಿಯಲ್ಲಿ ಲೋಕಶಾಹೀರ ಅಣ್ಣಾಭಾವೂ ಸಾಠೆ, ಶಾಹೀರ ಅಮರ ಶೇಖ ಇವರ ಜಾನಪದ ಗೀತೆಗಳ ಮೂಲಕ ಕಾರ್ಯಕರ್ತರಿಗೆ ಪ್ರೇರಣೆ ದೊರೆಯುತ್ತಿತ್ತು.

**ದೃಕ್-ಶ್ರಾವ್ಯ ಸಾಧನಗಳು:** ದೂರದರ್ಶನ, ಚಲನಚಿತ್ರ, ಇಂಟರ್ನೆಟ್ (ಅಂತರಜಾಲ) ಇತ್ಯಾದಿ ಸಾಧನಗಳಿಗೆ 'ದೃಕ್ -ಶ್ರಾವ್ಯ ಸಾಧನಗಳು' ಎನ್ನುತ್ತಾರೆ. ವಿವಿಧ ದೇಶೀ ಮತ್ತು ವಿದೇಶಿ ವಾಹಿನಿಗಳು ಉದಾ. ಹಿಸ್ಟ್ರೀ ಚಾನೆಲ್, ಡಿಸ್ಕವರಿ ಇತ್ಯಾದಿ.



**ಮಾಡಿ ನೋಡಿರಿ.**

ಸಾಹಿತ್ಯದಲ್ಲಿ ಯಾವುದೊಂದು ಘಟನೆಯ ಪ್ರತಿಬಿಂಬವು ಹೇಗೆ ಮೂಡುತ್ತದೆ ಹಾಗೂ ಕವಿಯು ಆ ಘಟನೆಯ ಕಡೆಗೆ ಹೇಗೆ ನೋಡುತ್ತಾನೆಯೆಂಬುದರ ಒಂದು ಉದಾಹರಣೆಯು ಕವಿವರ್ಯ ಕುಸುಮಾಗ್ರಜ ಇವರು ಬರೆದು ಭಾರತ-ಚೀನ ಯುದ್ಧದ ಹಿನ್ನೇಲೆಯಲ್ಲಿ ರಚಿಸಿದ 'ಆವಾಹನ' ಎಂಬ ಕವಿತೆಯಲ್ಲಿದೆ.

*ಹಿಮದ ಗೋಡೆಗಳು ಉರಿದೆದ್ದವು. ಶಿವನ ಸದನವು ಕುಸಿಯುತ್ತಿದೆ ನಮ್ಮ ಪ್ರಿಯ (ಮಾತೃಭೂಮಿಯ) ರಕ್ತವು ಶುಭ್ರ ಹಿಮದ ಮೇಲೆ ಸುರಿಯುತ್ತಿದೆ! ಇಂಥ ಕ್ಷಣದಲ್ಲಿ ಯಾವ ಪುಣ್ಯಾತನು ತಟಸ್ಥನಾಗಿ ದೂರನಿಲ್ಲುವನು? ರಾಕ್ಷಸರ ಭ್ರಷ್ಟಪಾದಗಳಿಂದ ಸತಿಯ ಪುಣ್ಯವು ಇಂದು ಅಪವಿತ್ರವಾಗುತ್ತಿದೆ. ಇಂಥ ಕ್ಷಣದಲ್ಲಿ ಯಾವ ಪುಣ್ಯಾತ್ಮನು ತಟಸ್ಥನಾಗಿ ದೂರ ನಿಲ್ಲುವನು? ರೋಷದ ಜ್ವಾಲೆಯ ಯಾವನ ಹೃದಯದಲ್ಲಿ ಪ್ರಜ್ವಾಲಿಸಲಾರದು? ಸಾಮಯಂತ್ರವು ವ್ಯರ್ಥವಾಯಿತು ಯುದ್ಧದ ನಗಾರೆಯು ಬಾರಿಸುತ್ತಿದೆ ನಮ್ಮ ಪ್ರಿಯ ತಾಯಿಯ (ಮಾತೃಭೂಮಿಯ) ರಕ್ತವು ಶುಭ್ರ ಹಿಮದ ಮೇಲೆ ಸುರಿಯುತ್ತಿದೆ)*

ಇದೇ ಪ್ರಕಾರದ ಅನೇಕ ಘಟನೆಗಳ ಮೇಲೆ ಆಧಾರಿತವಾಗಿ ಬರೆದ ಸಾಹಿತ್ಯವನ್ನು ಹುಡುಕಿರಿ.

**ಫಿಲ್ಮ ಆ್ಯಂಡ್ ಟೆಲಿವ್ಹಿಜನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (FTII):** ಭಾರತ ಸರಕಾರವು ಜನರಿಗೆ ಶಿಕ್ಷಣ ನೀಡುವ ಉದ್ದೇಶದಿಂದ 1960ರಲ್ಲಿ ಪುಣೆಯಲ್ಲಿ ಫಿಲ್ಮ ಆ್ಯಂಡ್ ಟೆಲಿವ್ಹಿಜನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ರಾಜಕಾರಣ, ಸಮಾಜಕಾರಣ, ಕಲೆ, ಕ್ರೀಡೆ ಮತ್ತು ಸಂಸ್ಕೃತಿ ಈ ವಿವಿಧ ಕ್ಷೇತ್ರಗಳಲ್ಲಿಯ ಮಹತ್ವದ ಘಟನೆಗಳ ಮೇಲೆ ಆಧಾರಿತವಾದ ವೃತ್ತಚಿತ್ರವನ್ನು ಇಂಡಿಯನ್ ನ್ಯೂಜ ರಿವ್ಯೂ ಈ ಸಂಸ್ಥೆಯು ತಯಾರಿಸಿತು. ಸಮಾಜದ ನೇತೃತ್ವವನ್ನು ಮಾಡುವ ವ್ಯಕ್ತಿಗಳು, ದೇಶಕ್ಕಾಗಿ ತಮ್ಮ ಕೊಡುಗೆ ನೀಡಿದ ವ್ಯಕ್ತಿಗಳು ಹಾಗೂ ಮಹತ್ವದ ಸ್ಥಳಗಳ ಮಾಹಿತಿಯನ್ನು ನೀಡುವ ಸಾಕ್ಷ್ಯಚಿತ್ರ (ಡಾಕ್ಯುಮೆಂಟರೀಜ್) ವನ್ನು ಈ ವಿಭಾಗವು ತಯಾರಿಸಿದೆ. ಆಧುನಿಕ ಭಾರತದ ಇತಿಹಾಸದ ಅಭ್ಯಾಸಮಾಡುವ ಸಲುವಾಗಿ ಈ ವೃತ್ತಚಿತ್ರ ಹಾಗೂ ಸಾಕ್ಷ್ಯಚಿತ್ರಗಳು ಉಪಯುಕ್ತವಾಗಿವೆ.

ಎಫ್‌ಟಿಐಆಯ್‌ಆಯ್‌ದ ಲಾಂಛನ



**ಮಾಡಿ ನೋಡಿರಿ.**

ದೇಶಭಕ್ತಿ – ಈ ವಿಷಯಕ್ಕೆ ಸಂಬಂಧಿಸಿದ ಯಾವ ಯಾವ ಚಲನಚಿತ್ರಗಳು ನಿಮಗೆ ಗೊತ್ತಿವೆ? ನಿಮಗೆ ಹಿಡಿಸಿದ ಒಂದು ಚಲನಚಿತ್ರದ ರಸಗ್ರಹಣವನ್ನು ನಿಮ್ಮ ಶಬ್ದಗಳಲ್ಲಿ ಬರೆಯಿರಿ.

ಇದು ವರೆಗೆ ನಾವು ಆಧುನಿಕ ಭಾರತದ ಇತಿಹಾಸ ಲೇಖನಕ್ಕಾಗಿ ಉಪಯುಕ್ತವಾದ ಕೆಲವು ಸಾಧನಗಳನ್ನು ನೋಡಿದೆವು. ಇಪ್ಪತ್ತೊಂದನೆಯ ಶತಮಾನದಲ್ಲಿ ಕಾಲವು ಎಷ್ಟೊಂದು ವೇಗವಾಗಿ ಬದಲಾಗುತ್ತಿದೆಯೆಂದರೆ ಈಗಿರುವ ಸಾಧನಗಳು ಕೂಡ ಕಡಿಮೆ ಬೀಳುತ್ತಿವೆ. ಆದರಿಂದಾಗಿ ಈಗ ಸ್ವಾಭಾವಿಕವಾಗಿ ಹೊಸ ಸಾಧನಗಳು ಮುಂದೆ ಬರುತ್ತಿವೆ. ಉದಾಹರಣೆಗಾಗಿ ಮನೆಯಲ್ಲಿಯ ಟೆಲಿಫೋನ ದಿಂದ ಮೊಬೈಲ್ ವರೆಗೆ ಈ ಪ್ರವಾಸದಲ್ಲಿ 'ಪೇಜರ' ಎಂಬ ಹೊಸ ಸಾಧನವು ಸಂಪರ್ಕಕ್ಕಾಗಿ ಬಂದಿತ್ತು. ಅದು ಎಷ್ಟು ವೇಗದಿಂದ ಬಂದಿತೋ ಅಷ್ಟೇ ವೇಗದಿಂದ ಕೊನೆಗೊಂಡಿತು. ಇಂಟರ್ನೆಟ್ (ಅಂತರಜಾಲ) ಮೇಲೆ ಲಭ್ಯವಾಗಿರುವ ಪ್ರಚಂಡ ಮಾಹಿತಿಯ ಉಪಯೋಗವನ್ನು ಇತಿಹಾಸದ ಅಭ್ಯಾಸಕ್ಕಾಗಿ ಮಾಡಲಾಗುತ್ತದೆ. ಆದರೆ ಮಾಹಿತಿಯ ವಿಶ್ವಾಸಾರ್ಹತೆ ಹಾಗೂ ಯಥಾರ್ಥತೆಯನ್ನು ಪರಿಶೀಲಿಸಬೇಕಾಗುತ್ತದೆ.

ಸರ್ವಸಾಧನಗಳ ಆಧಾರದಿಂದ ಇತಿಹಾಸದ ಅಭ್ಯಾಸ ಮಾಡುವುದು ಸಹಜ ಸಾಧ್ಯವಾಗಿದೆ. ಆದರಂತೆ ಈ ಎಲ್ಲ ಸಾಧನಗಳು ಆಧುನಿಕ ಕಾಲದಲ್ಲಿಯ ವಾದುದರಿಂದ ಅವು ಸುಲಭವಾಗಿ ಲಭ್ಯವಾಗುತ್ತಿವೆ. ಇತಿಹಾಸವು ಜೀವನದಲ್ಲಿಯ ಪ್ರತಿಯೊಂದು ಅಂಗವನ್ನು ಸ್ಪರ್ಶಿಸುವುದರಿಂದ ಸಾಧನಗಳ ರಕ್ಷಣೆಯ ಪ್ರಯತ್ನವೂ ಕೂಡ ಎಲ್ಲಾ ಮಟ್ಟಗಳಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ.



## ಸ್ವಾಧ್ಯಾಯ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಿಧಾನಗಳನ್ನು ಪೂರ್ಣಮಾಡಿರಿ.**

(1) ಭಾರತದ ರಾಷ್ಟ್ರೀಯ ದಾಖಲಾಗೃಹವು...... ಎಂಬಲ್ಲಿ ಇದೆ.

(ಅ) ಪುಣೆ (ಬ) ಹೊಸದಿಲ್ಲಿ
(ಕ) ಕೋಲ್ಕಾತಾ (ಡ) ಹೈದರಾಬಾದ

(2) ದೃಕ್-ಶ್ರಾವ್ಯ ಸಾಧನಗಳಲ್ಲಿ ....... ಈ ಸಾಧನದ ಸಮಾವೇಶವಾಗುತ್ತದೆ.

(ಅ) ವರ್ತಮಾನ ಪತ್ರ (ಬ) ದೂರದರ್ಶನ
(ಕ) ಆಕಾಶವಾಣಿ (ಡ) ನಿಯತಕಾಲಿಕೆಗಳು

(3) ಭೌತಿಕ ಸಾಧನಗಳಲ್ಲಿ..... ಸಮಾವೇಶವಾಗುವುದಿಲ್ಲ.

(ಅ) ನಾಣ್ಯಗಳು (ಬ) ಆಭರಣಗಳು
(ಕ) ಕಟ್ಟಡಗಳು (ಡ) ಗಾದೆ ಮಾತುಗಳು

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

| ವ್ಯಕ್ತಿ | | ವೈಶಿಷ್ಟ್ಯ |
|---|---|---|
| ಜಾಲ ಕೂಪರ | – | ಅಂಚೆ ತಿಕೀಟು ಅಭ್ಯಾಸಕರು |
| ಕುಸುಮಾಗ್ರಜ | – | ಕವಿ |
| ಅಣ್ಣಾಭಾವೂ ಸಾಠೆ | – | ಲೋಕಶಾಹೀರ |
| ಅಮರ ಶೇಖ | – | ಚಿತ್ರ ಸಂಗ್ರಾಹಕರು |

**2. ಟಿಪ್ಪಣೆ ಬರೆಯಿರಿ.**

(1) ಲಿಖಿತ ಸಾಧನಗಳು (2) ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ

**3. ಮುಂದಿನ ವಿಧಾನಗಳ ಕಾರಣಗಳನ್ನು ಸ್ಪಷ್ಟಪಡಿಸಿರಿ.**

(1) ಅಂಚೆ ಇಲಾಖೆಯು ಅಂಚೆ ತಿಕೀಟುಗಳ ಮೂಲಕ ಭಾರತೀಯ ಸಂಸ್ಕೃತಿಯ ಪರಂಪರೆ ಮತ್ತು ಐಕ್ಯತೆಗಳನ್ನು ರಕ್ಷಿಸಲು ಪ್ರಯತ್ನಿಸುತ್ತದೆ.

(2) ಆಧುನಿಕ ಭಾರತದ ಇತಿಹಾಸವನ್ನು ಬರೆಯುವ ಸಲುವಾಗಿ ದೃಕ್-ಶ್ರಾವ್ಯ ಸಾಧನಗಳು ಮಹತ್ವದ್ದಾಗಿತ್ತವೆ.

**ಉಪಕ್ರಮ**

(1) ಶಾಲೆಯ ಹಸ್ತಲಿಖಿತ/ವೃತ್ತಚಿತ್ರವನ್ನು ತಯಾರಿಸಿರಿ.

(2) Archaeological Survey of India - ಭಾರತ ಸರಕಾರದ ಈ ಅಧಿಕೃತ ಸಂಕೇತಸ್ಥಳದ ಮೇಲಿನ ವಿವಿಧ ಮಾಹಿತಿಚಿತ್ರಗಳನ್ನು ನೋಡಿರಿ.

(3) ನಿಮ್ಮ ಊರಿನ ಇತಿಹಾಸವನ್ನು ಬರೆಯಲು ಯಾವ ಸಾಧನಗಳನ್ನು ಬಳಸುವಿರಿ? ಆ ಸಾಧನಗಳ ಸಹಾಯದಿಂದ ನಿಮ್ಮ ಊರಿನ ಇತಿಹಾಸವನ್ನು ಬರೆಯಿರಿ.

C1QVSH

# 2 ಭಾರತ : 1960ರ ನಂತರದ ಸ್ಥಿತ್ಯಂತರಗಳು

ಕ್ರಿ.ಶ. 1947ರಲ್ಲಿ ಭಾರತವು ಸ್ವತಂತ್ರವಾಯಿತು. 1950ರಲ್ಲಿ ಸಂವಿಧಾನವನ್ನು ಸ್ವೀಕಾರ ಮಾಡುತ್ತ ಭಾರತದ ಸಾರ್ವಭೌಮ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣವಾಯಿತು. ಭಾರತೀಯ ಸಮಾಜವು ವಿವಿಧತೆಯಿಂದ ಕೂಡಿದ್ದು ಈ ಸಮಾಜದಲ್ಲಿ ವಿವಿಧ ಭಾಷೆ, ಧರ್ಮ ವಂಶ ಹಾಗೂ ವಿವಿಧ ಜಾತಿಗಳ ಜನರು ಒಟ್ಟಾಗಿ ಇರುತ್ತಾರೆ.

ಸ್ವಾತಂತ್ರ್ಯದೊರೆತ ನಂತರ ಆರಂಭದ ಕಾಲದಲ್ಲಿ ಭಾರತಕ್ಕೆ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಕಾಸದ ಸಮಸ್ಯೆಗಳನ್ನೂ ಬಿಡಿಸಬೇಕಾಗಿತ್ತು. ಯೋಜನಾ ಆಯೋಗದ ನಿರ್ಮಿತ ಮತ್ತು ಔದ್ಯೋಗೀಕರಣಕ್ಕೆ ಮಹತ್ವ- ಇವು ಅರ್ಥಿಕ ವಿಕಾಸವನ್ನು ಸಾಧಿಸುವ ಮತ್ತು ದೇಶದಲ್ಲಿಯ ದಾರಿದ್ರ್ಯದ ಸಮಸ್ಯೆಯನ್ನು ಪರಿಹರಿಸುವ ಒಂದು ಮಾರ್ಗವೆಂದು ಸ್ವೀಕರಿಸಲಾಯಿತು. ಚುನಾವಣೆಗಳ ಯಶಸ್ವಿ ಆಯೋಜನೆ ಮತ್ತು ಪ್ರಜಾಪ್ರಭುತ್ವ ಪರಂಪರೆಯ ಮೇಲಿನ ವಿಶ್ವಾಸದಿಂದಾಗಿ ರಾಜಕೀಯ ಸ್ಥೈರ್ಯವನ್ನು ಪಡೆಯುವುದು. ಸಾಧ್ಯವಾಯಿತು. ಇದರ ಜೊತೆಗೆ ದುರ್ಬಲ ಸಮಾಜಘಟಕಗಳಿಗಾಗಿ ಇರುವ ಕಾರ್ಯಕ್ರಮಗಳ ಮತ್ತು ನೀತಿಗಳನ್ನು ಒಳಗೊಂಡ ಅನೇಕ ಸಾಮಾಜಿಕ ಸುಧಾರಣೆಗಳನ್ನು ಪ್ರತ್ಯಕ್ಷದಲ್ಲಿ ತರುವ ಪ್ರಯತ್ನಗಳಾದವು.

**1960ರ ದಶಕ:** ಭಾರತದ ರಾಜಕೀಯ ಪರಿಸ್ಥಿತಿಯ ಮೇಲೆ ಪರಿಣಾಮಬೀರುವ ಅನೇಕ ಸ್ಥಿತ್ಯಂತರಗಳು 1960ರ ದಶಕದಲ್ಲಿ ಸಂಭವಿಸಿದವು. ಪೋರ್ತುಗೀಜ ಆಡಳಿತದಲ್ಲಿದ್ದ ಗೋವಾ, ದಮಣ ಮತ್ತು ದೀವ ಈ ಪ್ರದೇಶಗಳು ಮುಕ್ತವಾದವು ಹಾಗೂ ಅವು ಭಾರತೀಯ ಒಕ್ಕೂಟ ರಾಜ್ಯದ ಭಾಗವಾದವು. ಉತ್ತರದ ಗಡಿಯಲ್ಲಿ ಭಾರತ ಮತ್ತು ಚೀನಗಳ ನಡುವಿನ ಸಂಘರ್ಷವು 1950 ರಿಂದ ಹೆಚ್ಚುತ್ತಿತ್ತು. ಈ ಸಂಘರ್ಷದ ಪರಿಣಾಮವು ಎರಡೂ ದೇಶಗಳ ನಡುವಿನ ಗಡಿರೇಖೆಯ ಯುದ್ಧದಲ್ಲಾಯಿತು. ಈ ಯುದ್ಧವು ಮ್ಯಾಕಮೋಹನ (1962) ರೇಖೆಯ ಕ್ಷೇತ್ರದಲ್ಲಾಯಿತು.

ಭಾರತಕ್ಕೆ ಸ್ವಾತಂತ್ರ್ಯ ದೊರತ ನಂತರದ ಕಾಲದಲ್ಲಿ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ಭಾರತದ ನೇತೃತ್ವವನ್ನು ಮಾಡಿದರು. ಅವರು ಭಾರತದ ವಿದೇಶ ನೀತಿಯ ಶಿಲ್ಪಿಯಾಗಿದ್ದರು. ಭಾರತದ ಸಾಮಾಜಿಕ - ಆರ್ಥಿಕ ವಿಕಾಸಕ್ಕಾಗಿ ಅವರು ಮಾಡಿದ ಕಾರ್ಯವು ಅಮೂಲ್ಯವಾಗಿದೆ. 1964ರಲ್ಲಿ ಭಾರತದ ಪ್ರಧಾನಮಂತ್ರಿ ಪಂಡಿತ ನೆಹರು ನಿಧನಹೊಂದಿದರು. ಆನಂತರ ಲಾಲ ಬಹಾದ್ದೂರ ಶಾಸ್ತ್ರಿ ಭಾರತದ ಪ್ರಧಾನ ಮಂತ್ರಿಯಾದರು. ಅವರ ಆಡಳಿತದ ಕಾಲದಲ್ಲಿ 1965ರಲ್ಲಿ



ಪಂ. ಜವಾಹರಲಾಲ ನೆಹರು

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಶ್ಮೀರ ಸಮಸ್ಯೆಯ ಮೇಲಿಂದ ಯುದ್ಧವಾಯಿತು. ಸೋವ್ಹಿಯತ್ ಯುನಿಯನ್ ಇದು ಎರಡೂ ದೇಶಗಳನಡುವೆ ಮಧ್ಯಸ್ಥಿಕೆಯನ್ನು ಮಾಡುವ ಪ್ರಯತ್ನಮಾಡಿತು. 1966ರಲ್ಲಿ ತಾಶ್ಕಂದ ಎಂಬಲ್ಲಿ ಲಾಲ ಬಹಾದ್ದೂರ ಶಾಸ್ತ್ರೀಯವರ ನಿಧನವಾಯಿತು. 'ಜೈ ಜವಾನ್ ಜೈ ಕಿಸಾನ' ಈ ಘೋಷಣೆಯನ್ನು ಲಾಲ ಬಹಾದ್ದೂರ ಶಾಸ್ತ್ರೀಯವರೇ ನೀಡಿದರು. ಆದರ ಮೂಲಕ ಅವರು ಭಾರತೀಯ ರೈತ ಮತ್ತು ಭಾರತೀಯ ಸೈನಿಕ ಇವರ ಮಹತ್ವವನ್ನು ಒತ್ತಿಹೇಳಿದರು.



ಲಾಲ ಬಹಾದ್ದೂರ ಶಾಸ್ತ್ರಿ

1966ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಭಾರತದ ಪ್ರಧಾನ ಮಂತ್ರಿ ಯಾದರು. ಅವರ ನಿರ್ಣಯ ಕ್ಷಮತೆ ಪ್ರಶಂಸನೀಯವಾಗಿತ್ತು. ಬ್ಯಾಂಕಿನ ರಾಷ್ಟ್ರೀಕರಣ ಮತ್ತು ಸಂಸ್ಥಾನಿಕರ ಸಂಬಳ ಬಂದ ಮಾಡುವುದು ಅವರ ಈ ನಿರ್ಣಯ ದೂರಗಾಮಿ ಪರಿಣಾಮವಾಯಿತು. ಅವರ ಆಡಳಿತದ ಕಾಲದಲ್ಲಿ ಪೂರ್ವ ಪಾಕಿಸ್ತಾನದ ಮೇಲಿನ ಪಾಕಿಸ್ತಾನದ ದಬ್ಬಾಳಿಕೆಯ ನೀತಿಯು ಪೂರ್ವಪಾಕಿಸ್ತಾನದಲ್ಲಿ ದೊಡ್ಡ ಆಂದೋಲನ ನಿರ್ಮಾಣ ಮಾಡಲು ಕಾರಣೀಭೂತವಾಯಿತು.



ಇಂದಿರಾ ಗಾಂಧಿ

ಈ ಆಂದೋಲನದ ನೇತೃತ್ವವನ್ನು ಶೇಖ ಮುಜಿಬೂರ ರಹಮಾನ ಇವರ ಮುಕ್ತಿವಾಹಿನಿಯು ಮಾಡಿತು. ಪೂರ್ವ ಪಾಕಿಸ್ತಾನದ ಈ ಸಮಸ್ಯೆಯ ಪರಿಣಾಮವು ಭಾರತದ ಮೇಲೂ ಆಯಿತು. ಏಕೆಂದರೆ ಕೋಟ್ಯಾವಧಿ ನಿರಾಶ್ರಿತರು ಅಲ್ಲಿಂದ ಭಾರತಕ್ಕೆ ಬಂದರು.

**1970ರ ದಶಕ:** 1971 ರಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವಾಯಿತು. ಹಾಗೂ ಅದರ ಪರಿಣಾಮವು ಸ್ವತಂತ್ರ ಬಾಂಗಲಾದೇಶ ನಿರ್ಮಿತಿಯಲ್ಲಾಯಿತು. ಈ ಕೆಲಸಗಳು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಮಹತ್ವದ್ದು ಎಂದು ತಿಳಿಯಲಾಗುತ್ತವೆ. ಶಾಂತತೆಯ ಕಾರಣಕ್ಕಾಗಿ ಅಣುಶಕ್ತಿಯ ಉಪಯೋಗ ಮಾಡುವ ತಮ್ಮ ನೀತಿಯ ಒಂದು ಭಾಗವೆಂದು ಭಾರತವು 1974ರಲ್ಲಿ ರಾಜಸ್ಥಾನದಲ್ಲಿಯ ಪೋಖರಣ ಎಂಬಲ್ಲಿ ಭೂಗರ್ಭದಲ್ಲಿ ಯಶಸ್ವಿ ಅಣುಪರೀಕ್ಷೆ ಮಾಡಿತು. 1975ರಲ್ಲಿ

ಸಿಕ್ಕಿಂನ ಜನರು ಭಾರತೀಯ ಒಕ್ಕೂಟ ರಾಜ್ಯದಲ್ಲಿ ಸೇರಿಕೊಳ್ಳುವ ಸಲುವಾಗಿ ಮತದಾನ ಮಾಡಿದರು ಹಾಗೂ ಅದಕ್ಕನುಸಾರವಾಗಿ ಸಿಕ್ಕಿಂಗೆ ಭಾರತೀಯ ಒಕ್ಕೂಟ ರಾಜ್ಯದಲ್ಲಿ ರಾಜ್ಯದ ದರ್ಜೆ ದೊರೆಯಿತು.

ಈ ದಶಕದಲ್ಲಿ ಸರಕಾರವು ಸಂವಿಧಾನದಲ್ಲಿಯ ತುರ್ತುಪರಿಸ್ಥಿತಿ ವಿಷಯದ ಏರ್ಪಾಟಿನ ಆಧಾರದಿಂದ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಿತು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಭಾರತೀಯ ನಾಗರಿಕರ ಮೂಲಭೂತ ಹಕ್ಕುಗಳನ್ನು ಸ್ಥಗಿತಗೊಳಿಸಲಾಯಿತು. ತುರ್ತು ಪರಿಸ್ಥಿತಿಯಿಂದಾಗಿ ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ಶಿಸ್ತು ನಿರ್ಮಾಣವಾಯಿತು. ಆದರೆ ಅದರ ಜೊತೆಗೆ ಮಾನವೀ ಹಕ್ಕುಗಳನ್ನೂ ಕಡಿತಗೊಳಿಸಲಾಯಿತು. ರಾಷ್ಟ್ರೀಯ ತುರ್ತುಪರಿಸ್ಥಿತಿಯ ಈ ಕಾಲವು 1975 ರಿಂದ 1977ರ ವರೆಗೆ ಉಳಿಯಿತು ಹಾಗೂ ಆನಂತರ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲಾಯಿತು.

ತುರ್ತುಪರಿಸ್ಥಿತಿಯ ಹಿನ್ನೆಲೆಯಲ್ಲಿ ಅನೇಕ ವಿರೋಧ ಪಕ್ಷಗಳು ಒಂದೆಡೆ ಸೇರಿ ಜನತಾಪಕ್ಷದ ಸ್ಥಾಪನೆ ಮಾಡಿದವು. ಈ ಚುನಾವಣೆಯಲ್ಲಿ ಹೊಸದಾಗಿ ಸ್ಥಾಪನೆಯಾದ ಜನತಾ ಪಕ್ಷದ ಕಡೆಯಿಂದ ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿಯ ಕಾಂಗ್ರೆಸ್ ಪಕ್ಷದ ದಾರುಣ ಪರಾಭವವಾಯಿತು. ಮೊರಾರಜಿ ದೇಸಾಯಿಯವರು ಪ್ರಧಾನಮಂತ್ರಿಯಾದರು. ಅವರ ನೇತೃತ್ವದಲ್ಲಿಯ ಜನತಾ ಪಕ್ಷದ ಸರಕಾರವು ಪರಸ್ಪರರಲ್ಲಿಯ ಭಿನ್ನಾಭಿಪ್ರಾಯಗಳಿಂದಾಗಿ ಬಹಳ ಕಾಲ ಉಳಿಯಲಿಲ್ಲ. ಆ ನಂತರ ಚರಣಸಿಂಗ್ ಇವರು ಪ್ರಧಾನಮಂತ್ರಿಯಾದರು. ಅವರ ಸರಕಾರವು ಅಲ್ಪ ಕಾಲ ಉಳಿಯಿತು. 1980ರಲ್ಲಿ ಮತ್ತೆ ಚುನಾವಣೆಗಳಾದವು. ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿಯ ಕಾಂಗ್ರೆಸ್ ಪಕ್ಷವು ಪುನಃ ಅಧಿಕಾರಕ್ಕೆ ಬಂದಿತು.

**1980ರ ದಶಕ:** ಈ ದಶಕದಲ್ಲಿ ಭಾರತೀಯ ರಾಜಕೀಯ ವ್ಯವಸ್ಥೆಯು ಅನೇಕ ಹೊಸ ಆಹ್ವಾನಗಳನ್ನು ಎದುರಿಸಬೇಕಾಯಿತು. ಶೀಖರು ಪಂಜಾಬದಲ್ಲಿ ಸ್ವತಂತ್ರ ಖಲಿಸ್ತಾನ ರಾಜ್ಯದ ಬೇಡಿಕೆಗಾಗಿ ಆಂದೋಲನೆಯನ್ನು ಆರಂಭಿಸಿದರು. ಈ ಆಂದೋಲನೆಯು ಅತ್ಯಂತ ಉಗ್ರ ರೂಪವನ್ನು ಧರಿಸಿತು. ಈ ಅಂದೋಲನೆಗೆ ಪಾಕಿಸ್ತಾನದ ಬೆಂಬಲವಿತ್ತು. 1984ರಲ್ಲಿ ಅಮೃತಸರದಲ್ಲಿಯ ಸುವರ್ಣ ಮಂದಿರದಲ್ಲಿ ಆಶ್ರಯ ಪಡೆದ ಉಗ್ರವಾದಿಗಳನ್ನು ಹೊರಗೆ ತೆಗೆಯುವ ಸಲುವಾಗಿ ಭಾರತೀಯ ಸೈನ್ಯವನ್ನು ಕಳುಹಿಸಬೇಕಾಯಿತು. ಶ್ರೀಮತಿ ಇಂದಿರಾ ಗಾಂಧಿಯವರ ಸುರಕ್ಷಾ ರಕ್ಷಕ ಪಡೆಯಲ್ಲಿಯ ರಕ್ಷಕರೇ ಅವರ ಕೊಲೆ ಮಾಡಿದರು.

ಇದೇ ಕಾಲಖಂಡದಲ್ಲಿ ಈಶಾನ್ಯ ಭಾರತದಲ್ಲಿ ಉಲ್ಫಾ ಸಂಘಟನೆಯ ನೇತೃತ್ವದಲ್ಲಿ ದೊಡ್ಡ ಆಂದೋಲನೆಯಾಯಿತು.


ರಾಜೀವ ಗಾಂಧಿ

1984ರಲ್ಲಿ ರಾಜೀವ ಗಾಂಧಿಯವರು ಪ್ರಧಾನ ಮಂತ್ರಿಯಾಗಿ ಸೂತ್ರಗಳನ್ನು ಸ್ವೀಕರಿಸಿದರು. ಅವರು ಭಾರತದ ಅರ್ಥವ್ಯವಸ್ಥೆಯಲ್ಲಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನುಂಟು ಮಾಡುವ ಪ್ರಯತ್ನ ಮಾಡಿದರು. ಶ್ರೀಲಂಕಾದಲ್ಲಿಯ ತಮಿಳು ಅಲ್ಪ ಸಂಖ್ಯಾತರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ರಾಜೀವ ಗಾಂಧಿಯವರು ಮುಂದಾಳುತನ ವಹಿಸಿದರು. ತಮಿಳು ಸಮುದಾಯಕ್ಕೆ ದೇಶಾಂತರ್ಗತ ಸ್ವಾಯತ್ತತೆಯನ್ನು ನೀಡಿ ಅಖಂಡ ಶ್ರೀಲಂಕಾದ ಕಲ್ಪನೆಗೆ ಅವರು ಬೆಂಬಲ ನೀಡಿದ್ದರು: ಆದರೆ ಅವರ ಈ ಪ್ರಯತ್ನಗಳಿಗೆ ಯಶಸ್ಸು ದೊರೆಯಲಿಲ್ಲ.

1989 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರಾಭವವಾಯಿತು. ಈ ನಂತರ ವಿವಿಧ ಪಕ್ಷಗಳು ಒಂದೆಡೆ ಬಂದು ಜನತಾದಳದ ವಿಶ್ವನಾಥ ಪ್ರತಾಪ ಸಿಂಗ್ ಭಾರತದ ಪ್ರಧಾನಮಂತ್ರಿಯಾದರು. ಇತರ ಹಿಂದುಳಿದ ವರ್ಗಗಳಿಗಾಗಿ ಮೀಸಲಾತಿಯ ನೀತಿಯು ಅವರ ಅತ್ಯಂತ ಮಹತ್ವದ ಕೊಡುಗೆಯೆಂದು ತಿಳಿಯಲಾಗುತ್ತದೆ. ಪಕ್ಷಾಂತರ್ಗತ ವಾದ-ವಿವಾದ ಗಳಿಂದಾಗಿ ಅವರು ಹೆಚ್ಚು ಕಾಲ ಪ್ರಧಾನಮಂತ್ರಿಯ ಸ್ಥಾನದಲ್ಲಿರಲು ಸಾಧ್ಯವಾಗಲಿಲ್ಲ. 1990ರಲ್ಲಿ ಚಂದ್ರಶೇಖರ ಭಾರತದ ಪ್ರಧಾನಮಂತ್ರಿಯಾದರು. ಅವರ ಸರಕಾರವೂ ಅಲ್ಪಕಾಲ ಉಳಿಯಿತು. 1991ರಲ್ಲಿ ಚುನಾವಣಾ ಪ್ರಚಾರದ ಸಮಯದಲ್ಲಿ ಶೀಲಂಕಾದಲ್ಲಿಯ ಲಿಟ್ಟೇ (LTTE) ಈ ಸಂಘಟನೆಯು ರಾಜವ ಗಾಂಧಿಯವರ ಕೊಲೆ ಮಾಡಿತು.

1980ರ ದಶಕದ ಕೊನೆಯಲ್ಲಿ ಜಮ್ಮು ಮತ್ತು ಕಾಶ್ಮೀರ ದಲ್ಲಿಯ ಅಸಂತೊಷಕ್ಕೆ ಆರಂಭವಾದುದು ಕಂಡುಬರುತ್ತದೆ. ಈ ಸಮಸ್ಯೆಯು ಅಧಿಕಾಧಿಕವಾಗಿ ಹೆಚ್ಚುತ್ತಲೇ ಹೋಯಿತು ಹಾಗೂ ಅದು ಈಗ ಭಯೋತ್ಪಾದಕತೆಯ ರೂಪವನ್ನು ಧರಿಸಿದೆ. ಅಲ್ಲಿಯ ಉಗ್ರವಾದಿ ಚಟುವಟಿಕೆಗಳು ಕಾಶ್ಮೀರಿ ಪಂಡಿತರನ್ನು ಅಲ್ಲಿಂದ ಹೊರಟು ಹೋಗುವಂತೆ ಮಾಡಿದವು.

**1991ರ ನಂತರದ ಬದಲಾವಣೆಗಳು:** ಜಗತ್ತಿನ ಮತ್ತು

ಭಾರತದ ಇತಿಹಾಸದಲ್ಲಿ 1991ನೇ ವರ್ಷವು ಮಹತ್ವದ ಬದಲಾವಣೆಗಳ ವರ್ಷವಾಯಿತು. ಈ ಕಾಲಾವಧಿಯಲ್ಲಿ ಸೋವ್ಹಿಯಿತ್ ರಶಿಯಾದ ವಿಘಟನೆಯಾಯಿತು ಹಾಗೂ ಜಗತ್ತಿನಲ್ಲಿಯ ಶೀತಯುದ್ಧವು ಮುಕ್ತಾಯವಾಯಿತು. ಭಾರತದಲ್ಲಿ ಪಿ.ವ್ಹಿ. ನರಸಿಂಹರಾವ ಇವರ ನೇತೃತ್ವದಲ್ಲಿಯ ಸರಕಾರವು ಭಾರತೀಯ ಅರ್ಥವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿತು.

1996 ರಿಂದ 1999ರ ಕಾಲಾವಧಿಯಲ್ಲಿ ಭಾರತದ ಲೋಕಸಭೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯಲಿಲ್ಲ, ಅದೇ ಸಮಯದಲ್ಲಿ ಪ್ರಧಾನ ಮಂತ್ರಿಯೆಂದು ಅಟಲ ಬಿಹಾರಿ ವಾಜಪೇಯಿ, ಎಚ್.ಡಿ. ದೇವೇಗೌಡಾ ಹಾಗೂ ಇಂದ್ರಕುಮಾರ ಗುಜರಾಲ ಇವರು ಕಾರ್ಯ ನಿರ್ವಹಿಸಿದರು. ಕೊನೆಗೆ 1999ರಲ್ಲಿ ಭಾರತೀಯ ಜನತಾ ಪಕ್ಷದ ನೇತೃತ್ವದಲ್ಲಿಯ ಎನ್.ಡಿ.ಎ ಒಕ್ಕೂಟ ಸರಕಾರವು ಅಧಿಕಾರಕ್ಕೆ ಬಂದಿತು ಹಾಗೂ ಅಟಲಬಿಹಾರಿ ವಾಜಪೇಯಿಯವರು ಭಾರತದ ಪ್ರಧಾನ ಮಂತ್ರಿಯಾದರು.

ಅಟಲಬಿಹಾರಿ ವಾಜಪೇಯಿಯವರು ಪಾಕಿಸ್ತಾನದ ಜೊತೆ ಮಾತುಕತೆಯನ್ನು ಮಾಡುವ ಪ್ರಯತ್ನ ಮಾಡಿದರು. ಆದರೆ ಅವರಿಗೆ ಯಶಸ್ಸು ದೊರೆಯಲ್ಲಿಲ್ಲ. 1998ರಲ್ಲಿ ಭಾರತವು ಇನ್ನೂ ಕೆಲವು ಅಣು ಪರೀಕ್ಷೆ ಮಾಡಿ ತಾನು ಅಣ್ವಸ್ತ್ರಸಂಪನ್ನ ರಾಷ್ಟ್ರವೆಂದು ಘೋಷಿಸಿತು. 1999ರಲ್ಲಿ ಕಾರಗಿಲ್ ಕ್ಷೇತ್ರದಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಶ್ಮೀರ ಸಮಸ್ಯೆಯ ಮೇಲಿಂದ ಯುದ್ಧವಾಯಿತು. ಈ ಯುದ್ಧದಲ್ಲಿ ಭಾರತವು ಪಾಕಿಸ್ತಾನವನ್ನು ಸೋಲಿಸಿತು.


ಅಟಲಬಿಹಾರಿ ವಾಜಪೇಯಿ

**ಭಾರತೀಯ ಅರ್ಥವ್ಯವಸ್ಥೆ:** ಅರ್ಥವ್ಯವಸ್ಥೆಯ ಆಧುನಿಕೀಕರಣ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯಗಳ ಜೊತೆ ಸಮಾಜವಾದಿ ಸಮಾಜ ರಚನೆ - ಇವು ಭಾರತ ಸ್ವತಂತ್ರವಾದಾಗಿನಿಂದ ಹಿಡಿದು ಭಾರತೀಯ ಅರ್ಥವ್ಯವಸ್ಥೆಯ ವೈಶಿಷ್ಟ್ಯಗಳಾಗಿವೆ. ಭಾರತಕ್ಕೆ ಉದ್ಯೋಗಗಳನ್ನು ಸ್ಥಾಪಿಸಿ ಆಧುನಿಕೀಕರಣ ಮತ್ತು ಸ್ವಾವಲಂಬನೆಯನ್ನು ದೊರಕಿಸಬೇಕಾಗಿತ್ತು. ಯೋಜನೆಗಳ ಮುಖಾಂತರ ಸಾಮಾಜಿಕ ನ್ಯಾಯದ ಮೇಲೆ ಆಧಾರಿತವಾದ ಅರ್ಥವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರುವುದಿತ್ತು. ಆದ್ದರಿಂದಲೇ ಯೋಜನಾ ಆಯೋಗವನ್ನು ನಿರ್ಮಿಸಲಾಯಿತು ಹಾಗೂ ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸಲಾಯಿತು.

1991ರಲ್ಲಿ ನರಸಿಂಹರಾವ ಸರಕಾರವು ಆರ್ಥಿಕ ಸುಧಾರಣೆಗಳನ್ನು ಮಾಡಲು ಆರಂಭಿಸಿತು. ಈ ಆರ್ಥಿಕ ಸುಧಾರಣೆಗಳಿಗೆ ಆರ್ಥಿಕ ಉದಾರೀಕರಣವೆಂದು ಕರೆಯುತ್ತಾರೆ. ಈ ನೀತಿಯಿಂದಾಗಿ ಭಾರತದ ಆರ್ಥಿಕ ವ್ಯವಸ್ಥೆಯು ಊರ್ಜಿತಾವಸ್ಥೆಗೆ ಬಂದಿತು. ಭಾರತದ ವಿದೇಶಿ ವಿನಿಯೋಗವು ಹೆಚ್ಚಿತು. ಉದ್ಯೋಗ ಮತ್ತು ವೈಜ್ಞಾನಿಕ ಕ್ಷೇತ್ರದಲ್ಲಿಯ ಕುಶಲ ವ್ಯಾವಸಾಯಿಕರಾದ ಭಾರತೀಯರು ಭಾರತೀಯ ಅರ್ಥವ್ಯವಸ್ಥೆಯಲ್ಲಿ ಸುಧಾರಣೆ ಮಾಡಲು ಸಹಾಯ ಮಾಡಿದರು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿಯ ಉದ್ಯೋಗಗಳು ದಿನಗೂಲಿಯ ಹೊಸ ಅವಕಾಶಗಳನ್ನು ನಿರ್ಮಿಸಿದವು. 1991ರ ನಂತರ ಉಂಟಾದ ಈ ಬದಲಾವಣೆಗಳನ್ನು 'ಜಾಗತಿ ಕರಣ' ಎಂದೂ ವರ್ಣಿಸಲಾಗುತ್ತದೆ.

**ವಿಜ್ಞಾನ ಮತ್ತು ತಂತ್ರಜ್ಞಾನ:** ಭಾರತವು ಸ್ವಾವಲಂಬನಕ್ಕಾಗಿ ಮಾಡಿದ ಪ್ರಯತ್ನಗಳಲ್ಲಿ ಎರಡು ಮಹತ್ವದ ಘಟನೆಗಳ ಸಮಾವೇಶ ಮಾಡಬಹುದು. ಡಾ. ಎಮ್.ಎಸ್. ಸ್ವಾಮಿನಾಥನ್ ಇವರು 1965ರಲ್ಲಿ ಆರಂಭವಾದ ಹಸಿರುಕ್ರಾಂತಿಯ ಜನಕರಾಗಿದ್ದರು. ಅವರು ಹೊಸ ವೈಜ್ಞಾನಿಕ ತಂತ್ರವನ್ನು ಬಳಸಿ ಅನ್ನಧಾನ್ಯದ ಉತ್ಪಾದನೆಯನ್ನು ಹೆಚ್ಚಿಸಿದರು. ಡಾ. ವರ್ಗೀಸ ಕುರಿಯನ್ ಇವರ ಹಾಲು ಉತ್ಪಾದನೆಯಲ್ಲಿಯ ಸಹಕಾರಿ ಚಳುವಳಿಯ ಪ್ರಯೋಗದಿಂದ ಭಾರತದಲ್ಲಿಯ ದೊಡ್ಡ ಪ್ರಮಾಣದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿತು. ಇದಕ್ಕೆ 'ಧವಲಕ್ರಾಂತಿ' ಎಂದು ಕರೆಯುತ್ತಾರೆ.

ಅಣುಶಕ್ತಿ ಮತ್ತು ಅಂತರಿಕ್ಷ ಸಂಶೋಧನೆಯ ಕ್ಷೇತ್ರಗಳಲ್ಲಿಯೂ ಭಾರತವು ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಡಾ. ಹೋಮಿ ಭಾಭಾ ಇವರು ಭಾರತದಲ್ಲಿಯ ಅಣುಶಕ್ತಿ ಕಾರ್ಯಕ್ರಮಕ್ಕೆ ಅಡಿಪಾಯ ಹಾಕಿದರು. ಅಣುಶಕ್ತಿಯ ಬಳಕೆಯನ್ನು ವಿದ್ಯುಚ್ಛಕ್ತಿ ನಿರ್ಮಾಣ, ಔಷಧಗಳು ಹಾಗೂ ಸಂರಕ್ಷಣೆಗಳಂತಹ ಶಾಂತತೆಯ ಕಾರಣಗಳಿಗಾಗಿ ಮಾಡುವುದಕ್ಕೆ ಭಾರತವು ಮಹತ್ವ ನೀಡಿತು. ಅಂತರಿಕ್ಷ ತಂತ್ರಜ್ಞಾನದಲ್ಲಿಯೂ ಭಾರತವು ಗಣನೀಯ ಕಾರ್ಯವನ್ನು ಮಾಡಿದೆ. 1975ರಲ್ಲಿ 'ಆರ್ಯಭಟ್ಟ' ಎಂಬ ಮೊದಲನೆಯ ಉಪಗ್ರಹವನ್ನು ಅಂತರಿಕ್ಷದಲ್ಲಿ ಬಿಡಲಾಯಿತು. ಇಂದು ಭಾರತದ ಕಡೆಗೆ ಒಂದು ಯಶಸ್ವಿ ಅಂತರಿಕ್ಷ ಕಾರ್ಯಕ್ರಮವಿದ್ದು ಆ ಕಾರ್ಯಕ್ರಮದ ಅಂತರ್ಗತವಾಗಿ ಅನೇಕ ಉಪಗ್ರಹಗಳನ್ನು ಅಂತರಿಕ್ಷದಲ್ಲಿ ಬಿಡಲಾಗಿದೆ. ದೂರಸಂಚಾರ ಕ್ಷೇತ್ರದಲ್ಲಿಯೂ ಪ್ರಗತಿಯಾಯಿತು.

**ಸಾಮಾಜಿಕ ಕ್ಷೇತ್ರದಲ್ಲಿಯ ಬದಲಾವಣೆಗಳು:** ಇದೇ ಕಾಲದಲ್ಲಿ ಭಾರತದ ಸಾಮಾಜಿಕ ಕ್ಷೇತ್ರದಲ್ಲಿಯೂ ಅನೇಕ ಮಹತ್ವದ ಬದಲಾವಣೆಗಳಾಗಿವೆ.

ಇವುಗಳಲ್ಲಿಯ ಕೆಲವು ಬದಲಾವಣೆಗಳು ಮಹಿಳೆಯರ ಸಬಲೀಕರಣದ ಸಮಸ್ಯೆಗೆ ಸಂಬಂಧಿತವಾಗಿದ್ದು ಇನ್ನೂ ಕೆಲವು ಬದಲಾವಣೆಗಳು ವಂಚಿತ ಘಟಕಗಳ ಉನ್ನತಿಗಾಗಿ ಸ್ವೀಕರಿಸಲಾದ ನೀತಿಗೆ ಸಂಬಂಧಿತವಾಗಿವೆ. ದೇಶದಲ್ಲಿಯ ಮಹಿಳಾ ಮತ್ತು ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಚಾಲನೆ ನೀಡುವ ಸಲುವಾಗಿ 1985ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಅಂತರ್ಗತವಾಗಿ 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗವನ್ನು ನಿರ್ಮಿಸಲಾಯಿತು. ಮಹಿಳೆಯರಿಗೆ ಸಾಮಾಜಿಕ ನ್ಯಾಯದ ಭರವಸೆ ದೊರೆಯಬೇಕು ಹಾಗೂ ಯೋಜನೆಗಳನ್ನು ಜಾರಿಗೊಳಿಸಲು ಸಹಾಯ ದೊರೆಯಬೇಕೆಂದು ನಿರ್ಮಿಸಲಾದ ಕಾನೂನುಗಳಲ್ಲಿ ವರದಕ್ಷಿಣಾ ಪ್ರತಿಬಂಧಕಕಾನೂನು ಮತ್ತು ಸಮಾನ ವೇತನ ಕಾನೂನಗಳ ಸಮಾವೇಶವಿತ್ತು. 73ನೇ ಮತ್ತು 74ನೇ ಸಂವಿಧಾನ ತಿದ್ದುಪಡಿಯಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿ ಮೀಸಲು ಸ್ಥಳಗಳನ್ನು ಕಾಯ್ದಿಡಲಾಯಿತು.

ಜಾತಿ ವ್ಯವಸ್ಥೆಯಿಂದಾಗಿ ಭಾರತೀಯ ಸಮಾಜದಲ್ಲಿಯ ಕೆಲವು ಘಟಕಗಳು ಮಾನಸನ್ಮಾನ ಮತ್ತು ಸಮಾನ ಅವಕಾಶಗಳಿಂದ ವಂಚಿತರಾಗಿ ಉಳಿಯಬೇಕಾಯಿತೆಂದು ಸಂವಿಧಾನಕರ್ತರಿಗೆ ಅನಿಸಿತ್ತು. ಈ ಸಮಸ್ಯೆಗೆ ಪರಿಹಾರ ವನ್ನು ಹುಡುಕುವುದಕ್ಕಾಗಿ 1953ರಲ್ಲಿ 'ಕಾಕಾಸಾಹೇಬ ಕಾಲೇಲಕರ ಆಯೋಗ'ವನ್ನು ಸ್ಥಾಪಿಸಲಾಯಿತು. 1978ರಲ್ಲಿ ಬಿ.ಪಿ. ಮಂಡಲ ಇವರ ಅಧ್ಯಕ್ಷತೆಯಲ್ಲಿ ಇತರ ಹಿಂದುಳಿದ ವರ್ಗದವರ ಸಮಸ್ಯೆಗಳ ಬಗ್ಗೆ ವಿಚಾರ ಮಾಡುವುದಕ್ಕಾಗಿ ಮತ್ತೊಂದು ಆಯೋಗವನ್ನು ನೇಮಿಸಲಾಯಿತ್ತು. ವಿವಿಧ ಸೇವೆ ಮತ್ತು ಸಂಸ್ಥೆಗಳಲ್ಲಿ ಹಿಂದುಳಿದ ಸಮಾಜ ಘಟಕಗಳಿಗೆ ಯೋಗ್ಯ ಪ್ರಾತಿನಿಧ್ಯವನ್ನು ಲಭ್ಯಮಾಡಿ ಕೊಡುವ ಸಲುವಾಗಿ ಮೀಸಲಾತಿಯ ಧೋರಣೆಯನ್ನು ಸ್ವೀಕರಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಾಜ ಘಟಕಗಳು ಉಚ್ಚವರ್ಣಿಯ ಭಯ, ಹಿಂಸೆ ಮತ್ತು ದಬ್ಬಾಳಿಕೆಗಳಿಂದ ಮುಕ್ತವಾಗಿದ್ದು ಪ್ರತಿಷ್ಠೆ ಮತ್ತು ಸ್ವಾಭಿಮಾನದಿಂದ ಜೀವಿಸಬೇಕೆಂದು 1989ರಲ್ಲಿ ಸರಕಾರವು 'ಅತ್ಯಾಚಾರ ವಿರೋಧಿ' (ಅ್ಯಟ್ರಾಸಿಟಿ) ಕಾನೂನನ್ನು ಜಾರಿಗೊಳಿಸಿತು.

**ಜಾಗತೀಕರಣ:** ಜಾಗತೀಕರಣವು ಅರ್ಥವ್ಯವಸ್ಥೆ, ರಾಜಕಾರಣ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಮತ್ತು ಸಂಸ್ಕೃತಿ ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳನ್ನುಂಟು ಮಾಡಿತು. ಮೇಲಿನ ಪರಿಚ್ಛೇದಗಳಲ್ಲಿ ಇವುಗಳಲ್ಲಿಯ ಕೆಲವು ಬದಲಾವಣೆಗಳನ್ನು ಚರ್ಚಿಸಲಾಗಿದೆ. ಜಾಗತಿಕ ಮಟ್ಟದಲ್ಲಿಯ ಅನೇಕ ಕ್ಷೇತ್ರಗಳಲ್ಲಿ ಒಂದು ಮಹತ್ವದ ದೇಶವೆಂದು ಭಾರತವು ಉದಯಕ್ಕೆ ಬಂದಿದೆ ಭಾರತವು **ಜಿ-20** ಮತ್ತು BRICS (Brazil, Russia, India, China, South Africa) ಗಳಂತಹ ಅಂತರರಾಷ್ಟ್ರೀಯ ಸಂಘಟನೆಗಳ ಮಹತ್ವದ ಸದಸ್ಯ ರಾಷ್ಟ್ರವಾಗಿದೆ. ಭಾರತವು ದೂರಸಂಚಾರ ತಂತ್ರಜ್ಞಾನದ ಕ್ಷೇತ್ರದಲ್ಲಿಯ ಒಂದು ಮಹತ್ವದ ಕಾಂತ್ರಿಯನ್ನು ಅನುಭವಿಸಿದೆ.

ಭ್ರಮಣಧ್ವನಿ (ಮೊಬೈಲ) ಮತ್ತು ಅಂತರಜಾಲ (ಇಂಟರ್ನೆಟ್), ಉಪಗ್ರಹದ ಮೇಲೆ ಆಧಾರಿತ ದೂರಸಂಚಾರ ಸೇವೆಯು ಭಾರತದ ತುಂಬೆಲ್ಲ ಹರಡಿದೆ. ರಾಜಕೀಯ ಕ್ಷೇತ್ರದಲ್ಲಿಯೂ ಒಂದು ಶಾಶ್ವತ ಪ್ರಜಾಪ್ರಭುತ್ವವು ಹೇಗೆ ಯಶಸ್ವಿಯಾಗಿ ಕಾರ್ಯ ಮಾಡುತ್ತಿದೆಯೆಂಬುದನ್ನು ಭಾರತವು ಜಗತಿಗೆ ತೋರಿಸಿಕೊಟ್ಟಿದೆ. ಇದರ ಪರಿಣಾಮವಾಗಿ ಭಾರತೀಯರ ಹಾಗೂ ವಿಶೇಷವಾಗಿ ಯುವಕರ ಜೀವನಶೈಲಿಯಲ್ಲಿ ತುಂಬಾ ಬದಲಾವಣೆಯಾಗಿದೆ. ಈ ಬದಲಾವಣೆಯು ಅವರ ಆಹಾರ ವಿಷಯದ ರೂಢಿ, ವೇಷಭೂಷಣ, ಭಾಷೆ, ತಿಳುವಳಿಕೆ ಮುಂತಾದುವುಗಳಲ್ಲಿ ಕಂಡುಬರುತ್ತದೆ.

ಮುಂದಿನ ಪಾಠದಲ್ಲಿ ನಾವು ಭಾರತದ ಮುಂದಿನ ಕೆಲವು ಅಂತರ್ಗತ ಆಹ್ವಾನಗಳ ಅಭ್ಯಾಸ ಮಾಡುವವರಿದ್ದೇವೆ.



## ಸ್ವಾಧ್ಯಾಯ

1\. **(ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ಕೆಳಗಿನ ವಿಧಾನಗಳನ್ನು ಪೂರ್ಣಮಾಡಿರಿ.**

(1) ಶ್ರೀಲಂಕಾದಲ್ಲಿಯ ತಮಿಳು ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಮುಂದಾಳುತನ ವಹಿಸಿದ ಪ್ರಧಾನಮಂತ್ರಿ ............. ಆಗಿದ್ದರು.
- (ಅ) ರಾಜೀವ ಗಾಂಧಿ (ಬ) ಶ್ರೀಮತಿ ಇಂದಿರಾಗಾಂಧಿ
- (ಕ) ಎಚ್.ಡಿ. ದೇವೇಗೌಡ
- (ಡ) ಪಿ.ವ್ಹಿ. ನರಸಿಂಹರಾವ

(2) ................. ಇವರು ಭಾರತೀಯ ಹಸಿರು ಕ್ರಾಂತಿಯ ಜನಕರಾಗಿದ್ದರು.
- (ಅ) ಡಾ. ವರ್ಗೀಸ ಕುರಿಯನ್
- (ಬ) ಡಾ. ಹೋಮಿ ಭಾಭಾ
- (ಕ) ಡಾ.ಎಮ್.ಎಸ್ ಸ್ವಾಮಿನಾಥನ್
- (ಡ) ಡಾ. ನಾರ್ಮನ್ ಬೋರಲಾಗ್

(ಬ) ಕೆಳಗಿನವುಗಳಲ್ಲಿ ತಪ್ಪಾದ ಜೋತೆಯನ್ನು ಗುರುತಿಸಿ ಬರೆಯಿರಿ.

(1) ಇಂದಿರಾ ಗಾಂಧಿ - ರಾಷ್ಟ್ರೀಯ ತುರ್ತು ಪರಿಸ್ಥಿತಿ
(2) ರಾಜೀವ ಗಾಂಧಿ - ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸುಧಾರಣೆ
(3) ಪಿ.ವ್ಹಿ ನರಸಿಂಹರಾವ-ಆರ್ಥಿಕ ಸುಧಾರಣೆಗಳು
(4) ಚಂದ್ರಶೇಖರ - ಮಂಡಲ ಆಯೋಗ

2. ಕೊಟ್ಟ ಸೂಚನೆಯಂತೆ ಕೃತಿ ಪೂರ್ಣ ಮಾಡಿರಿ.

(ಅ) ಪಾಠದಲ್ಲಿಯ ಆಶಯದ ಸಹಾಯದಿಂದ ಪ್ರಧಾನಮಂತ್ರಿ ಮತ್ತು ಅವರ ಕಾಲಾವಧಿ ಇವುಗಳ ಕಾಲಾನುಕ್ರಮ ಕೋಷ್ಟಕವನ್ನು ತಯಾರಿಸಿರಿ.

(ಬ) ಟಿಪ್ಪಣಿ ಬರೆಯಿರಿ.

(1) ಜಾಗತೀಕರಣ
(2) ಧವಲಕ್ರಾಂತಿ

3. ಕೆಳಗಿನ ವಾಕ್ಯಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.

(1) ಮೋರಾರಜಿ ದೇಸಾಯಿಯವರ ಸರಕಾರವು ಅಲ್ಪಕಾಲವೇ ಉಳಿಯಿತು.
(2) ಅಮೃತಸರದಲ್ಲಿಯ ಸುವರ್ಣಮಂದಿರದಲ್ಲಿ ಸೈನ್ಯವನ್ನು ಕಳುಹಿಸಬೇಕಾಯಿತು.
(3) ಭಾರತದಲ್ಲಿ ಯೋಜನಾ ಆಯೋಗವನ್ನು ನಿರ್ಮಿಸಲಾಯಿತು.

4. ಮುಂದಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.

(1) ಜಗತ್ತಿನ ಮತ್ತು ಭಾರತದ ಇತಿಹಾಸದಲ್ಲಿ 1991ನೇ ವರ್ಷವು ಹೇಗೆ ಮಹತ್ವದ ಬದಲಾವಣೆಯ ವರ್ಷವಾಯಿತು?
(2) ಭಾರತೀಯ ಅರ್ಥವ್ಯವಸ್ಥೆಯ ವೈಶಿಷ್ಟ್ಯಗಳು ಯಾವವು?

5. ಪಾಠದ ಸಹಾಯದಿಂದ ಭಾರತದ ಮುಂದಿನ ಆಹ್ವಾನಗಳು ಮತ್ತು ಭಾರತದ ಆಧಾರ (ಬಲ) ಇವುಗಳ ಪಟ್ಟಿಯನ್ನು ಪೂರ್ಣ ಮಾಡಿರಿ.

| ಭಾರತದ ಮುಂದಿನ ಆಹ್ವಾನಗಳು | ಬಲಸ್ಥಾನಗಳು |
|---|---|
| ಉದಾ. ಭಾರತ ಪಾಕಿಸ್ತಾನ ಯುದ್ಧ | ವಿವಿಧತೆಯಲ್ಲಿ ಐಕ್ಯತೆ |
| ................... | ................... |
| ................... | ಅಣ್ವಸ್ತ್ರಸಿದ್ಧತೆ |
| ಪ್ರತ್ಯೇಕತಾವಾದ | ................... |

## ಉಪಕ್ರಮ

(1) ಭಾರತ-ಪಾಕಿಸ್ತಾನ ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿದ ಭಾರತೀಯ ಸೈನಿಕರ ಮಾಹಿತಿ ಪಡೆಯಿರಿ.
(2) ಕಾರಗಿಲ್ ಯುದ್ಧದಲ್ಲಿಯ ಪರಾಕ್ರಮಿ ವೀರರ ಚಿತ್ರಗಳನ್ನು ಸಂಗ್ರಹಿಸಿರಿ.
(3) ಇಲ್ಲಿಯ ವರೆಗೆ ಆಗಿಹೋದ ಭಾರತದ ಪ್ರಧಾನ ಮಂತ್ರಿಗಳ ಚಿತ್ರಗಳನ್ನು ಸಂಗ್ರಹಿಸಿರಿ.
(4) ಡಾ. ಹೋಮಿ ಭಾಭಾ ಅಣು ಸಂಶೋಧನ ಕೇಂದ್ರದ ಮಾಹಿತಿಯನ್ನು ಪಡೆಯಿರಿ.
(5) ಹಾಲಿನ ಉತ್ಪಾದನೆಯಿಂದ ಯಾವ ಉದ್ಯೋಗ ಧಂದೆಗಳು ನಡೆಯುತ್ತವೆ. ಭಾವಚಿತ್ರಗಳೊಂದಿಗೆ ಅದರ ಮಾಹಿತಿ ಪಡೆಯಿರಿ.

C1ZRU5

# 3 ಭಾರತದ ಮುಂದಿರುವ ಅಂತರ್ಗತ ಆಹ್ವಾನಗಳು

ಈ ಪಾಠದಲ್ಲಿ ನಾವು ಭಾರತದ ಮುಂದಿರುವ ಕೆಲವು ಅಂತರ್ಗತ ಆಹ್ವಾನಗಳ ವಿಚಾರ ಮಾಡುವವರಿದ್ದೇವೆ. ಪ್ರತ್ಯೇಕತಾವಾದಿ ಚಳುವಳಿ, ಈಶಾನ್ಯ ಭಾರತದಲ್ಲಿಯ ಸಮಸ್ಯೆ, ನಕ್ಸಲವಾದ, ಕೋಮುವಾದ, ಪ್ರದೇಶವಾದ ಈ ಕ್ರಮವಾಗಿ ನಾವು ಭಾರತದ ಮುಂದಿನ ಅಂತರ್ಗತ ಆಹ್ವಾನಗಳ ಅಭ್ಯಾಸ ಮಾಡುವವರಿದ್ದೇವೆ.

**ಪಂಜಾಬದಲ್ಲಿಯ ಅಸಂತೋಷ :** ಪಂಜಾಬ ರಾಜ್ಯದಲ್ಲಿ ಅಕಾಲಿದಳ ಎಂಬ ಪ್ರಮುಖ ರಾಜಕೀಯ ಪಕ್ಷವಿತ್ತು. 1973ರಲ್ಲಿ ಅಕಾಲಿ ದಳವು 'ಆನಂದಪೂರ ಸಾಹಿಬ' ಠರಾವನ್ನು ಮಂಜೂರು ಮಾಡಿತು. ಅದಕ್ಕನುಸಾರವಾಗಿ ಚಂದೀಗಡವನ್ನು ಪಂಜಾಬಕ್ಕೆ ಕೊಡಬೇಕು, ಇತರ ರಾಜ್ಯಗಳಲ್ಲಿಯ ಪಂಜಾಬಿ ಭಾಷಿಕ ಪ್ರಾಂತಗಳನ್ನು ಪಂಜಾಬದಲ್ಲಿ ಸಮಾವೇಶಗೊಳಿಸಬೇಕು. ಸೈನ್ಯದಲ್ಲಿಯ ಶಿಖ್ಖರ ಸಂಖ್ಯಾಪ್ರಮಾಣವನ್ನು ಹೆಚ್ಚಿಸಬೇಕು, ಪಂಜಾಬ ರಾಜ್ಯಕ್ಕೆ ಅಧಿಕ ಸ್ವಾಯತ್ತತೆ ನೀಡಬೇಕು. ಇತ್ಯಾದಿ ಅನೇಕ ಬೇಡಿಕೆಗಳು ಈ ಠರಾವಿನಲ್ಲಿದ್ದವು. 1977ರಲ್ಲಿ ಅಕಾಲಿ ದಳ ಎಂಬ ಪಕ್ಷವು ಪಂಜಾಬದಲ್ಲಿ ಅಧಿಕಾರಕ್ಕೆ ಬಂದಿತು. ಅಕಾಲಿ ದಳವು ಅಧಿಕಾರದ ಸೂತ್ರಗಳನ್ನು ಸ್ವೀಕರಿಸುವಾಗ ಅದೇ ಹಳೆಯ ಬೇಡಿಕೆಗಳ ಜೊತೆ ಪಂಜಾಬಕ್ಕೆ ನದಿ ನೀರಿನ ಹಂಚಿಕೆಯಲ್ಲಿ ಹೆಚ್ಚಿನ ನೀರನ್ನು ಕೊಡಬೇಕು, ಅಮೃತಸರ ನಗರಕ್ಕೆ ಪವಿತ್ರನಗರ ಕಿತಾಬ ಕೊಡಬೇಕು ಎಂಬ ಬೇಡಿಕೆಗಳನ್ನು ಮಾಡಿತು.

1980ರಲ್ಲಿ ಪಂಜಾಬದಲ್ಲಿ 'ಸ್ವತಂತ್ರ ಖಲಿಸ್ತಾನ' ಎಂಬ ಚಳುವಳಿಯು ಬೇರು ಬಿಟ್ಟಿತು ಈ ಕಾಲದಲ್ಲಿ ಆಕಾಲಿ ದಳದ ನೇತೃತ್ವವನ್ನು ಸಂತ ಹರಚರಣಸಿಂಗ ಲೊಗೊವಾಲ ಮಾಡುತ್ತಿದ್ದರು. ಅವರು ಸುವರ್ಣ ಮಂದಿರದಲ್ಲಿ ಕುಳಿತು ತಮ್ಮ ಅನುಯಾಯಿಗಳಿಗೆ ನಿರ್ದಶನ ಮಾಡಲು ಸೂಚನೆಗಳನ್ನು ನೀಡುತ್ತಿದ್ದರು. ಸುವರ್ಣಮಂದಿರದ ಮತ್ತೊಂದು ಬದಿಗೆ ಕಠೋರ ಖಲಿಸ್ತಾನವಾದಿಯಾದ ಜರ್ನಲಸಿಂಗ್ ಭಿಂದ್ರಾನವಾಲೆಯ ಸುತ್ತ ಸಶಸ್ತ್ರ ಅನುಯಾಯಿಗಳು ಒಟ್ಟುಗೂಡತೊಡಗಿದರು. ಈ ಸಮಯದಲ್ಲಿ ಆತಂಕವಾದಿ ಅತಿರೇಕದ ಕೃತ್ಯಗಳು ಆರಂಭವಾದವು. 1981ರಲ್ಲಿ ಸಂಪಾದಕರಾದ ಲಾಲಾ ಜಗತನಾರಾಯಣ ಇವರ ಕೊಲೆಯ ಪ್ರಕರಣದಲ್ಲಿ ಭಿಂದ್ರನವಾಲೆಯನ್ನು ಕೈದು ಮಾಡಲಾಯಿತು. ಇಲ್ಲಿಂದ ಮುಂದೆ ವಾತಾವರಣ ಹೆಚ್ಚು ಹದಗೆಡುತ್ತ ಹೋಯಿತು. ಇದರಿಂದಲೇ 1983ರಲ್ಲಿ ಪಂಜಾಬದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಲಾಯಿತು. ಭಿಂದ್ರಾನವಾಲೆ ಇವನು ಅಕಾಲ ತಖ್ತ ಎಂಬ ಧಾರ್ಮಿಕ ಸ್ಥಳದಲ್ಲಿ ಇರಲು ಹೋದನು. ಭಿಂದ್ರಾನವಾಲೆಯ ಅನುಯಾಯಿಗಳು ಸುವರ್ಣಮಂದಿರ ಪರಿಸರವನು ತಮ್ಮ ವಶಪಡಿಸಿಕೊಂಡು ಅಲ್ಲಿ ಉಸುಕಿನ ಚೀಲಗಳನ್ನು ಒಟ್ಟಿದರು. ಪರಿಸರಕ್ಕೆ ಕೋಟೆಯ ಸ್ವರೂಪ ಪ್ರಾಪ್ತವಾಯಿತು. ಇದರಿಂದಾಗಿ ಪಂಜಾಬದಲ್ಲಿಯ ಶಾಂತಿಯು ಗಂಡಾಂತರದಲ್ಲಿ ಸಿಲುಕಿತು. ಪ್ರಜಾಪ್ರಭುತ್ವದ ಎದುರಿಗೆ ಇದು ದೊಡ್ಡ ಆಹ್ವಾನವಾಗಿತ್ತು.

**ಆಪರೇಶನ ಬ್ಲ್ಯೂಸ್ಟಾರ:** ಸುವರ್ಣ ಮಂದಿರದಿಂದ ಆತಂಕವಾದಿಗಳನ್ನು ಹೊರತೆಗೆಯುವ ಪ್ರಮುಖ ಕಾರ್ಯವನ್ನು ಮೇಜರ ಜನರಲ್ ಕುಲದೀಪಸಿಂಗ ಬ್ರಾರ ಇವರಿಗೆ ಒಪ್ಪಿಸಲಾಯಿತು. 3 ಜೂನ 1984ರಂದು ಮುಂಜಾನೆ 'ಆಪರೇಶನ್ ಬ್ಲ್ಯೂಸ್ಟಾರ' ಕಾರ್ಯಾಚರಣೆ ಆರಂಭವಾಯಿತು. ಜೂನ 6 ರಂದು ಕಾರ್ಯಾಚರಣೆ ಮುಕ್ತಾಯವಾಯಿತು. ಈ ಸೈನಿಕ ಕಾರ್ಯಾಚರಣೆಯಲ್ಲಿ ಭಾರತೀಯ ಸೈನ್ಯವು ವಿಲಕ್ಷಣ ಸಂಯಮದಿಂದ ಈ ಕಾರ್ಯಾಚರಣೆ ಮಾಡಿತು. ಭಿಂದ್ರಾನವಾಲೆಯ ಜೊತೆ ಇತರ ಆತಂಕವಾದಿಗಳು ಕೊಲ್ಲಲ್ಪಟ್ಟರು ಹಾಗೂ ಈ ಕಾರ್ಯಾಚರಣೆ ಮುಗಿಯಿತು. ಆ ನಂತರ 1986ರಲ್ಲಿ ಸುವರ್ಣ ಮಂದಿರದಲ್ಲಿ ಆತಂಕವಾದಿಗಳ ವಿರುದ್ಧ ಮತ್ತೊಮ್ಮೆ ಕಾರ್ಯಾಚರಣೆ ಮಾಡಬೇಕಾಯಿತು. ಅದಕ್ಕೆ 'ಆಪರೇಶನ ಬ್ಲ್ಯಾಕ್ ಥಂಡರ' ಎನ್ನುತ್ತಾರೆ. ಇಲ್ಲಿಂದ ಮುಂದೆ ಪಂಜಾಬದಲ್ಲಿ ಶಾಂತತೆ ಸ್ಥಾಪನೆಗೆ ಗತಿ ಪ್ರಾಪ್ತವಾಯಿತು.



**ಗೊತ್ತಿದೆಯೇ ನಿಮಗೆ?**

ವಿಶಿಷ್ಟ ಉದ್ದೇಶವನ್ನಿಟ್ಟು ಮಾಡಿದ ಸೈನಿಕ ಕಾರ್ಯಾಚರಣೆಗೆ ಆಪರೇಶನ ಎನ್ನುತ್ತಾರೆ. ಆಪರೇಶನ ಬ್ಲ್ಯೂಸ್ಟಾರ ಎಂದರೆ ಸುವರ್ಣಮಂದಿರದಲ್ಲಿ ಅಡಗಿದ ಆತಂಕವಾದಿಗಳನ್ನು ಹೊರಗೆ ತೆಗೆಯುವ ಸೈನಿಕ ಕಾರ್ಯಾಚರಣೆ ಹೌದು.

**ಈಶಾನ್ಯ ಭಾರತ ಸಮಸ್ಯೆ:**

ಈಶಾನ್ಯ ಭಾರತವೆಂದ ಕೂಡಲೇ ಎಂಟು ರಾಜ್ಯಗಳ ಸಮೂಹ ನಮ್ಮ ಕಣ್ಮುಂದೆ ಬರುತ್ತದೆ. ಆಸಾಮ, ಅರುಣಾಚಲ ಪ್ರದೇಶ, ಮಣಿಪೂರ, ಮೇಘಾಲಯ, ಮಿಝೋರಾಮ, ನಾಗಾಲ್ಯಂಡ, ಸಿಕ್ಕಿಂ ಮತ್ತು ತ್ರಿಪುರಾ ಈ ಎಂಟು ರಾಜ್ಯಗಳೆಂದರೆ ಈಶಾನ್ಯ ಭಾರತ ಹೌದು. ಈ ಎಂಟು ರಾಜ್ಯಗಳಿಗೆ ಅಂತರರಾಷ್ಟ್ರೀಯ ಗಡಿಯು ಹೆಚ್ಚು-ಕಡಿಮೆ ಪ್ರಮಾಣದಲ್ಲಿ ಸ್ಪರ್ಶಿಸಿದೆ. ವಂಶ, ಭಾಷೆ, ಸಾಂಸ್ಕೃತಿಕ ವೈವಿಧ್ಯ ಮುಂತಾದ ವಿವಿಧ ಮಟ್ಟಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಭಾಗದಲ್ಲಿಯ ಜನ ಪಂಗಡಗಳನ್ನು ಭಾರತದ ಮುಖ್ಯ ಪ್ರವಾಹದೊಂದಿಗೆ ಜೋಡಿಸಿಕೊಳ್ಳುವ ಕಾರ್ಯದಲ್ಲಿ ಸ್ವತಂತ್ರಭಾರತದ ಪ್ರಥಮ ಪ್ರಧಾನಮಂತ್ರಿ

ಪಂ. ನೆಹರೂ ರವರು ಮುಂದಾಳುತನ ವಹಿಸಿದರು. 1954ರಲ್ಲಿ ನೇಫಾ (ನಾರ್ಥ ಈಸ್ಟರ್ನ ಫ್ರಂಟಿಯರ ಎಜೆನ್ಸಿ ಅರ್ಥಾತ್ ಪೂರ್ವಾಂಚಲ) ಎಂಬ ಭಾಗವನ್ನು ನಿರ್ಮಿಸಿದರು. ಇದು ಭಾರತ-ಚೀನ ಗಡಿಯಲ್ಲಿಯ ಪ್ರದೇಶ ಮತ್ತು ಆಸಾಮದ ಉತ್ತರದಕಡೆಯ ಪಂಗಡಗಳ ಪ್ರದೇಶವಾಗಿದೆ. ಈ ಭಾಗದಲ್ಲಿಯ ನೂರಾರು ಪಂಗಡಗಳ ವಿಕಾಸವನ್ನು ಅವರ ಸಂಸ್ಕೃತಿಯನ್ನು ಕಾಪಾಡಿಯೇ ಸಾಧಿಸಬೇಕೆಂಬ ನಿಲುವನ್ನು ಪಂ. ನೆಹರೂ ತಳೆದರು. ಸಂವಿಧಾನದ ಆರನೆಯ ಕಲಮಿನಲ್ಲಿಯ ಈ ಭಾಗವನ್ನು ಕುರಿತು ವಿಶೇಷ ಏರ್ಪಾಟು ಮಾಡಲಾಗಿದೆ. 1965ರಲ್ಲಿ ಈ ಭಾಗದ ಜವಾಬ್ದಾರಿಯನ್ನು ವಿದೇಶ ವ್ಯವಹಾರ ಇಲಾಖೆಗೆ ಒಪ್ಪಿಸಲಾಗಿದೆ. ಈಶಾನ್ಯದ ಕಡೆಯ ಈ ಪ್ರದೇಶಗಳನ್ನು ಮುಖ್ಯ ಪ್ರವಾಹದಲ್ಲಿ ಒಳಪಡಿಸುವ ಸಲುವಾಗಿ 1971ರಲ್ಲಿ 'ಈಶಾನ್ಯದ ಪರಿಷತ್ತಿನ ಕಾನೂನು' ಮಾಡಲಾಯಿತು. ಈ ಕಾನೂನಿಗನುಸಾರವಾಗಿ ಈಶಾನ್ಯದ ಪರಿಷತ್ತಿನ ಕಾರ್ಯಗಳನ್ನು ಸ್ಪಷ್ಟಪಡಿಸಲಾಯಿತು. ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿಯ ಸಮಾನ ಹಿತದ ವಿಷಯಗಳ, ಅಂತರ್‌ರಾಜ್ಯ ಸಾರಿಗೆ, ವಿದ್ಯುಚ್ಛಕ್ತಿ ಮತ್ತು ಮಹಾಪೂರ ನಿಯಂತ್ರಣ ಇತ್ಯಾದಿ ವಿಷಯಗಳನ್ನು ಕುರಿತು ಕೇಂದ್ರಸರಕಾರಕ್ಕೆ ಸಲಹೆ ನೀಡುವ ಕಾರ್ಯವು ಈ ಪರಿಷತ್ತಿನದಾಗಿತ್ತು.

**ಮಿಝೋರಮ:** ಈಶಾನ್ಯ ಭಾರತದಲ್ಲಿಯ ಜನಪಂಗಡಗಳಿಗೆ ಪ್ರಾಚೀನ ಇತಿಹಾಸವಿದೆ. ಭಾರತವು ಸ್ವತಂತ್ರವಾದನಂತರ ಸರಕಾರವು ಮಿಝೋಬಹುಲ ಲುಶಾಯಿ ಗುಡ್ಡಗಾಡು ಭಾಗದಲ್ಲಿಯ ಜಿಲ್ಲೆಗಳಿಗೆ ಆಡಳಿತಾತ್ಮಕ ಸ್ವಾಯತ್ತತೆಯನ್ನು ನೀಡಿತು. ಕೇಂದ್ರ ಸರಕಾರವು 1953ರಲ್ಲಿ ಭಾಷಾವಾರ ಪ್ರಾಂತರಚನಾ ಆಯೋಗವನ್ನು ನೇಮಿಸಿದ ನಂತರ ಅಲ್ಲಿಯ ಜನರ ಅಪೇಕ್ಷೆಗಳು ಹೆಚ್ಚಿದವು. ಮಿಝೋ ಜನರ ಮುಖಂಡರು ಸ್ವಾಯತ್ತ 'ಮಿಝೋ' ಪ್ರಾಂತದ ಬೇಡಿಕೆಯನ್ನು ಮಾಡಲು ಆರಂಭಿಸಿದರು 1959ರಲ್ಲಿ ಮಿಝೋರಮ ಪ್ರದೇಶದಲ್ಲಿ ತೀವ್ರ ಬರಗಾಲ ಬಿದ್ದಿತು. ಈ ಬರಗಾಲದ ಸಮಯದಲ್ಲಿ ಲಾಲಡೇಂಗಾ ಇವರು ಜನಸಾಮಾನ್ಯರ ಸಲುವಾಗಿ ಕಾರ್ಯ ಮಾಡಿದರು.

1961ರಲ್ಲಿ ಲಾಲಡೇಂಗಾ ಇವರು 'ಮಿಝೋ ನ್ಯಾಶನಲ್ ಫ್ರಂಟ' (MNF) ಈ ಸಂಘಟನೆಯ ಸ್ಥಾಪನೆ ಮಾಡಿದರು. ತ್ರಿಪುರಾ, ಮಣಿಪೂರ ಮತ್ತು ಲುಶಾಯಿ ಗುಡ್ಡಗಳಲ್ಲಿಯ ಮಿಝೋಬಹುಲ ಪ್ರಾಂತಗಳಿಗಾಗಿ 'ಗ್ರೇಟರ ಮಿಝೋರಮ'ದ ಅರ್ಥಾತ್ ಸ್ವತಂತ್ರ ರಾಷ್ಟ್ರದ ಬೇಡಿಕೆಯನ್ನು ಲಾಲಡೇಂಗಾ ಇವರು ಮಾಡಿದರು ಮಾರ್ಚ 1966ರಲ್ಲಿ ಮಿಝೋ ನ್ಯಾಶನಲ್ ಫ್ರಂಟ ಇದು 'ಸ್ವತಂತ್ರ ಮಿಝೋರಮ' ರಾಷ್ಟ್ರವು ಅಸ್ತಿತ್ವದಲ್ಲಿ ಬಂದಿತು ಎಂದು ಘೋಷಿಸಿದರು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಪರಿಸ್ಥಿತಿಯನ್ನು ಕಠೋರವಾಗಿ ಎದುರಿಸಿ ಬಂಡಾಯವನ್ನು ಅಡಗಿಸಿದರು. 1972ರಲ್ಲಿ ಪರಿಸ್ಥಿತಿ ಶಾಂತವಾದ ಮೇಲೆ ಮಿಝೋಬಹುಲ ಭಾಗಕ್ಕೆ ಕೇಂದ್ರಾಡಳಿತ ಪ್ರದೇಶದ ದರ್ಜೆಯನ್ನು ನೀಡಲಾಯಿತು. 1985ರಲ್ಲಿ ಪ್ರಧಾನ ಮಂತ್ರಿ ರಾಜೀವಗಾಂಧಿ ಮತ್ತು ಮಿಝೋ ನ್ಯಾಶನಲ್ ಫ್ರಂಟಗಳ ನಡುವೆ ಒಪ್ಪಂದವಾಗಿ ಮಿಝೋರಮಗೆ ಘಟಕರಾಜ್ಯದ ದರ್ಜೆಯನ್ನು ನೀಡಲಾಯಿತು. ಲಾಲಡೇಂಗಾ ರಾಜ್ಯದ ಮುಖ್ಯ ಮಂತ್ರಿಯಾದರು.

**ನಾಗಾಲ್ಯಾಂಡ:** ಈಶಾನ್ಯ ಭಾರತದಲ್ಲಿಯ ನಾಗಾ ಪಂಗಡವು ಹೋರಾಟಗಾರ ಪಂಗಡವೆಂದು ಗುರುತಿಸಲ್ಪಡುತ್ತದೆ. ಪೂರ್ವ ಹಿಮಾಲಯ, ನಾಗಾಗುಡ್ಡಗಳು ಆಸಾಮ ಮತ್ತು ಮ್ಯಾನಮಾರದ ಗಡಿಪ್ರದೇಶ ಇಂಥ ಪರಸರದಲ್ಲಿ ನಾಗಾ ಈ ಪಂಗಡದ ವಸತಿಗಳಿದ್ದವು. 1946ರಲ್ಲಿ ಕೆಲವು ಸುಶಿಕ್ಷಿತ ನಾಗಾ ಯುವಕರು 'ನಾಗಾ ನ್ಯಾಶನಲ್ ಕೌನ್ಸಿಲ್' (NNC) ಎಂಬ ಸಂಘಟನೆಯನ್ನು ಸ್ಥಾಪಿಸಿದರು. ನಂತರ ಅವರು 'ನಾಗಾಲ್ಯಾಂಡ' ಈ ಸ್ವತಂತ್ರ ರಾಷ್ಟ್ರದ ಬೇಡಿಕೆ ಮಾಡಿದರು. ಅಂಗಾಮಿ ಝೂಪೂ ಫಿಝೊ ಇವರು ಅದರ ನೇತೃತ್ವವನ್ನು ಮಾಡುತ್ತಿದ್ದರು. 1954ರಲ್ಲಿ 'ಎನ್‌ಎನ್‌ಸಿ' ಯು ನಾಗಾಲ್ಯಾಂಡಿನ ಸ್ವತಂತ್ರ ಒಕ್ಕೂಟ ರಾಜ್ಯದ ಸ್ಥಾಪನೆಯ ಘೋಷಣೆ ಮಾಡಿತು. 1955ರಲ್ಲಿ ಆಸಾಮ ರೈಫಲ್ಸ್ ಸೈನಿಕರು ಮತ್ತು ಸ್ಥಳೀಯರ ನಡುವೆ ಸಂಘರ್ಷ ಆರಂಭವಾಯಿತು. ಈ ಸಂಘರ್ಷ ಹತ್ತಿಕ್ಕುವ ಸಲುವಾಗಿ ಸೈನಿಕ ಕಾರ್ಯಚರಣೆ ಮಾಡಲಾಯಿತು.

ಕೇಂದ್ರ ಸರಕಾರ ಮತ್ತು 'ಎನ್‌ಎನ್‌ಸಿ'ಗಳ ನಡುವೆ ಚರ್ಚೆಯ ಅನೇಕ ಸುತ್ತುಗಳಾದವು ಕೇಂದ್ರ ಸರಕಾರವು ನಾಗಾ ಬಹು ಭಾಗಕ್ಕೆ ಕೇಂದ್ರಾಢಳಿತ ಪ್ರದೇಶದ. ದರ್ಜೆಯನ್ನು ನೀಡಲು ನಿರ್ಧರಿಸಿತು. ನೇಫಾದಲ್ಲಿಯ ಬಹುಸಂಖ್ಯ ನಾಗಾಗಳಿರುವ ಭಾಗ ಹಾಗೂ ತ್ಸುಯೆನಸಾಂಗದ ಭಾಗಗಳನ್ನು ಒಂದುಗೂಡಿಸಿ 1 ಡಿಸೆಂಬರ 1963ರಂದು 'ನಾಗಾಲ್ಯಂಡ' ಎಂಬ ಸ್ವತಂತ್ರ ರಾಜ್ಯವು ಅಸ್ತಿತ್ವದಲ್ಲಿ ಬಂದಿತು.

**ಆಸಾಮ:** 1983ರಲ್ಲಿ ಆಸಾಮದಲ್ಲಿ ಬಂಗಾಲಿ ಭಾಷೆಯನ್ನಾಡುವ ಸ್ಥಳಾಂತರಿತರ ವರ್ಚಸ್ಸಿನ ವಿರುದ್ಧ ಆಲ್ ಆಸಾಮ ಸ್ಟುಡಂಟ್ಸ ಯುನಿಯನ್ ಮತ್ತು ಆಸಾಮ ಗಣಸಂಗ್ರಾಮ ಪರಿಷತ್ತುಗಳು ಉಗ್ರ ಆಂದೋಲನೆಯನ್ನು ಮಾಡಿದ್ದರು. 1985ರಲ್ಲಿ ಪ್ರಧಾನಮಂತ್ರಿ ರಾಜೀವ ಗಾಂಧಿ, ಕೇಂದ್ರೀಯ ಗೃಹಮಂತ್ರಿ ಶಂಕರರಾವ ಚವ್ಹಾಣ ಮತ್ತು ಆಸಾಮದ ಮುಖಂಡ ಪ್ರಫುಲ್ಲಕುಮಾರ ಮಹಂತೋ ಇವರಲ್ಲಿ ಒಪ್ಪಂದವಾಯಿತು. ಆಸಾಮದಲ್ಲಿ ಒಳನುಗ್ಗಿರುವ ಬಾಂಗಲಾದೇಶದ ನಾಗರಿಕರನ್ನು ಮತ್ತೆ ಅವರ ಮೂಲ ಸ್ಥಳಕ್ಕೆ ಕಳೆಸುವುದಾಗಿ ನಿರ್ಧರಿಲಾಯಿತು. 1986ರಲ್ಲಿ ಆಸಾಮ ವಿಧಾನ ಸಭೆಯ ಚುನಾವಣೆಯಾಗಿ ಆಸಾಮ ಗಣಪರಿಷತ್ತಿನ ಪ್ರಫುಲ್ಲಕುಮಾರ ಮಹಂತೋ ಮುಖ್ಯಮಂತ್ರಿಯಾದರು. ಈ ಪ್ರಜಾಪ್ರಭುತ್ವ ಪದ್ಧತಿಯಿಂದಾಗಿ ಆಸಾಮದಲ್ಲಿ ಶಾಂತತೆ ನೆಲೆಸಲು ಸಹಾಯಕವಾಯಿತು.

**ಅರುಣಾಚಲ ಪ್ರದೇಶ:** 1954ರಲ್ಲಿ ನೇಫಾ ವಿಭಾಗದ ನಿರ್ಮಿತಿ ಮಾಡಿ ಅದಕ್ಕೆ 1972ರಲ್ಲಿ ಅರುಣಾಚಲ ಪ್ರದೇಶ

(ಉದಯವಾಗುತ್ತಿರುವ ಸೂರ್ಯನ ಪ್ರದೇಶ) ವೆಂದು ಕರೆಯಲು ಆರಂಭಿಸಲಾಯಿತು. 20 ಫೆಬ್ರುವರಿ 1987 ರಂದು ಈ ಭಾಗಕ್ಕೆ ಘಟಕರಾಜ್ಯದ ದರ್ಜೆಯನ್ನು ನೀಡಲಾಯಿತು.

1960 ರಿಂದ 2000ದ ವರೆಗಿನ ಕಾಲಖಂಡದಲ್ಲಿ ಈಶಾನ್ಯ ಭಾರತದಲ್ಲಿ ಪ್ರಜಾಪ್ರಭುತ್ವವು ಹೆಚ್ಚು ಪರಿಪಕ್ವವಾಯಿತು. ಕೇಂದ್ರಸರಕಾರದ ವಿಶೇಷ ಯೋಜನೆಗಳು, ಔದ್ಯೋಗೀಕರಣ, ಶಿಕ್ಷಣದ ಪ್ರಸಾರ ಇವುಗಳಿಂದಾಗಿ ಈ ಭಾಗವು ಅಭಿವೃದ್ಧಿಯ ಮಾರ್ಗದಲ್ಲಿ ನಡೆಯುತ್ತಿದೆ.

## ನಕ್ಷಲವಾದ

**ನಕ್ಷಲವಾದಿ ಚಳುವಳಿ :** ಪಶ್ಚಿಮ ಬಂಗಾಲದ ದಾರ್ಜಿಲಿಂಗ ಜಿಲ್ಲೆಯಲ್ಲಿಯ ನಕ್ಷಲಬಾರಿ ಎಂಬಲ್ಲಿ ಈ ಚಳುವಳಿ ಆರಂಭವಾಯಿತು ಅಲ್ಪ ಭೂಧಾರಕ ರೈತರ ಮತ್ತು ಕೃಷಿ ಕೂಲಿಕಾರರನ್ನು ಸಂಘಟಿಸಿ 1967ರಲ್ಲಿ ನಕ್ಷಲಬಾರಿ ಭಾಗದಲ್ಲಿಯ ಕೆಲವು ಹೊಲಗಳ ಸುತ್ತ ಕೆಂಪು ಬಾವುಟಗಳನ್ನು ಊರಿ ಬೆಳೆಗಳನ್ನು ವಶಪಡಿಸಿ ಕೊಂಡರು ಹಾಗೂ ಅದನ್ನು ಮುಕ್ತ ಪ್ರದೇಶವೆಂದು ನಕ್ಷಲವಾದಿಗಳು ಘೋಷಿಸಿದರು. ಈ ದಂಗೆಯಿಂದ ಪ್ರೇರಣೆ ಪಡೆದು ಯಾವ ಚಳುವಳಿಗಳಾದವೋ ಅವುಗಳಿಗೆ 'ನಕ್ಷಲವಾದಿ ಚಳುವಳಿ' ಎನ್ನುತ್ತಾರೆ.

ಜಮೀನುದಾರರ ಆರ್ಥಿಕ ಶೋಷಣೆಯ ವಿರುದ್ಧ ಹೋರಾಡುವ ಸಲುವಾಗಿ ಕೃಷಿ ಸಮಿತಿಗಳನ್ನು ಸ್ಥಾಪಿಸುವುದು, ದೊಡ್ಡ ಜಮೀನುದಾರರ ಭೂಮಿಗಳನ್ನು ದೋಚಿಕೊಳ್ಳುವುದು ಅವುಗಳನ್ನು ಉಳುವವರಲ್ಲಿ ಹಂಚುವುದು ಇವು ಈ ಚಳುವಳಿಯ ಆರಂಭದ ಉದ್ದೇಶಗಳಾಗಿದ್ದವು. ನಂತರ ಈ ಚಳುವಳಿಯು ತನ್ನ ಉದ್ದೇಶಗಳಿಂದ ದೂರಹೋಯಿತು. ಸರಕಾರದ ಯಾವುದೆ ಉಪಕ್ರಮವನ್ನು ಅಥವಾ ಕಲ್ಯಾಣಕಾರಿ ಯೋಜನೆಯನ್ನು ಜನತೆಯ ವರೆಗೆ ತಲುಪಿಸಗೊಡಬಾರದು ಎನ್ನುವ ಸಲುವಾಗಿ ನಕ್ಷಲವಾದಿ ಚಳುವಳಿಯು ಆತಂಕವಾದದ ಆಶ್ರಯ ಪಡೆಯಿತು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಿರಸ್ಕರಿಸಿ ಸಮಾಂತರ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಪ್ರಯತ್ನವನ್ನು ನಕ್ಷಲವಾದಿಗಳು ಮಾಡತೊಡಗಿದರು. ಇದರಿಂದಲೇ ನಕ್ಷಲವಾದವು ದೇಶದ ಅಂತರ್ಗತ ಸುರಕ್ಷತೆಯ ಮುಂದಿನ ಆಹ್ವಾನವಾಗತೊಡಗಿತು.

ನಕ್ಷಲವಾದಿ ಚಳುವಳಿಯ ಆರಂಭದ ಪ್ರಮುಖಕೇಂದ್ರವು ಪಶ್ಚಿಮ ಬಂಗಾಲವಾಗಿತ್ತು.ಈ ಚಳುವಳಿಯ ಆಂಧ್ರ ಪ್ರದೇಶದಲ್ಲಿಯ ಪೂರ್ವ ಗೋದಾವರಿ, ವಿಶಾಖಾಪಟ್ಟಣಮ್‌ದ ಕೆಲಭಾಗ, ತೆಲಂಗಣದಲ್ಲಿಯ ಕರೀಮನಗರ, ಆದಿಲಾಬಾದ, ಛತ್ತಿಸಗಢದಲ್ಲಿಯ ದಂಡಕಾರಣ್ಯ, ಬಸ್ತರ, ರಾಜನಾಂದಗಾವ, ಸುಕಮಾ, ಮಹಾರಾಷ್ಟ್ರದಲ್ಲಿಯ ಗಡಚಿರೋಲಿ, ಭಂಡಾರಾ, ಚಂದ್ರಪೂರದಲ್ಲಿಯ ಕೆಲವು ಭಾಗ, ಮಧ್ಯಪ್ರದೇಶದಲ್ಲಿಯ ಬಾಲಾಘಾಟ, ಮಂಡಲಾ, ಓಡಿಶಾದಲ್ಲಿಯ ಕೋರಾಪುಟ ಇಲ್ಲಿ ಪಸರಿಸಿತು. ತಮ್ಮ ಪ್ರಭಾವವು ಶಾಶ್ವತವಾಗಿ ಉಳಿಯಲು ಸಶಸ್ತ್ರವಾದ 'ಪೀಪಲ್ಸ್ ಲಿಬರೇಷನ್ ಗುರಿಲ್ಲಾ ಆರ್ಮಿ (PLGA) ಎಂಬ ಸಂಘಟನೆಯನ್ನು ಅವರು ಸ್ಥಾಪಿಸಿದರು. ಈ ಸಂಘರ್ಷವು ಇನ್ನೂವರೆಗೆ ನಡೆದಿದೆ.

## ಕೋಮುವಾದ:

ಕೋಮುವಾದವು ನಮ್ಮ ದೇಶದ ಐಕ್ಯತೆಗೆ ಒಂದು ಗಂಭೀರ ಆಹ್ವಾನವಾಗಿದೆ. ಸಂಕುಚಿತ ಧಾರ್ಮಿಕ ಅಭಿಮಾನದಿಂದ ಕೋಮುವಾದವು ನಿರ್ಮಾಣವಾಗುತ್ತದೆ. ಬ್ರಿಟಿಶರು ನಮ್ಮ ದೇಶದಲ್ಲಿ ಕೋಮು ವಾದದ ಬೀಜಗಳನ್ನು ಬಿತ್ತಿದರು. ನಮ್ಮ ದೇಶದಲ್ಲಿ ವಿವಿಧ ಧರ್ಮಗಳ ಜನರು ಶತ ಶತಮಾನಗಳಿಂದ ನೆಮ್ಮದಿಯಿಂದ ವಾಸಿಸುತ್ತಬಂದಿದ್ದಾರೆ. ಯಾವುದೊಂದು ಸಮಾಜದಲ್ಲಿ ಬೇರೆ ಬೇರೆ ಧರ್ಮಗಳ ಜನರು ವಾಸ ಮಾಡುವುದು ಮತ್ತು ಅವರಿಗೆ ತಮ್ಮ ತಮ್ಮ ಧರ್ಮದ ಅಭಿಮಾನ ವಿರುವುದು ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಯಾವಾಗ ಈ ಧರ್ಮಭಿಮಾನದ ಅತಿರೇಕ ವಾಗುತ್ತದೆಯೋ ಆಗ ಅದರ ರೂಪಾಂತರವು ದುರಭಿಮಾನದಲ್ಲಿ ಆಗದೆ ಇರಲಾರದು ಪ್ರತಿಯೊಬ್ಬನಿಗೆ ತನ್ನದೇ ಧರ್ಮ ಶ್ರೇಷ್ಟ ಇತರ ಧರ್ಮಗಳು ತುಚ್ಛವೆನಿಸುತ್ತವೆ. ಇದರಿಂದ ಧರ್ಮಾಂಧತೆ ನಿರ್ಮಾಣವಾಗುತ್ತದೆ.

ಧರ್ಮಾಂಧತೆಯು ಕೋಮುವಾದದ ಅಡಿಪಾಯವಾಗಿದೆ ಧರ್ಮಾಂಧತೆಯಿಂದಾಗಿ ವ್ಯಾಪಕ ರಾಷ್ಟ್ರೀಯ ಹಿತವು ಕಡೆಗಣಿಸಲ್ಪಡುತ್ತದೆ. ಭಿನ್ನ ಧರ್ಮೀಯರಲ್ಲಿ ಪರಸ್ಪರರ ಮೇಲಿನ ವಿಶ್ವಾಸವು ಹಾರಿಹೋಗುತ್ತದೆ. ಪರಸ್ಪರರ ಬಗ್ಗೆ ಅವರಿಗೆ ಸಂಶಯವೆನಿಸತೊಡಗುತ್ತದೆ. ಪರಧರ್ಮದ ದೇಶಬಾಂಧವರನ್ನು ಶತ್ರುಗಳೆಂದು ತಿಳಿಯಲಾಗುತ್ತದೆ. ಹಬ್ಬ ಹರಿದಿನಗಳ ಪ್ರಸಂಗಗಳಲ್ಲಿ ಒಂದೆಡೆ ಬರುವುದೂ ಕಡಿಮೆಯಾಗತೊಡಗುತ್ತದೆ. ನಾಗರಿಕರೆಂದು ನ್ಯಾಯವಾದ ಬೇಡಿಕೆಗಳಿಗಾಗಿ ಮತ್ತು ಹಕ್ಕುಗಳಿಗಾಗಿ ಸಂಘಟಿತರಾಗುವುದೂ ಅಸಾಧ್ಯವಾಗುತ್ತದೆ. ಧರ್ಮಾಂಧತೆಯಿಂದಾಗಿ ಸುತ್ತಮುತ್ತಲಿನ ಘಟನೆಗಳ ಕಡೆಗೆ, ಮನುಷ್ಯರ ಕಡೆಗೆ ಮನುಷ್ಯರ ಕಡೆಗೆ ನೋಡುವ ದೃಷ್ಟಯೇ ಕಲುಷಿತವಾಗಿಬಿಡುತ್ತದೆ.

ಕೆಲವು ಜನರು ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳ ವಿಚಾರವನ್ನೂ ತಮ್ಮ ತಮ್ಮ ಧರ್ಮದ ಚೌಕಟ್ಟಿನೊಳಗಿಂದಲೇ ಮಾಡತೊಡಗುತ್ತಾರೆ. ನಾವು ವಿಶಿಷ್ಟ ಧರ್ಮದವ-ರಾಗಿರುವುದರಿಂದ ರಾಜಕಾರಣದಲ್ಲಿ ಪ್ರಭಾವಶೂನ್ಯ-ರಾಗಿದ್ದೇವೆಯೆಂದು ಎಲ್ಲ ಧರ್ಮಗಳಲ್ಲಿಯ ಕೆಲವು ವ್ಯಕ್ತಿಗಳಿಗೆ ಅನಿಸುತ್ತದೆ. ತಮ್ಮ ಮೇಲೆ ಅನ್ಯಾಯವಾಗುತ್ತಿದೆಯೆಂಬುದು ಅವರ ತಿಳುವಳಿಕೆಯಾಗುತ್ತದೆ. ತಮ್ಮ ಸಮಾಜದಲ್ಲಿ, ವಿಷಯದಲ್ಲಿ ಸರಕಾರವು ಪಕ್ಷಪಾತವನ್ನೇ ಮಾಡುತ್ತಿದೆ ಎಂಬ ಭಾವನೆ ಬೆಳೆಯುತ್ತದೆ. ಇಂಥ ಸ್ಥಿತಿಯಲ್ಲಿ ಅವರು ತಮ್ಮ ಧರ್ಮದ ವಿಷಯದಲ್ಲಿ, ಧರ್ಮಬಾಂಧವರ ವಿಷಯದಲ್ಲಿ ಭಾವನಾವಶರಾಗುತ್ತಾರೆ. ತಮ್ಮ ಧರ್ಮದ ಜನರ ಬಗ್ಗೆ ಯಾರು ಏನಾದರೂ ಅಂದರೆ ಇಲ್ಲವೆ ತಿಳಿದೋ ತಿಳಿಯದೆಯೇ ಯಾರಾದರೂ ಧಾರ್ಮಿಕ ಪ್ರತೀಕಗಳ ಅವಮಾನ ಮಾಡಿದರೆ – ದಂಗೆ ಆರಂಭವಾಗುತ್ತವೆ. ನೂರಾರು ನಿರಪರಾಧಿ ಜನರು ಕೊಲ್ಲಲ್ಪಡುತ್ತಾರೆ, ಕೋಟ್ಯಾವಧಿ ರೂಪಾಯಿಗಳ ಸಾರ್ವಜನಿಕ

ಆಸ್ತಿಯು ನಷ್ಟವಾಗುತ್ತದೆ. ಸಾರ್ವಜನಿಕ ಶಾಂತತೆ ನಷ್ಟವಾಗುತ್ತದೆ. ದಂಗೆಯಲ್ಲಿ ಕಟು ನೆನಪುಗಳಿಂದಾಗಿ ಜನರ ಮನಗಳು ದೂರವಾಗುತ್ತವೆ ಹಾಗೂ ಪರಸ್ಪರರ ಬಗೆಗಿನ ವಿಶ್ವಾಸಕ್ಕೆ ಧಕ್ಕೆ ತಗಲುತ್ತದೆ.

ವ್ಯಕ್ತಿ-ವ್ಯಕ್ತಿಗಳಲ್ಲಿಯ ವಿಶ್ವಾಸವೇ ಸಹಜೀವನದ ಆಧಾರವಾಗಿರುತ್ತದೆ. ಅದು ಭಂಗವಾದರೆ ಸಾಮಾಜಿಕ ಐಕ್ಯತೆಗೆ ಬಿರುಕು ಉಂಟಾಗುತ್ತದೆ. ಸಾಮಾಜಿಕ ಐಕ್ಯತೆಯ ಹೊರತು ರಾಷ್ಟ್ರೀಯ ಐಕ್ಯತೆ ಹೇಗೆ ನಿರ್ಮಾಣವಾದೀತು? ಆದ್ದರಿಂದಲೇ ನಾವೆಲ್ಲರೂ, ನಮ್ಮೆಲ್ಲ ಶಕ್ತಿಯೊಂದಿಗೆ ಕೋಮುವಾದವನ್ನು ಎದುರಿಸುವುದು ಅವಶ್ಯಕವಾಗಿದೆ. ಅದಕ್ಕಾಗಿ ಬೇರೆ ಧರ್ಮದ ಜನರೊಡನೆ ನಾವು ಬೆರೆಯಬೇಕು. ಪರಸ್ಪರರ ಹಬ್ಬ - ಉತ್ಸವಗಳಲ್ಲಿ ಸಹಭಾಗಿಯಾಗಬೇಕು. ಪರಸ್ಪರರ ಒಳ್ಳೆಯ ರೀತಿನೀತಿ, ಸಂಪ್ರದಾಯ ಮತ್ತು ಸದ್ವಿಚಾರಗಳನ್ನು ನಾವು ಸ್ವೀಕರಿಸಬೇಕು ನಮ್ಮ ಸಾಮಾಜಿಕ ಇಲ್ಲವೆ ಆರ್ಥಿಕ ಪ್ರಶ್ನೆಗಳ ಕಡೆಗೆ ನಮಗೆ ತರ್ಕಶುದ್ಧ ಪದ್ಧತಿಯಿಂದ ನೋಡಲು ಬರಬೇಕು. ಈ ಪ್ರಶ್ನೆಗಳನ್ನು ಧರ್ಮಕ್ಕೆ ಜೋಡಿಸಬಾರದು ಧಾರ್ಮಿಕ ಸಾಮಂಜಸ್ಯವು ಏಕೆ ಕೆಡುತ್ತದೆ? ಅದಕ್ಕೆ ಆರ್ಥಿಕ, ರಾಜಕೀಯ, ಐತಿಹಾಸಿಕ ಮುಂತಾದ ಯಾವ ಕಾರಣಗಳಿವೆ ಎಂಬ ಪ್ರಶ್ನೆಗಳನ್ನು ನಾವು ಶೋಧಿಸಬೇಕು. ಕೋಮುವಾದವನ್ನು ನಷ್ಟಪಡಿಸಿ ರಾಷ್ಟ್ರೀಯ ಐಕ್ಯತೆಯನ್ನು ಭದ್ರಪಡಿಸಲು ಇದೇ ಒಂದು ಮಾರ್ಗವಿದೆ.


## ಪ್ರದೇಶವಾದ:

'ಪ್ರದೇಶವಾದ' ವೆಂದರೆ ತಮ್ಮ ಪ್ರದೇಶದ ಬಗ್ಗೆ ಅನುಚಿತವಾದ ಅಭಿಮಾನವನ್ನು ತಳೆಯುವುದು ಎಂದರ್ಥ ಉದಾ. ನಾನು ಬಂಗಾಲಿ, ನಾನು ಮರಾಠಿ ಎಂದು ತಮ್ಮ ಪರಿಚಯವನ್ನು ಹೇಳುವುದು ಬೇರೆ; ಆದರೆ ನಾನು ಬಂಗಾಲಿ, ನಾನು ಮರಾಠಿಯಾಗಿರುವುದರಿಂದ ನಾನು ಇತರ ಪ್ರಾಂತದವರಿಗಿಂತ ಶ್ರೇಷ್ಠನಾಗಿದ್ದೇನೆ ಎಂಬ ಭಾವನೆಯನ್ನು ತಳೆಯುವುದೇ ಅನುಚಿತ ಪ್ರಾಂತಾಭಿಮಾನ. ತಮ್ಮ ಪ್ರದೇಶದ ಬಗ್ಗೆ ಇರುವ ಆತ್ಮೀಯತೆಗೆ ಈರೀತಿಯ ಅನುಚಿತ ಪ್ರಾಂತಾಭಿಮಾನದಿಂದಾಗಿ ವಿಕೃತ ಸ್ವರೂಪ ಪ್ರಾಪ್ತವಾಗುತ್ತದೆ. ತಮ್ಮ ಪ್ರಾಂತದ ಮೇಲೆ ಪ್ರೇಮವಿರುವುದು ಸ್ವಾಭಾವಿಕ. ಆದರೆ ಅದು ವಿಕೃತವಾಗಬಾರದು.

ಅಭಿವೃದ್ಧಿಯಲ್ಲಿಯ ಅಸಮತೋಲನದಿಂದಾಗಿ ಪ್ರದೇಶವಾದಕ್ಕೆ ಉತ್ತೇಜನೆ ದೊರೆಯುತ್ತದೆ. ಸ್ವಾತಂತ್ರ್ಯದ ನಂತರವೂ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಾಗ ಆರಂಭದಲ್ಲಿ ಕೆಲವು ರಾಜ್ಯಗಳು ಹೆಚ್ಚು ಪ್ರಗತಿಹೊಂದಿದವು ಆದರೆ ಇತರ ರಾಜ್ಯಗಳು ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಸ್ಥಿತಿಯಲ್ಲಿಯೇ ಉಳಿದವು. ಉದಾ., ಮಹಾರಾಷ್ಟ್ರ ಗುಜರಾತ, ಪಂಜಾಬ, ತಮಿಳುನಾಡು ಈ ರಾಜ್ಯಗಳು ಆರ್ಥಿಕ ಮತ್ತು ಔದ್ಯೋಗಿಕ ದೃಷ್ಟಿಯಿಂದ ಸಾಕಷ್ಟು ಅಭಿವೃದ್ಧಿ ಹೊಂದಿದವು; ಆದರೆ ಒಡಿಶಾ, ಬಿಹಾರ, ಆಸಾಮಗಳಂತಹ ರಾಜ್ಯಗಳು ಆರ್ಥಿಕ ಅಭಿವೃದ್ಧಿ ಮತ್ತು ಸುಧಾರಣೆಯು ಪ್ರಗತಿಯ ಅಡಿಪಾಯವಾಗಿರುವುದರಿಂದ ಯಾವ ರಾಜ್ಯಗಳ ಆರ್ಥಿಕ ಅಭಿವೃದ್ಧಿಯಾಗುತ್ತದೆಯೋ ಆರಾಜ್ಯಗಳು ಶಿಕ್ಷಣ, ಆರೋಗ್ಯ, ಸಂಸ್ಕೃತಿ ಇತ್ಯಾದಿ ಅನ್ಯ ಕ್ಷೇತ್ರಗಳಲ್ಲಿಯೂ ಪ್ರಗತಿಯನ್ನು ಸಾಧಿಸಬಹುದು ಯಾವ ರಾಜ್ಯಗಳಲ್ಲಿ ಈ ರೀತಿಯ ಅಭಿವೃದ್ಧಿಯಾಗಿರುವುದಿಲ್ಲವೋ ಆ ರಾಜ್ಯಗಳು ಮಾತ್ರ ಶೈಕ್ಷಣಿಕ ಹಾಗೂ ನಾಗರಿಕ ಸೌಲಭ್ಯಗಳ ವಿಷಯದಲ್ಲಿ ತುಂಬಾ ಹಿಂದುಳಿಯುತ್ತವೆ. ಪ್ರಗತಿಶೀಲ ರಾಜ್ಯಗಳಲ್ಲಿಯ ಜನರಿಗೆ ಲಭ್ಯವಾಗುವ ಅಭಿವೃದ್ಧಿಯ ಅವಕಾಶಗಳು ಇಂಥ ರಾಜ್ಯಗಳಿಗೆ ದೊರೆಯುವುದಿಲ್ಲ. ಶೈಕ್ಷಣಿಕ ದೃಷ್ಟಿಯಿಂದ ಹಿಂದುಳಿಯುವಿಕೆ, ನಿರುದ್ಯೋಗ ದಾರಿದ್ರ್ಯಗಳಿಂತಹ ಸಮಸ್ಯೆಗಳು ಅವರನ್ನು ಕಾಡುತ್ತವೆ. ನಾವು ಮೋಸಹೋಗುತ್ತಿದ್ದೇವೆ, ನಮ್ಮನ್ನು ಅಭಿವೃದ್ಧಿಯ ಲಾಭಗಳಿಂದ ದೂರವಿಡಲಾಗುತ್ತಿದೆಯೆಂಬ ಭಾವನೆಯು ಅವರ ಮನಸ್ಸಿನಲ್ಲಿ ಬೆಳೆಯುತ್ತದೆ. ಇದರಿಂದಲೇ ರಾಜ್ಯ-ರಾಜ್ಯಗಳ ನಡುವಿನ ಸಾಮಂಜಸ್ಯವು ನಷ್ಟವಾಗುತ್ತದೆ. ಈ ಸಾಮಂಜಸ್ಯವು ನಷ್ಟವಾದರೆ ರಾಷ್ಟ್ರೀಯ ಐಕ್ಯತೆಯ ಮೇಲೆ ಅದರ ವಿಪರೀತ ಪರಿಣಾಮವಾಗುತ್ತದೆ. ಅದಕ್ಕಾಗಿ ಈ ಸಾಮಂಜಸ್ಯವು ಯಾವುದರಿಂದಾಗಿ ನಷ್ಟವಾಗುತ್ತದೆಯೋ ಆ ಆರ್ಥಿಕ ಅಸಮತೋಲನದ ಸಮಸ್ಯೆಯನ್ನು ನಾವು ತ್ವರಿತವಾಗಿ ಬಗೆಹರಿಸಬೇಕು ನಮ್ಮ ಸರಕಾರವು ಆ ದೃಷ್ಟಿಯಿಂದ ಪ್ರಯತ್ನಶೀಲವಾಗಿದೆ.

ಪ್ರದೇಶವಾದವು ಪ್ರಗತಿಶೀಲ ಮತ್ತು ಅಪ್ರಗತಿಶೀಲ ಈ ಎರಡೂ ಪ್ರಕಾರದ ರಾಜ್ಯಗಳನ್ನು ಪೀಡಿಸುವ ಸಮಸ್ಯೆ ಯಾಗಬಹುದು. ನಾವು ಪ್ರಗತಿಶೀಲರಾಗಿದ್ದೇವೆ ಏಕೆಂದರೆ ನಮ್ಮ ಪ್ರದೇಶದ ಇತಿಹಾಸ, ಸಂಸ್ಕೃತಿಯೇ ಶ್ರೇಷ್ಠವಾಗಿದೆ ಎಂಬ ಶ್ರೇಷ್ಠತ್ವದ ದುರಭಿಮಾನವು ಅಭಿವೃದ್ಧಿಶೀಲ ರಾಜ್ಯದ ಜನರಲ್ಲಿ ನಿರ್ಮಾಣವಾಗುತ್ತದೆ ಹಾಗೂ ನಂತರ ಅವರು ಅಭಿವೃದ್ಧಿಹೊಂದದ ರಾಜ್ಯಗಳ ಜನರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳಲು ಅವರು ಸಿದ್ಧರಿರುವುದಿಲ್ಲ. ಇದ್ದಕ್ಕೆ ವಿರುದ್ಧವಾಗಿ ಹಿಂದುಳಿದ ಭಾಗದಲ್ಲಿಯ ಜನರಿಗೆ ತಮ್ಮ ಸಂಘಟಿತ ಶಕ್ತಿಯನ್ನು ನಿಲ್ಲಿಸಲು ಪ್ರಾದೇಶಿಕ ಅನನ್ಯತೆಯನ್ನು ಎಚ್ಚರಿಸಬೇಕಾಗುತ್ತದೆ. ಅದಕ್ಕಾಗಿ ಅವರು ಸ್ಥಾನಿಕ ಪರಂಪರೆ, ಸಂಸ್ಕೃತಿ ಇವುಗಳನ್ನು ಅನುಚಿತವಾಗಿ ಗೌರವಿಸಿ ಸ್ವಂತದ ಭಿನ್ನತೆಯನ್ನು ಸಿದ್ಧಪಡಿಸುವ ಪ್ರಯತ್ನ ಐಕ್ಯತೆಗೆ ಧಕ್ಕೆ ತಗಲುತ್ತದೆ. ಅಭಿವೃದ್ಧಿಯಲ್ಲಿಯ ಅಸಮತೋಲನವನ್ನು ಕಡಿಮೆಮಾಡಿ ಅನಿಷ್ಟ ಪ್ರದೇಶವಾದವನ್ನು ನಿರ್ನಾಮಗೊಳಿಸಲು ಬರುವುದು.

ಭಾರತದ ಮುಂದಿನ ಕೆಲವು ಅಂತರ್ಗತ ಆಹ್ವಾನಗಳ ಅಭ್ಯಾಸವನ್ನು ನಾವು ಮಾಡಿದೆವು. ಇದರ ಜೊತೆಗೆ ಜನಸಂಖ್ಯೆ, ಸ್ವಚ್ಛತೆ, ಕೃಷಿ ಮತ್ತು ರೈತರ ಸಮಸ್ಯೆ, ಬಡತನ, ವಾಸಿಸಲು ಮನೆ ಮತ್ತು ಎರಡು ಹೊತ್ತಿನ ಊಟ ಮುಂತಾದ ಅನೇಕ ಸಮಸ್ಯೆಗಳು ಇಂದಿಗೂ ಇವೆ. ನಾವು ಈ ಆಹ್ವಾನಗಳನ್ನು ಸಮರ್ಥವಾಗಿ ಎದುರಿಸಿ ಮುನ್ನಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಪ್ರಗತಿಯ ದಿಶೆಯಲ್ಲಿ ಮುಂದುವರಿಯುತ್ತಿದ್ದೇವೆ. ಮುಂದಿನ ಪಾಠದಲ್ಲಿ ನಾವು ಆರ್ಥಿಕ ಕ್ಷೇತ್ರದಲ್ಲಿಯ ಪ್ರಗತಿಯನ್ನು ಕುರಿತು ಅಭ್ಯಾಸ ಮಾಡುವವರಿದ್ದೇವೆ.




C29HVS



## ಸ್ವಾಧ್ಯಾಯ

**1. ಮುಂದಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) 'ಆನಂದಪೂರ ಸಾಹಿಬ' ಠರಾವಿನಲ್ಲಿ ಅಕಾಲಿ ದಳವು ಯಾವ ಬೇಡಿಕೆಗಳನ್ನು ಮಾಡಿತು?

(2) ಕೋಮುವಾದವನ್ನು ನಷ್ಟಪಡಿಸಲು ಏನು ಮಾಡಬೇಕು?

(3) ಪ್ರದೇಶವಾದವು ಯಾವಾಗ ಬೆಳೆಯುತ್ತದೆ?

**2. ಟಿಪ್ಪಣಿ ಬರೆಯಿರಿ.**

(1) ಕೋಮುವಾದ (2) ಪ್ರದೇಶವಾದ

**3. ಮುಂದಿನ ವಿಧಾನಗಳ ಕಾರಣಗಳನ್ನು ಸ್ಪಷ್ಟಪಡಿಸಿರಿ.**

(1) 'ಆಪರೇಶನ್ ಬ್ಲ್ಯೂಸ್ಟಾರ' ಮಾಡಬೇಕಾಯಿತು.

(2) ಪೂರ್ಣ ಶಕ್ತಿಯೊಂದಿಗೆ ಕೋಮುವಾದವನ್ನು ಎದುರಿಸುವುದು ಅವಶ್ಯಕವಾಗಿದೆ.

**4. ಕೆಳಗಿನ ಸಂಕ್ಷಿಪ್ತ ರೂಪಗಳನ್ನು ಪೂರ್ಣರೂಪದಲ್ಲಿ ಬರೆಯಿರಿ.**

(1) MNF (2) NNC (3) PLGA

### ಉಪಕ್ರಮ

1. ಘಟಕರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮತ್ತು ಅವುಗಳ ರಾಜಧಾನಿ. ಇವುಗಳ ಕೋಷ್ಟಕವನ್ನು ತಯಾರಿಸಿರಿ ಮತ್ತು ನಕಾಶೆ ಅವುಗಳ ರೂಪರೇಷೆಯಲ್ಲಿ ನೋಂದಾಯಿಸಿರಿ.

2. ಮಣಿಪೂರ, ಮೇಘಾಲಯ, ತ್ರಿಪುರಾ ಮತ್ತು ಸಿಕ್ಕಿಂ ರಾಜ್ಯಗಳ ಮಾಹಿತಿಯನ್ನು ಅಂತರಜಾಲ (ಇಂಟರ್ನೆಟ್) ಸಹಾಯದಿಂದ ಪಡೆಯಿರಿ.

# 4 ಆರ್ಥಿಕ ಅಭಿವೃದ್ಧಿ

ಭಾರತದ ಆರ್ಥಿಕ ನೀತಿಯ ಅಭ್ಯಾಸವನ್ನು ನಾವು ಈ ಪಾಠದಲ್ಲಿ ಮಾಡುವವರಿದ್ದೇವೆ. ಮಿಶ್ರ ಅರ್ಥವ್ಯವಸ್ಥೆಯ ಸ್ವೀಕಾರ, ಪಂಚವಾರ್ಷಿಕ ಯೋಜನೆಗಳು ಮತ್ತು ಅವುಗಳ ಯಾಶಾಪಯಶ, ಬ್ಯಾಂಕುಗಳ ರಾಷ್ಟ್ರೀಕರಣ, ಇಪ್ಪತ್ತು ಅಂಶಗಳ ಕಾರ್ಯಕ್ರಮ, ಗಿರಣಿ ಕಾರ್ಮಿಕರ ಮುಷ್ಕರ, 1991ರ ಹೊಸ ಆರ್ಥಿಕ ನೀತಿ ಇವುಗಳ ವಿಶೇಷ ಅಭ್ಯಾಸವನ್ನು ಮಾಡುವರಿದ್ದೇವೆ.

**ಮಿಶ್ರ ಅರ್ಥವ್ಯವಸ್ಥೆ:** ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಮೊದಲೇ ನಾವು ಯಾವ ಪ್ರಕಾರದ ಅರ್ಥವ್ಯವಸ್ಥೆಯನ್ನು ಸ್ವೀಕರಿಸಬೇಕು ಎಂಬ ವಿಷಯದಲ್ಲಿ ವಿಚಾರಮಂಥನ ನಡೆದಿತ್ತು. ಪ್ರಧಾನ ಮಂತ್ರಿ ಪಂಡಿತ ನೆಹರೂ ಅವರು ಯಾವುದೇ ಅತಿರೇಕದ ಮಾರ್ಗವನ್ನು ಸ್ವೀಕರಿಸುವುದಿಕ್ಕಿಂತ ಮಧ್ಯಮ ಮಾರ್ಗವನ್ನು ಅವಲಬಿಸಿದರು. ಕೆಲವು ದೇಶಗಳಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆ ಇತ್ತು ಹಾಗೂ ಕೆಲವು ದೇಶಗಳಲ್ಲಿ ಸಮಾಜವಾದಿ ಅರ್ಥವ್ಯವಸ್ಥೆ ಇತ್ತು. ಪ್ರತಿಯೊಂದು ಅರ್ಥವ್ಯವಸ್ಥೆಯಲ್ಲಿ ಕೆಲವು ಲಾಭಗಳು ಹಾಗೂ ಕೆಲವು ಹಾನಿಗಳು ಇರುತ್ತವೆ.

ಬಂಡಾವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಸಾಧನಗಳು ಖಾಸಗಿ ಒಡೆತನದ್ದಿರುತ್ತವೆ. ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಸಾಧನಗಳು ಸಮಾಜದ ಅಂದರೆ ಸರಕಾರದ ಒಡೆತನದ್ದಿರುತ್ತವೆ. ಮಿಶ್ರ ಅರ್ಥ ವ್ಯವಸ್ಥೆಯು ಖಾಸಗಿ ಮತ್ತು ಸಾಮಾಜಿಕ ಈ ಎರಡೂ ಕ್ಷೇತ್ರಗಳಲ್ಲಿ ಕಾರ್ಯಮಾಡುತ್ತದೆ. ಆಧುನಿಕ ಭಾರತದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಎರಡೂ ಅರ್ಥವ್ಯವಸ್ಥೆಳಿಗಿಂತ 'ಮಿಶ್ರ ಅರ್ಥವ್ಯವಸ್ಥೆಗೆ ಭಾರತವು ಪ್ರಾಧಾನ್ಯನೀಡಿತು. ಈ ಅರ್ಥವ್ಯವಸ್ಥೆಯಲ್ಲಿ ನಮಗೆ ಮೂರು ಭಾಗಗಳು ಕಂಡುಬರುತ್ತವೆ.

**(1) ಸಾರ್ವಜನಿಕ ಕ್ಷೇತ್ರ:** ಈ ಕ್ಷೇತ್ರದಲ್ಲಿಯ ಉದ್ಯೋಗಧಂದೆಗಳು ಸಂಪೂರ್ಣವಾಗಿ ಸರಕಾರದ ನಿಯಂತ್ರಣದಲ್ಲಿ ಮತ್ತು ವ್ಯವಸ್ಥಾಪನೆಯಲ್ಲಿ ಇರುತ್ತವೆ. ಉದಾ. ಸಂರಕ್ಷಣೆಯ ಸಾಧನಗಳ ಉತ್ಪಾದನೆ.

**(2) ಖಾಸಗಿ ಕ್ಷೇತ್ರ:** ಈ ಕ್ಷೇತ್ರದಲ್ಲಿಯ ಉದ್ಯೋಗ ಧಂದೆಗಳು ಸಂಪೂರ್ಣವಾಗಿ ಖಾಸಗಿ ಉದ್ದಿಮೆದಾರರ ಒಡೆತನದಲ್ಲಿರುತ್ತವೆ. ಅರ್ಥಾತ್ ಅವುಗಳ ಮೇಲೆ ಸರಕಾರದ ಮೇಲ್ವಿಚಾರಣೆ ಮತ್ತು ನಿಯಂತ್ರಣೆ ಇರುತ್ತದೆ. ಉದಾ. ಉಪಭೋಗದ ವಸ್ತುಗಳು.

**(3) ಸಂಯುಕ್ತ ಕ್ಷೇತ್ರ:** ಈ ಕ್ಷೇತ್ರದಲ್ಲಿ ಕೆಲವು ಉದ್ಯಮಗಳು ಖಾಸಗಿ ಉದ್ದಿಮೆದಾರರ ಒಡೆತನದಲ್ಲಿ ಹಾಗೂ ಕೆಲವು ಸರಕಾರದ ವ್ಯವಸ್ಥಾಪನೆಯಲ್ಲಿ ನಡೆಸಲ್ಪಡುತ್ತವೆ.

ಮಿಶ್ರ ಅರ್ಥವ್ಯವಸ್ಥೆಯು ಸರಿಯಾಗಿ ನಡೆಯಬೇಕಾದರೆ ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಸಾಮಂಜಸ್ಯವಿರುವುದು ಅವಶ್ಯಕವಾಗಿರುತ್ತದೆ. ಈ ವ್ಯವಸ್ಥೆಯ ಒಂದೇ ಒಂದು ಉದ್ದೇಶವೇನೆಂದರೆ ಹೆಚ್ಚಿಗೆ ಹೆಚ್ಚು ಉತ್ಪಾದನೆ ಮತ್ತು ದೊಡ್ಡ ಪ್ರಮಾಣದಲ್ಲಿ ಜನತೆಯ ಸಹಭಾಗಿತ್ವ ಈ ವ್ಯವಸ್ಥೆಯಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದ ಅರ್ಥವ್ಯವಸ್ಥೆಗಳಲ್ಲಿಯ ಒಳ್ಳೆಯ ಗುಣಗಳನ್ನು ಒಂದೆಡೆ ಮಿಶ್ರ ಅರ್ಥವ್ಯವಸ್ಥೆಯಲ್ಲಿ ತರುವ ಪ್ರಯತ್ನ ಮಾಡಲಾಗಿದೆ. ಲಾಭದ ಪ್ರೇರಣೆ, ಉಪಕ್ರಮಶೀಲತೆ, ನಿಯಮಗಳ ಪಾಲನೆ, ಕಾಲೋಚಿತ ಏರ್ಪಾಟು ಮುಂತಾದ ಸಂಗತಿಗಳ ಕಡೆಗೆ ದುರ್ಲಕ್ಷ ಮಾಡಿದರೆ ನಡೆಯುವುದಿಲ್ಲ.

ಈ ವ್ಯವಸ್ಥೆಯಲ್ಲಿ ದೇಶಹಿತಕ್ಕೆ ಪ್ರಾಧಾನ್ಯತೆ ನೀಡುವ ಪ್ರವೃತ್ತಿ ಇರುತ್ತದೆ. ದೀರ್ಘಕಾಲೀನ ಅಭಿವೃದ್ಧಿಗೆ ಅಧಿಕ ಮಹತ್ವ ನೀಡಲಾಗುತ್ತದೆ. ಸಂರಕ್ಷಣೆ, ವೈಜ್ಞಾನಿಕ ಸಂಶೋಧನೆ, ಶಿಕ್ಷಣ, ರಸ್ತೆ, ರೈಲು, ಕಾಲುವೆಗಳು, ಬಂದರಗಳು ಮತ್ತು ವಿಮಾನ ನಿಲ್ದಾಣಗಳ ನಿರ್ಮಾಣ ಈ ಕ್ಷೇತ್ರಗಳು ಸಾಕಷ್ಟು ಬಂಡವಾಳ ತಗಲುವ ಆದರೆ ತಡವಾಗಿ ಪ್ರತಿಫಲವನ್ನು ನೀಡುವ ಕ್ಷೇತ್ರಗಳಾಗಿವೆ. ಈ ಕ್ಷೇತ್ರದಲ್ಲಿ ಖಾಸಗಿ ಉದ್ದಿಮೆದಾರರು ದೊಡ್ಡ ಪ್ರಮಾಣದಲ್ಲಿ ಮುಂದೆಬರುವುದಿಲ್ಲ, ಇಂಥಸಮಯದಲ್ಲಿ ಸರಕಾರವೇ ಮುಂದಾಳುತನ ವಹಿಸಬೇಕಾಗುತ್ತದೆ.

ಮೇಲಿನ ಪದ್ಧತಿಯಿಂದ ಮಿಶ್ರ ಅರ್ಥವ್ಯವಸ್ಥೆಯ ಮಾದರಿಯನ್ನು ಉಪಯೋಗಿಸಿ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ಸ್ವೀಕರಿಸಿ ಭಾರತವು ಅಭಿವೃದ್ಧಿಯ ಮುನ್ನಡೆಯನ್ನು ಆರಂಭಿಸಿತು. 1973ರ ಔದ್ಯೋಗಿಕ ನೀತಿಯಿಂದ ಅಭಿವೃದ್ಧಿಯ ವೇಗ ಹೆಚ್ಚಿತು. ಈ ನೀತಿಗನುಗುಣವಾಗಿ ಭಾರಿ ಉದ್ಯಮ, ಉದ್ಯಮಿಗಳ ಮನೆತನ ಮತ್ತು ಪರಕೀಯ ಉದ್ಯೋಗ ಇವುಗಳ ಪ್ರಭಾವವನ್ನು ನಿಯಂತ್ರಿಸುವುದು ಹಾಗೂ ಪ್ರಾದೇಶಿಕ ಅಭಿವೃದ್ಧಿಯ ಸಮತೋಲನವನ್ನು ಸಾಧಿಸುವುದು. ಇತ್ಯಾದಿ ಸಂಗತಿಗಳಿಗೆ ಪ್ರಾಧಾನ್ಯತೆ ನೀಡಲಾಯಿತು. ಸಣ್ಣ ಕೈಗಾರಿಕೆಗಳು, ಗ್ರಾಮೋದ್ಯೋಗ, ಗುಡಿಕೈಗಾರಿಕೆಗಳ ವಿಕಾಸದಕಡೆಗೆ ಲಕ್ಷಕೊಡಲಾಯಿತು. ಸಹಕಾರ ಕ್ಷೇತ್ರದ ಕಡೆಗೆ ವಿಶೇಷ ಗಮನ ನೀಡಲು ಆರಂಭವಾಯಿತು.

## ಪಂಚವಾರ್ಷಿಕ ಯೋಜನೆಗಳು

ಭಾರತವು ಸ್ವತಂತ್ರವಾಗುವವರೆಗೆ ಪರಕೀಯ ಆಡಳಿತಗಳು ಸಾಕಷ್ಟು ಪ್ರಮಾಣದಲ್ಲಿ ಭಾರತದ ಶೋಷಣೆ ಮಾಡಿದ್ದವು. ದಾರಿದ್ರ್ಯ, ನಿರುದ್ಯೋಗ, ಜನಸಂಖ್ಯೆಯಲ್ಲಿ ಹೆಚ್ಚಳ, ನಿಕೃಷ್ಟ ಜೀವನ ಮಟ್ಟ, ಕೃಷಿ ಮತ್ತು ಉದ್ಯೋಗಧಂದೆ

ಇವುಗಳ ಅಲ್ಪ ಉತ್ಪಾದನೆ ಅದರಂತೆ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹಿಂದುಳಿಯುವಿಕೆ, ಮುಂತಾದ ಜಟಿಲ ಸಮಸ್ಯೆಗಳು ದೇಶದ ಮುಂದಿದ್ದವು. ಅವುಗಳನ್ನು ಬಿಡಿಸುವುದಕ್ಕಾಗಿ ಯೋಜನೆಯ ಅವಶ್ಯಕತೆಯಿತ್ತು.

1950ರಲ್ಲಿ ಭಾರತ ಸರಕಾರವು ಯೋಜನಾ ಆಯೋಗದ ಸ್ಥಾಪನೆ ಮಾಡಿತು. ಪ್ರಧಾನಮಂತ್ರಿ ಪಂ. ಜವಾಹರಲಾಲ ನೆಹರು ಇವರು ಈ ಆಯೋಗದ ಅಧ್ಯಕ್ಷರಾಗಿದ್ದರು.

ಈ ಆಯೋಗವು ಕೃಷಿ ಮತ್ತು ಗ್ರಾಮೀಣ ವಿಕಾಸ, ಸಮತೋಲನೆಯುಳ್ಳ ಔದ್ಯೋಗೀಕರಣ, ಕನಿಷ್ಠ ಜೀವನ ಮಟ್ಟದ ಏರ್ಪಾಟು, ಪ್ರಜಾಪ್ರಭುತಕ್ಕೆ ಸುಸಂಬದ್ಧವಾದ ಆರ್ಥಿಕ ವಿಕಾಸ, ಯೋಜನೆಯ ರಚನೆ ಮತ್ತು ಅದನ್ನು ಜಾರಿಗೊಳಿಸುವಿಕೆ ಇದರಲ್ಲಿ ಜನರ ಸಹಭಾಗಿತ್ವ ಮತ್ತು ವ್ಯಕ್ತಿಯ ಅಭಿವೃದ್ಧಿಯನ್ನು ಸಾಧಿಸುವ ಐದು ವರ್ಷಗಳ ಯೋಜನೆಯನ್ನು ತಯಾರಿಸಿತು. ಈ ಯೋಜನೇಯೇ 'ಪಂಚವಾರ್ಷಿಕ ಯೋಜನೆ'ಯಾಗಿದೆ.

**ಯೋಜನೆಯ ಮೂಲಭೂತ ತತ್ವ:** ಯಾವುದೊಂದು ದೇಶದ ಸಂಪನ್ಮೂಲಗಳ ಪ್ರಮಾಣಬದ್ಧ ಹಂಚಿಕೆ ಮತ್ತು ಅಲ್ಲಿಯ ಮಾನವ ಸಂಪನ್ಮೂಲಗಳ ಯೋಗ್ಯ ಬಳಕೆಯು ಆ ದೇಶದಲ್ಲಿಯ ಜನರ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಆಗಬೇಕು ಎಂಬುದು ಯೋಜನೆಯ ಸರ್ವಮಾನ್ಯ ತತ್ವವಾಗಿದೆ.

### ಯೋಜನೆಯ ಉದ್ದೇಶಗಳು:

ಸರ್ವಸಾಮಾನ್ಯವಾಗಿ ಭಾರತದ ಆರ್ಥಿಕ ಯೋಜನೆಯ ಉದ್ದೇಶಗಳು ಕೆಳಗಿನಂತಿವೆ:

(1) ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ

(2) ಮೂಲಭೂತ ಕೈಗಾರಿಕೆಗಳಿಗೆ ಮಹತ್ವ ನೀಡಿ ತ್ವರಿತಗತಿಯಿಂದ ಔದ್ಯೋಗೀಕರಣವನ್ನು ಉಂಟುಮಾಡುವುದು.

(3) ಅನ್ನಧಾನ್ಯದ ವಿಷಯದಲ್ಲಿ ದೇಶವು ಸ್ವಾವಲಂಬಿಯಾಗಬೇಕೆಂದು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವನ್ನುಂಟು ಮಾಡುವುದು.

(4) ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಗಳನ್ನು ಒದಗಿಸಿ, ದೇಶದಲ್ಲಿಯ ಮಾನವ ಸಂಪನ್ಮೂಲಗಳ ಉಪಯೋಗವನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಿಕೊಳ್ಳುವುದು.

(5) ಪ್ರಾಪ್ತಿ ಮತ್ತು ಸಂಪತ್ತು ಇವುಗಳಲ್ಲಿಯ ವಿಷಮತೆಯನ್ನು ಹೋಗಲಾಡಿಸುವುದು.

(6) ವಸ್ತುಗಳ ಬೆಲೆಗಳನ್ನು ಸ್ಥಿರ ಮಟ್ಟದಲ್ಲಿ ಇಡುವುದು.

(7) ಕುಟುಂಬ ಯೋಜನೆ ಮಾಡಿ ಹೆಚ್ಚುತ್ತಿರುವ ಜನ ಸಂಖ್ಯೆಯ ಮೇಲೆ ನಿಯಂತ್ರಣವನ್ನಿಡುವುದು.

(8) ದಾರಿದ್ರ್ಯ ನಿರ್ಮೂಲನೆ ಮಾಡಿ ಜೀವನ ಮಟ್ಟವನ್ನು ಎತ್ತರಿಸುವುದು.

(9) ಸಾಮಾಜಿಕ ಸೇವೆಗಳ ವಿಕಾಸ ಮಾಡುವುದು.

(10) ಆರ್ಥಿಕ ಕ್ಷೇತ್ರವನ್ನು ಸ್ವಾವಲಂಬಿಯನ್ನಾಗಿ ಮಾಡುವುದು.

**ಮೊದಲನೆಯ ಪಂಚವಾರ್ಷಿಕ ಯೋಜನೆ (1951-1956):** ಈ ಯೋಜನೆಯಲ್ಲಿ ಕೃಷಿ, ಸಾಮಾಜಿಕ ವಿಕಾಸ, ನೀರಾವರಿ ಮತ್ತು ಮಹಾಪೂರ ನಿಯಂತ್ರಣ, ಶಕ್ತಿ ಸಾಧನಗಳು, ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ದೊಡ್ಡ ಉದ್ಯಮಗಳು ಮತ್ತು ಖನಿಜಗಳು, ಸಾರಿಗೆ ಮತ್ತು ಸಂಪರ್ಕ, ಶಿಕ್ಷಣ, ಆರೋಗ್ಯ ಇವುಗಳ ಮೇಲೆ ಹಣ ಖರ್ಚು ಮಾಡಲಾಯಿತು. ಯೋಜನಾಬದ್ಧ ಆರ್ಥಿಕ ವಿಕಾಸದ ಅಡಿಪಾಯವನ್ನಿಡುವ ಯೋಜನೆ ಇದಾಗಿತ್ತು.

**ಎರಡನೆಯ ಪಂಚವಾರ್ಷಿಕ ಯೋಜನೆ (1956-1961):** ಈ ಯೋಜನೆಯಲ್ಲಿ ಔದ್ಯೋಗೀಕರಣದ ಮಹತ್ವಾಕಾಂಕ್ಷಿ ಉದ್ದೇಶವನ್ನು ಸಾಧಿಸುವುದಿತ್ತು. ದುರ್ಗಾಪೂರ, ಭಿಲಾಯಿ, ರಾವೂರಕೇಲಾಗಳಲ್ಲಿಯ ಉಕ್ಕಿನ ಕಾರ್ಖಾನೆಗಳು, ಸಿಂಧ್ರಿಯಲ್ಲಿಯ ರಾಸಾಯನಿಕ ಗೊಬ್ಬರದ ಕಾರ್ಖಾನೆ, ಚಿತ್ತರಂಜನದಲ್ಲಿಯ ರೈಲು ಇಂಜನ್ನಿನ ಕಾರ್ಖಾನೆ, ಪೇರಾಂಬೂರದ ರೈಲು ಡಬ್ಬಿಗಳ ಕಾರ್ಖಾನೆ, ವಿಶಾಖಾ ಪಟ್ಟಣದ ಹಡಗುಕಟ್ಟುವ ಕಾರ್ಖಾನೆ ಇತ್ಯಾದಿ ಪ್ರಚಂಡ ಮತ್ತು ಭಾರಿ ಉದ್ಯಮಗಳ ಕಾರ್ಖಾನೆಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪಿಸಲಾಯಿತು. ಕೃಷಿಗೆ ನೀರಿನ ಪೂರೈಕೆ ಮಾಡುವ ಸಲುವಾಗಿ ಭಾಕ್ರಾ-ನಾಂಗಲ, ದಾಮೋದರಗಳಂತಹ ಪ್ರಚಂಡ ಆಣೆಕಟ್ಟುಗಳನ್ನು ಕಟ್ಟಲಾಯಿತು. ಈ ಯೋಜನೆಗಳಿಂದಾಗಿ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳವಾಯಿತು.



ಭಿಲಾಯಿ ಉಕ್ಕಿನ ಕಾರ್ಖಾನೆ

**ಮೂರನೆಯ ಪಂಚವಾರ್ಷಿಕ ಯೋಜನೆ (1961-1966):** ಈ ಯೋಜನೆಯಲ್ಲಿ ಉದ್ಯೋಗ ಮತ್ತು ಕೃಷಿ ವಿಕಾಸಗಳ ಸಮತೋಲನವನ್ನು ಸಾಧಿಸಬೇಕಾಗಿತ್ತು ಪ್ರತಿ ವರ್ಷ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ ಮಾಡುವುದು,

ಭಾರಿ ಉದ್ಯಮ, ಸಾರಿಗೆ ಮತ್ತು ಖನಿಜ ಉದ್ಯಮ ವಿಕಾಸ, ವಿಷಮತೆಯ ನಿರ್ಮೂಲನೆಮಾಡುವುದು ಮತ್ತು ಉದ್ಯೋಗಾವಕಾಶಗಳ ವಿಸ್ತಾರ ಮಾಡುವುದು ಮುಖ್ಯ ಉದ್ದೇಶವಾಗಿತ್ತು.

ಮೂರನೆಯ ಪಂಚವಾರ್ಷಿಕ ಯೋಜನೆಯ ನಂತರ ಮೂರು ಒಂದು ವರ್ಷದ ಯೋಜನೆ (1966-1969) ಗಳನ್ನು ಕೈಗೆತ್ತಿಕೊಳ್ಳಲಾಯಿತು. ಈ ಸಮಯದಲ್ಲಿ ಭೀಷಣ ಬರಗಾಲವನ್ನು ಎದುರಿಸಬೇಕಾಯಿತು. ಚೀನದ ಆಕ್ರಮಣ ಮತ್ತು ಪಾಕಿಸ್ತಾನದ ಜೊತೆ ಯುದ್ಧಗಳಿಂದಾಗಿ ಅಭಿವೃದ್ಧಿಯ ಕಾರ್ಯಗಳಿಗಿಂತ ಹೆಚ್ಚು ಸಂರಕ್ಷಣೆ ಮತ್ತು ಬರಗಾಲ ನಿವಾರಣೆಯ ಕಡೆಗೆ ಗಮನ ಹರಿಸಬೇಕಾಯಿತು. ಈ ಸಂಗತಿಗಳಿಂದಾಗಿ ಭಾರತದ ಅರ್ಥ ವ್ಯವಸ್ಥೆಯ ಮೇಲೆ ತುಂಬಾ ಭಾರ ಬಿದ್ದಿತು.

**ನಾಲ್ಕನೆಯ ಪಂಚವಾರ್ಷಿಕ ಯೋಜನೆ (1969-1974):** ಈ ಯೋಜನೆಯ ಉದ್ದೇಶಗಳನ್ನು ನಿಶ್ಚಿತಪಡಿಸುವಾಗ ಭಾರತವು ಸ್ವಾವಲಂಬಿಯಾಗಬೇಕು, ಸರಕಾರವು ಮೂಲಭೂತ ಉದ್ಯಮಗಳ ವಿಕಾಸ ಮಾಡಬೇಕು, ಆರ್ಥಿಕ ಅಭಿವೃದ್ಧಿಯ ವೇಗ ಹೆಚ್ಚಬೇಕು ಹಾಗೂ ಸಮಾಜವಾದಿ ಸಮಾಜರಚನೆಯನ್ನು ನಿರ್ಮಾಣ ಮಾಡುವುದರ ಕಡೆಗೆ ಲಕ್ಷವಹಿಸಬೇಕು ಎಂದು ನಿರ್ಧರಿಸಲಾಯಿತು. ಈ ಯೋಜನೆಯ ಕಾಲದಲ್ಲಿ ದೇಶದಲ್ಲಿಯ 14 ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಲಾಯಿತು. ಈ ಯೋಜನೆಯು ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ, ನಾಲ್ಕನೆಯ ಯೋಜನೆಯ ಕಾಲದಲ್ಲಿ ಬಾಂಗಲಾದೇಶ ಯುದ್ಧದ ಪರಿಣಾಮವನ್ನು ಭಾರತೀಯ ಅರ್ಥವ್ಯವಸ್ಥೆಯು ಸಹಿಸಬೇಕಾಯಿತು. ನಿರಾಶ್ರಿತರ ಮೇಲಿನ ಖರ್ಚನ್ನು ಸಹಿಸಬೇಕಾಯಿತು. ಸರಕಾರಿ ನೌಕರರ ವೇತನವೃದ್ಧಿ, ರೈಲು ಸಿಬ್ಬಂದಿಗಳ ವೇತನ ವೃದ್ಧಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿನ ಹೆಚ್ಚುತ್ತಿರುವ ಬೆಲೆ ಇವುಗಳಿಂದಾಗಿ ಭಾರತೀಯ ಅರ್ಥವ್ಯವಸ್ಥೆಯು ಆಘಾತಗಳನ್ನು ಸಹಿಸಬೇಕಾಯಿತು.

**ಐದನೆಯ ಪಂಚವಾರ್ಷಿಕ ಯೋಜನೆ (1974-1979):** ಬಡತನವನ್ನು ಹೋಗಲಾಡಿಸಿ ದೇಶವನ್ನು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯನ್ನಾಗಿ ಪ್ರಮುಖ ಉದ್ದೇಶವನ್ನು ಕಣ್ಮುಂದೆ ಇಟ್ಟು ಈ ಯೋಜನೆಯನ್ನು ತಯಾರಿಸಲಾಯಿತು. ಈ ಯೋಜನೆಯಲ್ಲಿ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವುದು, ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುವುದು, ಶಿಕ್ಷಣ, ಪೋಷಕ ಆಹಾರ, ಕುಡಿಯುವ ನೀರಿನ ಪೂರೈಕೆ ಮಾಡುವುದು, ವೈದ್ಯಕೀಯ ಉಪಚಾರದ ಸೌಲಭ್ಯಗಳನ್ನು ಗ್ರಾಮೀಣ ಭಾಗಗಳಿಗೆ ಪೂರೈಸುವುದು, ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆ ಮತ್ತು ಸಾರಿಗೆ ಸಂಪರ್ಕ ಸಾಧನಗಳನ್ನು ವ್ಯಾಪಕ ಪ್ರಮಾಣದಲ್ಲಿ ಹಮ್ಮಿಕೊಳ್ಳುವುದು, ಕೃಷಿ ವಿಕಾಸವನ್ನು ಸಾಧಿಸುವುದು, ಮೂಲಭೂತ ಉದ್ಯಮಗಳನ್ನು ಹೆಚ್ಚಿಸುವುದು, ಅನ್ನಧಾನ್ಯ ಮತ್ತು ಇತರ ಜೀವನೋಪಯೋಗ ವಸ್ತುಗಳನ್ನು ಏಕಾಧಿಕಾರ ಪದ್ಧತಿಯಿಂದ ಖರೀದಿ ಮಾಡಿ ಅವುಗಳನ್ನು ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೂಲಕ ಯೋಗ್ಯಬೆಲೆಯಲ್ಲಿ ಬಡವರಿಗೆ ಪೂರೈಸುವುದು ಇತ್ಯಾದಿ ಉದ್ದೇಶಗಳನ್ನು ನಮೂದಿಸಲಾಗಿದೆ.

ಐದನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ದಾರಿದ್ರ್ಯನಿರ್ಮೂಲನೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಸಾಧ್ಯವಾಗಲಿಲ್ಲ.

1977ರಲ್ಲಿ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರಾಭವವಾಯಿತು. ಜನತಾಪಕ್ಷವು ಅಧಿಕಾರಕ್ಕೆ ಬಂದಿತು. ಹೊಸ ಸರಕಾರವು ಐದನೆಯ ಪಂಚವಾರ್ಷಿಕ ಯೋಜನೆಯನ್ನು 1978ರಲ್ಲಿ ಮಾರ್ಚ ತಿಂಗಳ ಕೊನೆಯಲ್ಲಿ ಸಮಾಪ್ತಗೊಳಿಸಿ ಎಪ್ರಿಲ 1978ರಿಂದ ಸರಪಳಿ ಯೋಜನೆಯನ್ನು ಆರಂಭಿಸಿತು ಆದರೆ ಅದು ಅಯಶಸ್ವಿಯಾಯಿತು. 1980ರಲ್ಲಿ ಲೋಕಸಭೆಯ ಮಧ್ಯಾವಧಿ ಚುನಾವಣೆಗಳಾಗಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಿತು. ಈ ಸರಕಾರವು ಸರಪಳಿ ಯೋಜನೆಯನ್ನು ಮುಕ್ತಾಯಗೊಳಿಸಿ ಮತ್ತೇ ಹಳೆಯ ಪದ್ಧತಿಯ ಯೋಜನೆಯನ್ನು ಆರಂಭಿಸಿತು.

**ಆರನೆಯ ಪಂಚವಾರ್ಷಿಕ ಯೋಜನೆ (1980-1985):** ಈ ಯೋಜನೆಯು ದಾರಿದ್ರ್ಯನಿರ್ಮೂಲನೆ ಮತ್ತು ಉದ್ಯೋಗಾವಕಾಶಗಳ ನಿರ್ಮಿತಿಗೆ ಮಹತ್ವನೀಡಿತು. ಯೋಜನೆಯ ಉದ್ದೇಶಗಳು ಕೆಳಗಿನಂತೆ ಇದ್ದವು. ಅರ್ಥವ್ಯವಸ್ಥೆಯ ವಿಕಾಸದರದಲ್ಲಿ ಲಕ್ಷಣೀಯ ಹೆಚ್ಚಳ ಮಾಡುವುದು, ಬಡತನ ಮತ್ತು ನಿರುದ್ಯೋಗ ಇವುಗಳ ಪ್ರಮಾಣದಲ್ಲಿ ಇಳಿಕೆಮಾಡುವುದು, ಜನರು ಚಿಕ್ಕಕುಟುಂಬ ಪದ್ಧತಿಯನ್ನು ಸ್ವೇಚ್ಛೆಯಿಂದ ಸ್ವೀಕರಿಸುವರು ಎಂಬ ನೀತಿಯನ್ನಿಟ್ಟು ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸುವುದು.

ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

* ಏಕಾತ್ಮಿಕ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (IRDP)
* ಗ್ರಾಮೀಣ ಭೂಮಿಹೀನ ದಿನಗೂಲಿ ಹಮಿ ಕಾರ್ಯಕ್ರಮ (RLEGP)
* ರಾಷ್ಟ್ರೀಯ ಗ್ರಾಮೀಣ ದಿನಗೂಲಿ ಕಾರ್ಯಕ್ರಮ (NREP)
* ಸಾಲೇಮ ಉಕ್ಕಿನ ಯೋಜನೆ

**ಏಳನೆಯ ಪಂಚವಾರ್ಷಿಕ ಯೋಜನೆ (1985-1990):** ಈ ಯೋಜನೆಯು ಅನ್ನ, ಉದ್ಯೋಗಾವಕಾಶ ಮತ್ತು

ಉತ್ಪಾದಕತೆ ಇವುಗಳಿಗೆ ಮಹತ್ವನೀಡಿತು. ವಿಕಾಸ, ಆಧುನಿಕೀಕರಣ, ಆತ್ಮನಿರ್ಭರತೆ, ಸಾಮಾಜಿಕ ನ್ಯಾಯ ಇವುಗಳಿಗೆ ಮಹತ್ವ ನೀಡುವುದು, ಉತ್ಪಾದನೆಯ ತಂತ್ರಗಳಲ್ಲಿ ಸುಧಾರಣೆ ಮಾಡುವುದು, ರಾಷ್ಟ್ರೀಯ ಆದಾಯದಲ್ಲಿ ಪ್ರತಿವರ್ಷ 5% ಹೆಚ್ಚಳ ಮಾಡುವುದು, ಅನ್ನಧಾನ್ಯದ ಉತ್ಪಾದನೆಯಲ್ಲಿ ಹೆಚ್ಚಳ ಮಾಡುವುದು ಇವು ಈ ಯೋಜನೆಯ ಉದ್ದೇಶಗಳಾಗಿದ್ದವು.

ಈ ಯೋಜನೆಯಲ್ಲಿ ಕೆಳಗಿನ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು.

* ಜವಾಹರ ರೋಜಗಾರು ಯೋಜನೆ * ಇಂದಿರಾ ಆವಾಸ ಯೋಜನೆ * ದಶಲಕ್ಷ ಬಾವಿಗಳ ಯೋಜನೆ

ರೋಜಗಾರು ನಿರ್ಮಿತಿಯ ದೃಷ್ಟಿಯಿಂದ ಏಳನೆಯ ಪಂಚವಾರ್ಷಿಕ ಯೋಜನೆಯು ಮಹತ್ವಪೂರ್ಣವೆನಿಸಿತು.

**ಎಂಟನೆಯ ಪಂಚವಾರ್ಷಿಕ ಯೋಜನೆ (1992-1997):** ಈ ಯೋಜನೆಯಲ್ಲಿ ಖಾಸಗಿ ಕ್ಷೇತ್ರಕ್ಕೆ ಅವಕಾಶ ನೀಡಲಾಯಿತು.

ರಾಷ್ಟ್ರೀಯ ಆದಾಯ ವೃದ್ಧಿಯ ದರವನ್ನು 6.5% ರಷ್ಟು ಇಡುವುದು, ಜನಸಂಖ್ಯೆ ಹೆಚ್ಚಳವನ್ನು ನಿಯಂತ್ರಿಸುವುದು, ಕುಟುಂಬಯೋಜನೆಯ ಕಾರ್ಯಕ್ರಮಕ್ಕೆ ಉತ್ತೇಜನೆ ನೀಡುವುದು, ಸಾರ್ವಜನಿಕವಾಗಿ ಪ್ರಾಥಮಿಕ ಶಿಕ್ಷಣದ ವಿಸ್ತಾರಮಾಡಿ ನಿರಕ್ಷರತೆಯ ಉಚ್ಚಾಟನೆ ಮಾಡುವುದು.

ಈ ಯೋಜನೆಯಲ್ಲಿ ಕೆಳಗಿನ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು.

* ಪ್ರಧಾನಮಂತ್ರಿ ರೋಜಗಾರು ಯೋಜನೆ * ಮಹಿಳಾ ಸಮೃದ್ಧಿ ಯೋಜನೆ * ರಾಷ್ಟ್ರೀಯ ಸಾಮಾಜಿಕ, ಆರ್ಥಿಕ ನೆರವು ಯೋಜನೆ * ಮಧ್ಯಾಹ್ನ ಆಹಾರ ಯೋಜನೆ * ಇಂದಿರಾ ಮಹಿಳಾ ಯೋಜನೆ * ಗಂಗಾ ಕಲ್ಯಾಣ ಯೋಜನೆ.

ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಖಾಸಗಿ ಕ್ಷೇತ್ರದ ಮಹತ್ವ ಹೆಚ್ಚಿತು. 1991ರಲ್ಲಿ ಸ್ವೀಕರಿಸಲಾದ ಉದಾರ ಮತ್ತು ಮುಕ್ತ ನೀತಿಯ ಪ್ರತಿಬಿಂಬವು ಈ ಯೋಜನೆಯಲ್ಲಿ ಕಾಣಿಸುತ್ತದೆ.

**ಒಂಬತ್ತನೆಯ ಪಂಚವಾರ್ಷಿಕ ಯೋಜನೆ 1997-2002) :** ಈ ಯೋಜನೆಯಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಮಹತ್ವ ನೀಡಲಾಯಿತು. ಆರ್ಥಿಕ ವಿಕಾಸದ ದರವನ್ನು ಹೆಚ್ಚಿಸುವುದು, ಮೂಲಭೂತ ಕ್ಷೇತ್ರದಲ್ಲಿ ಆರೋಗ್ಯಕರ ಸ್ಪರ್ಧೆಯನ್ನು ನಿರ್ಮಿಸುವುದು, ವಿದೇಶ ಧನವಿನಿಯೋಗಕ್ಕಾಗಿ ಔದ್ಯೋಗಿಕ ನೀತಿಗೆ ಹೊಸ ದಿಶೆಯನ್ನು ನೀಡುವುದು, ಇವು ಈ ಯೋಜನೆಯ ಉದ್ದೇಶಗಳಾಗಿದ್ದವು.

ಈ ಯೋಜನೆಯಲ್ಲಿ ಸ್ವರ್ಣಜಯಂತಿ, ನಗರ ರೋಜಗಾರು ಯೋಜನೆ, ಭಾಗ್ಯಶ್ರೀ ಮಕ್ಕಳ ಕಲ್ಯಾಣ ಯೋಜನೆ, ರಾಜರಾಜೇಶ್ವರಿ ಮಹಿಳಾ ಕಲ್ಯಾಣಯೋಜನೆ, ಸ್ವರ್ಣಜಯಂತಿ, ಗ್ರಾಮ ಸ್ವರೋಜಗಾರು ಯೋಜನೆ ಜವಾಹರ ಗ್ರಾಮ ಸಮೃದ್ಧಿಯೋಜನೆ, ಅಂತ್ಯೋದಯ ಅನ್ನ ಯೋಜನೆ, ಪ್ರಧಾನ ಮಂತ್ರಿ ಗ್ರಾಮಸಡಕ ಯೋಜನೆ ಇತ್ಯಾದಿ ಉಪಕ್ರಮಗಳನ್ನು ಆರಂಭಿಸಲಾಯಿತು.

ಈ ಯೋಜನೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಸಂಪರ್ಕ ವ್ಯವಸ್ಥೆ ಮತ್ತು ಸೇವಾ ಕ್ಷೇತ್ರಗಳ ಪ್ರಗತಿ ಸಾಧ್ಯವಾಯಿತು. ಕಟ್ಟಡ, ಸಂಪರ್ಕ ಕ್ಷೇತ್ರಗಳಲ್ಲಿ ಹೆಚ್ಚಳವಾಯಿತು.

## ಬ್ಯಾಂಕುಗಳ ರಾಷ್ಟ್ರೀಕರಣ

ಪ್ರಧಾನ ಮಂತ್ರಿಗಳಾದ ಪಂಡಿತ ನೆಹರೂ ಮತ್ತು ಲಾಲಬಹಾದ್ದೂರ ಶಾಸ್ತ್ರಿಯವರ ಕಾಲದಲ್ಲಿ ಭಾರತದಲ್ಲಿಯ ಬ್ಯಾಂಕಿಂಗ್ ಉದ್ಯೋಗವು ಖಾಸಗಿ ಕ್ಷೇತ್ರದ ಏಕಸ್ವಾಮ್ಯದ (ಗುತ್ತಿಗೆದಾರಿಯ) ಉದ್ಯೋಗವಾಗಿತ್ತು. ಈ ಬ್ಯಾಂಕುಗಳು ಉದ್ಯೋಗ ಸಮೂಹದ ಪ್ರತಿನಿಧಿತ್ವ ಮಾಡುತ್ತಿದ್ದವು. ಈ ಬ್ಯಾಂಕುಗಳ ಸಂಚಾಲಕ ಮಂಡಳಿಯು ಉದ್ಯೋಗಗಳ ವಿಕಾಸ ಮತ್ತು ಲಾಭವನ್ನು ಹೆಚ್ಚಿಸುವ ಸಲುವಾಗಿ ಕಾರ್ಯಮಗ್ನವಾಗಿತ್ತು. ಇದನ್ನು ಛೇದಿಸುವ ಸಲುವಾಗಿ ಸರಕಾರವು 1955ರಲ್ಲಿ 'ಇಂಪೀರಿಯಲ್ ಬ್ಯಾಂಕಿ'ನ ರಾಷ್ಟ್ರೀಕರಣ ಮಾಡಿತು - ಹಾಗೂ ಅದರ ರೂಪಾಂತರವು 'ಭಾರತೀಯ ಸ್ಟೇಟ ಬ್ಯಾಂಕ್'ನಲ್ಲಿ ಆಯಿತು. ಈ ಬ್ಯಾಂಕು ಅಲ್ಪಾವಧಿಯಲ್ಲಿ ದೇಶದ ತುಂಬೆಲ್ಲ ತನ್ನ ಶಾಖೆಗಳನ್ನು ತೆರೆದು ಸರಕಾರದ ವಿಕಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಲು ಆರಂಭಿಸಿತು.

**ರಾಷ್ಟ್ರೀಕರಣದ ಹಿನ್ನೆಲೆ :** ಭಾರತವು ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ಮಿಶ್ರ ಅರ್ಥವ್ಯವಸ್ಥೆಯನ್ನು ಸ್ವೀಕರಿಸಿತ್ತು.



**ಗೊತ್ತಿದೆಯೇ ನಿಮಗೆ?**

ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು 19 ಜುಲೈ 1969 ರಂದು 14 ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದರು. ಇವುಗಳಲ್ಲಿ ಅಲಹಾಬಾದ ಬ್ಯಾಂಕ, ಬ್ಯಾಂಕ್ ಆಫ್ ಬಡೋದಾ, ಬ್ಯಾಂಕ ಆಫ್ ಇಂಡಿಯಾ, ಬ್ಯಾಂಕ ಮಹಾರಾಷ್ಟ್ರ, ಕೆನರಾ ಬ್ಯಾಂಕ, ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ, ದೇನಾ ಬ್ಯಾಂಕ, ಇಂಡಿಯನ್ ಬ್ಯಾಂಕ, ಇಂಡಿಯನ್ ಓವ್ಹರಸೀಜ ಬ್ಯಾಂಕ, ಪಂಜಾಬ ನ್ಯಾಶನಲ್ ಬ್ಯಾಂಕ, ಸಿಂಡಿಕೇಟ ಬ್ಯಾಂಕ, ಯುನೈಟೆಡ್ ಬ್ಯಾಂಕ ಆಫ್ ಇಂಡಿಯಾ, ಯುನೈಟೆಡ್ ಕಾಮರ್ಸಿಯಲ್ ಬ್ಯಾಂಕ (ಯುಕೊ ಬ್ಯಾಂಕ), ಯುನಿಯನ್ ಬ್ಯಾಂಕ ಆಫ್ ಇಂಡಿಯಾ – ಈ 14 ಬ್ಯಾಂಕುಗಳ ಸಮಾವೇಶವಿತ್ತು. 1980ರಲ್ಲಿ ಇನ್ನೂ ಆರು ಬ್ಯಾಂಕುಗಳ ರಾಷ್ಟ್ರೀಕರಣ ಮಾಡಲಾಯಿತು.

ಯೋಜನೆಗಳನ್ನು ನಡೆಸುವಾಗ ಹಾನಿ ಉಂಟಾದರೆ ಅದನ್ನು ತುಂಬಿ ತೆಗೆಯುವ ಸಲುವಾಗಿ ಬ್ಯಾಂಕುಗಳ ರಾಷ್ಟ್ರೀಕರಣವಾಗುವುದು ಅವಶ್ಯಕವಾಗಿತ್ತು. ಬ್ಯಾಂಕುಗಳ ರಾಷ್ಟ್ರೀಕರಣವಾದಮೇಲೆ ಈ ಬ್ಯಾಂಕುಗಳಿಗೆ ದೊರೆಯುವ ಲಾಭವು ಸರಕಾರದ ಖಜಾನೆಯಲ್ಲಿ ಸಂಗ್ರಹವಾಗುವುದಿತ್ತು. ಇದರ ಜೊತೆ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ನೀತಿಯನ್ನು ಅನುಸರಿಸುವುದು ಅವಶ್ಯಕವಾಗಿತ್ತು. ಲಾಲ ಬಹಾದೂರ ಶಾಸ್ತ್ರಿಯವರು ಅನ್ನಧಾನ್ಯದ ಕೊರತೆ ಮತ್ತು ಬರಗಾಲವನ್ನು ಎದುರಿಸುವ ಸಲುವಾಗಿ ಹಸಿರು ಕ್ರಾಂತ್ರಿಯ ಪ್ರಯೋಗವನ್ನು ಕೈಗೆತ್ತಿಕೊಂಡಿದ್ದರು. ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರ ಆಡಳಿತದ ಕಾಲದಲ್ಲಿ ಕಾಂಗ್ರೆಸ ಪಕ್ಷದಲ್ಲಿಯ ಸಮಾಜವಾದಿ ವಿಚಾರಗಳಿಂದ ಪ್ರೇರಿತವಾದ 'ಕಾಂಗ್ರೆಸ ಫೋರಮ್ ಫಾರ ಸೊಶಾಲಿಸ್ಟ ಆ್ಯಕ್ಶನ್' ಎಂಬ ಗುಂಪು ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಬೇಕು ಎಂಬ ಬೇಡಿಕೆಮಾಡಿತು ಈ ಬೇಡಿಕೆಗೆ ಕಮ್ಯುನಿಸ್ಟ ಪಕ್ಷದ ಬೆಂಬಲವಿತ್ತು.

**ಇಪ್ಪತ್ತು ಅಂಶಗಳ ಕಾರ್ಯಕ್ರಮ:** 1 ಜುಲೈ 1975ರಂದು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಘೋಷಿಸಿ ವಿಕಸಿತ ರಾಷ್ಟ್ರದ ದಿಕ್ಕಿನಲ್ಲಿ ವೇಗದಿಂದ ಮುನ್ನಡೆಯುವ ಪ್ರಯತ್ನಗಳ ಸಂಕಲ್ಪ ಮಾಡಿದರು. ಅದರಲ್ಲಿಯ ಪ್ರಮುಖ ಅಂಶಗಳು ಕೆಳಗಿನಂತಿದ್ದವು.

(1) ಕೃಷಿ ಮತ್ತು ಪಟ್ಟಣಗಳಲ್ಲಿಯ ಗರಿಷ್ಠಭೂ ಸಂಪಾದನೆ, ಸಂಪತ್ತಿನ ಸಮಾನ ಹಂಚಿಕೆ, ಕೃಷಿ ಕಾರ್ಮಿಕರಿಗೆ ಕನಿಷ್ಟ ವೇತನ, ಜಲ ಸಂರಕ್ಷಣೆಯ ಯೋಜನೆಗಳಲ್ಲಿ ಹೆಚ್ಚಳ ಮಾಡುವುದು.

(2) ಉದ್ಯೋಗ ಕ್ಷೇತ್ರದ ಕಾರ್ಮಿಕರ ಸಹಭಾಗಿತ್ವ, ರಾಷ್ಟ್ರೀಯ ತರಬೇತಿ ಯೋಜನೆ ಮತ್ತು ಜೀತದಾಳುಗಳನ್ನು ಮುಕ್ತಗೊಳಿಸುವುದು.

(3) ತೆರಿಗೆಯನ್ನು ಮುಳುಗಿಸುವುದು, ಆರ್ಥಿಕ ಅಪರಾಧ ಮತ್ತು ಕಳ್ಳಸಾಗಾಣಿಕೆಗಳನ್ನು ತಡೆಗಟ್ಟುವುದು.

(4) ಜೀವನಾವಶ್ಯಕ ವಸ್ತುಗಳ ಬೆಲೆಗಳ ನಿಯಂತ್ರಣ, ನ್ಯಾಯ ಬೆಲೆ ಅಂಗಡಿ ವ್ಯವಸ್ಥೆಯಲ್ಲಿ ಸುಧಾರಣೆ ಮಾಡುವುದು.

(5) ಕೈಮಗ್ಗ ಕ್ಷೇತ್ರದ ವಿಕಾಸದ ಮೂಲಕ ಉತ್ತಮ ವಸ್ತ್ರೋದ್ಯೋಗ ನಿರ್ಮಿತಿ, ದುರ್ಬಲ ಘಟಕಗಳ ಸಾಲವನ್ನು ಮನ್ನಾ ಮಾಡುವುದು, ಮನೆ ಕಟ್ಟುವಿಕೆ, ಸಂಪರ್ಕದ ಸೌಲಭ್ಯಗಳು, ಶಾಲೆಗಳಿಗಾಗಿ ಶೈಕ್ಷಣಿಕ ಸಲಕರಣೆಗಳನ್ನು ಲಭ್ಯಮಾಡಿಕೊಡುವುದು.

**ಕಾರ್ಮಿಕರ ಸಮಸ್ಯೆ:** 1854 ರಲ್ಲಿ ಕಾವಸಜಿ ದಾವರ ಇವರು ಮುಂಬಯಿಯಲ್ಲಿ ಮೊದಲನೆಯ ಬಟ್ಟೆಯ



ಬಟ್ಟೆಯ ಗಿರಣಿ

ಗಿರಣಿಯನ್ನು ಆರಂಭಿಸಿದರು. ನಂತರ ದಾದರ, ಪರಳ, ಭಾಯ್‌ಖಳಾ, ಶಿವಡಿ, ಪ್ರಭಾದೇವಿ ಮತ್ತು ವರಳಿಗಳಲ್ಲಿ ಬಟ್ಟೆಯ ಗಿರಣಿಗಳು ಆರಂಭವಾದವು. ಈ ಭಾಗವು ಗಿರಣಗಾವ (ಗಿರಣಿಗಳ ಊರು) ಎಂದು ಗುರುತಿಸಲ್ಪಡತೊಡಗಿತು.

**ಗೊತ್ತಿದೆಯೇ ನಿಮಗೆ?**

ಮಹಾತ್ಮಾ ಜ್ಯೋತಿರಾವ ಫುಲೆಯವರ ಸಹಕಾರಿಯಾದ ನಾರಾಯಣ ಮೇಘಾಜಿ ಲೋಖಂಡೆ ಇವರ ಪ್ರಯತ್ನಗಳಿಂದಾಗಿ 1 ಜನೆವರಿ 1882 ರಿಂದ ಗಿರಣಿ ಕಾರ್ಮಿಕರಿಗೆ ವಾರದಲ್ಲಿ ಒಂದು ದಿನ ಅಂದರೆ 'ರವಿ-ವಾರ' ರಜೆ (ಸೂಟಿ) ನೀಡಬೇಕೆಂಬ ನಿರ್ಣಯವಾಯಿತು.

80ನೆಯ ದಶಕದಲ್ಲಿ ಕಾರ್ಮಿಕರಲ್ಲಿ ಅಸಂತೋಷ ನಿರ್ಮಾಣವಾಗಲು ಅನ್ಯ ಕ್ಷೇತ್ರದಲ್ಲಿಯ ಆರ್ಥಿಕ ಪರಿಸ್ಥಿತಿ ಕಾರಣೀಭೂತವಾಗಿತ್ತು. ಕೆಲವು ಉದ್ಯಮಗಳಲ್ಲಿ ಕಾರ್ಮಿಕರ ವೇತನವು ಹೆಚ್ಚುತ್ತಿತ್ತು. ಅವರಿಗೆ ಹೆಚ್ಚು ಬೋನಸ್ ಹಣ ದೊರೆಯುತಿತ್ತು. ಗಿರಣಿ ಕಾರ್ಮಿಕರಿಗಿಂತ ಅವರಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುತ್ತಿದ್ದವು.

1981ರ ದೀಪಾವಳಿಯಲ್ಲಿ ಕಾರ್ಮಿಕರಿಗೆ 20% ಬೋನಸ್ಸಿನ ನಿರೀಕ್ಷೆ ಇತ್ತು. ಕಾರ್ಮಿಕರ ಪ್ರತಿನಿಧಿತ್ವವನ್ನು ಮಾಡುವ ರಾಷ್ಟ್ರೀಯ ಮಿಲ್ ಮಜದೂರ ಸಂಘವು ಕಾರ್ಮಿಕರನ್ನು ಕೇಳದೆಯೇ ಮಾಲೀಕವರ್ಗದೊಡನೆ ಮಾತುಕತೆ ಮಾಡಿ 8 ರಿಂದ 17% ಬೋನಸ್ ನೀಡುವಂತೆ ಒಪ್ಪಂದ ಮಾಡಿಕೊಂಡಿತು. ಬೋನಸ್‌ದಲ್ಲಿಯ ಕಡಿತವು ಅಸಂತೋಷದಕಿಡಿಯಾಯಿತು. ಕೆಲವು ಕಾರ್ಮಿಕರು ಡಾ. ದತ್ತಾ ಸಾಮಂತ ಇವರ ಕಡೆಗೆ ಹೋದರು. ನೇತೃತ್ವವನ್ನು ಸ್ವೀಕರಿಸುವಂತೆ ಅವರು ಡಾ. ದತ್ತಾ ಸಾಮಂತ ಇವರನ್ನು ವಿನಂತಿಸಿಕೊಂಡರು. 65 ಗಿರಣಿಗಳಲ್ಲಿಯ ಕಾರ್ಮಿಕರು

**ಗೊತ್ತಿದೆಯೇ ನಿಮಗೆ?**

ಸಾಂಸ್ಕೃತಿಕ ದೃಷ್ಟಿಯಲ್ಲಿಯೂ ಜಾನಪದ ನಾಟ್ಯ, ಜನಪದ ಕಲೆ, ಸಾಹಿತ್ಯ ಈ ಕ್ಷೇತಗಳಲ್ಲಿ ಕಾರ್ಮಿಕ ವರ್ಗವು ಅಮೂಲ್ಯವಾದ ಕೊಡುಗೆಯನ್ನು ನೀಡಿದೆ. ಅಣ್ಣಾಭಾವೂ ಸಾಠೆ, ಶಾಹೀರ ಅಮರ ಶೇಖ, ಶಾಹೀರ ಸಾಬಳೆ ಮುಂತಾದ ಅನೇಕ ಲೋಕಶಾಹೀರರು ಬೋಧಪ್ರದ ಕಾರ್ಯಕ್ರಮಗಳಿಂದಾಗಿ ಜನಪ್ರಿಯರಾಗಿದ್ದರು. ನಾರಾಯಣ ಸುರ್ವೆ, ನಾಮದೇವ ಢಸಾಳ ಇತ್ಯಾದಿ ಕವಿಗಳು ತಮ್ಮ ಕವಿತೆಗಳ ಮೂಲಕ ಶ್ರಮಿಕರ ವಾಸ್ತವ ದರ್ಶನವನ್ನು ಮೂಡಿಸಿದ್ದರು.

ಒಂದಾದರು ದತ್ತಾ. ಸಾಮಂತರು ಮುಷ್ಕರದ ನೇತೃತ್ವವಹಿಸತೊಡಗಿದರು. 18 ಜನೆವರಿ 1982ರಂದು ಮುಂಬಯಿಯಲ್ಲಿ ಎರಡೂವರೆ ಲಕ್ಷ ಕಾರ್ಮಿಕರು ಮುಷ್ಕರವನ್ನು ಆರಂಭಿಸಿದರು. ಗಿರಣಗಾವ (ಗಿರಣಿಗಳ ಊರಿನ)ದ ಅಂದರೆ ಮುಂಬಯಿಯ ಹೃದಯವೇ ನಿಂತು ಹೋಯಿತು.

ಮುಖ್ಯಮಂತ್ರಿ ಬ್ಯಾ.ಅ.ರಾ. ಅಂತುಲೆಯವರು ಈ ಸಮಸ್ಯೆಯನ್ನು ಬಗೆ ಹರಿಸುವಸಲುವಾಗಿ ತ್ರಿಪಕ್ಷೀಯ ಸಮಿತಿಯನ್ನು ನೇಮಿಸಿದರು. ನಂತರ ಬಾಬಾಸಾಹೇಬ ಭೋಸಲೆಯವರು ಮುಖ್ಯಮಂತ್ರಿಯಾದರು. ಕಾನೂನಿಗನುಸಾರ ಸರಕಾರವು ರಾಷ್ಟ್ರೀಯ ಮಿಲ್ ಮಜದೂರ ಸಂಘದೊಂದಿಗೆ ಮಾತಾಡುವ ಪಾತ್ರ ತಾಳಿದರು ಡಾ. ದತ್ತಾ ಸಾಮಂತ ಇವರು ಈ ಕಾನೂನನ್ನು ರದ್ದು ಪಡಿಸುವ ಬೇಡಿಕೆ ಮಾಡಿದರು.

ಮುಷ್ಕರದ ಆರಂಭದ ಕಾಲದಲ್ಲಿ ಕಾರ್ಮಿಕರಿಗೆ ಊರಿನ ಕಡೆಯಿಂದ ನೆರವು ದೊರೆಯತೊಡಗಿತು. ಆರಂಭದಲ್ಲಿ ಪರಸ್ಪರರಿಗೆ ಸಹಾಯ ಮಾಡಲು ಕಾರ್ಮಿಕರಿಗೆ ಕಠಿಣವೆನಿಸಲಿಲ್ಲ. ವಿಭಾಗೀಯ ಸಮಿತಿಗಳನ್ನು ಸ್ಥಾಪಿಸಿ ಅವರು ಅನ್ನಧಾನ್ಯ, ಸಹಾಯಧನ ಗಳನ್ನು ಹಂಚಿಸಿದರು. ಎಡಪಕ್ಷಗಳು ಮುಷ್ಕರಕ್ಕೆ ಬೆಂಬಲ ನೀಡಿದ್ದವು. ಮುಷ್ಕರವು ಮುಂದುವರಿಯುತ್ತಿದ್ದಂತೆ ಕಾರ್ಮಿಕರಲ್ಲಿ ಒಡಕು ಹುಟ್ಟಿಸುವ ಪ್ರಯತ್ನಗಳು ಆರಂಭವಾದವು ಮುಷ್ಕರಕ್ಕೆ ಆರು ತಿಂಗಳು ಪೂರ್ಣವಾಯಿತು. ಕೇಂದ್ರ ಸರಕಾರವು ಮುಷ್ಕರದ ಕಡೆಗೆ ಪೂರ್ಣ ದುರ್ಲಕ್ಷ ಮಾಡಿತು. ಕಾರ್ಮಿಕರು 'ಜೋಲಭರೊ' ಆಂದೋಲನ'ವನ್ನು ಆರಂಭಿಸಿದರು. ಸಪ್ಟಂಬರ 1982ರಲ್ಲಿ ಮಹಾರಾಷ್ಟ್ರ ವಿಧಾನ ಸಭೆಯ ಮೇಲೆ ಒಂದೂಚೆರೆ ಲಕ್ಷ ಕಾರ್ಮಿಕರು ನಿದರ್ಶನ ಮಾಡಿದರು. ಆದರ ಉಪಯೋಗವಾಗಲಿಲ್ಲ, ಮುಷ್ಕರಕ್ಕೆ ಒಂದು ವರ್ಷ ಪೂರ್ಣವಾಯಿತು.

ಇಷ್ಟು ದೀರ್ಘ ಕಾಲಾವಧಿಯವರೆಗೆ ನಡೆದ ಮೊದಲನೆಯ ಮುಷ್ಕರ ಇದಾಗಿತ್ತು. ಈ ಕಾಲಾವಧಿಯಲ್ಲಿ ಸುಮಾರು ಒಂದೂವರೆ ಲಕ್ಷ ಕಾರ್ಮಿಕರು ನಿರುದ್ಯೋಗಿಗಳಾದರು.

ನೂಲಿನ ಬಟ್ಟೆಗಿಂತ ಪಾಲಿಸ್ಟರಗೆ ಮಹತ್ವ ಪ್ರಾಪ್ತವಾದುದರಿಂದ ಗಿರಣಿಯಲ್ಲಿಯ ನೂಲಿನ ಬಟ್ಟೆಯ ಮಾರಾಟದ ಮೇಲೆ ಪರಿಣಾಮವಾಯಿತು. ಮುಂಬಯಿಯಿಂದ ಬಟ್ಟೆಯ ಗಿರಣಿಗಳು ಸುರತ ಮತ್ತು ಗುಜರಾತಿಗೆ ಹೋದವು. ಕೇಂದ್ರ ಸರಕಾರವು 13 ಗಿರಣಿಗಳ ರಾಷ್ಟ್ರೀಕರಣ ಮಾಡಿತು. ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಮಧ್ಯಸ್ಥರನ್ನು ನೇಮಿಸಲಾಯಿತು. ಆದರೆ ಆ ಪ್ರಯತ್ನ ಯಶಸ್ವಿಯಾಗಲಿಲ್ಲ.

**ಹೊಸ ಆರ್ಥಿಕ ನೀತಿ:** ಆಧುನಿಕ ಭಾರತದ ಇತಿಹಾಸದಲ್ಲಿ 1991ನೇ ವರ್ಷವು ಮಹತ್ವದ್ದಾಗಿದೆ. ಹತ್ತನೆಯ ಲೋಕಸಭೆಯ ಚುನಾವಣೆಗಳನಂತರ ಕೇಂದ್ರದಲ್ಲಿ ಪಿ.ವ್ಹಿ ನರಸಿಂಹ ರಾವ ಪ್ರಧಾನಮಂತ್ರಿಯಾದರು. ಅವರು ಅರ್ಥಮಂತ್ರಿ ಡಾ. ಮನಮೋಹನಸಿಂಗ ಇವರ ಸಹಕಾರದಿಂದ ಭಾರತದ ಅರ್ಥ ವ್ಯವಸ್ಥೆಯನ್ನು ಜಾಗತಿಕ ಅರ್ಥ ವ್ಯವಸ್ಥೆಯ ಜೊತೆ ಜೋಡಿಸುವ ಸಲುವಾಗಿ ಹೊಸ ಆರ್ಥಿಕ ನೀತಿಯನ್ನು ಸ್ವೀಕರಿಸಿದರು. ಆದರ ಸಲುವಾಗಿ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಮೂಲಭೂತ ಸ್ವರೂಪದ ಬದಲಾವಣೆಯನ್ನು ಮಾಡಿದರು. ಭಾರತೀಯ ಅರ್ಥ ವ್ಯವಸ್ಥೆಯನ್ನು ಜಾಗತಿಕ ಪ್ರವಾಹದಲ್ಲಿ ತಂದರು.



ಪಿ.ವ್ಹಿ ನರಸಿಂಹರಾವ

ಈ ಕಾಲದಲ್ಲಿ ಭಾರತದ ಆರ್ಥಿಕ ಸ್ಥಿತಿಯು ತುಂಬಾ ಹದಗೆಟ್ಟಿತ್ತು. ಪಿ.ವ್ಹಿ ನರಸಿಂಹರಾವರ ಮೊದಲು ಚಂದ್ರಶೇಖರ ಇವರ ಸರಕಾರವಿತ್ತು. ಈ ಸರಕಾರದ ಕಾಲದಲ್ಲಿ ಹಣದ ಚಲಾವಣೆಯ ಉಬ್ಬರದ ದರವು ಪ್ರತಿಶತ 17 ಇತ್ತು ಆರ್ಥಿಕ ಅಭಿವೃದ್ಧಿ ದರವು ಪ್ರತಿಶತ 1.1 ರಷ್ಟು ಕಡಿಮೆ ಯಾಗಿತ್ತು. ಆಯಾತಕ್ಕಾಗಿ ಒಂದು ವಾರದ ವರೆಗೆ ಸಾಲುವಷ್ಟು ಪರಕೀಯ ಚಲಾವಣೆಯ ಹಣ ಭಾರತದ ಕಡೆಗೆ ಇತ್ತು. ವಿದೇಶಿ ಸಾಲವನ್ನು ತೀರಿಸುವುದು ಮತ್ತು ಅದರ ಮೇಲಿನ ಬಡ್ಡಿಯನ್ನು ಕೊಡುವುದು ಕಠಿಣವಾಗಿತ್ತು. ಮೇ 1991ರಲ್ಲಿ ಚಂದ್ರಶೇಖರ ಇವರ ಕಾಲದಲ್ಲಿ ಸರಕಾರವು ಸ್ವಲ್ಪ ಬಂಗಾರವನ್ನು ಮಾರಿ ಹಾಗೂ ಸ್ವಲ್ಪ ಅಡವು ಇರಿಸಿ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ತರುವ ಪ್ರಯತ್ನ ಮಾಡಿತ್ತು. ಚಂದ್ರಶೇಖರರಿಗಿಂತ ಮೊದಲು ವಿಶ್ವನಾಥ ಪ್ರತಾಪಸಿಂಗ ಇವರ ಸರಕಾರವು ಎಲ್ಲಾ ರೈತರ ಸಾಲವನ್ನು ಮಾನ್ನಾಮಾಡಿ.

ಹತ್ತುಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಭಾರವನ್ನು ಅರ್ಥವ್ಯವಸ್ಥೆಯ ಮೇಲೆ ಹೇರಿದ್ದರು. ಭಾರತದ ಸ್ಥೂಲ ರಾಷ್ಟ್ರೀಯ ಆದಾಯದ ಜೊತೆ ಇರುವ ಕೇಂದ್ರ ಮತ್ತು ರಾಜ್ಯಸರಕಾರಗಳ ಏಕತ್ರಿತ ಅಂತರ್ಗತ ಸಾಲದ ಪ್ರಮಾಣವು ಸುಮಾರು ಪ್ರತಿಶತ 55ರಷ್ಟು ಆಯಿತು. 1980-81ರಲ್ಲಿ ವಿದೇಶಿ ಸಾಲವು 2350 ಕೋಟಿ ಡಾಲರ ಇತ್ತು. ಅದು 1990-91 ರಲ್ಲಿ 8380 ಕೋಟಿ ಡಾಲರ ವರೆಗೆ ಹೆಚ್ಚಿತು. ಈ ಸಮಯದಲ್ಲಿ ಭಾರತದ ಪರಕೀಯ ಚಲಾವಣೆಯ ಸಂಗ್ರಹವು ಕೇವಲ 100 ಕೋಟಿ ಡಾಲರ ಇತ್ತು. ಇರಾಕ ದೇಶವು ಕುವೇತಮೇಲೆ ಆಕ್ರಮಣ ಮಾಡಿದ್ದರಿಂದ ಎಣ್ಣೆಯ ಬೆಲೆ ಹೆಚ್ಚಿದುದರ ಹಿನ್ನೆಲೆ ಇದ್ದಕ್ಕಿತ್ತು. ವಿದೇಶಿ ಸಾಲವನ್ನು ಪಡೆಯುವುದು ಭಾರತಕ್ಕೆ ಅಸಾಧ್ಯವಾಯಿತು ಅನಿವಾಸಿ ಭಾರತೀಯರು ತಮ್ಮ ಪರಕೀಯ ಚಲಾವಣೆಯಲ್ಲಿಯ ಠೇವುಗಳನ್ನು ಹಿಂತೆಗೆದಕೊಳ್ಳಲು ಆರಂಭಿಸಿದರು.

**ಉಪಾಯಯೋಜನೆಗಳು:** ಈ ಪರಿಸ್ಥಿತಿಯೊಳಗಿಂದ ಮಾರ್ಗವನ್ನು ಶೋಧಿಸುವ ಸಲುವಾಗಿ ಪಿ.ವ್ಹಿ ನರಸಿಂಹರಾವ ಇವರು ಡಾ. ಮನಮೋಹನಸಿಂಗ ಇವರನ್ನು ಅರ್ಥ ಮಂತ್ರಿಯನ್ನಾಗಿ ನೇಮಿಸಿದರು. ಡಾ. ಮನ ಮೋಹನಸಿಂಗ ಇವರು ದೋಷತಿದ್ದುಪಡಿ ಉಪಯ ಯೋಜನೆ (ಕರೆಕ್ಟಿವ್ಹ ಮೇಜರ್ಸ) ಮಾಡಿದರು. ಪರಿಸ್ಥಿತಿ ಬದಲಾಗತೊಡಗಿತು.



ಡಾ. ಮನಮೋಹನ ಸಿಂಗ

ಅವರು ಪರಕೀಯ ವಿನಿಯೋಗದ ಮೇಲಿನ ನಿರ್ಬಂಧಗಳನ್ನು ತಗೆದರು. ಉದ್ದಿಮೆ ಕ್ಷೇತ್ರದಲ್ಲಿಯ ಪರವಾನಿಗೆಯ ಪದ್ಧತಿಯನ್ನು 18 ಉದ್ದಿಮೆಗಳಿಗಾಗಿ ಸೀಮಿತಗೊಳಿಸಿದರು. ಸಾರ್ವಜನಿಕ ಉದ್ಯಮಗಳಲ್ಲಿಯ ಹೆಚ್ಚುತ್ತಿರುವ ಹಾನಿ ಮತ್ತು ಕಾರ್ಯಕ್ಷಮತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಾರ್ವಜನಿಕ ಕ್ಷೇತ್ರಗಳನ್ನು ಖಾಸಗಿ ಉದ್ಯಮಗಳಿಗಾಗಿ ಮುಕ್ತ ಮಾಡಿದರು. ಷೇರು ಪೇಟೆಯ ಮೇಲೆ ನಿಯಂತ್ರಣವನ್ನು ತರುವ ಸಲುವಾಗಿ 1988ರಲ್ಲಿ ಸೇಬಿಯ (ಸೆಕ್ಯೂರಿಟೀಜ ಆ್ಯಂಡ್ ಎಕ್ಸ್ಚೇಂಜ್ ಬೋರ್ಡ ಆಫ್ ಇಂಡಿಯಾ) ಸ್ಥಾಪನೆ ಮಾಡಿದರು, ನ್ಯಾಶನಲ್ ಸ್ಟಾಕ್ ಎಕ್ಸ್ಚೆಂಜಿನ ಗಣಿಕೀಕರಣ (computerization) ಮಾಡಲಾಯಿತು. ಆರ್ಥಿಕ ಹಿನ್ನೆಡೆಯ ಛಾಯೆಯನ್ನು ದೂರಮಾಡುವುದಕ್ಕೆ ಪ್ರಾಧಾನ್ಯ ನೀಡಿದರು.

ಡಾ. ಮನಮೋಹನ ಪ್ರಥಮ ಅರ್ಥಮಂತ್ರಿ ಸ್ಥಾನದ ಆಡಳಿತ ಕಾಲದಲ್ಲಿ ಪರಕೀಯ ವಿನಿಯೋಗ ಹೆಚ್ಚಿತು. ಭಾರತವು ಬ್ಯಾಂಕ ಆಫ್ ಇಂಗ್ಲಂಡನಲ್ಲಿ ಅಡವು ಇರಿಸಿದ ಬಂಗಾರವನ್ನು ಮರಳಿ ಭಾರತಕ್ಕೆ ತಂದರು. ದೇಶದಲ್ಲಿಯ ಬಂಡವಾಳದಾರರ ವರ್ಗ ಮತ್ತು ಮಧ್ಯಮ ವರ್ಗದ ಬೆಂಬಲವು ಸರಕಾರಕ್ಕೆ ದೊರಕಿತು. ಸರಕಾರವು ದೂರ ಸಂಚಾರ ಕ್ಷೇತ್ರ ಮುಕ್ತಗೊಸಿದ್ದರಿಂದಾಗಿ ಮೊಬೈಲ ಫೋನ ಸೇವೆಯು ದೇಶದ ತುಂಬೆಲ್ಲ ಆರಂಭವಾಯಿತು. ಡಾ. ಮನಮೋಹನ ಸಿಂಗರು ಜಾಗತಿಕ ವ್ಯಾಪಾರ ಸಂಘಟನೆಯ ಒಪ್ಪಂದದ ಮೇಲೆ ಸಹಿ ಮಾಡಿ ಖಾಸಗೀಕರಣ, ಉದಾರೀರಕಣ, ಜಾಗತೀಕರಣಗಳು ಆರಂಭವಾದವು.

**ವರ್ಲ್ಡ್ ಟ್ರೇಡ ಆರ್ಗನೈಝೇಶನ್ (ಜಾಗತಿಕ ವ್ಯಾಪಾರ ಸಂಘಟನೆ):** ಭಾರತವು 1995ರಲ್ಲಿ 'ವರ್ಲ್ಡ್ ಟ್ರೆಡ್ ಆಗರನೈಝೇಶನ್ (WTO) ದ ಸದಸ್ಯತ್ವವನ್ನು ಸ್ವೀಕರಿಸಿತು. ಈ ಸಂಘಟನೆಯ ಉದ್ದೇಶವು ಕೆಳಗಿನಂತೆ ಇತ್ತು.

ದೇಶ-ದೇಶಗಳ ನಡುವಣ ವಾಪಾರವನ್ನು ಮುಕ್ತಗೊಳಿಸುವುದು, ಅಂತರರಾಷ್ಟ್ರೀಯ ಮುಕ್ತ ವ್ಯಾಪಾರಕ್ಕೆ ಅಡೆತಡೆಯನ್ನು ತರುವ ಮತ್ತು ಭೇದಭಾವವನ್ನು ಮಾಡುವ ಕಾನೂನು, ನಿರ್ಬಂಧ, ನಿಯಮ ಮತ್ತು ನೀತಿಗಳನ್ನು ಮುಕ್ತಾಯಗೊಳಿಸುವುದು ಹಾಗೂ ಬಹುಪಕ್ಷಗಳ ವ್ಯವಸ್ಥೆಯ ಮೂಲಕ ಇಡೀ ಜಗತ್ತಿನ ವ್ಯಾಪಾರದ ನಿಯಂತ್ರಣೆ ಮಾಡುವುದು.

WTO ಅಸ್ತಿತ್ವದಲ್ಲಿ ಬರುವ ಮೊದಲು 'ಗ್ಯಾಟ' ಆಸ್ತಿತ್ವದಲ್ಲಿತ್ತು 'ಜನರಲ್ ಆ್ಯಗ್ರಿಮೆಂಟ ಆನ ಟರಿಫ್ಸ ಆ್ಯಂಡ್ ಟ್ರೇಡ' ಈ ಸಂಘಟನೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಮಾಡುತ್ತಿತ್ತು. ಅದು ವ್ಯಾಪಾರದ ನಿಯಂತ್ರಣೆ ಮಾಡುತ್ತಿತ್ತು. ಭಾರತದಲ್ಲಿ WTO ಸಂದರ್ಭದಲ್ಲಿ ಪರಸ್ಪರವಿರುದ್ಧ ಅಭಿಪ್ರಾಯಗಳಿದ್ದವು. ಹೀಗಿದ್ದರೂ ಕೂಡ WTOದ ಸದಸ್ಯತ್ವವನ್ನು ಸ್ವೀಕರಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. 'ಜಾಗತಿಕ ವ್ಯಾಪಾರ ಸಂಘಟನೆಯ ಏರ್ಪಾಟುಗಳು, ಅನುದಾನ, ಆಯಾತ-ನಿರ್ಯಾತ, ಪರಕೀಯ ವಿನಿಯೋಗ ಸಂರಕ್ಷಿತ ಕ್ಷೇತ್ರಗಳು, ಕೃಷಿ, ತಂತ್ರಜ್ಞಾನ ಮತ್ತು ಸೇವೆಗಳಿಗೆ ಸಂಬಂಧಿತವಾಗಿವೆ. ಭಾರತವು ಸದಸ್ಯವಾಗಿದಾಗಿನಿಂದ ವಿದ್ಯುಚ್ಛಕ್ತಿ, ನೀರು, ಸಾರಿಗೆ, ಶಿಕ್ಷಣ ಮತ್ತು ಆರೋಗ್ಯ ಈ ಕ್ಷೇತ್ರಗಳ ವ್ಯಾಪಾರೀಕರಣವು ತ್ವರಿತಗತಿಯಿಂದ ಆಯಿತು. 'ಜಾಗತಿಕ ವ್ಯಾಪಾರ ಸಂಘಟನೆ'ಯ ವಿವಿಧ ವರದಿಗಳಿಗನುಸಾರ ದಾರಿದ್ರ್ಯರೇಷೆಯ ಕೆಳಗಿನ ಜನಸಂಖ್ಯೆಯಲ್ಲಿ ಇಳಿಕೆ, ಬಾಲಮೃತ್ಯುವಿನ ಪ್ರಮಾಣದಲ್ಲಿ ಇಳಿಕೆ, ಕುಡಿಯುವ ನೀರು, ಕೊಳಚೆನೀರು ಮುಂತಾದ ವಿಷಯಗಳಲ್ಲಿಯ ಸೌಲಭ್ಯಗಳ ಲಭ್ಯತೆ - ಇವುಗಳಲ್ಲಿ ಭಾರತವು ಸುಧಾರಣೆಗಳನ್ನು ಮಾಡಿದೆ.

'ಜಾಗತಿಕ ವ್ಯಾಪಾರ ಸಂಘಟನೆ'ಯ ಮಾರ್ಗದಲ್ಲಿ ಭಾರತವು ನಂತರ 'ದಕ್ಷಿಣ ಏಷ್ಯ ಪ್ರಧಾನ್ಯ ವ್ಯಾಪಾರ ಒಪ್ಪಂದ' (ಸೌಥ ಏಷ್ಯ ಪ್ರೆಫರೆನ್ಶಿಯಲ್ ಟ್ರೇಡ ಆ್ಯಗ್ರಿಮೆಂಟ್ SAPTA) ಮಾಡಿಕೊಂಡಿತು. ಭಾರತವು ಸಾರ್ಕ ದೇಶಗಳಿಗಾಗಿ ವಿವಿಧ ವಸ್ತುಗಳ ಆಯಾತದ ಮೇಲಿನ ನಿರ್ಬಂಧಗಳನ್ನು ತಗೆಯಿತು. ಆಯಾತ ಶುಲ್ಕದಲ್ಲಿ ಸವಲತ್ತುಗಳನ್ನು ನೀಡತು ಭಾರತೀಯ

ವಿಮಾ ಕ್ಷೇತ್ರವನ್ನು ಖಾಸಗಿ ಮತ್ತು ಪರಕೀಯ ವಿನಿಯೋಗಕ್ಕಾಗಿ ಮುಕ್ತ ಗೊಳಿಸಲಾಯಿತು.

ಈ ರೀತಿ ನಾವು ಸ್ವಾತಂತ್ರ್ಯೋತ್ತರ ಭಾರತದ ಆರ್ಥಿಕ ಮುನ್ನಡೆಯನ್ನು ಅಭ್ಯಸಿಸಿದೆವು ಮಿಶ್ರ ಅರ್ಥವ್ಯವಸ್ಥೆಯಿಂದ ಜಾಗತಿಕರಣದವರೆಗಿನ ಪ್ರವಾಸವನ್ನು ನಾವು ಮಾಡಿದೆವು. ಮುಂದಿನ ಪಾಠದಲ್ಲಿ ಅನ್ಯಕ್ಷೇತ್ರಗಳಲ್ಲಿಯ ಭಾರತದ ಪ್ರಗತಿಯನ್ನು ನೋಡುವವರಿದ್ದೇವೆ.



## ಸ್ವಾಧ್ಯಾಯ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಿಧಾನಗಳನ್ನು ಪೂರ್ಣಮಾಡಿರಿ.**

(1) 19 ಜುಲೈ 1969ರಲ್ಲಿ ದೇಶದಲ್ಲಿಯ ಪ್ರಮುಖ ...... ಬ್ಯಾಂಕುಗಳ ರಾಷ್ಟ್ರೀಕರಣ ಮಾಡಲಾಯಿತು.
(ಅ) 12 (ಬ) 14 (ಕ) 16 (ಡ) 18

(2) ............ ಇವರು ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಘೋಷಿಸಿದರು.
(ಅ) ಪಂ. ನೆಹರು
(ಬ) ಲಾಲಾ ಬಹಾದ್ದೂರ ಶಾಸ್ತ್ರಿ
(ಕ) ಶ್ರೀಮತಿ ಇಂದಿರಾ ಗಾಂಧಿ
(ಡ) ಪಿ.ವ್ಹಿ ನರಸಿಂಹರಾವ

**(ಬ) ಕೆಳಗಿನವುಗಳಲ್ಲಿಯ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಕಾವಸಜಿ ದಾವರ– ಉಕ್ಕಿನ ಕಾರ್ಖಾನೆ
(2) ಡಾ. ದತ್ತಾ ಸಾಮಂತ – ಗಿರಣಿ ಕಾರ್ಮಿಕರ ನೇತೃತ್ವ
(3) ನಾ. ಮೆ. ಲೋಖಂಡೆ – ಗಿರಣಿ ಕಾರ್ಮಿಕರಿಗೆ ರಜೆ
(4) ನಾರಾಯಣ ಸುರ್ವೆ – ಕವಿತೆಗಳ ಮುಖಾಂತರ ಶ್ರಮಿಕ ಜೀವನದ ದರ್ಶನ

**2. (ಅ) ಕೊಟ್ಟ ಸೂಚನೆಯಂತೆ ಮುಂದಿನ ಕೃತಿ ಮಾಡಿರಿ ಕೋಷ್ಟಕವನ್ನು ಪೂರ್ಣಮಾಡಿರಿ**

| ಪಂಚವಾರ್ಷಿಕ ಯೋಜನೆ | ಕಾಲಾವಧಿ | ಉದ್ದೇಶಗಳು |
|---|---|---|
| ಮೊದಲನೆಯ | ......... | ಕೃಷಿ, ಸಾಮಾಜಿಕ ವಿಕಾಸ, |
| ಎರಡನೆಯ | 1965–1961 | ಔದ್ಯೋಗೀಕರಣ |
| ಮೂರನೆಯ | ......... | ವಿಷಮತೆಯ ನಿರ್ಮೂಲನೆ, ಉದ್ಯೋಗಾವಕಾಶಗಳ ವಿಸ್ತಾರ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ |
| ......... | 1969–1974 | ವೈಜ್ಞಾನಿಕ ಸಂಶೋಧನೆ, ಆರೋಗ್ಯ ಮತ್ತು ಕುಟುಂಬಯೋಜನೆ |
| ಐದನೆಯ | ......... | ..................... |

**(ಬ) ಟಿಪ್ಪಣಿ ಬರೆಯಿರಿ.**

(1) ಮಿಶ್ರ ಅರ್ಥವ್ಯವಸ್ಥೆ
(2) ಇಪ್ಪತ್ತು ಅಂಶಗಳ ಕಾರ್ಯಕ್ರಮ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಸ್ವತಂತ್ರ ಭಾರತವು ಮಿಶ್ರ ಅರ್ಥವ್ಯವಸ್ಥೆಯನ್ನು ಸ್ವೀಕರಿಸಿತು.
(2) 1969ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಲಾಯಿತು.
(3) ಗಿರಣಿ ಕಾರ್ಮಿಕರು ಮುಷ್ಕರವನ್ನು ಆರಂಭಿಸಿದರು.

**4. ಮುಂದಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು?
(2) ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯೋಜನೆಗಳನ್ನು ಆರಂಭಿಸಲಾಯಿತು?

**ಉಪಕ್ರಮ**

(1) ಇಂಟರ್ನೆಟ್‌ನ ಸಹಾಯದಿಂದ WTO ಈ ಸಂಘಟನೆಯ ಮಾಹಿತಿಯನ್ನು ಪಡೆಯಿರಿ – ಲಾಂಛನ, ಸದಸ್ಯ ದೇಶಗಳು, ಉದ್ದೇಶಗಳು ಕಾರ್ಯಕ್ರಮ ಇತ್ಯಾದಿ.

(2) ರಾಷ್ಟ್ರೀಕೃತ ಬ್ಯಾಂಕಿಗೆ/ಶಾಖೆಗೆ ಭೇಟಿ ನೀಡಿ ಅದರ ಕಾರ್ಯಕಲಾಪಗಳ ಮಾಹಿತಿ ಪಡೆಯಿರಿ.

C2IIXF

# 5 ಶೈಕ್ಷಣಿಕ ಪ್ರಗತಿ

ನಾವು ಈ ಪಾಠದಲ್ಲಿ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿಯ ಮುಖ್ಯ ಮೆಟ್ಟಲು ಹಾಗೂ ಯೋಜನೆಗಳ ಬಗ್ಗೆ ಸ್ವಲ್ಪದರಲ್ಲಿ ಪರಿಶೀಲನೆ ಮಾಡುವವರಿದ್ದೇವೆ. ಇದರಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚಶಿಕ್ಷಣ ಸಂಶೋಧನ ಸಂಸ್ಥೆಗಳ ವಿಚಾರವನ್ನು ಮಾಡಲಾಗಿದೆ. ಅದರ ಮೇಲಿಂದ ನಮಗೆ ಇಡೀ ದೇಶದಲ್ಲಿಯ ಶಿಕ್ಷಣ ವ್ಯವಸ್ಥೆಯ ಕಲ್ಪನೆ ಬರಬಹುದು.

ಭಾರತದಲ್ಲಿಯ ಶಿಕ್ಷಣದ ಪ್ರಶ್ನೆಯು ಎಷ್ಟು ಜಟಿಲವಾಗಿದೆಯೆಂಬುದನ್ನು ನಾವು ಸ್ವತಂತ್ರಭಾರತದ ಮೊದಲನೆಯ ಅಂದರೆ ಕ್ರಿ.ಶ. 1951ರ ಜನಗಣನೆಯಲ್ಲಿ ತಿಳಿದುಕೊಂಡಿರುವೆವು. ಪ್ರಥಮ ಜನಗಣನೆಯಲ್ಲಿ ಸಾಕ್ಷರತೆಯ ಪ್ರಮಾಣವು ಪ್ರತಿಶತ 17% ರಷ್ಟು ಇತ್ತು ಅದು ಕೆಳಗಿನಂತೆ ವೃದ್ಧಿಯಾಯಿತು.

| ಜನಗಣನೆಯ ವರ್ಷ | ಸಾಕ್ಷರತೆ |
|---|---|
| 1971 | 34% |
| 1981 | 43% |
| 1991 | 52% |
| 2001 | 64% |

ಈ ಪ್ರಮಾಣವನ್ನು ಹೆಚ್ಚಿಸುವುದು ಭಾರತ ಸರಕಾರದ ಮುಂದಿನ ದೊಡ್ಡ ಆಹ್ವಾನವಾಗಿತ್ತು. ಈ ಆಹ್ವಾನವನ್ನು ಎದುರಿಸುವ ಸಲುವಾಗಿ ಸರಕಾರವು ಅನೇಕ ಉಪಾಯ ಯೋಜನೆಗಳನ್ನು ಮಾಡಿತು.

**ಪ್ರಾಥಮಿಕ ಶಿಕ್ಷಣ :** 6 ರಿಂದ 14 ವರ್ಷ ವಯಸ್ಸಿನ ಗುಂಪಿನಲ್ಲಿಯ ವಿದ್ಯಾರ್ಥಿಗಳಿಗೆ ನೀಡಲಾಗುವ ಶಿಕ್ಷಣಕ್ಕೆ ಪ್ರಾಥಮಿಕ ಶಿಕ್ಷಣ ಎನ್ನುತ್ತಾರೆ. 1988ರಲ್ಲಿ ಕೇಂದ್ರಸರಕಾರವು ಪ್ರಾಥಮಿಕ ಶಿಕ್ಷಣದ ಪ್ರಸಾರ ಮತ್ತು ಶೈಕ್ಷಣಿಕ ದರ್ಜೆಯಲ್ಲಿ ಸುಧಾರಣೆ ಮಾಡುವ ಸಲುವಾಗಿ 'ಖಡು-ಕರಿಹಲಗೆ' ಯೋಜನೆಯನ್ನು ಆರಂಭಿಸಿತು. ಈ ಯೋಜನೆಯು 'ಆಪರೇಶನ್ ಬ್ಲ್ಯಾಕ್ ಬೋರ್ಡ್' ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಶಾಲೆಗಳ ದರ್ಜೆಯನ್ನು ಸುಧಾರಿಸುವುದು, ಕನಿಷ್ಟ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರ್ಣ ಮಾಡುವುದು, ಯೋಗ್ಯವಾದ ಕನಿಷ್ಟ ಎರಡು ವರ್ಗದ ಕೋಣೆಗಳು, ಸ್ವಚ್ಛತಾಗೃಹ ಇಬ್ಬರ ಶಿಕ್ಷಕರಲ್ಲಿ ಒಬ್ಬ ಸ್ತ್ರೀ ಶಿಕ್ಷಕಿ, ಕರಿಹಲಗೆ, ನಕಾಶೆ, ಪ್ರಯೋಗಶಾಲೆಯ ಸಲಕರಣೆಗಳು, ಚಿಕ್ಕದಾದ ಗ್ರಂಥಾಲಯ, ಆಟದ ಬಯಲು, ಕ್ರೀಡಾ ಸಲಕರಣೆಗಳು ಮುಂತಾದವುಗಳಿಗಾಗಿ ಸರಕಾರವು ಶಾಲೆಗಳಿಗೆ ನಿಧಿಯನ್ನು ಲಭ್ಯಮಾಡಿಕೊಟ್ಟಿತು. ಈ ಯೋಜನೆಯಿಂದಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯು ಗತಿಶೀಲವಾಗಲು ಸಹಾಯಕವಾಯಿತು.



**ಗೊತ್ತಿದೆಯೇ ನಿಮಗೆ?**

ಮಹಾರಾಷ್ಟ್ರರಾಜ್ಯದ ಸ್ಥಾಪನೆ (1960) ಯಾದನಂತರ ಸರಕಾರವು ರಾಜ್ಯಕ್ಕಾಗಿ 1ನೇ ಇಯತ್ತೆಯಿಂದ 7ನೇ ಇಯತ್ತೆಯ ವರೆಗೆ ಒಂದೇ ಪ್ರಕಾರದ ಅಭ್ಯಾಸಕ್ರಮವನ್ನು ಆರಂಭಿಸುವ ನಿರ್ಣಯವನ್ನು ತೆಗೆದುಕೊಂಡಿತು. ಮುಂಬಯಿಯ ಎಸ್.ಟಿ. ಕಾಲೇಜಿನ ಪ್ರಾಚಾರ್ಯರಾದ ಸಯ್ಯದ ರೆಫ್ ಇವರಕಡೆಗೆ ಅಭ್ಯಾಸಕ್ರಮದ ಮಸೂದೆಯನ್ನು ತಯಾರಿಸುವ ಕಾರ್ಯವನ್ನು ಒಪ್ಪಿಸಲಾಯಿತು

1994ರಲ್ಲಿ ಈ ಯೋಜನೆಯ ವಿಸ್ತಾರ ಮಾಡಿ 100ಕ್ಕಿಂತ ಹೆಚ್ಚು ವಿದ್ಯಾರ್ಥಿ ಸಂಖ್ಯೆಯಿರುವ ಶಾಲೆಗಳಲ್ಲಿ ಒಂದು ಹೆಚ್ಚಿನ ವರ್ಗದಕೋಣೆ ಮತ್ತು ಒಬ್ಬ ಹೆಚ್ಚಿನ ಶಿಕ್ಷಕನ ನೇಮಕದ ಏರ್ಪಾಟು ಮಾಡಲಾಯಿತು. ಹುಡುಗಿಯರ ಶಾಲೆ, ಪರಿಶಿಷ್ಟ ಜಾತಿ - ಪಂಗಡಗಳ ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿರುವ ಶಾಲೆ, ಗ್ರಾಮೀಣಭಾಗ ಇವುಗಳಿಗೆ ಪ್ರಧಾನ್ಯನೀಡಲಾಯಿತು. ಶಿಕ್ಷಕರ ನೇಮಕಾತಿಯಲ್ಲಿ ಪ್ರತಿಶತ 50%ರಷ್ಟು ಸ್ಥಾನಗಳಿಗೆ ಮಹಿಳೆಯರ ನೇಮಕ ಮಾಡಬೇಕೆಂಬ ನಿರ್ಬಂಧವನ್ನು ರಾಜ್ಯಸರಕಾರದ ಮೇಲೆ ಹಾಕಲಾಯಿತು. 1994ರಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣಕ್ಕಾಗಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (DPEP)ವನ್ನು ಆರಂಭಿಸಲಾಯಿತು. ಮಹಾರಾಷ್ಟ್ರವನ್ನೊಳಗೊಂಡು ಏಳು ರಾಜ್ಯಗಳಲ್ಲಿ ಈ ಉಪಕ್ರಮವು ಆರಂಭವಾಯಿತು. ಪ್ರಾಥಮಿಕ ಶಾಲೆಯಲ್ಲಿ ಪ್ರತಿಶತ 100%ರಷ್ಟು ವಿದ್ಯಾರ್ಥಿಗಳ ಉಪಸ್ಥಿತಿ, ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ಇಳಿಕೆ ತಡೆಯುವುದು, ಹುಡುಗಿಯರ ಶಿಕ್ಷಣ, ವಿಕಲ ಚೇತನರಿಗಾಗಿ ಶಿಕ್ಷಣ, ಪ್ರಾಥಮಿಕ ಶಿಕ್ಷಣದ ಮೇಲೆ ಸಂಶೋಧನೆ ಮತ್ತು ಮೌಲ್ಯಮಾಪನ, ಪರ್ಯಾಯಿ ಶಿಕ್ಷಣ, ಸಮಾಜ ಜಾಗೃತಿ ಇತ್ಯಾದಿ ಉಪಕ್ರಮಗಳ ಸಮಾವೇಶವು ಇದರಲ್ಲಿತ್ತು. ವಿದ್ಯಾರ್ಥಿಗಳ ಯೋಗ್ಯ ಪೋಷಣೆಯಾಗಬೇಕೆಂದು 1995ರಲ್ಲಿ 'ಮಧ್ಯಾಹ್ನ ಭೋಜನ ಯೋಜನೆ' ಯನ್ನು ಆರಂಭಿಸಲಾಯಿತು.

**ಇದು ನಿಮಗೆ ಸಾಧ್ಯವೇ?**

1991ರಲ್ಲಿ ಕೇರಳ ರಾಜ್ಯವು ಸಂಪೂರ್ಣ ಸಾಕ್ಷರ ವೆನಿಸಿತು. ಮಹಾರಾಷ್ಟ್ರ ರಾಜ್ಯವು ಸಂಪೂರ್ಣ ಸಾಕ್ಷರವಾಗುವ ಸಲುವಾಗಿ ಯಾವ ಉಪಾಯ ಯೋಜನೆ ಮಾಡಬಹುದು?

**ಗೊತ್ತಿದೆಯೇ ನಿಮಗೆ?**

ತಾರಾಬಾಯಿ ಮೋಡಕ ಇವರು ಬೋರ್ಡಿ ಮತ್ತು ಕೋಸಬಾಡಗಳಲ್ಲಿ ಶೈಕ್ಷಣಿಕ ಕಾರ್ಯವನ್ನು ಆರಂಭಿಸಿದರು. ಆದಿವಾಸಿ ಮಕ್ಕಳಿಗಾಗಿ ಅಂಗಣವಾಡಿಗಳನ್ನು ಆರಂಭಿಸಿದರು. ಪ್ರತ್ಯಕ್ಷ ಕೃತಿಯಿಂದ ಶಿಕ್ಷಣ, ಹುಲ್ಲು ಮೈದಾನ ಶಾಲೆ, ತಾಂತ್ರಿಕ ವ್ಯವಸಾಯಿಕ ಶಿಕ್ಷಣದ ಪ್ರಸಾರ ಮಾಡುವ ಸಲುವಾಗಿ ಅವರು ತುಂಬಾ ಶ್ರಮಿಸಿದರು.

ಅನೂತಾಯಿ ವಾಘ ಇವರು ಠಾಣೆ ಜಿಲ್ಲೆಯಲ್ಲಿಯ ಕೋಸಬಾಡ ಎಂಬಲ್ಲಿ ಆದಿವಾಸಿಗಳ ಉನ್ನತಿಗಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯು 'ಕೋಸಬಾಡ ಪ್ರಕಲ್ಪ (ಯೋಜನೆ) ಎಂದು ಗುರುತಿಸಲ್ಪಡುತ್ತದೆ. ಆದಿವಾಸಿಗಳ ಶಿಕ್ಷಣಕ್ಕಾಗಿ ಅನೂತಾಯಿ ವಾಘ ಇವರು ಶಿಶುವಿಹಾರ, ಬಾಲವಾಡಿ, ಪ್ರಾಥಮಿಕ ಶಾಲೆ, ಪ್ರೌಢ ಶಿಕ್ಷಣ ವರ್ಗ, ಬಾಲಸೇವಿಕಾ ತರಬೇತಿ ಮಹಾವಿದ್ಯಾಲಯ ಮುಂತಾದ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಿದ್ದಾರೆ.

**ಮಾಧ್ಯಮಿಕ ಶಿಕ್ಷಣ:** ಭಾರತವು ಸ್ವತಂತ್ರವಾದ ಮೇಲೆ ಶಿಕ್ಷಣ ಸಚಿವ ಮೌಲಾನಾ ಅಬುಲ್ ಕಲಾಮ ಅಝಾದ ಇವರು ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನುಂಟು ಮಾಡಬೇಕೆಂದು ನಿರ್ಧರಿಸಿದರು. ಅದರ ಸಲುವಾಗಿ ಡಾ. ರಾಧಾಕೃಷ್ಣನ್ ಆಯೋಗವನ್ನು ನೇಮಿಸಲಾಯಿತು. ಈ ಆಯೋಗವು ಮಾಧ್ಯಮಿಕ ಶಿಕ್ಷಣದ ಸಂದರ್ಭದಲ್ಲಿ ಒಂದು ಸ್ವತಂತ್ರ ಆಯೋಗವನ್ನು ನೇಮಿಸುವ ಶಿಫಾರಸು ಮಾಡಿತು. ಅದಕ್ಕನುಸಾರವಾಗಿ 1952-53ರಲ್ಲಿ 'ಮುದಲಿಯಾರ ಆಯೋಗವನ್ನು ನೇಮಿಸಲಾಯಿತು. ಈ ಸಮಯದಲ್ಲಿ ಭಾರತದಲ್ಲಿ ಹನ್ನೊಂದನೆಯ ಇಯತ್ತೆ + ಮುಂದಿನ ಪದವಿಯ 4 ವರ್ಷಗಳು ಇಲ್ಲವೆ 11+1+3 ಈ ರೀತಿ ಶಿಕ್ಷಣದ ರಚನೆ ಇತ್ತು.


ಮೌಲಾನಾ ಆಝಾದ

**ಆಯೋಗದ ಕಾರ್ಯಕಲಾಪಗಳು:** ಆಯೋಗವು ಮಾಧ್ಯಮಿಕ ಶಿಕ್ಷಣ, ಅಭ್ಯಾಸಕ್ರಮದ ಸ್ವರೂಪ, ಶಿಕ್ಷಣದ ಮಾಧ್ಯಮ, ಅಧ್ಯಾಪನ ಪದ್ಧತಿ ಇವುಗಳ ಅಭ್ಯಾಸ ಮಾಡಿ ಶಿಫಾರಸುಗಳನ್ನು ಮಾಡಿತು. ಈ ಆಯೋಗವು ಉಚ್ಚ ಮಾಧ್ಯಮಿಕ ವರ್ಗಗಳ ಕಲ್ಪನೆಯನ್ನು ಮಂಡಿಸಿತ್ತು. ಇಡೀ ದೇಶದ ತುಂಬೆಲ್ಲ ಆ ವ್ಯವಸ್ಥೆಯನ್ನು ಜಾರಿಗೊಳಿಸುವುದು ಅಸಾಧ್ಯವಾಯಿತು.

**ಕೋಠಾರಿ ಆಯೋಗ:** 1964ರಲ್ಲಿ ಡಾ. ಡಿ. ಎಸ್ ಕೋಠಾರಿ ಇವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು. ಆ ಆಯೋಗದ ಕಾರ್ಯಕಲಾಪಗಳಲ್ಲಿ ಜೆ.ಪಿ. ನಾಯಕ ಇವರ ಅಮೂಲ್ಯವಾದ ಕೊಡುಗೆ ಇದೆ. ಈ ಆಯೋಗವು ಮಾಧ್ಯಮಿಕ, ಉಚ್ಚ ಮಾಧ್ಯಮಿಕ ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿಯ 10+2+3 ಈ ರಚನೆಯನ್ನು ಪ್ರತಿಪಾದಿಸಿತು. 1972 ರಿಂದ ಈ ವ್ಯವಸ್ಥೆಯು ಜಾರಿಗೆ ಬಂದಿತು. ಕೋಠಾರಿ ಆಯೋಗವು ಶಿಕ್ಷಣದ ಒಂದೇ ರಾಷ್ಟ್ರೀಯ ಪದ್ಧತಿ ಇರಬೇಕು, ಶಿಕ್ಷಣದಲ್ಲಿ ಮಾತೃಭಾಷೆ, ಹಿಂದೀ ಮತ್ತು ಇಂಗ್ಲಿಷ ಭಾಷೆಗಳ ಸಮಾವೇಶ ಮಾಡಬೇಕು, ಶಿಕ್ಷಣವು ತಳದ ವರೆಗೆ ತಲುಪುವ ಸಲುವಾಗಿ ನಿರಂತರ ಶಿಕ್ಷಣ, ಪ್ರೌಢಶಿಕ್ಷಣ, ಪತ್ರದ ಮುಖಾಂತರ ಶಿಕ್ಷಣ, ಮುಕ್ತ ವಿಶ್ವವಿದ್ಯಾಲಯ ಮುಂತಾದ ಉಪಕ್ರಮಗಳನ್ನು ಸೂಚಿಸಿತು. ಪರಿಶಿಷ್ಟ ಜಾತಿ – ಪಂಗಡಗಳಂತಹ ಉಪೇಕ್ಷಿತ ಘಟಕಗಳಿಗೆ ಪ್ರಾಧಾನ್ಯನೀಡುವುದು, ಸರಕಾರದ ಮುಂಗಡ ಪತ್ರದಲ್ಲಿ ಶೈಕ್ಷಣಿಕ ಖರ್ಚನ್ನು ಹೆಚ್ಚಿಸುವುದು ಇತ್ಯಾದಿ ಶಿಫಾರಸುಗಳನ್ನು ಮಾಡುತು.

**ಗೊತ್ತಿದೆಯೇ ನಿಮಗೆ?**


**ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಮತ್ತು ಉಚ್ಚ ಮಾಧ್ಯಮಿಕ ಶಿಕ್ಷಣ ಮಂಡಳ:** 1 ಜನವರಿ 1966 ರಂದು ಪುಣೆಯಲ್ಲಿ ಈ ಸಂಸ್ಥೆಯ ಸ್ಥಾಪನೆ ಮಾಡಲಾಯಿತು. 10ನೇ ಹಾಗೂ 12ನೇ ಇಯತ್ತೆಯ ಶಾಲಾಂತ ಪರೀಕ್ಷೆಗಳನ್ನು ಈ ಮಂಡಳದ ಮುಖಾಂತರ ತೆಗೆದುಕೊಳ್ಳಲಾಗುತ್ತದೆ. 'ಶಿಕ್ಷಣ ಸಂಕ್ರಮಣ' ಎಂಬ ಮಾಸ ಪತ್ರಿಕೆಯನ್ನು ಈ ಮಂಡಳದ ಮೂಲಕ ಪ್ರಕಾಶನ ಗೊಳಿಸಲಾಗುತ್ತದೆ.


ಡಾ.ಡಿ ಎಸ್ ಕೋಠಾರಿ


ಜೆ.ಪಿ. ನಾಯಿಕ

ಮಹಾರಾಷ್ಟ್ರ ರಾಜ್ಯವು 1972ರಲ್ಲಿ 10+2+3 ಈ ಶೈಕ್ಷಣಿಕ ರಚನೆಯನ್ನು ಸ್ವೀಕರಿಸಿ 1975ರಲ್ಲಿ ಹತ್ತನೆಯ ಇಯತ್ತೆಯ ಮೊದಲನೆಯ ಶಾಲಾಂತ ಪರೀಕ್ಷೆಯನ್ನು ತೆಗೆದುಕೊಂಡಿತು.

### ಕೋಠಾರಿ ಆಯೋಗವು ತಿಳಿಸಿದ ಶಿಕ್ಷಣದ ಉದ್ದೇಶಗಳು




## ಉಚ್ಚಶಿಕ್ಷಣ

**ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿಯ ಶಿಕ್ಷಣ :** ಭಾರತವು ಸ್ವತಂತ್ರವಾದ ನಂತರ 1948ರಲ್ಲಿ ಕೇಂದ್ರ ಸರಕಾರವು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಇವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗದ ನೇಮಕ ಮಾಡಿ ಆಯೋಗದ ಕಡೆಗೆ ಆರ್ಥಿಕ ಅನುದಾನ, ವಿಶ್ವವಿದ್ಯಾಲಯಗಳ ದರ್ಜೆ ಮತ್ತು ಸಮನ್ವಯ ಈ ಕಾರ್ಯಗಳನ್ನು ಒಪ್ಪಿಸಲಾಯಿತು.


ಡಾ. ಸರ್ವಪಲ್ಲಿ ರಾಧಾಕೃಷ್ಣನ್

**ಕಾರ್ಯಪದ್ಧತಿ:** ಆಯೋಗವು ಪಂಚವಾರ್ಷಿಕ ಪದ್ಧತಿಯನ್ನು ಸ್ವೀಕರಿಸಿತು. ವಿಶ್ವವಿದ್ಯಾಲಯಗಳಿಗೆ ಅನುದಾನವನ್ನು ಮಂಜೂರು ಮಾಡಿ ಹಂಚುವ ಕಾರ್ಯವು ಸರಕಾರದ ವತಿಯಿಂದ ಆರಂಭವಾಯಿತು. ವಿಶ್ವವಿದ್ಯಾಲಯಗಳ ಶಿಕ್ಷಣ ಯೋಜನೆ ಅಭ್ಯಾಸಕ್ರಮದಲ್ಲಿ ಸುಸೂತ್ರತೆ, ಶಿಕ್ಷಣದ ಮುಖಾಂತರ ರಾಷ್ಟ್ರೀಯ ಅವಶ್ಯಕತೆಗಳಿಗೆ ಪ್ರಾಧಾನ್ಯ, ಉಚ್ಚ ಶಿಕ್ಷಣದ ವಿವಿಧ ಯೋಜನೆಗಳ ರೂಪರೇಷೆ ಮತ್ತು ಕಾರ್ಯರೂಪಕ್ಕೆ ತರುವ ಮುಂತಾದ ಕಾರ್ಯಗಳನ್ನು ಆಯೋಗವು ಮಾಡುತ್ತಿದೆ. ಆಯೋಗವು ವಿಶ್ವವಿದ್ಯಾಲಯ ವಿಕಾಸ ಪರಿಷತ್ತುಗಳನ್ನು ಸ್ಥಾಪಿಸುವುದು. ಸ್ನಾತಕೋತ್ತರ ಅಧ್ಯಾಪನಕ್ಕಾಗಿ ಮುಂದುವರಿದ ಅಧ್ಯಾಪನಕೇಂದ್ರಗಳು, ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಮುಂತಾದವುಗಳಲ್ಲಿ ಅಮೂಲ್ಯಕಾರ್ಯಗಳನ್ನು ಮಾಡಿತು. ಭಾರತದಲ್ಲಿ ದೂರದರ್ಶನ ಬಂದಮೇಲೆ ಆಯೋಗದ ವತಿಯಿಂದ 'ಕಂಟ್ರಿವೈಡ ಕ್ಲಾಸರೂಮ' ಈ ಕಾರ್ಯಕ್ರಮದ ಪ್ರಸಾರಣೆಯನ್ನು ದೂರದರ್ಶನದ ಮೇಲಿಂದ ಮಾಡಲಾಯಿತು.

### ಗೊತ್ತಿದೆಯೇ ನಿಮಗೆ?

1965 ರಲ್ಲಿ ಮಹಾರಾಷ್ಟ್ರದಲ್ಲಿ ಕಲಾಶಿಕ್ಷಣದ ನೀತಿಯನ್ನು ಯೋಜಿಸುವ ಸಲುವಾಗಿ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಕಲಾ ಸಂಚಾಲನಾಲಯದ ಸ್ಥಾಪನೆ ಮಾಡಲಾಯಿತು. ಶಾಲಾ ಮಟ್ಟದಲ್ಲಿ ನಡೆಸಲಾಗುವ 'ಡ್ರಾಯಿಂಗ ಗ್ರೇಡ' ಪರೀಕ್ಷೆಗಳನ್ನು ಆಯೋಜಿಸುವ ಜವಾಬ್ದಾರಿಯನ್ನು ಈ ವಿಭಾಗವು ಸ್ವೀಕರಿಸಿದೆ.

**ನ್ಯಾಶನಲ್ ಕೌನ್ಸಿಲ ಆಫ್ ಎಜ್ಯುಕೇಶನಲ್ ರಿಸರ್ಚ ಆ್ಯಂಡ ಟ್ರೇನಿಂಗ (NCERT) :** 1 ಸಪ್ಟಂಬರ 1961 ರಂದು ದಿಲ್ಲಿಯಲ್ಲಿ ಈ ಸಂಸ್ಥೆಯ ಸ್ಥಾಪನೆ ಮಾಡಲಾಯಿತು. ಶಾಲಾ ಶಿಕ್ಷಣದ ವಿಷಯದಲ್ಲಿ, ವ್ಯಾಪಕ ನೀತಿಯ ಸಂದರ್ಭದಲ್ಲಿ ಮತ್ತು ಶೈಕ್ಷಣಿಕ ಯೋಜನೆಗಳ ಕಾರ್ಯನಿರ್ವಹಣೆಯಲ್ಲಿ ಕೇಂದ್ರ ಸರಕಾರಕ್ಕೆ ಸಹಾಯ ಮಾಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಶಿಕ್ಷಣ ವಿಷಯದ ಸಂಶೋಧನೆ ವಿಕಾಸ ತರಬೇತಿ, ವಿಸ್ತಾರ, ಶೈಕ್ಷಣಿಕ ಕಾರ್ಯಕ್ರಮ, ಶಾಲೆಯ ಅಭ್ಯಾಸಕ್ರಮ ಮತ್ತು ಪಠ್ಯ ಪುಸ್ತಕಗಳ ಪುನರ್ರಚನೆ ಇವುಗಳ ಜವಾಬ್ದಾರಿಯನ್ನು NCERTಯ ಕಡೆಗೆ ಒಪ್ಪಿಸಲಾಯಿತು. ಈ ಸಂಸ್ಥೆಯು ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳದ ಸಹಕಾರದಿಂದ ಶಾಲಾ ಅಭ್ಯಾಸಕ್ರಮ ಮತ್ತು ಪಠ್ಯಪುಸ್ತಕಗಳ ನಿರ್ಮಿತಿ ಮಾಡುವುದರಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಸಂದರ್ಭದಲ್ಲಿ ರಾಜ್ಯಸರಕಾರಕ್ಕೆ ಸಹಕಾರ ಮತ್ತು ಮಾರ್ಗದರ್ಶನವನ್ನು NCERT ನೀಡಿತು. ಶಿಕ್ಷಕರಿಗಾಗಿ ಮಾರ್ಗದರ್ಶನ ಕಾರ್ಯಪುಸ್ತಕ, ಅಧ್ಯಾಪನ ತರಬೇತಿ, ಅಧ್ಯಯನ ಅಧ್ಯಾಪನ ತಂತ್ರದ ವಿಕಾಸ, ರಾಷ್ಟ್ರೀಯ ಮಟ್ಟದಲ್ಲಿ ಪ್ರಜ್ಞಾಶೋಧ ಪರೀಕ್ಷೆ ಮುಂತಾದ ಉಪಕ್ರಮಗಳನ್ನು ಹಮ್ಮಿಕೊಂಡಿತು.

NCERT ಯ ಮಾದರಿಯಲ್ಲಿ ಸರ್ವ ರಾಜ್ಯಗಳಲ್ಲಿ SCERT ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಮಹಾರಾಷ್ಟ್ರ ರಾಜ್ಯಕಾಗಿ ಮಹಾರಾಷ್ಟ್ರರಾಜ್ಯ ಶೈಕ್ಷಣಿಕ

ಸಂಶೋಧನೆ ಮತ್ತು ತರಬೇತಿ ಪರಿಷತ್ತು (MSCRET) ಈ ಸಂಸ್ಥೆಯನ್ನು 1984ರಲ್ಲಿ ಪುಣೆಯಲ್ಲಿ ಸ್ಥಾಪಿಸಲಾಯಿತು. ಪ್ರಾಥಮಿಕ ಶಿಕ್ಷಣದ ದರ್ಜೆಯನ್ನು ಎತ್ತರಿಸುವುದು, ಶಿಕ್ಷಕರಿಗಾಗಿ ಸೇವಾಂತರ್ಗತ ತರಬೇತಿ, ಅಭ್ಯಾಸಕ್ರಮ ಮತ್ತು ಮೌಲ್ಯಮಾಪನಗಳ ವಿಷಯದಲ್ಲಿ ತರಬೇತಿ ನೀಡುವುದು. ಹತ್ತನೆಯ ಹಾಗೂ ಹನ್ನೆರಡನೆಯ ಇಯತ್ತೆಯ ಪರೀಕ್ಷೆಯ ನಂತರ ಯಾವ ವ್ಯಾವಸಾಯಿಕ ಅಭ್ಯಾಸಕ್ರಮವನ್ನು ಆಯ್ಕೆಮಾಡಬೇಕು ಎಂಬುದರಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಇತ್ಯಾದಿ ಶೈಕ್ಷಣಿಕ ಕಾರ್ಯಗಳನ್ನು ಈ ಸಂಸ್ಥೆಯು ಮಾಡುತ್ತದೆ. ಈ ಸಂಸ್ಥೆಯನ್ನು 'ವಿದ್ಯಾಪ್ರಾಧಿಕರಣ' ಎಂಬ ಹೆಸರಿನಿಂದ ಸಂಬೋಧಿಸಲಾಗುತ್ತದೆ. ಈ ಸಂಸ್ಥೆಯ ವತಿಯಿಂದ 'ಜೀವನ ಶಿಕ್ಷಣ' ಎಂಬ ಮಾಸಪತ್ರಿಕೆ ಯನ್ನು ಪ್ರಕಟಿಸಲಾಗುತ್ತದೆ.

**ಗೊತ್ತಿದೆಯೇ ನಿಮಗೆ?**

27 ಜನೆವರಿ 1967 ರಂದು ಪುಣೆಯಲ್ಲಿ ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ (ಬಾಲಭಾರತಿ) ಈ ಸಂಸ್ಥೆಯ ಸ್ಥಾಪನೆಯಾಯಿತು. 1ನೆಯ ಇಯತ್ತೆಯಿಂದ 12ನೆಯ ಇಯತ್ತೆಯವರೆಗೆ ಶಾಲೆಯ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳನ್ನು ತಯಾರಿಸುವ ಕಾರ್ಯವನ್ನು ಬಾಲಭಾರತಿ ಮಾಡುವವು. ಮರಾಠಿ, ಹಿಂದಿ, ಇಂಗ್ಲಿಷ, ಉರ್ದು, ಕನ್ನಡ, ಸಿಂಧಿ, ಗುಜರಾತಿ, ತೆಲುಗು ಈ ಎಂಟು ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ತಯಾರಿಸುತ್ತದೆ. ವಿದ್ಯಾರ್ಥಿಗಳಿಗಾಗಿ 'ಕಿಶೋರ' ಎಂಬ ಮಾಸಪತ್ರಿಕೆಯನ್ನು ಬಾಲಭಾರತಿಯು ಪ್ರಕಾಶನಗೊಳಿಸುತ್ತದೆ.


**ರಾಷ್ಟ್ರೀಯ ಶೈಕ್ಷಣಿಕ ಧೋರಣೆ 1986:** ಈ ನೀತಿಗನುಸಾರವಾಗಿ ಸಮಾಜದ ಬದಲಾಗುತ್ತಿರುವ ಅವಶ್ಯಕತೆಗಳನ್ನು ಲಕ್ಷದಲ್ಲಿಟ್ಟುಕೊಂಡು ಪ್ರಾಥಮಿಕ, ಮಾಧ್ಯಮಿಕ, ಮತ್ತು ಉಚ್ಚ ಮಾಧ್ಯಮಿಕ ಶಿಕ್ಷಣದಲ್ಲಿ ಮೂಲಭೂತ ಸ್ವರೂಪದ ಬದಲಾವಣೆಗಳನ್ನು ಮಾಡಲಾಯಿತು. ಈ ನೀತಿಯಲ್ಲಿ ಸರ್ವ ರಾಜ್ಯಗಳಿಗಾಗಿ ಒಂದು ಕನಿಷ್ಟ ರಾಷ್ಟ್ರೀಯ ಅಭ್ಯಾಸಕ್ರಮವನ್ನು ಸೂಚಿಸಲಾಯಿತು. ಅದರಲ್ಲಿ ಭಾರತದಲ್ಲಿಯ ಸರ್ವ ವಿದ್ಯಾರ್ಥಿಗಳಿಗಾಗಿ ಸಮಾನ ಶೈಕ್ಷಣಿಕ ಅವಕಾಶವು ದೊರೆಯಬೇಕು ಎಂಬ ಅಪೇಕ್ಷೆಯಿದೆ. ಪ್ರತಿಯೊಂದು ರಾಜ್ಯದಲ್ಲಿಯ ವಿದ್ಯಾಥಿಗಳ ಸಾಂಸ್ಕೃತಿಕ, ಭೌಗೋಲಿಕ ಮತ್ತು ಐತಿಹಾಸಿಕ ಅವಶ್ಯಕತೆಗಳಿಗನುಸಾರವಾಗಿ ರಾಷ್ಟ್ರೀಯ ಅಭ್ಯಾಸಕ್ರಮದಲ್ಲಿ ಸ್ಥಿತಿಸ್ಥಾಪಕತ್ವವನ್ನು ತರಲು ಅವಕಾಶ ನೀಡಲಾಗಿದೆ.

1986ರ ರಾಷ್ಟ್ರೀಯ ಶೈಕ್ಷಣಿಕ ನೀತಿಯ ಪರಿಣಾಮಕಾರಕ ಕಾರ್ಯನಿರ್ವಹಣೆಯಾಗುವ ಸಲುವಾಗಿ ರಾಷ್ಟ್ರೀಯ ಮಟ್ಟದಲ್ಲಿ ತಯಾರಿಸಲಾದ ಕೃತಿ ಕಾರ್ಯಕ್ರಮದ ಮೇಲೆ ಆಧಾರಿತ 'ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ 1988ನ್ನು ತಯಾರಿಸಲಾಯಿತು.

**ಉಪಗ್ರಹದ ಬಳಕೆ:** 1975ರಲ್ಲಿ ಶೈಕ್ಷಣಿಕ ಕಾರಣಕ್ಕಾಗಿ ಉಪಗ್ರಹದ ಬಳಕೆ ಮಾಡುವುದರಲ್ಲಿ ಭಾರತವು ಯಶಸ್ವಿಯಾಯಿತು. ಇಸ್ರೋದ ಶಾಸ್ತ್ರಜ್ಞ ಏಕನಾಥ ಚಿಟಣೀಸ ಇವರು ಇದರಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ಅಹಮದಾಬಾದ್‌ನಲ್ಲಿಯ ಸ್ಪೇಸ ಆ್ಯಪ್ಲಿಕೇಶನ್ ಸೆಂಟರ ಈ ಅಂತರಿಕ್ಷ ಉಪಯೋಗ ಕೇಂದ್ರದ ನೇತೃತ್ವದಲ್ಲಿ 'ಸೈಟ್' (ಸ್ಯಾಟೆಲೈಟ್ ಇನ್‌ಸ್ಟ್ರಕ್ಶನಲ್ ಟೆಲಿವ್ಹಿಜನ ಎಕ್ಸಪಿರಿಮೆಂಟ್) ಇದರ ಪ್ರಯೋಗವನ್ನು ಶೈಕ್ಷಣಿಕ ಕಾರಣಕ್ಕಾಗಿ ಮಾಡಲಾಯಿತು. 'ಉಪಗ್ರಹದ ಮೂಲಕ ಶಿಕ್ಷಣ ಪ್ರಣಾಲಿ' ಈ ಕಲ್ಪನೆಯು ಇಲ್ಲಿಂದ ಮುಂದೆ ಬಂದಿತು. ಈ ಉಪಕ್ರಮದಲ್ಲಿ ಅಮೇರಿಕೆಯು ಭಾರತಕ್ಕೆ ನೆರವು ನೀಡಿತ್ತು. ಇದರಿಂದಲೇ ಗ್ರಾಮೀಣ ಭಾಗದಲ್ಲಿ ಉತ್ತಮ ದರ್ಜೆಯ

**ಗೊತ್ತಿದೆಯೇ ನಿಮಗೆ?**

**ಕ್ಷಮತಾಧಿಷ್ಠಿತ ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ 1995:** 1988ರ ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮವು ಕಾರ್ಯರೂಪದಲ್ಲಿ ಬರುತ್ತಿರುವಾಗಲೇ ರಾಷ್ಟ್ರೀಯ ಮಟ್ಟದಲ್ಲಿ ಕನಿಷ್ಟ ಅಧ್ಯಯನ ಕ್ಷಮತೆಯನ್ನು ನಿಶ್ಚಿತಗೊಳಿಸುವುದಕ್ಕಾಗಿ ಡಾ. ಆರ್. ಎಚ್. ದವೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಲಾಯಿತು. ದವೆ ಸಮಿತಿಯು ಬಾಷಾ, ಗಣಿತ ಮತ್ತು ಪರಿಸರ ಅಭ್ಯಾಸ ಈ ವಿಷಯಗಳಿಗಾಗಿ ಐದನೆಯ ಇಯತ್ತೆಯ ವರೆಗಿನ ಕನಿಷ್ಟ ಅಧ್ಯಯನ ಕ್ಷಮತೆಯ ಕೋಷ್ಟಗಳನ್ನು ವಿಕಸಿತಗೊಳಿಸಿದರು. ಅದರಲ್ಲಿ ಒಂದೇ ಇಯತ್ತೆಯಲ್ಲಿಯ ಕ್ಷಮತೆಗಳು ಯಾವ ಕ್ರಮದಿಂದ ವಿಕಸಿತ ವಾಗಬೇಕು ಎಂಬುದನ್ನು ತೋರಿಸಿದ್ದರು.



ಎಜ್ಯುಸ್ಯಾಟ ಉಪಗ್ರಹ

ಶಿಕ್ಷಣವನ್ನು ಒದಗಿಸಲು ಸಾಧ್ಯವಾಯಿತು.

**ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ:** ದೇಶದಲ್ಲಿಯ ಸರ್ವ ಜನಸಾಮಾನ್ಯರ ಮನೆಯಲ್ಲಿ ಜ್ಞಾನಗಂಗೆಯನ್ನು ಹರಿಸುವ ಸಲುವಾಗಿ ಈ ಮುಕ್ತ ವಿಶ್ವವಿದ್ಯಾಲಯದ ಸ್ಥಾಪನೆ ಮಾಡಲಾಯಿತು. ಸಂಯುಕ್ತ ರಾಷ್ಟ್ರಗಳ ಜಂಟಿ ಸಂಘಟನೆಯು 1970 ಈ ವರ್ಷವನ್ನು 'ಜಾಗತಿಕ ಶೈಕ್ಷಣಿಕ ವರ್ಷ' ವೆಂದು ಘೋಷಣೆ ಮಾಡಿತ್ತು. ಇದೇ ವರ್ಷ ಭಾರತ ಸರಕಾರದ ಶಿಕ್ಷಣ ಹಾಗೂ ಸಮಾಜಕಲ್ಯಾಣ ಇಲಾಖೆ, ಮಾಹಿತಿ ಮತ್ತು ಪ್ರಸಾರಣಾ ಇಲಾಖೆ, ವಿಶ್ವವಿದ್ಯಾಲಯ ಅನುದಾನ ಆಯೋಗ ಮತ್ತು ಯುನೆಸ್ಕೊ ಇವುಗಳ ಸಂಯುಕ್ತ ಆಶ್ರಯದಲ್ಲಿ 'ಮುಕ್ತ ವಿಶ್ವವಿದ್ಯಾಲಯ' ಈ ವಿಷಯದ ಮೇಲೆ ಹೊಸದಿಲ್ಲಿಯಲ್ಲಿ ಚರ್ಚಾಕೂಟವನ್ನು ತೆಗೆದುಕೊಳ್ಳಲಾಯಿತು. ಈ ಚರ್ಚಾಕೂಟದಿಂದ ಮುಕ್ತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಕಲ್ಪನೆ ಮುಂದೆಬಂದಿತು.

1974ರಲ್ಲಿ ಸರಕಾರವು ಪಿ. ಪಾರ್ಥಸಾರಥಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಅವರ ಸೂಚನೆ ಮತ್ತು ಶಿಫಾರಿಸಿಗನುಸಾರವಾಗಿ 20 ಸಪ್ಟಂಬರ 1985ರಂದು ಮುಕ್ತ ವಿಶ್ವವಿದ್ಯಾಲಯವು ಆಕಾರವನ್ನು ಪಡೆಯಿತು. ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನೀಡಲಾಯಿತು.

ಯಾರಿಗೆ ಔಪಚಾರಿಕ ಪದ್ಧತಿಯಲ್ಲಿ ಮಹಾವಿದ್ಯಾಲಯದ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿಲ್ಲವೋ ಅವರಿಗೆ ಈ ಮುಕ್ತ ವಿಶ್ವವಿದ್ಯಾಲಯದಲ್ಲಿ ಪ್ರವೇಶಕ್ಕಾಗಿ ಅರ್ಹತೆ, ವಯಸ್ಸು ಮತ್ತು ಇತರ ನಿಯಮಗಳಲ್ಲಿ ಸವಲತ್ತು ನೀಡಲಾಯಿತು. ವಿಶ್ವವಿದ್ಯಾಲಯವು 1990ರಲ್ಲಿ ಆಕಾಶವಾಣಿ ಮತ್ತು ದೂರದರ್ಶನ ಮೂಲಕ ದೃಕ್-ಶ್ರಾವ್ಯ ಪದ್ಧತಿಯಿಂದ ದೂರ ಶಿಕ್ಷಣದ (ಡಿಸ್ಟನ್ಸ ಎಜ್ಯುಕೇಶನ್) ಕಾರ್ಯಕ್ರಮವನ್ನು ಆರಂಭಿಸಿತು. ವಿಶ್ವವಿದ್ಯಾಲಯವು ವಿವಿಧ ಶಾಖೆಗಳ ಮೂಲಕ ಒಂದು ಸಾವಿರಕ್ಕಿಂತ ಹೆಚ್ಚು ಅಭ್ಯಾಸಕ್ರಮಗಳನ್ನು ನಡೆಸಿತು. ದೇಶದಲ್ಲಿ 58 ತರಬೇತಿ ಕೇಂದ್ರಗಳನ್ನು, ವಿದೇಶಗಳಲ್ಲಿ 41 ಕೇಂದ್ರಗಳನ್ನು ಸ್ಥಾಪಿಸಿ ವಿಶ್ವವಿದ್ಯಾನಿಲಯವು ಶಿಕ್ಷಣದ ಸೌಕರ್ಯಗಳನ್ನು ಒದಗಿಸಿತು.

**ಅರಿತುಕೊಳ್ಳಿರಿ**

1989ರಲ್ಲಿ ಮಹಾರಾಷ್ಟ್ರದ ನಾಶಿಕ ಎಂಬಲ್ಲಿ ಯಶವಂತರಾವ ಚವ್ಹಾಣ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಅಂತರಜಾಲದ (ಇಂಟರ್ನೆಟ್) ನೆರವಿನಿಂದ ಈ ಮುಕ್ತ ವಿಶ್ವವಿದ್ಯಾಲಯದ ಮಾಹಿತಿಯನ್ನು ಪಡೆಯಿರಿ.

## ಸಂಶೋಧನ ಸಂಸ್ಥೆ - ವಿಜ್ಞಾನ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ದೇಶದಲ್ಲಿ ವೈಜ್ಞಾನಿಕ ಸಂಶೋಧನೆಗೆ ಚಾಲನೆಯನ್ನು ನೀಡಬೇಕು ಮತ್ತು ಆ ಸಂಶೋಧನೆಯ ಲಾಭಗಳು ಎಲ್ಲರ ವರೆಗೆ ತಲುಪಬೇಕು ಎಂಬ ಉದ್ದೇಶದಿಂದ 1950ರಲ್ಲಿ 'ಕೌನ್ಸಿಲ್ ಆಫ ಸೈಂಟಿಫಿಕ್ ಆ್ಯಂಡ ಇಂಡಸ್ಟ್ರಿಯಲ್ ರಿಸರ್ಚ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಪದಾರ್ಥ ವಿಜ್ಞಾನ, ರಸಾಯನ ಔಷಧಗಳು, ಆಹಾರ ಪ್ರಕ್ರಿಯೆ, ಗಣಿಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆ ಆರಂಭವಾಯಿತು. ಈ ಸಂಸ್ಥೆಗಳಲ್ಲಿಯ ಸಂಶೋಧನೆಯ ಲಾಭವು ಭಾರತದಲ್ಲಿಯ ಉದ್ಯಮಗಳಿಗೆ ದೊರೆಯಬೇಕೆಂದು ಔದ್ಯೋಗಿಕ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಳ್ಳಲಾಯಿತು. ಅದರಿಂದಾಗಿ ಭಾರತದ ಆಯಾತವು ಕಡಿಮೆಯಾಗಿ ವಿದೇಶ ಚಲಾವಣೆಯಲ್ಲಿ ಉಳಿತಾಯವಾಯಿತು. ಈ ಸಂಸ್ಥೆಯು ಮೂಲಭೂತ ಸಂಶೋಧನೆಗೆ ಚಾಲನೆ ನೀಡಿತು. ಉಚ್ಚ (ಉನ್ನತ) ಶಿಕ್ಷಣಕ್ಕಾಗಿ ವಿದೇಶಗಳಲ್ಲಿ ಹೋದ ವಿದ್ಯಾರ್ಥಿಗಳು ಭಾರತಕ್ಕೆ ಮರಳಿ ಬರುವ ಸಲುವಾಗಿ ಈ ಸಂಸ್ಥೆಯ ಪ್ರಯೋಗಶಾಲೆಗಳು ಮಹತ್ವದ ಪಾತ್ರವನ್ನು ವಹಿಸಿದವು.

ಈ ಸಂಸ್ಥೆಯು ಮತದಾನ ಮಾಡಲು ಬೆರಳಿಗೆ ಅಂಟಿಸುವ ಮಸಿ, ಚಳಿಜ್ವರ, ಆನೆಕಾಲು ರೋಗ ಮತ್ತು ಕ್ಷಯರೋಗ ಇವುಗಳ ಔಷಧಗಳು, ನೀರು ಶುದ್ಧೀಕರಣ ತಂತ್ರಜ್ಞಾನ, ಬಿದಿರು ಉತ್ಪಾದನೆಕಾಲದ ಕಡಿತ ಮುಂತಾದ ಸಂಗತಿಗಳನ್ನು ಮಾಡಿತು. ಡಿಎನ್ಎ ಫಿಂಗರ ಪ್ರಿಂಟಿಂಗ ತಂತ್ರಜ್ಞಾನಗಳನ್ನು ಭಾರತದಲ್ಲಿ ಪ್ರಪ್ರಥಮವಾಗಿ ಬಳಸುವುದು, ಅಂದಮಾನದಲ್ಲಿಯ ಆದಿವಾಸಿಗಳ ವಂಶಮೂಲದ ಅಭ್ಯಾಸ ಮಾಡಿ ಆ ಪಂಗಡಗಳು ಅರವತ್ತು ಸಾವಿರ ವರ್ಷ ಹಳೆಯವಾಗಿವೆಯೆಂಬುದನ್ನು ಸಿದ್ಧಪಡಿಸುವುದು, ಭೂಕಂಪದ ಮುನ್ಸೂಚನೆಯನ್ನು ಪಡೆಯುವುದು ಮುಂತಾದ ಕಾರ್ಯಗಳನ್ನು ಈ ಸಂಸ್ಥೆಯು ಮಾಡಿತು.

ಕೀಟನಾಶಕವೆಂದು ಬೇವಿನ ಉಪಯೋಗ ಮಾಡುವುದು, ಗಾಯವು ಮಾಯುವ ಸಲುವಾಗಿ ಅರಿಶಿಣದ ಉಪಯೋಗ, ಅಕ್ಕಿಯ ಜಾತಿಗಳ (ಪ್ರಕಾರಗಳ) ಸಂದರ್ಭದಲ್ಲಿಯ ಸ್ವಾಮ್ಯ (ಪೇಟಂಟ) ಮುಂತಾದವುಗಳಲ್ಲಿ CSIR ಈ ಸಂಸ್ಥೆಯು ಮಹತ್ವದ ಪಾತ್ರವನ್ನು ವಹಿಸಿತು. CSIR ಇದು ಭಾರತದಲ್ಲಿಯ ಪರಂಪರಾಗತ ಜ್ಞಾನದ ಡಿಜಿಟಲ್ ಕೋಶವನ್ನು ತಯಾರಿಸಿ ಅದನ್ನು ಎಂಟು ಅಂತರರಾಷ್ಟ್ರೀಯ ಭಾಷೆಗಳಲ್ಲಿ ಲಭ್ಯಮಾಡಿ ಕೊಟ್ಟಿತು.

**ಗಣಿತ:** ತಮಿಳುನಾಡಿನಲ್ಲಿಯ 'ನ್ಯಾಶನಲ ಇನ್‌ಸ್ಟಿಟ್ಯೂಟ ಫಾರ ರಿಸರ್ಚ ಇನ್‌ದ ಮ್ಯಾಥೆಮ್ಯಾಟಿಕಲ್ ಆ್ಯಂಡ್ ಫಿಜಿಕಲ್ ಸೈನ್ಸ' ಈ ಸಂಸ್ಥೆಯು 1962ರಲ್ಲಿ

ಸ್ಥಾಪನೆಯಾಗಿತ್ತು. ಈ ಸಂಸ್ಥೆಯು ಗಣಿತ ವಿಷಯದಲ್ಲಿಯ ಸರ್ವೋಚ್ಚ ಸಂಶೋಧನೆಗೆ ಚಾಲನೆ ನೀಡಿತು.

**ಗಣಕಯಂತ್ರ:** 1969ರಲ್ಲಿ ನಾವು ಸ್ವದೇಶಿ ನಿರ್ಮಿತಿಯ ಗಣಕಯಂತ್ರವನ್ನು ತಯಾರಿಸಿದೆವು. ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ ಮತ್ತು ಜಾದವಪೂರ ವಿಶ್ವವಿದ್ಯಾಲಯಗಳು ಸಂಯುಕ್ತವಾಗಿ 'ಆಯ್‌ಎಸ್‌ಆಯ್ ಜೆಯು' ಎಂಬ ಸ್ವದೇಶಿ ನಿರ್ಮಿತಿಯ ಮೊದಲನೆಯ ಗಣಕಯಂತ್ರವನ್ನು ತಯಾರಿಸಿದವು. ಟಾಟಾ ಕನ್ಸಲ್ಟನ್ಸಿ ಸರ್ವ್ಹಿಸೆಸ್ ಅರ್ಥಾತ್ 'ಟಿ.ಸಿ.ಎಸ್' ಈ ಕಂಪನಿಗೆ 1974 ರಲ್ಲಿ ಅಮೇರಿಕೆಯಿಂದ ಸಾಫ್ಟ್‌ವೇ ನಿರ್ಮಿತಿ ಕ್ಷೇತ್ರದಲ್ಲಿಯ ಗುತ್ತಿಗೆ ದೊರಕಿತು ಹಾಗೂ ಭಾರತದಲ್ಲಿ ಸಾಫ್ಟವೇರ ಉದ್ಯೋಗಕ್ಕೆ ಆರಂಭವಾಯಿತು. ಗಣಕಯಂತ್ರದಿಂದಾಗಿ ವೈಜ್ಞಾನಿಕ ಸಂಶೋಧನೆಯ ವೇಗ ಹೆಚ್ಚಿತು.

1987ರಲ್ಲಿ ಅಮೇರಿಕೆಯು ಭಾರತಕ್ಕೆ ಮಹಾಗಣಕ ಯಂತ್ರವನ್ನು ನೀಡಲು ನಿರಾಕರಿಸಿತು. ರಾಜೀವ ಗಾಂಧಿ ಸರಕಾರವು ಸ್ವತಃ ಮಹಾಗಣಕಯಂತ್ರವನ್ನು ವಿಕಸಿತಗೊಳಿಸುವ ನಿರ್ಣಯವನ್ನು ತೆಗೆದುಕೊಂಡಿತು. 1988ರಲ್ಲಿ ಕೇಂದ್ರ ಸರಕಾರವು ಪುಣೆಯಲ್ಲಿ 'ಸೆಂಟರ ಫಾರ ಡೆವ್ಹಲಪ್‌ಮೆಂಟ್ ಆಫ್ ಆ್ಯಡವ್ಹಾನ್ಸ್ಡ ಕಂಪ್ಯೂಟಿಂಗ' (ಸೀಡ್ಯಾಕ್) ಈ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿತು. 1991ರಲ್ಲಿ ಡಾ. ವಿಜಯ ಭಟಕರ ಇವರ ನೇತೃತ್ವದಲ್ಲಿ ಪರಮ-8000 ಈ ಮಹಾಗಣಕಯಂತ್ರವನ್ನು ತಯಾರಿಸಲಾಯಿತು.

**ಭಾಭಾ ಅಟೋಮಿಕ್ ರಿಸರ್ಚ ಸೆಂಟರ (BARC):** ಈ ಸಂಸ್ಥೆಯು ನ್ಯೂಕ್ಲಿಯರ ಫಿಜಿಕ್ಸ, ಸಾಲಿಡ್ ಸ್ಟೇಟ ಫಿಜಿಕ್ಸ, ಸ್ಪೆಕ್ಟ್ರೋಸ್ಕೋಪಿ ಕೆಮಿಕಲ್ ಆ್ಯಂಡ ಲೈಫ ಸೈನ್ಸೆಸ್ ಮುಂತಾದ ವಿವಿಧ ವಿಷಯಗಳಲ್ಲಿ ಅಮೂಲ್ಯ ಸಂಶೋಧನೆ ಮಾಡಿತು. ಅಣುಭಟ್ಟಿ ನಿರ್ಮಿತಿಗಾಗಿ ಶಾಸ್ತ್ರಜ್ಞರಿಗೆ ತರಬೇತು ನೀಡುವ ಸಲುವಾಗಿ ಟ್ರೇನಿಂಗ ಸ್ಕೂಲ ಆರಂಭಿಸಲಾಯಿತು.

## ಅಭಿಯಾಂತ್ರಿಕೆ

**ಆಯ್‌ಆಯ್‌ಟಿ:** 1951ರಲ್ಲಿ ಪಶ್ಚಿಮ ಬಂಗಾಲದಲ್ಲಿಯ ಖರಗಪೂರ ಎಂಬಲ್ಲಿ ಭಾರತದಲ್ಲಿಯ ಮೊದಲನೆಯ ಇಂಡಿಯನ್ ಇನ್‌ಸ್ಟಿಟ್ಯೂಟ ಆಫ್ ಟೆಕ್ನಾಲಾಜಿ (IIT) ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಭಾರತದಲ್ಲಿ ಅಭಿಯಾಂತ್ರಿಕದ ಎಲ್ಲಾ ಶಾಖೆಗಳಲ್ಲಿಯ ಉಚ್ಚ ಮತ್ತು ಮುಂದುವರಿದ ಶಿಕ್ಷಣವು ಲಭ್ಯವಾಗಿ ದೇಶದ ಅವಶ್ಯಕತೆಗಳು ಪೂರ್ಣವಾಗಬೇಕು ಎಂಬುದೇ ಈ ಸಂಸ್ಥೆಯ ಉದ್ದೇಶವಾಗಿತ್ತು. ಪವಯಿ (ಮುಂಬಯಿ), ಚೆನ್ನೈ, ಕಾನಪೂರಗಳ ನಂತರ ಹೊಸ ದಿಲ್ಲಿಯಲ್ಲಿಯ ಅಭಿಯಾಂತ್ರಿಕ ಮಹಾವಿದ್ಯಾಲಯವನ್ನು ಆಯ್‌ಆಯ್ ಟಿಯಲ್ಲಿ ರೂಪಾಂತರಗೊಳಿಸಲಾಯಿತು. ಈ ಸಂಸ್ಥೆಗಳ ಸ್ಥಾಪನೆಗಾಗಿ ಸೋವಿಯತ ಯುನಿಯನ್, ಅಮೇರಿಕಾ, ಜರ್ಮನಿ ಮತ್ತು ಯುನೆಸ್ಕೊಗಳು ಸಹಾಯ ಮಾಡಿದವು.

ಭಾರತದಲ್ಲಿಯ ಆಯ್‌ಆಯ್‌ಟಿ ಈ ಸಂಸ್ಥೆಗೆ ಸ್ವಾಯತ್ತ ವಿಶ್ವವಿದ್ಯಾಲಯದ ದರ್ಜೆಯನ್ನು ನೀಡಿ ಬಿ.ಟೆಕ್ ಮತ್ತು ಎಮ್‌ಟೆಕ್ ಅಭ್ಯಾಸಕ್ರಮವನ್ನು ಆರಂಭಿಸಲಾಯಿತು ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ, ನ್ಯಾಯವಾದ ಶುಲ್ಕ, ಮತ್ತು ವಿದ್ಯಾರ್ಥಿಗಳಿಗಾಗಿ ಮೀಸಲಾತಿ ಇವು ಆಯ್‌ಆಯ್‌ಟಿ ಸಂಸ್ಥೆಯ ವೈಶಿಷ್ಟ್ಯಗಳಾಗಿವೆ. 1970-80ರ ದಶಕದಲ್ಲಿ ಈ ಸಂಸ್ಥೆಯಲ್ಲಿಯ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ವಿದೇಶಗಳಿಗೆ ಹೋಗತೊಡಗಿದರು. ಇದರಿಂದಾಗಿ ಬ್ರೇನಡ್ರೇನ ಸಮಸ್ಯೆಯು (ಅಂದರೆ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಶಾಶ್ವತವಾಗಿ ವಿದೇಶದಲ್ಲಿರುವುದು) ನಿರ್ಮಾಣವಾಯಿತು. 1990ರ ನಂತರ ಮಾತ್ರ ಈ ಪರಿಸ್ಥಿತಿ ಬದಲಾಯಿತು. 1994ರಲ್ಲಿ ಗುವಾಹಾಟಿ (ಆಸಾಮ)ಯಲ್ಲಿ 2001ರಲ್ಲಿ ರೂರಕಿ ಆಯ್ ಆಯ್‌ಟಿ ಈ ಸಂಸ್ಥೆಯ ಸ್ಥಾಪನೆ ಮಾಡಲಾಯಿತು.

**ಇಂಡಿಯನ್ ಇನ್‌ಸ್ಟಿಟ್ಯೂಟ ಆಫ್ ಮ್ಯಾನೇಜಮೆಂಟ (ITM):** ಆಯ್‌ಆಯ್‌ಟಿಯಿಂದ ಉನ್ನತ ದರ್ಜೆಯ ಅಭಿಯಂತರು ನಿರ್ಮಾಣವಾಗತೊಡಗಿದ ನಂತರ ಕುಶಲ ದರ್ಜೆಯ ವ್ಯವಸ್ಥಾಪಕರನ್ನು ನಿರ್ಮಿಸುವ ಸಲುವಾಗಿ ಕೇಂದ್ರ ಸರಕಾರ ಮತ್ತು ಗುಜರಾತ ರಾಜ್ಯಸರಕಾರಗಳು ಅಹಮದಾಬಾದಿನಲ್ಲಿ ಈ ಸಂಸ್ಥೆಯ ಸ್ಥಾಪನೆ ಮಾಡಿದವು. ಈ ಸಂಸ್ಥೆಯ ಸ್ಥಾಪನೆಗೆ ಅಮೇರಿಕೆಯ ಹಾರ್ವರ್ಡ ಬಿಜಿನೆಸ್ ಸ್ಕೂಲ ಈ ಸಂಸ್ಥೆಯು ಸಹಾಯಮಾಡಿತು. ಕೋಲಕಾತಾ, ಬೆಂಗಳೂರು, ಲಖನೌ, ಕೋಝಿಕೋಡೆ, ಇಂದೂರ ಮತ್ತು ಶಿಲಾಂಗಗಳಲ್ಲಿ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ (IIM) ಈ ಸಂಸ್ಥೆಗಳನ್ನು ಸ್ಥಾಪಿಸಲಾಯಿತು.

**ನ್ಯಾಶನಲ್ ಇನ್‌ಸ್ಟಿಟ್ಯೂಟ ಆಫ್ ಡಿಝೈನ (NID):** ಔದ್ಯೋಗಿಕ ರೇಖಾಂಕನ (ಇಂಡಸ್ಟ್ರೀಯಲ್ ಡಿಝೈನಿಂಗ)



**ಗೊತ್ತಿದೆಯೇ ನಿಮಗೆ?**

'ಫಿಲ್ಮ ಆ್ಯಂಡ ಟೆಲಿವ್ಹಿಜನ್ ಇನ್‌ಸ್ಟಿಟ್ಯೂಟ ಆಫ್ ಇಂಡಿಯಾ' ಈ ಸಂಸ್ಥೆಯಲ್ಲಿ ಚಲನಚಿತ್ರ ನಿರ್ಮಿತಿ ಸಂದರ್ಭದಲ್ಲಿಯ ಶಿಕ್ಷಣ ದೊರೆಯುತ್ತದೆ. ದಿಗ್ದರ್ಶನ, ಸಂಕಲನೆ ಮತ್ತು ಅಭಿನಯ ಈ ರೀತಿ ಚಲನಚಿತ್ರಗಳಿಗೆ ಸಂಬಂಧಿತವಾದ ಎಲ್ಲಾ ವಿಷಯಗಳ ಶಾಸ್ತ್ರಶುದ್ಧವಾದ ತರಬೇತಿಯನ್ನು ನೀಡುವ ಸೌಕರ್ಯವು ಈ ಸಂಸ್ಥೆಯಲ್ಲಿದೆ. ಪುಣೆಯಲ್ಲಿಯ 'ಪ್ರಭಾತ ಫಿಲ್ಮ ಕಂಪನಿಯ ಉತ್ತರದಾಯಿತ್ವವು ಈ ಸಂಸ್ಥೆಗೆ ದೊರಕಿತು.

ಈ ವಿಷಯದ ಶಿಕ್ಷಣವನ್ನು ನೀಡುವುದಕ್ಕಾಗಿ 1961ರಲ್ಲಿ ಅಹಮದಾಬಾದ ಎಂಬಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯು 1963-64ರಲ್ಲಿ ಬೇಸಿಕ್ ಡಿಜೈನ, ಗ್ರಾಫಿಕ್ ಡಿಝೈನ, ವಸ್ತುಗಳ ಡಿಝೈನ, ವಜ್ಯಾವಲ್ ಕಮ್ಯುನಿಕೇಶನ್ ಈ ಅಭ್ಯಾಸಕ್ರಮಗಳನ್ನ ಆರಂಭಿಸಿತು. ಈ ಸಂಸ್ಥೆಯು ಆಕಾಶ ವಾಣಿಸಂಚ (ಟ್ರಾಂಝಿಸ್ಟರ) ಗಣಕಯಂತ್ರ (ಕ್ಯಾಲ್ಕ್ಯುಲೇಟರ) ಈ ವಸ್ತುಗಳ ರೇಖಾಂಕನ (ಡಿಝೈನ), ಇಂಡಿಯನ್ ಏರಲೈನ್ಸ್ ಮತ್ತು ಸ್ಟೇಟಬ್ಯಾಂಕ ಇವುಗಳ ಲಾಂಛನವನ್ನು ತಯಾರಿಸುವುದು ಇತ್ಯಾದಿ ಕಾರ್ಯಗಳನ್ನು ಮಾಡಿದೆ.

## ಸಂಶೋಧನ ಸಂಸ್ಥೆ - ವೈದ್ಯಕೀಯ ಕ್ಷೇತ್ರ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿಯ ಸಂಶೋಧನೆಗಾಗಿ 1949 ರಲ್ಲಿ 'ಭಾರತೀಯ ವೈದ್ಯಕೀಯ ಅನುಸಂಧಾನ ಪರಿಷತ್ತಿ'ನ (ICMR) ಸ್ಥಾಪನೆಯಾಯಿತು ಈ ಸಂಸ್ಥೆಗೆ ದೇಶದಲ್ಲಿಯ ವಿಶ್ವವ್ಯಾಲಯಗಳ, ವೈದ್ಯಕೀಯ ಮಹಾವಿದ್ಯಾಲಯಗಳು, ಸರಕಾರಿ ಮತ್ತು ಖಾಸಗಿ ಸಂಶೋಧನ ಸಂಸ್ಥೆಗಳಿಗೆ ಸಂಶೋಧನೆಯ ಸಲುವಾಗಿ ಸಹಕಾರ, ಮಾರ್ಗದರ್ಶನ ಮತ್ತು ಆರ್ಥಿಕ ನೆರವನ್ನು ಒದಗಿಸುವ ಜವಾಬ್ದಾರಿಯನ್ನು ನೀಡಲಾಯಿತು. ವಿವಿಧ ರೋಗಗಳ ಮೇಲೆ ಸಂಶೋಧನೆ ಮಾಡುವ 26 ಕೇಂದ್ರಗಳ ದೇಶದ ತುಂಬೆಲ್ಲ ಆರಂಭವಾದವು. ಈ ಸಂಸ್ಥೆಯ ಸಂಶೋಧನೆಯಿಂದಾಗಿ ಕ್ಷಮರೋಗ ಮತ್ತು ಕುಷ್ಠರೋಗಗಳನ್ನು ನಿಯಂತ್ರಿಸಲು ಸಾಧ್ಯವಾಯಿತು.

ಇದೇ ಕ್ಷೇತ್ರದಲ್ಲಿಯ ಮುಂದುವರಿದ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ಚಾಲನೆ ನೀಡುವ ಸಲುವಾಗಿ 'ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ ಆಫ್ ಮೆಡಿಕಲ್ ಸೈನ್ಸೆಸ್' (AIIMS) ಈ ಸಂಸ್ಥೆಯ ಸ್ಥಾಪನೆಯಾಯಿತು. ಈ ಸಂಸ್ಥೆಗೆ ವೈದ್ಯಕೀಯ ಶಾಸ್ತ್ರದ ಪದವಿ ಮತ್ತು ಸ್ನಾತಕೋತ್ತರ ಅಭ್ಯಾಸಕ್ರಮದ ಶಿಕ್ಷಣದ ಜವಾಬ್ದಾರಿಯನ್ನು ಹೊರಸಲಾಯಿತು. ವೈದ್ಯಕೀಯ ಶಾಸ್ತ್ರದ ಬಹುತೇಕ ಶಾಖೆಗಳಲ್ಲಿಯ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣದ ಸೌಕರ್ಯಗಳು ಇರುವ ಮಹಾವಿದ್ಯಾಲಯಗಳು, ಸಂಶೋಧನೆಯ ಉತ್ತಮ ಸೌಕರ್ಯಗಳು, ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆಗಳು - ಈ ಸಂಸ್ಥೆಯ ಪ್ರಮುಖ ವೈಶಿಷ್ಟ್ಯಗಳಾಗಿವೆ. ಈ ಸಂಸ್ಥೆಯು ಜನಸಾಮಾನ್ಯರಿಗಾಗಿ ನ್ಯಾಯವಾದ ದರದಲ್ಲಿ ವೈದ್ಯಕೀಯ ಉಪಚಾರದ ಸೌಲಭ್ಯ ನೀಡಿದೆ ದಾಯಿಗಳ (ನರ್ಸ) ತರಬೇತಿಗಾಗಿ ಸ್ವತಂತ್ರ ಮಹಾವಿದ್ಯಾಲಯ, ಹೃದಯವಿಕಾರ, ಮೆದುಳು ವಿಕಾರ ಮತ್ತು ನೇತ್ರ ವಿಕಾರಗಳ ಮೇಲೆ ಉಪಚಾರ ಮಾಡುವುದಕ್ಕಾಗಿ ಸುಪರ ಸ್ಪೆಶಾಲಿಟಿ ಕೇಂದ್ರಗಳನ್ನು ಈ ಸಂಸ್ಥೆಯು ಸ್ಥಾಪಿಸಿತು. ಸರಕಾರವು ಅಧಿಕ ಪ್ರಮಾಣದಲ್ಲಿ ವೈದ್ಯಕೀಯ ಕ್ಷೇತ್ರದ ವಿಕಾಸ ಮಾಡುವುದಕ್ಕಾಗಿ 1958ರಲ್ಲಿ 'ಮೆಡಿಕಲ ಕೌನ್ಸಿಲ ಆಫ್ ಇಂಡಿಯಾ' ಈ ಸಂಸ್ಥೆಯ ಪುನರ್ರಚನೆ ಮಾಡಿತು. ವೈದ್ಯಕೀಯ ಶಿಕ್ಷಣದ ಯೋಗ್ಯತೆಯ ಮಾನದಂಡದ ನಿರ್ಧಾರ ಮತ್ತು ಮೇಲ್ವಿಚಾರಣೆ ಹಾಗೂ ಪರೀಕ್ಷಣೆಯ ಜವಾಬ್ದಾರಿಯನ್ನು ಈ ಸಂಸ್ಥೆಗೆ ಒಪ್ಪಿಸಲಾಯಿತು.

**ಕರ್ಕರೋಗ ಶಿಕ್ಷಣ :** 'ಆ್ಯಡ್‌ವ್ಹಾನ್ಸ್ಡ ಸೆಂಟರ ಫಾರ ಟ್ರೀಟಮೆಂಟ ರಿಸರ್ಚ ಆ್ಯಂಡ್ ಎಜ್ಯುಕೇಶನ್ ಇನ್ ಕ್ಯಾನ್ಸರ' ಇದು ಟಾಟಾ ಮೆಮೋರಿಯಲ್ ಸೆಂಟರ ಶಾಖೆ ಇದೆ. ಕರ್ಕರೋಗದ ಮೇಲಿನ ಉಪಚಾರ, ಸಂಶೋಧನೆ ಮತ್ತು ಕರ್ಕರೋಗ ವಿಷಯದ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿಯ ಕೇಂದ್ರವೆಂದು ಈ ಸಂಸ್ಥೆಯು ಕಾರ್ಯನಿರತವಾಗಿದೆ.



### ಗೊತ್ತಿದೆಯೇ ನಿಮಗೆ?

ಆಯುರ್ವೇದ, ನಿಸರ್ಗೋಪಚಾರ, ಯುನಾನಿ ಮತ್ತು ಹೋಮಿಯೋಪಥಿ ಈ ಉಪಚಾರ ಪದ್ಧತಿಗಳಲ್ಲಿ ಸಂಶೋಧನೆ ಮತ್ತು ವಿಕಾಸ ಮಾಡುವುದಾಕ್ಕಾಗಿ 1969ರಲ್ಲಿ 'ಸೆಂಟ್ರಲ್ ಕೌನ್ಸಿಲ್ ಫಾರ ರಿಸರ್ಚ ಇನ್ ಇಂಡಿಯನ್ ಮೆಡಿಸಿನ್ ಆ್ಯಂಡ ಹೋಮಿಯೋಪಥಿ' ಈ ಸಂಸ್ಥೆ ಸ್ಥಾಪನೆ ಮಾಡಲಾಗಿತ್ತು. 1979ರಲ್ಲಿ ಸಂಸ್ಥೆಯನ್ನು ವಿಸರ್ಜಿಸಿ ಅದರ ಬದಲಾಗಿ ಮೂರು ಹೊಸ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. (1) ಸೆಂಟ್ರಲ್ ಕೌನ್ಸಿಲ್ ಫಾರ ರಿಸರ್ಚ ಇನ್ ಯುನಾನಿ ಮೆಡಿಸಿನ್ (2) ಸೆಂಟ್ರಲ್ ಕೌನ್ಸಿಲ್ ಫಾರ ರಿಸರ್ಚ ಇನ್ ಹೋಮಿಯೋಪಥಿ (3) ಸೆಂಟ್ರಲ್ ಕೌನ್ಸಿಲ್ ಫಾರ ರಿಸರ್ಚ ಇನ್ ಯೋಗ ಆ್ಯಂಡ ನೇಚರ ಕ್ಯುಅರ.

ಈ ಸಂಸ್ಥೆಗಳ ಕಡೆಗೆ ಆಯಾ ಉಪಚಾರ ಪದ್ಧತಿಗನುಸಾರವಾಗಿ ವಿವಿಧ ರೋಗಗಳ ಸಂಶೋಧನೆ, ಪರೀಕ್ಷೆ ಔಷಧಗಳ ಪ್ರಮಾಣೀಕರಣಗಳ ಜವಾಬ್ದಾರಿಯನ್ನು ಒಪ್ಪಿಸಲಾಯಿತು.

## ಸಂಶೋಧನಾ ಸಂಸ್ಥೆ - ಕೃಷಿ

ಭಾರತದಲ್ಲಿ ಕೃಷಿಕ್ಷೇತ್ರದಲ್ಲಿಯ ಸಂಶೋಧನೆ 1905ರಲ್ಲಿ ಆರಂಭವಾಯಿತು. ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗೆ (ಇಂಡಿಯನ್ ಆ್ಯಗ್ರಿಕಲ್ಚರಲ್ ರಿಸರ್ಚ ಇನ್‌ಸ್ಟಿಟ್ಯೂಟ) 1958ರಲ್ಲಿ ವಿಶ್ವವಿದ್ಯಾಲಯದ ದರ್ಜೆಯನ್ನು ನೀಡಲಾಯಿತು. ಕೃಷಿ ಕ್ಷೇತ್ರದ ವಿಕಾಸ, ಸಂಶೋಧನೆ, ಸುಸಜ್ಜಿತ ಪ್ರಯೋಗಶಾಲೆ, ಮೃದಾಶಾಸ್ತ್ರ

ಕೃಷಿಶಾಸ್ತ್ರ, ಆರ್ಥಿಕ ವನಸ್ಪತಿ ಶಾಸ್ತ್ರ ಇತ್ಯಾದಿ ವಿಭಾಗಗಳ ಮೂಲಕ ವಿಶ್ವವಿದ್ಯಾಲಯದ ಕಾರ್ಯ ಆರಂಭವಾಯಿತು.

ಈ ಸಂಸ್ಥೆಯ ಹೊಸ ದಿಲ್ಲಿಯಲ್ಲಿಯ ಮುಖ್ಯ ಕಚೇರಿಯಲ್ಲಿ ಗ್ರಂಥಾಲಯವಿದೆ ಈ ಗ್ರಂಥಾಲಯವು ದೇಶದಲ್ಲಿಯ ಅತ್ಯಂತ ದೊಡ್ಡ ಕೃಷಿ ವಿಷಯದ ಗ್ರಂಥಾಲಯವಾಗಿದೆ ಗೋಧಿ, ದ್ವಿದಳ ಧಾನ್ಯಗಳು (ಬೇಳೆ ಕಾಳುಗಳು) ಎಣ್ಣೆ ಕಾಳುಗಳು, ಕಾಯಿಪಲ್ಯೆ ಮುಂತಾದ ಅನೇಕ ಬೆಳೆಗಳ ಮೇಲೆ ಸಂಶೋಧನೆ ಆರಂಭವಾಯಿತು.

ಈ ಸಂಸ್ಥೆಯ ಅತ್ಯಂತ ಮಹತ್ವದ ಕಾರ್ಯವೆಂದರೆ ಒಂದು ವರ್ಷ ಒಂದಕ್ಕಿಂತ ಹೆಚ್ಚು ಬೆಳೆಗಳನ್ನು ತೆಗೆದುಕೊಳ್ಳವ ಪದ್ಧತಿಯನ್ನು ಕುರಿತು ಮೂಲಭೂತ ಸಂಶೋಧನೆ ಇಲ್ಲಿ ಆರಂಭವಾಯಿತು. ರೈತರಿಗೆ ಇದರ ಲಾಭವಾಯಿತು.

ಮುಂದಿನ ಪಾಠದಲ್ಲಿ ನಾವು ಮಹಿಳೆಯರ ವಿಷಯದ ಕಾನೂನು, ಮಹಿಳೆಯರ ಕೊಡುಗೆ, ಅನ್ಯದುರ್ಬಲ ಘಟಕಗಳ ಸಂದರ್ಭದಲ್ಲಿ ಸರಕಾರದ ನಿಲುವು - ಇವುಗಳ ಬಗ್ಗೆ ಅಭ್ಯಾಸ ಮಾಡುವವರಿದ್ದೇವೆ.



## ಸ್ವಾಧ್ಯಾಯ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಿಧಾನಗಳನ್ನು ಪೂರ್ಣಮಾಡಿರಿ.**

(1) ಪರಮ-8000 ಈ ಮಹಾಗಣಕಯಂತ್ರವನ್ನು ತಯಾರಿಸಿದ ಶಾಸ್ತ್ರಜ್ಞರು.......
- (ಅ) ಡಾ. ವಿಜಯ ಭಟಕರ
- (ಬ) ಡಾ. ಎಚ್. ಆರ್.ದವೆ
- (ಕ) ಪಿ. ಪಾರ್ಥಸಾರಥಿ
- (ಡ) ಮೇಲಿನವರಲ್ಲಿ ಯಾರೂ ಇಲ್ಲ..

(2) ಜೀವನ ಶಿಕ್ಷಣ ಈ ಮಾಸ ಪ್ರತ್ರಿಕೆಯನ್ನು .......... ಈ ಸಂಸ್ಥೆಯ ಪತಿಯಿಂದ ಕ್ರಕಟಿಸಲಾಗುತ್ತದೆ.
- (ಅ) ಬಾಲಭಾರತಿ (ಬ) ವಿದ್ಯಾಪ್ರಾಧಿಕರಣ
- (ಕ) ವಿಶ್ವವಿದ್ಯಾಲಯ ಶಿಕ್ಷಣ ಆಯೋಗ
- (ಡ) ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಮತ್ತು ಉಚ್ಚ ಮಾಧ್ಯಮಿಕ ಶಿಕ್ಷಣ ಮಂಡಳ

(3) ಆಯ್ ಆಯ್‌ಟಿ ಈ ಶಿಕ್ಷಣ ಸಂಸ್ಥೆಯು ........ ಕ್ಷೇತ್ರದಲ್ಲಿಯ ಶಿಕ್ಷಣವನ್ನು ನೀಡಲು ಪ್ರಸಿದ್ಧವಾಗಿದೆ.
- (ಅ) ಕೃಷಿ (ಬ) ವೈದ್ಯಕೀಯ
- (ಕ) ಕುಶಲ ದರ್ಜೆಯ ವ್ಯವಸ್ಥಾಪಕ
- (ಡ) ಅಭಿಯಾಂತ್ರಿಕ (ಎಂಜಿನಿಯರಿಂಗ)

**2. ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**

(1) ಭಾರತದಲ್ಲಿಯ ಶೈಕ್ಷಣಿಕ ಕ್ಷೇತ್ರದಲ್ಲಿಯ ವ್ಯಕ್ತಿ ಮತ್ತು ಅವರ ಕಾರ್ಯಗಳ ವಿಷಯದ ಕೋಷ್ಟಕವನ್ನು ಪೂರ್ಣಮಾಡಿರಿ.

| ವ್ಯಕ್ತಿ | ಕಾರ್ಯ |
|---|---|
| ಭಾರತದ ಮೊದಲನೆಯ ಶಿಕ್ಷಣ ಸಚಿವ | ...................... |
| ................. | ವಿಶ್ವವಿದ್ಯಾಲಯ ಶಿಕ್ಷಣ ಆಯೋಗದ ಅಧ್ಯಕ್ಷರು |
| ಪಾ. ಸಯ್ಯದ ರಾವುಫ | ...................... |
| ................... | ಕೋಸಬಾಡ ಯೋಜನೆ |

(2) 'ನ್ಯಾಶನಲ್ ಕೌನ್ಸಿಲ್ ಆಫ್ ಎಜ್ಯುಕೇಶನಲ್ ರಿಸರ್ಚ ಆ್ಯಂಡ್ ಟ್ರೇನಿಂಗ' ಈ ಸಂಸ್ಥೆಯ ಬಗ್ಗೆ ಮಾಹಿತಿ ನೀಡುವ ಕೋಷ್ಟಕವನ್ನು ಕೆಳಿಗಿನ ಅಂಶಗಳ ಆಧಾರದಿಂದ ತಯಾರಿಸಿರಿ.

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಆರಂಭಿಸಲಾಯಿತು.

(2) NCERT ಯನ್ನು ಸ್ಥಾಪಿಸಲಾಯಿತು.

(3) ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಮೂಲಕ ರೈತರಿಗೆ ಲಾಭವಾಯಿತು.

**4. ಟಿಪ್ಪಣಿ ಬರೆಯಿರಿ.**

(1) ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ.

(2) ಕೋಠಾರಿ ಆಯೋಗ.

(3) ಭಾಭಾ ಆಟೋಮಿಕ್ ರಿಸರ್ಚಸೆಂಟರ.

(4) ಬಾಲಭಾರತಿ.

**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ಬರೆಯಿರಿ.**

(1) 'ಖಡು-ಕರಿಹಲಗೆ' (ಆಪರೇಶನ್ ಬ್ಲ್ಯಾಕಬೋರ್ಡ್) ಈ ಯೋಜನೆಯಲ್ಲಿ ಯಾವ ಉಪಕ್ರಮಗಳ ಸಮಾವೇಶವಿತ್ತು.

(2) ಕೃಷಿ ವಿಕಾಸದಲ್ಲಿ ಕೃಷಿ ವಿದ್ಯಾಲಯಗಳು/ ಮಹಾವಿದ್ಯಾಲಯಗಳು ಯಾವ ಪಾತ್ರವನ್ನು ವಹಿಸುತ್ತವೆ?

(3) ಭಾರತದಲ್ಲಿಯ ವೈದ್ಯಕೀಯ ಕ್ಷೇತ್ರದಲ್ಲಿಯ ಪ್ರಗತಿಯನ್ನು ವಿವಿಧ ಉದಾಹರಣೆಗಳ ಸಹಾಯದಿಂದ ಸ್ಪಷ್ಟಪಡಿಸಿರಿ.

(4) ನಿಮ್ಮ ಶಾಲೆಯಲ್ಲಿ ಆಯೋಜಿಸಲಾಗುವ ಶಾಲೆಯ ಉಪಕ್ರಮಗಳ ಬಗ್ಗೆ ಮಾಹಿತಿ ಬರೆಯಿರಿ.

**ಉಪಕ್ರಮ**

ನಿಮ್ಮ ಶಾಲೆಯಲ್ಲಿ ವಿಜ್ಞಾನ ಮೇಳವನ್ನು ಆಯೋಜಿಸಿರಿ. ಅದರೊಳಗಿಂದ 'ನೀರು ಶುದ್ಧೀಕರಣ'ದ ವಿಷಯದ ಅರಿವನ್ನು ಜಾಗ್ರತಗೊಳಿಸಲು ಪ್ರಯತ್ನಿಸಿರಿ.

C2SEZ3

# 6 ಮಹಿಳಾ ಮತ್ತು ದುರ್ಬಲ ಘಟಕಗಳ ಸಬಲೀಕರಣ

ಸ್ವಾತಂತ್ರ್ಯದ ಹೋರಾಟದಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಕೊಡುಗೆಯು ಮಹತ್ವಪೂರ್ಣವಾಗಿದೆ. ಅದರ ಅಭ್ಯಾಸವನ್ನು ನಾವು ಈ ಪಾಠದಲ್ಲಿ ಮಾಡುವವರಿದ್ದೇವೆ. ಅದರಂತೆ ಮಹಿಳೆಯರ ಮತ್ತು ಇತರ ದುರ್ಬಲ ಘಟಕಗಳ ಸಂದರ್ಭದಲ್ಲಿಯ ಕಾಯ್ದೆಗಳ ಅಭ್ಯಾಸವನ್ನು ನಾವು ಮಾಡುವವರಿದ್ದೇವೆ.

**ಇದನ್ನು ತಿಳಿದುಕೊಳ್ಳಿರಿ.**

**ಪ್ರತಿ ಸಾವಿರ ಪುರುಷರಲ್ಲಿ ಮಹಿಳೆಯರ ಪ್ರಮಾಣ**

| ಅ.ಸಂ. | ಜನಗಣನೆಯ ವರ್ಷ | ಮಹಿಳೆಯರ ಪ್ರಮಾಣ |
|---|---|---|
| 1. | 1951 | 946 |
| 2. | 1961 | 641 |
| 3. | 1971 | 930 |
| 4. | 1981 | 934 |
| 5. | 1991 | 927 |
| 6. | 2001 | 933 |

ಪ್ರತಿ ಸಾವಿರ ಪುರುಷರಹಿಂದೆ ಮಹಿಳೆಯರ ಪ್ರಮಾಣವು ಏಕೆ ಕಡಿಮೆಯಾಗುತ್ತಿದೆಯೆಂಬುದರ ಕಾರಣಗಳನ್ನು ಹುಡುಕಿರಿ.

ಭಾರತದಲ್ಲಿಯ ಮಹಿಳೆಯರ ಪರಿಸ್ಥಿತಿಯ ಅಭ್ಯಾಸ ಮಾಡುವಾಗ ಗಮನಕ್ಕೆ ಬರುವ ಸಂಗತಿಯೇನೆಂದರೆ ಅವರ ಅನೇಕ ಸಮಸ್ಯೆಗಳ ಮೂಲವು ಪುರುಷರ ಮನೋಭಾವದಲ್ಲಿ ಅಡಗಿದೆ. ಇಂದು ನಾವು ಇಪ್ಪತ್ತೊಂದನೆಯ ಶತಮಾನದಲ್ಲಿ ಕಾಲಿರಿಸಿದ್ದರೂ ಈ ಪುರುಷರ ಮನೋಭಾವದೊಳಗಿಂದ ಮಹಿಳೆಯರ ಬಿಡುಗಡೆಯಾಗಿಲ್ಲ. ಮಹಾತ್ಮಾ ಗಾಂಧೀಜಿಯವರ ತತ್ವಜ್ಞಾನದ ಮೇಲೆ ವಿಶ್ವಾಸವಿಟ್ಟು ಆರಂಭವಾದ ಭೂದಾನ ಚಳುವಳಿಯಲ್ಲಿ ವಿನೋಬಾರವರು ಮಹಿಳಾ ಶಕ್ತಿಯನ್ನು ಉಪಯೋಗಿಸಿದರು ಮಹಿಳಾ ಕಾರ್ಯಕರ್ತರು ಭಾರತದ ತುಂಬೆಲ್ಲ ಭೂದಾನದ ವಿಚಾರವನ್ನು ಮುಟ್ಟಿಸಿದರು. ನಿಜಾಮಶಾಹಿ ಮತ್ತು ಸರಂಜಾಮಶಾಹಿ ವ್ಯವಸ್ಥೆಗೆ ಆಹ್ವಾನವನ್ನು ನೀಡುವ ತೇಲಂಗಣಾದಲ್ಲಿಯ ರೈತರಮುಕ್ತಿ ಸಂಗ್ರಾಮದಲ್ಲಿ ಮಹಿಳೆಯರ ಸಹಭಾಗಿತ್ವವು ಲಕ್ಷಣೀಯವಾಗಿತ್ತು. ಈ ಭಾಗವು ಜೀತ ಮುಕ್ತವಾದುದರಿಂದ ಈ ಸಂಕಟದಿಂದ ಮಹಿಳೆಯರ ಬಿಡುಗಡೆಯಾಯಿತು.

**ಮಹಿಳಾ ಶಕ್ತಿಯ ಪ್ರಕಟನೆ:** ಜೀವನಾವಶ್ಯಕ ವಸ್ತುಗಳ ಕೊರತೆ ಹಾಗೂ ಬೆಲೆ ಏರಿಕೆ ಇವುಗಳನ್ನು ಹೆಚ್ಚಿಗೆ ಹೆಚ್ಚು ಎದುರಿಸುವ ಮಹಿಳೆಯರು 1972 ರಲ್ಲಿ ಮಹಾರಾಷ್ಟ್ರದಲ್ಲಿ ತಮ್ಮ ಸಂಘಟಿತ ಶಕ್ತಿಯನ್ನು ತೋರಿಸಿಕೊಟ್ಟರು. ಸಮಾಜವಾದಿ ಮುಖಂಡಳಾದ ಮೃಣಾಲ ಗೋರೆಯವರ ನೇತೃತ್ವದಲ್ಲಿ ಮುಂಬಯಿಯಲ್ಲಿ ಮಹಿಳೆಯರು ಲಟ್ಟಣಿಗೆಯ ಮೋರ್ಚಾ ತೆಗೆದರು. ದೀಪಾವಳಿ ಹಬ್ಬದ ಸಮಯದಲ್ಲಿ ಎಣ್ಣೆ, ತುಪ್ಪ, ಸಕ್ಕರೆ, ರವಾ, ಮೈದಾ ಈ ವಸ್ತುಗಳು ಸಿಗುತ್ತಿರಲಿಲ್ಲ ಸೀಮೆ ಎಣ್ಣೆ ತುಟ್ಟಿಯಾಗಿತ್ತು. ಇದರಿಂದಾಗಿ ಮಹಿಳೆಯರು ಒಂದೆಡೆ ಒಂದು ಕೈಯಲ್ಲಿ ಲಟ್ಟಣಿಗೆಗಳನ್ನು ತೆಗೆದುಕೊಂಡರು ಮತ್ತು ನಿದರ್ಶನ (ಮೋರ್ಚಾ) ಮಾಡಿದರು. ಈ ಆಂದೋಲನೆಯು ಯಶಸ್ವಿಯಾಯಿತು ಹಾಗೂ ಮಹಿಳೆಯರ ಸಾಮೂಹಿಕ ಶಕ್ತಿಯ ಪ್ರಕಟನೆಯು ಜನತೆಗೆ ತಿಳಿಯಿತು.



ಮೃಣಾಲ ಗೋರೆ

**ಚಿಪಕೊ ಆಂದೋಲನೆ:** ಮಹಿಳಾ ಶಕ್ತಿಯ ವಿಧಾಯಕ ಆವಿಷ್ಕಾರವು 1973ರ ಚಿಪಕೊ ಆಂದೋಲನೆಯಲ್ಲಿ ಕಂಡುಬಂದಿತು. ಹಿಮಾಲಯದ ಅಡಿಯಲ್ಲಿ ಇರುವ ಅರಣ್ಯದಲ್ಲಿಯ ಗಿಡಗಳನ್ನು ವ್ಯಾಪಾರದ ಉದ್ದೇಶಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಕಡಿಯುವವರಿದ್ದರು. ಅದರ ವಿರುದ್ಧ ಚಂಡೀಪ್ರಸಾದ ಭಟ್ಟ ಮತ್ತು ಸುಂದರಲಾಲ ಬಹುಗುಣಾ ಇವರು ಆಂದೋಲನೆ ಮಾಡಿದರು. ಮಹಿಳೆಯರು ಕೈಯಲ್ಲಿ ಕೈಹಾಕಿ ವೃಕ್ಷಗಳನ್ನು ಸುತ್ತುವರಿಯುವ ತಂತ್ರವನ್ನು ಅವಲಂಬಿಸಿದರು. ವೃಕ್ಷಗಳು ಕಡಿಯಲ್ಪಡಬಾರದೆಂದು ಅರಣ್ಯದಲ್ಲಿ ಗಿಡಗಳನ್ನು ಅಪ್ಪಿಕೊಂಡು ಅವುಗಳನ್ನು ಸಂರಕ್ಷಿಸುವುದು ಆಂದೋಲನೆಯ ಸ್ವರೂಪವಾದುದರಿಂದ ಅದಕ್ಕೆ 'ಚಿಪಕೊ ಆಂದೋಲನೆ' ಎನ್ನುತ್ತಾರೆ. ಆಂದೋಲನೆಯಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದರು. ಈ ಪರಿಸರದಲ್ಲಿಯ ಕೃಷಿ



ಸುಂದರಲಾಲ ಬಹುಗುಣಾ



ಗೌರಾದೇವಿ

ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ವ್ಯಾಪಕ ಸಹಭಾಗಿತ್ವವಿತ್ತು. ಗೌರಾದೇವಿ ಈ ಕಾರ್ಯಕರ್ತೆಯು ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಿದಳು. ಅವರಿಗೆ ಸುದೇಶಾದೇವಿ ಮತ್ತು ಬಚನೀದೇವಿ ಇವರ ಸಹಾಯ ದೊರಕಿತು.

**ಮದ್ಯಪಾನ ವಿರೋಧಿ ಆಂದೋಲನೆ:** 1992ರಲ್ಲಿ ಆಂಧ್ರಪ್ರದೇಶದಲ್ಲಿ 'ಮದ್ಯಪಾನ ವಿರೋಧಿ ಚಳುವಳಿ' ಆರಂಭವಾಯಿತು. ನಂತರ ವಿವಿಧ ರಾಜ್ಯಗಳಲ್ಲಿ ಅದಕ್ಕೆ ಒಳ್ಳೆಯ ಪ್ರತಿಕ್ರಿಯೆ ದೊರಕಿತು. ಮದ್ಯಸೇವನೆಯ ವ್ಯಸನದಿಂದಾಗಿ ಮನೆಯ ಮುಖ್ಯಸ್ಥನು ಅಕಾಲಿಕ ಮರಣಹೊಂದಿದರೆ ಮನೆಯಲ್ಲಿಯ ಅನ್ಯಸದಸ್ಯರು ಸಂಕಟದಲ್ಲಿ ಸಿಲುಕುತ್ತಾರೆ. ಇದರ ಪೆಟ್ಟು ಎಲ್ಲಕ್ಕೂ ಹೆಚ್ಚು ಸ್ತ್ರೀಯರಿಗೆ ಬೀಳುತ್ತದೆ. ಸೆರೆಯಿಂದಾಗಿ ದುಃಖ, ದೈನ್ಯಗಳನ್ನು ಎದುರಿಸಬೇಕಾಗುತ್ತದೆ. ಆಂಧ್ರಪ್ರದೇಶದಲ್ಲಿಯ 'ಅರಕ' ವಿರೋಧಿ ಆಂದೋಲನೆಯು ಈ ಆಂದೋಲನೆಗೆ ಉಪಯುಕ್ತವಾಯಿತು.

ಸರಕಾರದ ನೀತಿಯಿಂದಾಗಿ ಆಂಧ್ರಪ್ರದೇಶದಲ್ಲಿ ಅರಕದ (ಸ್ಥಾನಿಕ ಸೆರೆ) ಮಾರಾಟಗಾರರು ಊರು-ಊರುಗಳಲ್ಲಿ ಅಂಗಡಿಗಳನ್ನು ತೆರೆದರು. ಊರುಗಳಲ್ಲಿಯ ಬಡ ಶ್ರಮಜೀವಿಗಳು ಸೆರೆಯ ಆಧೀನರಾಗಿದ್ದರು. ಅದೇ ಸಮಯದಲ್ಲಿ ರಾಜ್ಯದಲ್ಲಿ ಸಾಕ್ಷರತೆಯ ಕಾರ್ಯಕ್ರಮವು ಹಳ್ಳಿಹಳ್ಳಿಗಳಲ್ಲಿ ನಡೆಯುತ್ತಿತ್ತು. ಈ ಕಾರ್ಯಕ್ರಮದಲ್ಲಿ 'ಸೀತಾಮಾ ಕಥಾ' (ಸೀತೆಯ ಕಥೆ) ಹೇಳಲಾಗುತ್ತಿತ್ತು. ಸೀತೆಯು ಊರ ಜನರಲ್ಲಿ ಜಾಗೃತಿಯನ್ನುಂಟು ಮಾಡಿ ಸೆರೆಯನ್ನು ಹೇಗೆ ಬಿಡಿಸುತ್ತಾಳೆ ಎಂಬುದನ್ನು ಈ ಕಥೆಯಲ್ಲಿ ಹೇಳಲಾಗಿತ್ತು. 1992ರಲ್ಲಿ ಆಂಧ್ರಪ್ರದೇಶದಲ್ಲಿಯ ನೆಲ್ಲೋರ ಜಿಲ್ಲೆಯ ದುಬಾಗುಂಟಾ ಎಂಬ ಊರಲ್ಲಿ ಮೂವರು ತರುಣರು ಸೆರೆಯ ಅಮಲಿನಲ್ಲಿ ಕೆರೆಯಲ್ಲಿ ಮುಳುಗಿ ಮರಣಹೊಂದಿದರು. ಈ ಘಟನೆಯ ನಿಮಿತ್ತವಾಗಿ ಊರಲ್ಲಿಯ ಮಹಿಳೆಯರು ಒಂದಾದರು. ಅವರು ಅರಕವನ್ನು ಮಾರುವ ಅಂಗಡಿಗಳನ್ನು ಮುಚ್ಚಿಸಿದರು. ಸ್ಥಳೀಯ ವರ್ತಮಾನ ಪತ್ರಗಳಲ್ಲಿ ಈ ಸುದ್ದಿಯು ಬರುತ್ತಲೇ ಊರು-ಊರುಗಳಲ್ಲಿ ಅದರ ಪರಿಣಾಮವಾಯಿತು. ರಾಜ್ಯದ ತುಂಬೆಲ್ಲ ಆಂದೋಲನೆಯು ಹರಡಿದ್ದರಿಂದ ಸರಕಾರವು ಸೆರೆಯ ಮಾರಾಟದ ವಿರುದ್ಧ ಕಠೋರ ನೀತಿಯನ್ನು ಸ್ವೀಕರಿಸಿತು.

**ಅಂತರರಾಷ್ಟ್ರೀಯ ಮಹಿಳಾ ವರ್ಷ:** ಸಂಯುಕ್ತ ರಾಷ್ಟ್ರಗಳು ಈ ಸಂಘಟನೆಯು 1975 ಈ ವರ್ಷವನ್ನು 'ಅಂತರರಾಷ್ಟ್ರೀಯ ಮಹಿಳಾ ವರ್ಷ' ವೆಂದು ಘೋಷಣೆ ಮಾಡಿತ್ತು. ಶಾಂತಿ, ವಿಕಾಸ ಮತ್ತು ಸ್ತ್ರೀ-ಪುರುಷ ಸಮಾನತೆ ಇವು ಈ ಕಾರ್ಯಕ್ರಮದ ತ್ರಿಸೂತ್ರಗಳಾಗಿದ್ದವು. ಭಾರತ ಸರಕಾರವು 1975ರಲ್ಲಿ ಡಾ. ಫುಲರೇಣೂ ಗುಹಾ ಇವರ ಅಧ್ಯಕ್ಷತೆಯಲ್ಲಿ ಮಹಿಳಾ ಆಯೋಗದ ಸ್ಥಾಪನೆ ಮಾಡಿತು. ಮಹಿಳೆಯರ ಸಾಮಾಜಿಕ ಸ್ಥಾನ, ಅವರ ದರ್ಜೆ, ಮಹಿಳೆಯರ ವಿಷಯ ದಲ್ಲಿಯ ಸಂವಿಧಾನದಲ್ಲಿಯ ಏರ್ಪಾಟಿನ ಪರಿಣಾಮ, ಅದರಂತೆ ಮಹಿಳೆಯರ ಶಿಕ್ಷಣ ಮತ್ತು ಅದರ ಪ್ರತಿಶತ ಪ್ರಮಾಣ, ಶಿಕ್ಷಣದಿಂದಾಗಿ ಉಂಟಾದ ಅವರ ವಿಕಾಸ, ನೌಕರಿ ಮಾಡುವ ಮಹಿಳೆಯರ ಅಡಚಣೆಗಳು, ರೋಜುಗಾರಿನ ಸಂದರ್ಭದಲ್ಲಿಯ ಮಹಿಳೆಯರ ವರ್ತಮಾನ ಸ್ಥಿತಿ, ಅವರ ವೇತನ (ಪುರುಷರ ತುಲನೆಯಲ್ಲಿ) ಸ್ತ್ರೀಪುರುಷ ಪ್ರಮಾಣ, ಜನನ-ಮರಣಗಳ ಪ್ರಮಾಣ, ಮಹಿಳೆಯರ ಪಾತ್ರ. ಈ ರೀತಿ ವ್ಯಾಪಕ ಅಂಶಗಳ ಆಧಾರದಿಂದ ನಿರೀಕ್ಷಣೆ ಮಾಡಲಾಯಿತು.



ಡಾ. ಫುಲರೇಣೂ ಗುಹಾ

ಈ ಎಲ್ಲ ಹಿನ್ನೆಲೆಯ ವಿಚಾರ ಮಾಡಿ ಮಹಾರಾಷ್ಟ್ರದಲ್ಲಿ 1975ರಲ್ಲಿ 'ಸ್ತ್ರೀ ಮುಕ್ತಿ ಸಂಘರ್ಷ ಸಮಿತಿ'ಯ ವತಿಯಿಂದ ಮಹಿಳೆಯರಿಗಾಗಿ ರಾಜ್ಯವ್ಯಾಪಿ ಪರಿಷತ್ತು ನಡೆಯಿತು. ಎಲ್ಲಾ ಕ್ಷೇತ್ರಗಳಲ್ಲಿಯ ಮಹಿಳೆಯರು ಈ ಪರಿಷತ್ತಿನಲ್ಲಿ ಭಾಗವಹಿಸಿದ್ದರು. 1978ರಲ್ಲಿ ಸಮಿತಿಯ ಜಾಹೀರುನಾಮೆ ಪ್ರಕಟವಾಯಿತು. ಲಿಂಗಭೇದ, ಜಾತಿಭೇದ, ವರ್ಣಭೇದ ಈ ಅಸಮಾನ ಘಟಕಗಳ ವಿರುದ್ಧ ಹೋರಾಟ ಮಾಡಬೇಕೆಂದು ನಿರ್ಧರಿಸಲಾಯಿತು. ಇದರಿಂದಲೇ 'ಸ್ತ್ರೀ ಮುಕ್ತೀಚಿ ಲಲಕಾರಿ' ಎಂಬ ಗೀತಸಂಗ್ರಹ, ಜ್ಯೋತಿ ಮ್ಹಾಪಸೇಕರ ಇವರ 'ಮುಲಗಿ ಝಾಲಿ ಹೋ' ಎಂಬ ಬೀದಿನಾಟಕ, 'ಪ್ರೇರಕ ಲಲಕಾರಿ' ಎಂಬ ಮುಖಪತ್ರ ಮುಂತಾದ ಉಪಕ್ರಮಗಳು ಆರಂಭವಾದವು. 1977 ರಲ್ಲಿ ಸೌದಾಮಿನಿ ರಾವ ಇವರು ಸ್ಥಾಪನೆ ಮಾಡಿದರು. ಪುಣೆಯಲ್ಲಿಯ 'ಸ್ತ್ರೀ ಮುಕ್ತಿ ಆಂದೋಲನ ಸಮಿತಿ', 'ಬಾಯಜಾ' ಈ ದ್ವಿಮಾಸ ಪತ್ರಿಕೆ, ಔರಂಗಾಬಾದ್‌ನಲ್ಲಿಯ' ಸ್ತ್ರೀ ಉವಾಚ', 'ಮೈತ್ರೀಣ', 'ಸ್ತ್ರೀ ಅನ್ಯಾಯ ವಿರೋಧಿ ಮಂಚ', ಕೊಲ್ಹಾಪೂರದಲ್ಲಿ 'ಮಹಿಲಾ ದಕ್ಷತಾ ಸಮಿತಿ', ನಾಶಿಕದಲ್ಲಿ 'ಮಹಿಲಾ ಹಕ್ಕ', ಲಾತೂರದಲ್ಲಿಯ 'ನಾರಿ ಪ್ರಬೋಧನ ಮಂಚ' ಇತ್ಯಾದಿ ಗುಂಪುಗಳು ತಯಾರಾದವು. ಮಹಾರಾಷ್ಟ್ರದ ತುಂಬೆಲ್ಲ ವರದಕ್ಷಿಣಾ ವಿರೋಧಿ ಸಂರಕ್ಷಣ ಸಮಿತಿಗಳು ಸ್ಥಾಪನೆಯಾದವು. ಧುಳೆ ನಗರದಲ್ಲಿ ಮಹಿಳಾ ಅತ್ಯಾಚಾರ ವಿರೋಧಿ ಪರಿಷತ್ತನ್ನು ಆಯೋಜಿಸಲಾಗಿತ್ತು.

ಮಹಿಳೆಯರ ಸಮಸ್ಯೆಗಳ ಸಂದರ್ಭದಲ್ಲಿ ವಿದ್ಯಾಬಾಳ ಇವರ 'ನಾರಿ ಸಮತಾ ಮಂಚ' ಹಾಗೂ 'ಮಿಳೂನ ಸಾರ್‍ಯಾಜಣಿ' ಎಂಬ ನಿಯತಕಾಲಿಕೆ, ಸಮಾಜವಾದಿ ಮಹಿಳಾ ಸಭೆ ಮತ್ತು ಕ್ರಾಂತಿಕಾರಿ ಮಹಿಳಾ ಸಂಘಟನೆ- ಇವುಗಳ ಕಾರ್ಯವೂ ಮಹತ್ವದ್ದೆನಿಸಿತು ಮಹಾರಾಷ್ಟ್ರದಲ್ಲಿಯ ರೋಜಗಾರ ಹಮೀ ಯೋಜನೆಯು (ರೋಜುಗಾರು ಭರವಸೆ ಯೋಜನೆ) ಮಹಿಳಾ ಸಬಲೀಕರಣಕ್ಕೆ ಸಹಾಯ ಮಾಡಿತು.

ಪ್ರಮೀಲಾ ದಂಡವತೆಯವರು 1976ರಲ್ಲಿ ದಿಲ್ಲಿಯಲ್ಲಿ 'ಮಹಿಳಾದಕ್ಷತಾ ಸಮಿತಿ'ಯನ್ನು ಸ್ಥಾಪಿಸಿದರು. ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಒಡಿಶಾ, ಮಧ್ಯಪ್ರದೇಶ, ಉತ್ತರ ಪ್ರದೇಶ, ಪಂಜಾಬ ಈ ರಾಜ್ಯಗಳಲ್ಲಿ ಈ ಸಮಿತಿಯ ಶಾಖೆಗಳು ಆರಂಭವಾದವು. ಕಮ್ಯುನಿಸ್ಟ ಪಕ್ಷವು 1980ರಲ್ಲಿ 'ಅಖಿಲ ಭಾರತೀಯ ಜನವಾದಿ ಮಹಿಳಾ ಸಂಘಟನಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಭಾರತದ ತುಂಬೆಲ್ಲ ಈ ಸಂಘಟನೆಯ ಶಾಖೆಗಳನ್ನು ಆರಂಭಿಸುವ ಪ್ರಯತ್ನ ಮಾಡಲಾಯಿತು. ಸಂಘಟನೆಯು ವರದಕ್ಷಿಣೆ, ಸ್ತ್ರೀಭ್ರೂಣ ಹತ್ಯೆ, ಕೌಟುಂಬಿಕ ಅತ್ಯಾಚಾರ ಮುಂತಾದ ಸಮಸ್ಯೆಗಳ ವಿರುದ್ಧ ಸಂಘರ್ಷ ಮಾಡಿತು. ವಿವಿಧ ಮಟ್ಟಗಳಲ್ಲಿ ಮಹಿಳೆಯರ ಸಮಸ್ಯೆಗಳನ್ನು ಕುರಿತು ಸಂಶೋಧನೆ ಆರಂಭವಾಯಿತು. ಭಾರತದ ಮೊದಲನೆಯ ಮಹಿಳಾ ವಿಶ್ವವಿದ್ಯಾಲಯವಾದ ಶ್ರೀಮತಿ ನಾಥೀಬಾಯಿ ದಾಮೋದರ ಠಾಕರಸಿ ಮಹಿಳಾ ವಿಶ್ವವಿದ್ಯಾಲಯ ಮುಂಬಯಿ, ಟಾಟಾ ಸಮಾಜ ವಿಜ್ಞಾನ ಸಂಸ್ಥೆ ಮುಂಬಯಿ, ಸಾವಿತ್ರಿಬಾಯಿ ಫುಲೆ ಪುಣೆ ವಿಶ್ವವಿದ್ಯಾಲಯ ಪುಣೆ, ಶಿವಾಜಿ ವಿಶ್ವವಿದ್ಯಾಲಯ ಕೊಲ್ಹಾಪೂರಗಳಲ್ಲಿ ಮಹಿಳಾ ಅಭ್ಯಾಸ ಕೇಂದ್ರಗಳನ್ನು ಸ್ಥಾಪಿಸಲಾಯಿತು. 'ಆಲೋಚನಾ' ಮತ್ತು 'ದೃಷ್ಟಿ' ಈ ಕೇಂದ್ರಗಳು ಕೂಡ ಈ ಸಮಸ್ಯೆಗಳ ಸಂದರ್ಭದಲ್ಲಿ ಮಹತ್ವದ ಪಾತ್ರವನ್ನು ವಹಿಸಿದವು.


ಪ್ರಮಿಲಾ ದಂಡವತೆ

**ಮಹಿಳೆಯರನ್ನು ಕುರಿತಾದ ಕಾನೂನುಗಳು:** 1952ರ ಕಾನೂನಿಗನುಸಾರವಾಗಿ ಭಾರತದ ಸರಕಾರವು ಹಿಂದೂ ಮಹಿಳೆಯರಿಗೆ ಜೀವನಾಂಶದ ಅಧಿಕಾರವನ್ನು ನೀಡಿತು. ತಂದೆಯ ಸಂಪತ್ತಿನಲ್ಲಿ ಪಾಲನ್ನು ನೀಡಲಾಯಿತು. ಸ್ತ್ರೀಧನದ ಮೇಲೆ ಅವಳ ಅಧಿಕಾರ ನಿರ್ಮಾಣವಾಯಿತು. ಬಹುಪತ್ನಿತ್ವವು ಕೊನೆಗೊಂಡು ಪುರುಷರಂತೆ ಮಹಿಳೆಯರಿಗೂ ವಿವಾಹ ವಿಚ್ಛೇದನದ ಅಧಿಕಾರವನ್ನು ನೀಡಲಾಯಿತು. ನಂತರದ ದಶಕದಲ್ಲಿ ಮಹಿಳೆಯರ ಸಂದರ್ಭದಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಡುವ ಕಾನೂನು ಜಾರಿಯಲ್ಲಿ ಬಂದಿತು. 'ವರದಕ್ಷಿಣಾ ಪ್ರತಿಬಂಧಕ ಕಾನೂನು 1961'ರ ಅನುಸಾರ ವರದಕ್ಷಿಣೆಯನ್ನು ಪಡೆಯುವುದು ಅಥವಾ ಬೇಡುವುದು ಫೌಜದಾರಿ ಸ್ವರೂಪದ ಅಪರಾಧವೆಂದು ನಿರ್ಧರಿಸಲಾಯಿತು. ವರದಕ್ಷಿಣೆಯ ಪದ್ಧತಿಯನ್ನು ನಿರ್ಮೂಲನೆ ಮಾಡಿ ಸಾಮಾಜಿಕ ಚಳುವಳಿಗೆ ಪ್ರೋತ್ಸಾಹ ನೀಡಲಾಯಿತು. ಈ ಕಾನೂನಿನಿಂದಾಗಿ ವರದಕ್ಷಿಣೆಯಂತಹ ಅನಿಷ್ಟ ರೂಢಿಯಿಂದ ಮಹಿಳೆಯರಿಗೆ ಉಂಟಾಗುವ ತೊಂದರೆ ಕಡಿಮೆ ಯಾಯಿತು. ಅದರ ನಂತರ ಮಹಿಳೆಯರಿಗೆ, ಹೆರಿಗೆಯ ರಜೆಯನ್ನು ದೊರಕಿಸಿಕೊಡುವ 'ಹೆರಿಗೆಯ ಸೌಕರ್ಯಗಳ ಕಾನೂನು' (ಮ್ಯಾಟರ್ನಿಟಿ ಬೆನಿಫಿಟ್ ಆ್ಯಕ್ಟ- 1961) ಎಂಬ ಕಾನೂನು ಅಸ್ತಿತ್ವದಲ್ಲಿ ಬಂದಿತು. ಈ ಕಾನೂನಿನಿಂದ ಮಹಿಳೆಯರಿಗೆ ಹೆರಿಗೆಯ ಸಲುವಾಗಿ ರಜೆಯನ್ನು ಪಡೆಯುವ ಹಕ್ಕು ದೊರಕಿತು.

**ವರದಕ್ಷಿಣೆಯ ರೂಢಿಯ ವಿರುದ್ಧ ಜಾಗೃತಿ:** ಭಾರತದಲ್ಲಿ ವರದಕ್ಷಿಣಾ ಪ್ರತಿಬಂಧಕ ಕಾನೂನು ಇದ್ದರೂ ಕೂಡ ವರ್ತಮಾನ ಪತ್ರಗಳಲ್ಲಿ 'ಅಡಿಗೆ ಮಾಡುವ ಪದರಿಗೆ ಬೆಂಕಿ ಹತ್ತಿ ಮಹಿಲೆಯ ಸಾವು', 'ಬಟ್ಟೆ ಒಗೆಯುವಾಗ ಕಾಲುಜಾರಿ ಬಾವಿಗೆ ಬಿದ್ದು ಮಹಿಳೆಯ ಸಾವು' ಮುಂತಾದ ಸುದ್ದಿಗಳು ಬರುತ್ತವೆ. ಆಳವಾದ ತನಿಖೆಯ ನಂತರ ವರದಕ್ಷಿಣೆಯೇ ಅದಕ್ಕೆ ಕಾರಣ ಎಂಬುದು ಅನೇಕ ಸಲ ತಿಳಿದುಬಂದಿದೆ. ಪೋಲೀಸ, ಆಡಳಿತ, ನ್ಯಾಯವ್ಯವಸ್ಥೆಗಳ ನಿಲುವು ಕಂಡುಬಂದಿತು. ಇದರಿಂದ ಜಾಗೃತಿ ಉಂಟಾಯಿತು. ಇದರಿಂದಾಗಿ 1984ರಲ್ಲಿ 'ವರದಕ್ಷಿಣಾ ಸುಧಾರಣಾ ಕಾನೂನು' ಅಸ್ತಿತ್ವದಲ್ಲಿ ಬಂದಿತು. 1988ರಲ್ಲಿ 2209 ಮಹಿಳೆಯರು, 1990ರಲ್ಲಿ 4835 ಮಹಿಳೆಯರು ಮತ್ತು 1993ರಲ್ಲಿ 5377 ಮಹಿಳೆಯರು ವರದಕ್ಷಿಣೆಗೆ ಬಲಿಯಾದರು. ಈ ಅಂಕಿ ಸಂಖ್ಯೆಗಳಿಂದ ಈ ಸಮಸ್ಯೆಯ ತೀವ್ರತೆ ನಮ್ಮ ಗಮನಕ್ಕೆ ಬರುವುದು.

**ಕೌಟುಂಬಿಕ ನ್ಯಾಯಾಲಯ (1984):** ವಿವಾಹ ವಿಷಯದಲ್ಲಿಯ ತಂಟೆಗಳು, ಸಂಸಾರದಲ್ಲಿಯ ಸಮಸ್ಯೆಗಳು ಹಾಗೂ ಅವುಗಳಿಂದ ಉದ್ಭವಿಸುವ ಪ್ರಶ್ನೆಗಳು, ಜೀವನಾಂಶ, ಒಬ್ಬರದೇ ಪೋಷಕತ್ವ, ವಿಭಕ್ತವಾಗಿ ಇರುವುದು, ಮಕ್ಕಳ ಪೋಷಣೆ ಮತ್ತು ಒಡೆತನ ಈ ರೀತಿ ಕುಟುಂಬ ವ್ಯವಸ್ಥೆಗೆ ಸಂಬಂಧಿತವಾದ ತಂಟೆಗಳನ್ನು ಬಿಡಿಸುವುದಕ್ಕಾಗಿ ಕೌಟುಂಬಿಕ ನ್ಯಾಯಾಲಯಗಳ ಸ್ಥಾಪನೆ ಮಾಡಲಾಯಿತು. ಈ ನ್ಯಾಯಾಲಯದಲ್ಲಿ ಸಾಕ್ಷಿ, ಪುರಾವೆಗಳನ್ನು ಪರೀಕ್ಷಿಸುವುದಕ್ಕಿಂತ ಸಾಮಂಜಸ್ಯಕ್ಕೆ ಮತ್ತು ವಕೀಲರ ಬದಲಾಗಿ ಸಮುಪದೇಶಕರಿಗೆ ಪ್ರಾಧಾನ್ಯ ನೀಡಲಾಯಿತು. ಪ್ರಕರಣಗಳನ್ನು ವೇಗದಿಂದ ಆದರೆ ನ್ಯಾಯ ಪದ್ಧತಿಯಿಂದ ಬಿಡಿಸುವುದಕ್ಕೆ ಮಹತ್ವ ನೀಡಲಾಯಿತು.

**ಜೀವನಾಂಶಕ್ಕೆ ಸಂಬಂಧಿಸಿದ ಮೊಕದ್ದಮೆ (1985):** ಯಾವುದೊಬ್ಬ ವಿವಾಹಿತ ಮಹಿಳೆಗೆ ಅವಳ ಗಂಡನು ವಿವಾಹ ವಿಚ್ಛೇದನ ನೀಡಿದ ನಂತರ ಅವಳ ಉದರ ನಿರ್ವಾಹದ ಸಾಧನವೆಂದು ಅವಳಿಗೆ ಅವಳ ಗಂಡನು ಪ್ರತಿ ತಿಂಗಳು ನಿರ್ದಿಷ್ಟವಾದ ಹಣವನ್ನು ನೀಡುವುದಕ್ಕೆ ಜೀವನಾಂಶವೆನ್ನುವರು. ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಹಮ್ಮದ ಅಹಮದ ಖಾನ ವಿರುದ್ಧ ಶಾಹಬಾನೊ ಬೇಗಮ ಮೊಕದ್ದಮೆಯಲ್ಲಿ ಶಾಹಬಾನೊ ಇವಳಿಗೆ ಜೀವನಾಂಶವನ್ನು ಬೇಡುವ ಹಕ್ಕು ಇದೆ ಎಂಬ ನಿರ್ಣಯವನ್ನು ನ್ಯಾಯಾಲಯವು ನೀಡಿತು. ಆದರೆ ಧಾರ್ಮಿಕ ಸಂಘಟನೆಗಳು ಇದರ ವಿರುದ್ಧ ಗೊಂದಲವನ್ನೆಬ್ಬಿಸಿದವು. ಇದರ ಪರಿಣಾಮವಾಗಿ ಸಂಸತ್ತಿನಲ್ಲಿ 'ಮುಸ್ಲಿಂ ವುಮೆನ್ ಆ್ಯಕ್ಟ್' (ಪ್ರೊಟೆಕ್ಷನ್ ಆಫ್ ರೈಟ್ಸ ಆನ್ ಡೈವ್ಹರ್ಸ್) ಸಮ್ಮತವಾಯಿತು.

**ಸತಿ ಪ್ರತಿಬಂಧಕ ಕಾನೂನು:** 4 ಸಪ್ಟಂಬರ 1987 ರಂದು ರಾಜಸ್ಥಾನದಲ್ಲಿಯ ದೇವರಾ ಎಂಬ ಊರಲ್ಲಿ ರೂಪಕುಂವರ ಎಂಬ ಹೆಸರಿನ ವಿವಾಹಿತ ಮಹಿಳೆಯು ಸತಿಹೋದಳು. ಅವಳು ಸ್ವೇಚ್ಛೆಯಿಂದ ಸತಿಹೋಗಲಿಲ್ಲ, ಸತಿಹೋಗುವ ಸಲುವಾಗಿ ಅವಳನ್ನು ಪ್ರೇರೇಪಿಸಲಾಯಿತು. ಅವಳು ಸತಿಹೋಗುವುದು, ಸತಿ ಪದ್ಧತಿಯನ್ನು ಕೊಂಡಾಡುವುದು ಇವು ಕಾನೂನು ಬಾಹಿರ ಸಂಗತಿಗಳಾಗಿದ್ದವು. ಮೀನಾ ಮೆನನ್, ಗೀತಾ ಸೇಥು, ಸುಜಾತಾ ಆನಂದನ್, ಅನೂ ಜೊಸೆಫ್, ಕಲ್ಪನಾ ಶರ್ಮಾ ಮುಂತಾದ ಮಹಿಳಾ ಮುಕ್ತಿವಾದಿ ಕಾರ್ಯಕರ್ತರು ಹಾಗೂ ಪತ್ರಿಕೋದ್ಯಮಿಗಳು ಈ ಪ್ರಕರಣದಲ್ಲಿಯ ಸತ್ಯವನ್ನು ಶೋಧಿಸಿ ತೆಗೆದರು. ಸರಕಾರವು 1988ರಲ್ಲಿ ಕಠೋರ ಏರ್ಪಾಟುಗಳನ್ನು ಮಾಡಿ 'ಸತಿ ಪ್ರತಿಬಂಧಕ ಕಾನೂನ'ನ್ನು ಪಾಸು ಮಾಡಿತು.

**ಮಾನವಾಧಿಕಾರ ಸಂರಕ್ಷಣೆಯ ಕಾನೂನು:** ಸ್ತ್ರೀ ಮತ್ತು ಪುರುಷರ ಮೇಲಾಗುವ ಅನ್ಯಾಯವು ದೂರವಾಗಬೇಕೆಂದು 1993ರಲ್ಲಿ ಈ ಕಾನೂನು ಮಾಡಲಾಯಿತು. ಅದರ ಸಲುವಾಗಿ ರಾಷ್ಟ್ರೀಯ ಮಾನವಾಧಿಕಾರ ಆಯೋಗವನ್ನು ನೇಮಿಸಲಾಯಿತು. ಅದೇ ಮಾದರಿಯಲ್ಲಿ ಕೆಲವು ರಾಜ್ಯಗಳಲ್ಲಿ 'ರಾಜ್ಯ ಮಾನವಾಧಿಕಾರ ಆಯೋಗ'ಗಳನ್ನು ಸ್ಥಾಪಿಸಲಾಯಿತು. ಈ ಕಾನೂನಿಗನುಸಾರವಾಗಿ ಸಾಮೂಹಿಕ ಅತ್ಯಾಚಾರ, ವಿವಾಹ ವಿಚ್ಛೇದನಗೊಂಡ ಮಹಿಳೆಯರ ಸಾಮಾಜಿಕ ಸ್ಥಿತಿ, ಮಹಿಳೆಯರು ಮತ್ತು ಸುರಕ್ಷಿತ ಕಾರ್ಯಸ್ಥಳ ಮುಂತಾದ ವಿವಿಧ ವಿಷಯಗಳ ಮೇಲೆ ಕಾನೂನು ಪ್ರಭಾವಿ ನಿಲುವನ್ನು ತಾಳಿ ಮಹಿಳೆಯರ ಮೇಲಿನ ಅನ್ಯಾಯವನ್ನು ಕಡಿಮೆ ಮಾಡಲು ಸಹಾಯ ಮಾಡಿತು.

**ಮಹಿಳೆಯರಿಗಾಗಿ ಮೀಸಲಾತಿ:** 73 ಮತ್ತು 74ನೇ ಸಂವಿಧಾನ ತಿದ್ದುಪಡಿಯಿಂದ ಗ್ರಾಮಪಂಚಾಯತಿ, ಪಂಚಾಯತ ಸಮಿತಿ, ಜಿಲ್ಲಾ ಪರಿಷತ್ತು, ನಗರಪಾಲಿಕೆ ಮತ್ತು ಮಹಾನಗರ ಪಾಲಿಕೆಗಳಲ್ಲಿ ಒಂದು ಮೂರಾಂಶ ಸ್ಥಳಗಳನ್ನು ಮಹಿಳೆಯರಿಗಾಗಿ ಕಾಯ್ದಿಡಲಾಗಿದೆ. ಸರಪಂಚ, ಅಧ್ಯಕ್ಷ, ನಗರಾಧ್ಯಕ್ಷ, ಮಹಾಪೌರ ಈ ಸ್ಥಾನಗಳಿಗಾಗಿಯೂ ದೇಶದಲ್ಲಿಯ ಮಹಾರಾಷ್ಟ್ರ ಸಹಿತ 15 ರಾಜ್ಯಗಳಲ್ಲಿ ಮಹಿಳೆಯರಿಗಾಗಿ ಶೇಕಡಾ 50% ರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಈ ಏರ್ಪಾಟುಗಳಿಂದಾಗಿ ಮಹಿಳೆಯರಿಗೆ ರಾಜ್ಯಆಡಳಿತದಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತೀಯ ಸಂವಿಧಾನವು ಸ್ತ್ರೀ ಪುರುಷ ಸಮಾನತೆಯ ತತ್ವವನ್ನು ಸ್ವೀಕರಿಸಿತು. ಆದರಿಂದಾಗಿ ಮತದಾನದಂತಹ ಮಹತ್ವದ ರಾಜಕೀಯ ಹಕ್ಕು ಮಹಿಳೆಯರಿಗೆ ದೊರೆಯಿತು. ಪುರುಷರಿಗೆ ಸರಿಸಮಾನವಾಗಿ ಮಹಿಳೆಯರಿಗೆ ಶಿಕ್ಷಣದ, ಉದ್ಯೋಗದ ಸಮಾನ ಅವಕಾಶವನ್ನು ನೀಡಲಾಯಿತು. ಸತಿ, ವರದಕ್ಷಿಣೆ, ಬಹುಪತ್ನಿತ್ವ ಗಳಂತಹ ಅನಿಷ್ಟ ರೂಢಿಗಳ ಮೇಲೆ ಕಾನೂನು ನಿರ್ಬಂಧಗಳನ್ನು ಹೇರಿತು. ಸ್ತ್ರೀಯರ ವಿವಾಹ ವಿಚ್ಛೇದನದ ಹಕ್ಕನ್ನು ಮನ್ನಿಸಲಾಯಿತು. ಅವರಿಗೆ ಆಸ್ತಿಯಲ್ಲಿಯೂ ಕಾನೂನಿಗನುಸಾರ ಪಾಲನ್ನು ಕೊಡಲಾಯಿತು. ರಾಜ್ಯಾಡಳಿತದಲ್ಲಿ ಮಹಿಳೆಯರಿಗೆ ನ್ಯಾಯವಾದ ಪಾಲನ್ನು ನೀಡುವ ಉದ್ದೇಶದಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಕೆಲವು ಸ್ಥಳಗಳನ್ನು ಕಾಯ್ದಿರಿಸಲಾಗಿರುತ್ತದೆ. ಈ ಎಲ್ಲ ಏರ್ಪಾಟುಗಳಿಂದಾಗಿ ಇಂದು ನಮಗೆ ಕಂಡುಬರುವುದೇನೆಂದರೆ ಮಹಿಳೆಯರು ಶಿಕ್ಷಣವನ್ನು



**ಗೊತ್ತಿದೆಯೇ ನಿಮಗೆ ?**

**ಭಾರತದಲ್ಲಿಯ ಮಹಿಳಾ ಮುಖ್ಯಮಂತ್ರಿಗಳು**

ಸುಚೇತಾ ಕೃಪಲಾನಿ (ಉತ್ತರ ಪ್ರದೇಶ), ನಂದಿನಿ ಸತ್ಪಥಿ (ಒಡಿಶಾ), ಜಯಲಲಿತಾ (ತಮಿಳುನಾಡು), ಮಾಯಾವತಿ (ಉತ್ತರ ಪ್ರದೇಶ), ವಸುಂಧರಾ ರಾಜೆ (ರಾಜಸ್ಥಾನ), ಮಮತಾ ಬ್ಯಾನರ್ಜಿ (ಪ. ಬಂಗಾಲ), ರಾಬಡೀ ದೇವಿ (ಬಿಹಾರ), ಆನಂದಿಬೆನ್ ಪಟೇಲ (ಗುಜರಾತ), ಶೀಲಾ ದೀಕ್ಷಿತ (ದಿಲ್ಲಿ), ಮೆಹಬೂಬಾ ಮುಫ್ತಿ ಸಯಿದ (ಕಾಶ್ಮೀರ), ಉಮಾ ಭಾರತಿ (ಮಧ್ಯ ಪ್ರದೇಶ), ರಾಜೇಂದ್ರ ಕೌರ ಭಟ್ಟಲ (ಪಂಜಾಬ), ಸುಷಮಾ ಸ್ವರಾಜ (ದಿಲ್ಲಿ), ಶಶಿಕಲಾ ಕಾಕೋಡಕರ (ಗೋವಾ), ಸಯಿದಾ ಅನ್ವರ ತೈಮೂರ (ಆಸಾಮ), ಜಾನಕಿ ರಾಮಚಂದ್ರನ್ (ತಮಿಳುನಾಡು) ಈ ಮಹಿಳೆಯವರು ಮುಖ್ಯಮಂತ್ರಿಯಾಗಿ ತಮ್ಮ ತಮ್ಮ ರಾಜ್ಯಗಳ ನೇತೃತ್ವವನ್ನು ವಹಿಸಿದರು.



**ಗೊತ್ತಿದೆಯೇ ನಿಮಗೆ ?**

8 ಮಾರ್ಚ 1857 ರಂದು ನ್ಯೂಯಾರ್ಕ ನಗರದಲ್ಲಿ ಒಂದು ಮೋರ್ಚಾವನ್ನು ಸಂಘಟಿಸಲಾಗಿತ್ತು. ಕೆಲಸದ ತಾಸುಗಳನ್ನು ಕಡಿಮೆ ಮಾಡಬೇಕು. ಯೋಗ್ಯ ಪ್ರತಿಫಲ ದೊರೆಯಬೇಕು. ಶಿಶು ವಿಹಾರಗಳು ಇರಬೇಕು ಇತ್ಯಾದಿ ಬೇಡಿಕೆಗಳ ಸಲುವಾಗಿ ಹೊರಟ ಈ ಮೋರ್ಚಾ ಕೆಲಸಗಾರ ಮಹಿಳೆಯರ ಪ್ರಪ್ರಥಮ ಮೋರ್ಚಾ ಆಗಿತ್ತು. ಇವೇ ಬೇಡಿಕೆಗಳಿಗಾಗಿ 8 ಮಾರ್ಚ 1909 ರಂದು ಮಹಿಳೆಯರು ಮುಷ್ಕರ ಹೂಡಿದರು. ಇದರ ಪರಿಣಾಮವಾಗಿ ಡೆನ್ಮಾರ್ಕದಲ್ಲಾದ 'ವುಮೆನ್ಸ್ ಸೋಶಾಲಿಸ್ಟ ಇಂಟರನ್ಯಾಶನಲ್'ದ ಸಭೆಯಲ್ಲಿ ಈ ದಿನವು 'ಮಹಿಳೆಯರ ಹೋರಾಟದ ದಿನ' ವೆಂದು ಘೋಷಿತವಾಯಿತು. 1975 ಈ ವರ್ಷವು 'ಅಂತರರಾಷ್ಟ್ರೀಯ ಮಹಿಳಾ ವರ್ಷ' ವೆಂದು ಆಚರಿಸಲ್ಪಟ್ಟಿತು. ಅದರಂತೆ 1977ರಲ್ಲಿ ಆಗಿನ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಒಂದು ಠರಾವನ್ನು ಪಾಸು ಮಾಡಿ 8 ಮಾರ್ಚ ಈ ದಿನವನ್ನು 'ಜಾಗತಿಕ ಮಹಿಳಾ ದಿನ' ವೆಂದು ಜಾಹೀರು ಮಾಡಿತು.

ಪಡೆದು ಅರ್ಥಾರ್ಜನವನ್ನು ಮಾಡತೊಡಗಿದ್ದಾರೆ. ಸ್ತ್ರೀಮುಕ್ತಿಯ ವಿಚಾರದಿಂದ ಮಹಿಳೆಯರಲ್ಲಿ ಆತ್ಮಪ್ರಜ್ಞೆ ಬರುತ್ತಿದೆ. ಶಿಕ್ಷಣ, ಅರ್ಥಾರ್ಜನೆ, ಆಡಳಿತ, ರಾಜಕಾರಣ ಈ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.

**ಪರಿಶಿಷ್ಟ ಜಾತಿ:** ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಮ್ಮ ಸಂವಿಧಾನವು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯ ಈ ಮೌಲ್ಯಗಳನ್ನು ಪ್ರತಿಪಾದಿಸಿತು. ಅದಕ್ಕನುಸಾರವಾಗಿ ಅಸ್ಪೃಶ್ಯತೆಯ ರೂಢಿಯನ್ನು ಕಾನೂನಿನ ಮೂಲಕ ನಿರ್ಬಂಧಿಸಿತು. ಸಂವಿಧಾನದ 17ನೇ ಕಲಮಿಗನುಸಾರವಾಗಿ ಅಸ್ಪೃಶ್ಯತೆಯನ್ನು ನಷ್ಟಪಡಿಸಲಾಯಿತು. ಹಾಗೂ ಅಸ್ಪೃಶ್ಯ ವರ್ಗವನ್ನು ಪರಿಶಿಷ್ಟ ಜಾತಿಯಲ್ಲಿ ಸಮಾವೇಶಗೊಳಿಸಲಾಯಿತು. ಪರಿಶಿಷ್ಟ ಜಾತಿಯ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿಯುವಿಕೆಯನ್ನು ಗಮನದಲ್ಲಿರಿಸಿ ಅವರ ವಿಕಾಸವಾಗಬೇಕೆಂದು ಅವರಿಗೆ ಶಿಕ್ಷಣದಲ್ಲಿ ಮತ್ತು ನೌಕರಿಗಳಲ್ಲಿ ಪ್ರತಿನಿಧಿತ್ವವನ್ನು ನೀಡಲಾಯಿತು.

**ಪರಿಶಿಷ್ಟ ಪಂಗಡ:** ಪರಿಶಿಷ್ಟ ಜಾತಿಯಂತೆಯೇ ದೇಶದ ದುರ್ಗಮ ಭಾಗದಲ್ಲಿ ವಾಸಿಸುವ ಆದಿವಾಸಿ ಸಮಾಜಕ್ಕೂ ಕೆಲವು ಸಮಸ್ಯೆಗಳಿವೆ. ಆಧುನಿಕ ಸುಧಾರಣೆಗಳಿಂದ ದೂರ ಉಳಿದುದರಿಂದ ಅವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ತುಂಬಾ ಹಿಂದುಳಿದಿದೆ. ಇತ್ತೀಚೆಗೆ ಆದಿವಾಸಿ ಪಂಗಡಗಳ ಪರಿಸ್ಥಿತಿಯಲ್ಲಿ ಸುಧಾರಣೆಯಾಗುತ್ತಿದ್ದರೂ ಅರಣ್ಯ ಉತ್ಪಾದನೆ ಮತ್ತು ಕೃಷಿಯ ಹೊರತು ಅವರಿಗೆ ಬೇರೆ ಉಪಜೀವನದ ಸಾಧನವಿಲ್ಲ. ಬೇಸಾಯ ಮಾಡುವ ಆಧುನಿಕ ಸಲಕರಣೆಗಳು ಇನ್ನೂ ಅವರಲ್ಲಿ ಬಂದಿಲ್ಲ. ಆದರಿಂದಾಗಿ ಕೃಷಿಯಿಂದ ಅವರಿಗೆ ದೊರೆಯುವ ಉತ್ಪನ್ನವು ಅತ್ಯಲ್ಪವಾಗಿರುತ್ತದೆ. ಅಲ್ಲದೆ ಅವರ ಹೊಲಗಳು ಗುಡ್ಡದ ಮೇಲೆ ಇರುತ್ತವೆ. ಅವು ಫಲವತ್ತಾದ ಭೂಮಿಗಳಾಗಿರುವುದಿಲ್ಲ. ನಿಕೃಷ್ಟ ಮತ್ತು ಅಪೂರ್ಣ ಆಹಾರದಿಂದಾಗಿ ಅವರ ಪೋಷಣೆ ವ್ಯವಸ್ಥಿತವಾಗಿ ಆಗುವುದಿಲ್ಲ. ದುರ್ಗಮ ಭಾಗದಲ್ಲಿರುವ ಆದಿವಾಸಿಗಳಿಗೆ ವೇಳೆಗೆ ಸರಿಯಾಗಿ ವೈದ್ಯಕೀಯ ಉಪಚಾರ ದೊರೆಯುವುದು ಕಠಿಣವಾಗುತ್ತದೆ. ಅದಕ್ಕಾಗಿ ಆದಿವಾಸಿ ಪಂಗಡಗಳಿಗೆ ವಿಶೇಷ ಸಂರಕ್ಷಣೆಯನ್ನು ನೀಡುವ ಅವಶ್ಯಕತೆಯಿದೆ.

ಭಾರತೀಯ ಸಂವಿಧಾನದಲ್ಲಿ ಆದಿವಾಸಿಗಳನ್ನು 'ಪರಿಶಿಷ್ಟ ಪಂಗಡ' ಎಂದು ಉಲ್ಲೇಖಿಸಲಾಗಿದೆ. ಅವರಿಗೆ ಶಾಸಕಾಂಗ, ಶಿಕ್ಷಣ, ಸರಕಾರಿ ಸೇವೆ ಮುಂತಾದ ಕ್ಷೇತ್ರಗಳಲ್ಲಿ ಪ್ರತಿನಿಧಿತ್ವವನ್ನು ನೀಡಲಾಗಿದೆ.

**ಅಲೆಮಾರಿ ಮತ್ತು ವಿಮುಕ್ತ ಜಾತಿ- ಪಂಗಡಗಳು:** ಉದರ ನಿರ್ವಾಹಕ್ಕಾಗಿ ಊರೂರು ಅಲೆದಾಡುವ ಜಾತಿ-ಪಂಗಡಗಳನ್ನು 'ಅಲೆಮಾರಿ ಪಂಗಡ' ಎಂಬ ಗುಂಪಿನಲ್ಲಿ ಸಮಾವೇಶ ಮಾಡಲಾಗಿದೆ. ಪಶುಪಾಲನೆ ಮತ್ತು ಇತರ ಉದ್ಯೋಗಗಳನ್ನು ಮಾಡಿ ಈ ಜನರು ಉಪಜೀವನ ಮಾಡುತ್ತಾರೆ. ಬ್ರಿಟಿಶರು ಇವುಗಳಲ್ಲಿಯ ಕೆಲವು ಪಂಗಡಗಳನ್ನು ಅಪರಾಧಿ ಪಂಗಡ ಎಂದು ಕರೆದರು. ಬ್ರಿಟಿಶರು 1871ನೇ ಇಸ್ವಿಯ ಅಪರಾಧ ಪ್ರತಿಬಂಧಕ ಕಾನೂನಿನ ಪ್ರಕಾರ ಈ ಪಂಗಡಗಳಲ್ಲಿಯ. ಪ್ರಮುಖ ಗುಂಪುಗಳನ್ನು 'ಅಪರಾಧಿ ಪಂಗಡ' ವೆಂದು ಉಲ್ಲೇಖಿಸಿದರು ಹಾಗೂ ಅವರ ವ್ಯವಸಾಯ ಮತ್ತು ಚಲನವಲನಗಳ ಮೇಲೆ ನಿರ್ಬಂಧ ಹಾಕಲಾಯಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಈ ಅನ್ಯಾಯಕಾರಕ ಕಾಯ್ದೆಯನ್ನು ರದ್ದುಗೊಳಿಸಲಾಯಿತು. ಈ ವಿಮುಕ್ತ ಜಾತಿಯ ಮೇಲಿನ ಎಲ್ಲ ಬಂಧನಗಳನ್ನು ತೆಗೆದುಹಾಕಲಾಯಿತು. ಈ ಜಾತಿಯ ಸಮಾವೇಶವನ್ನು ವಿಮುಕ್ತ ಪಂಗಡ ಗುಂಪಿನಲ್ಲಿ ಸಮಾವೇಶಗೊಳಿಸಲಾಯಿತು. ಅವರ ಸಾಮಾಜಿಕ ಮತ್ತು ಆರ್ಥಿಕ ವಿಕಾಸಕ್ಕಾಗಿ ಸರಕಾರದಿಂದ ವಿಶೇಷ ಪ್ರಯತ್ನ ಮಾಡಲಾಗುತ್ತಿದೆ. ಶೈಕ್ಷಣಿಕ ಸಂಸ್ಥೆ ಮತ್ತು ಶಾಸಕಿಯ ಕ್ಷೇತ್ರದಲ್ಲಿ ಈ ಪಂಗಡಕ್ಕೆ ಪ್ರತಿನಿಧಿತ್ವ ಕೊಡಲಾಗಿದೆ.

**ಅಲ್ಪಸಂಖ್ಯಾತರು:** ಯಾವುದೊಂದು ಸಮಾಜದಲ್ಲಿ ಧಾರ್ಮಿಕ, ಭಾಷಿಕ ಅಥವಾ ವಾಂಶಿಕ ದೃಷ್ಟಿಯಿಂದ ಕಡಿಮೆ ಸಂಖ್ಯೆಯಲ್ಲಿರುವ ವ್ಯಕ್ತಿಗಳ ಸಮೂಹಕ್ಕೆ ಅಲ್ಪ ಸಂಖ್ಯಾತ ಎನ್ನುವರು. ನಮ್ಮ ದೇಶದಲ್ಲಿ ವಿವಿಧ ಧರ್ಮ, ಪಂಥ,

ಮತ್ತು ಭಾಷೆಗಳು ಇರುವುದರಿಂದ ಸಾಂಸ್ಕೃತಿಕ ವಿವಿಧತೆ ಇದೆ. ಸಾಂಸ್ಕೃತಿಕ ಪರಂಪರೆಗಳು ಭಿನ್ನ ಭಿನ್ನವಾಗಿವೆ. ಈ ಸಾಂಸ್ಕೃತಿಕ ಪರಂಪರೆ ರಕ್ಷಣೆಯಾಗಬೇಕು, ತಮ್ಮ ವೈಶಿಷ್ಟ್ಯಪೂರ್ಣ ಭಾಷೆಯ ವಿಕಾಸವನ್ನು ಮಾಡಲು ಸಾಧ್ಯವಾಗಬೇಕು ಎಂಬುದರ ಸಲುವಾಗಿ ಸಂವಿಧಾನವು ನಾಗರಿಕರಿಗೆ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕನ್ನು ನೀಡಿದೆ. ಅಲ್ಪಸಂಖ್ಯಾತ ವರ್ಗಗಳಿಗೆ ತಮ್ಮ ತಮ್ಮ ಭಾಷೆ, ಸಂಸ್ಕೃತಿ, ಪರಂಪರೆಗಳ ರಕ್ಷಣೆ ಮತ್ತು ಬೆಳವಣಿಗೆಯನ್ನು ಮಾಡುವ ಹಕ್ಕು ಇದೆ. ಅದರ ಸಲುವಾಗಿ ಅವರಿಗೆ ಸ್ವತಂತ್ರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಹಕ್ಕು ಇದೆ. ಅವರ ಪ್ರಗತಿಗಾಗಿ ಸರಕಾರದ ವತಿಯಿಂದ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಮುಂದಿನ ಪಾಠದಲ್ಲಿ ನಾವು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಾಡಿದ ಪ್ರಗತಿಯನ್ನು ಕುರಿತು ಮಾಹಿತಿಯನ್ನು ಪಡೆಯುವವರಿದ್ದೇವೆ.



## ಸ್ವಾಧ್ಯಾಯ

**1. ಕೆಳಗಿನ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಕ್ರಿ.ಶ. 1992 ರಲ್ಲಿ .................. ಈ ರಾಜ್ಯದಲ್ಲಿ ಮದ್ಯಪಾನ ವಿರೋಧಿ ಚಳುವಳಿಯು ಆರಂಭವಾಯಿತು.

(ಅ) ಮಹಾರಾಷ್ಟ್ರ (ಬ) ಗುಜರಾತ

(ಕ) ಆಂಧ್ರಪ್ರದೇಶ (ಡ) ಉತ್ತರಾಖಂಡ

(2) ಭಾರತದ ಸರಕಾರವು 1975ರಲ್ಲಿ .............. ಇವರ ಅಧ್ಯಕ್ಷತೆಯಲ್ಲಿ ಮಹಿಳಾ ಆಯೋಗದ ಸ್ಥಾಪನೆ ಮಾಡಿತು.

(ಅ) ಫುಲರೇಣೂ ಗುಹಾ (ಬ) ಉಮಾ ಭಾರತಿ

(ಕ) ವಸುಂಧರಾ ರಾಜೆ (ಡ) ಪ್ರಮಿಲಾ ದಂಡವತೆ

**2. ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಸೌದಾಮಿನಿ ರಾವ- ಸ್ತ್ರೀಮುಕ್ತಿ ಆಂದೋಲನ ಸಮಿತಿ

(2) ವಿದ್ಯಾಬಾಳ- ನಾರಿ ಪ್ರಬೋಧನ ಮಂಚ

(3) ಪ್ರಮಿಲಾ ದಂಡವತೆ- ಮಹಿಳಾ ದಕ್ಷತಾ ಸಮಿತಿ

(4) ಜ್ಯೋತಿ ಮ್ಹಾಪಸೇಕರ- ಮಹಿಳಾ ಆಯೋಗ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಸ್ತ್ರೀಮುಕ್ತಿ ಚಳುವಳಿ ಆರಂಭವಾಯಿತು.

(2) 1984ರಲ್ಲಿ ವರದಕ್ಷಿಣಾ ಸುಧಾರಣಾ ಕಾನೂನು ಅಸ್ತಿತ್ವದಲ್ಲಿ ಬಂದಿತು.

(3) ಅಸ್ಪೃಶ್ಯತೆಯ ರೂಢಿಯನ್ನು ಕಾನೂನಿನ ಮೂಲಕ ನಿರ್ಬಂಧಿಸಲಾಯಿತು.

(4) ಸಂವಿಧಾನವು ಅಲ್ಪಸಂಖ್ಯಾತರಿಗೆ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕನ್ನು ನೀಡಿದೆ.

**4. ಟಿಪ್ಪಣಿ ಬರೆಯಿರಿ.**

(1) ಚಿಪಕೊ ಆಂದೋಲನ

(2) ಮಾನವ ಅಧಿಕಾರ ಸಂರಕ್ಷಣಾ ಕಾಯಿದೆ

**5. ಕೆಳಗಿನ ಪ್ರಶ್ನೆಗೆ ಸವಿಸ್ತಾರ ಉತ್ತರ ಬರೆಯಿರಿ.**

ಸ್ತ್ರೀಯರ/ಮಹಿಳೆಯರ ಒಂದುಗೂಡಿದ ಶಕ್ತಿಯು ವಿವಿಧ ಕ್ಷೇತ್ರಗಳಲ್ಲಿ ಸುಧಾರಣಾತ್ಮಕ ಬದಲಾವಣೆಗಳನ್ನುಂಟು ಮಾಡಬಹುದು- ಎಂಬುದನ್ನು ವಿವಿಧ ಉದಾಹರಣೆಗಳಿಂದ ಸ್ಪಷ್ಟಪಡಿಸಿರಿ.

### ಉಪಕ್ರಮ

(1) ಗ್ರಾಮೀಣ ಭಾಗದಲ್ಲಿಯ ಮಹಿಳಾ ಸಭೆಗಳ ಕಾರ್ಯಕಲಾಪಗಳ ಮಾಹಿತಿಯನ್ನು ಪಡೆಯಿರಿ.

(2) ವಿವಿಧ ಕ್ಷೇತ್ರಗಳಲ್ಲಿ ಉಲ್ಲೇಖನೀಯ ಕಾರ್ಯ ಮಾಡುವ ಮಹಿಳೆಯರ ಮಾಹಿತಿಯನ್ನೊಳಗೊಂಡ ಸಂಪುಟವನ್ನು (Portfolio) ತಯಾರಿಸಿರಿ.

(3) ಮಹಿಳಾ ಉಳಿತಾಯ ಗುಂಪಿನ ಕಾರ್ಯಕಲಾಪಗಳ ಮಾಹಿತಿಯನ್ನು ಪಡೆದು ಬರೆಯಿರಿ.

C32B1Q

# 7 ವಿಜ್ಞಾನ ಮತ್ತು ತಂತ್ರಜ್ಞಾನ

ಸ್ವಾತಂತ್ರ್ಯೋತ್ತರ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿಯ ಸಾಧನೆಯನ್ನು ನಾವು ಈ ಪಾಠದಲ್ಲಿ ಅಭ್ಯಸಿಸುವವರಿದ್ದೇವೆ. ಅದರಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿಯ ಮಹತ್ವದ ಸಂಸ್ಥೆಗಳು ಮತ್ತು ಅವುಗಳ ಕೊಡುಗೆ ಇವುಗಳ ಅಭ್ಯಾಸವನ್ನೂ ಮಾಡುವವರಿದ್ದೇವೆ.

**ಭಾರತೀಯ ಅಣುಶಕ್ತಿ ಆಯೋಗ:** ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರೂವರಿಗೆ ವೈಜ್ಞಾನಿಕ ದೃಷ್ಟಿಕೋನವನ್ನು ಅಂಕುರಿಸಿ ರಾಷ್ಟ್ರದ ಪ್ರಗತಿಯನ್ನು ಸಾಧಿಸಬೇಕಾಗಿತ್ತು. ಈ ವಿಚಾರದಿಂದಲೇ ಅವರು 10 ಅಗಸ್ಟ 1948 ರಂದು ಅಣುಶಕ್ತಿ ಆಯೋಗದ ಸ್ಥಾಪನೆ ಮಾಡಿದರು. ಡಾ. ಹೋಮಿ ಭಾಭಾ ಇವರನ್ನು ಅಣುಶಕ್ತಿ ಆಯೋಗದ ಮೊದಲನೆಯ ಅಧ್ಯಕ್ಷರೆಂದು ನೇಮಕ ಮಾಡಲಾಯಿತು. ಅಣುಶಕ್ತಿಯಿಂದ ವಿದ್ಯುಚ್ಛಕ್ತಿ ನಿರ್ಮಾಣ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ರಕ್ಷಿಸುವುದಕ್ಕಾಗಿ. ಮುಂದುವರಿದ ತಂತ್ರಜ್ಞಾನವನ್ನು ಆರಂಭಿಸುವುದು, ನ್ಯಾನೋ ಟೆಕ್ನಾಲಜಿಯನ್ನು ವಿಕಸಿತಗೊಳಿಸುವುದು ಇತ್ಯಾದಿಗಳು ಉದ್ದೇಶಗಳಿದ್ದವು. 1956 ರಲ್ಲಿ ಈ ವಿಭಾಗವು ಅಣುಶಕ್ತಿಯ ಮೇಲೆ ನಡೆಯುವ ಭಾರತದ ಮೊದಲನೆಯ ಅಣುಭಟ್ಟಿ 'ಅಪ್ಸರ' ವನ್ನು ಕಾರ್ಯಾನ್ವಿತಗೊಳಿಸಿತು.



ಡಾ. ಹೋಮಿ ಭಾಭಾ

1969ರಲ್ಲಿ ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ನಿರ್ಮಿಸುವ ಸಲುವಾಗಿ ಮುಂಬಯಿ ಹತ್ತಿರ ತಾರಾಪೂರ ಎಂಬಲ್ಲಿ ಅಣುಶಕ್ತಿ ಕೇಂದ್ರದ ಸ್ಥಾಪನೆಯಾಯಿತು. ವಿದ್ಯುಚ್ಛಕ್ತಿ ನಿರ್ಮಿತಿಗಾಗಿ ಥೋರಿಯಮ್‌ದ ಉಪಯೋಗವನ್ನು ಮಾಡಿಕೊಳ್ಳುವ ಸಲುವಾಗಿ ತಮಿಳುನಾಡು ರಾಜ್ಯದ ಕಲ್ಪಕಮ್ ಎಂಬಲ್ಲಿ 'ರಿಯಾಕ್ಟರ ರಿಸರ್ಚ ಸೆಂಟರ್' ಆರಂಭಿಸಲಾಯಿತು. ಅಣುಶಕ್ತಿಯ ವಿಕಾಸದಲ್ಲಿ ಅಣುಭಟ್ಟಿಗಳ ಪಾತ್ರ ಮಹತ್ವದ್ದಾಗಿರುತ್ತದೆ.

ಅಣುಶಕ್ತಿಯ ನಿರ್ಮಿತಿಗಾಗಿ ಅವಶ್ಯಕವಿರುವ 'ಜಡ ನೀರಿನ' (ಹೇವಿ ವಾಟರ) ಕಾರ್ಖಾನೆಗಳನ್ನು ವಡೋದರಾ, ತಾಲಚೇರ ತುತಿಕೋರಿನ, ಕೋಟಾ ಮುಂತಾದ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಪರಮಾಣು ಭಟ್ಟಿಗಳ ಸಲುವಾಗಿ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಜಡ ನೀರಿನ (ಹೇವಿ ವಾಟರ) ಉತ್ಪಾದನೆ ಮತ್ತು ಸಂಶೋಧನೆ ಮಾಡುವ ಸಲುವಾಗಿ 'ಹೇವಿ ವಾಟರ್ ಪ್ರೊಜೆಕ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ನಂತರ ಇದೇ ಸಂಸ್ಥೆಗೆ 'ಹೇವಿ ವಾಟರ ಬೋರ್ಡ' ಎಂದು ನಾಮಕರಣ ಮಾಡಲಾಯಿತು.

**ಮಾಹಿತಿಯನ್ನು ಪಡೆಯಿರಿ.**

28 ಫೆಬ್ರುವರಿ ಈ ದಿನವನ್ನು ದೇಶದಾದ್ಯಂತ 'ವಿಜ್ಞಾನ ದಿನ' ವೆಂದು ಆಚರಿಸಲಾಗುತ್ತದೆ.

ಈ ದಿನ ನೀವು ಶಾಲೆಯಲ್ಲಿ ಯಾವ ಉಪಕ್ರಮಗಳನ್ನು ಹಮ್ಮಿಕೊಳ್ಳುತ್ತೀರಿ ?

**ಪರಮಾಣು ಭಟ್ಟಿ ಧ್ರುವ:** ಮುಂಬಯಿ ಹತ್ತಿರದ ತುರ್ಭೆ ಎಂಬಲ್ಲಿ 1985ರಲ್ಲಿ ಸಂಪೂರ್ಣ ಭಾರತೀಯ ರಚನೆಯ 'ಧ್ರುವ' ಪರಮಾಣು ಭಟ್ಟಿಯನ್ನು ಆರಂಭಿಸಲಾಯಿತು. ಯುರೇನಿಯಮ್ ಲೋಹವನ್ನು ಇಂಧನವೆಂದು ಬಳಸುವ ಸಲುವಾಗಿ ದೊಡ್ಡ ಪ್ರಮಾಣದಲ್ಲಿ ಧ್ರುವ ಪರಮಾಣು ಭಟ್ಟಿಯ ಉಪಯೋಗವಾಗುತ್ತದೆ. ತುರ್ಭೆಯಲ್ಲಿಯ ಕೇಂದ್ರದಲ್ಲಿ ಸುಮಾರು 350 ರೇಡಿಯೋ ವಿಕಿರಣದ ಪದಾರ್ಥಗಳ ನಿರ್ಮಿತಿ ಮಾಡಲಾಗುತ್ತದೆ. ಉದ್ಯೋಗ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಅವುಗಳ ಉಪಯೋಗ ಮಾಡಲಾಗುತ್ತದೆ.


**ನ್ಯೂಕ್ಲಿಯರ ಪಾವರ ಕಾರ್ಪೊರೇಶನ ಆಫ್ ಇಂಡಿಯಾ (NPCIL):** ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ನಿರ್ಮಿಸುವ ಸಲುವಾಗಿ 1987 ರಲ್ಲಿ ಈ ಕಂಪನಿಯ ಸ್ಥಾಪನೆ ಮಾಡಲಾಯಿತು. ಸುರಕ್ಷಿತ, ಅಗ್ಗದ ಮತ್ತು ಪರಿಸರದ ದೃಷ್ಟಿಕೋನದಲ್ಲಿ ಲಾಭದಾಯಕ ವಿದ್ಯುಚ್ಛಕ್ತಿ ನಿರ್ಮಿತಿಯ ತಂತ್ರಜ್ಞಾನವನ್ನು ಸಿದ್ಧಪಡಿಸುವುದು ಮತ್ತು ಅದರ ವಿಕಾಸವನ್ನು ಮಾಡಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡುವುದು ಈ ಕಂಪನಿಯ ಉದ್ದೇಶವಾಗಿದೆ.



ಡಾ. ಹೋಮಿ ಸೇಠನಾ

**ಅಣುಪರೀಕ್ಷೆ**

**ಪೋಖರಣದಲ್ಲಿಯ ಮೊದಲನೆಯ ಅಣುಪರೀಕ್ಷೆ:** ಶಾಂತತೆ ಮತ್ತು ಸ್ವಯಂ ಪೂರ್ಣತೆಗಾಗಿ ಅಣುಶಕ್ತಿಯ ಉಪಯೋಗ ಈ ನೀತಿಗೆ ಅನುಸಾರವಾಗಿ ಭಾರತವು 18 ಮೇ 1974 ರಂದು ರಾಜಸ್ಥಾನದಲ್ಲಿಯ ಪೋಖರಣ ಎಂಬಲ್ಲಿ ಮೊದಲನೆಯ



ಡಾ. ರಾಜಾರಾಮಣ್ಣಾ

ಅಣುಪರೀಕ್ಷೆಯನ್ನು ಯಶಸ್ವಿಗೊಳಿಸಿತು. ಚೀನದ ಅಣ್ವಸ್ತ್ರಸಿದ್ಧತೆ ಮತ್ತು ಪಾಕಿಸ್ತಾನವು ಚೀನದ ಸಹಾಯದಿಂದ ಅಣ್ವಸ್ತ್ರಸಿದ್ಧವಾಗಲು ಮಾಡುತ್ತಿರುವ ಪ್ರಯತ್ನಗಳು ಭಾರತದ ಈ ನಿರ್ಣಯಕ್ಕೆ ಕಾರಣೀಭೂತವಾದವು. ಈ ಅಣುಪರೀಕ್ಷೆಯಲ್ಲಿ ಅಣುಶಕ್ತಿ ಆಯೋಗದ ಅಧ್ಯಕ್ಷರಾದ ಡಾ. ಹೋಮಿ ಸೇಠನಾ ಮತ್ತು ಭಾಭಾ ಅಣು ಸಂಶೋಧನಾ ಕೇಂದ್ರದ ಸಂಚಾಲಕರಾದ ಡಾ. ರಾಜಾರಾಮಣ್ಣಾರವರದು ಸಿಂಹಪಾಲ ಇತ್ತು. ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು 'ಅಣುಸ್ಫೋಟ' ಪರೀಕ್ಷೆಯ ನಿರ್ಣಯ ಕೈಕೊಂಡರು. ಮಾನವೀ ವಸತಿಯಿಂದ ದೂರ ಮತ್ತು ಎಲ್ಲಿ ಭೂಗರ್ಭದಲ್ಲಿ ಬಹುತೇಕ ನೀರಿನ ಸಂಗ್ರಹವಿಲ್ಲವೋ ಎಂಬ ಆಧಾರವನ್ನಿಟ್ಟುಕೊಂಡು ರಾಜಸ್ಥಾನದಲ್ಲಿಯ ಪೋಖರಣ ಭಾಗವನ್ನು ಆಯ್ಕೆ ಮಾಡಲಾಯಿತು.

**ಗೊತ್ತಿದೆಯೇ ನಿಮಗೇ ?**

1974 ರಲ್ಲಿ ಭಾರತವು ಪೋಖರಣದಲ್ಲಿ ಮೊದಲನೆಯ ಅಣುಪರೀಕ್ಷೆ ಮಾಡಿದ ನಂತರ ಅಮೇರಿಕೆಯು ಭಾರತಕ್ಕೆ ಅಂತರಿಕ್ಷ ಸಂಶೋಧನೆಯ ಸಂದೇಶ ಯಂತ್ರೋಪಕರಣಗಳನ್ನು ಮತ್ತು ಕ್ಷಿಪಣಿಗಳ ವಿಕಾಸ ಮುಂತಾದ ಸಂರಕ್ಷಣ ವಿಷಯಕ್ಕೆ ಸಂಬಂಧಿಸಿದ ತಂತ್ರಜ್ಞಾನವನ್ನು ನೀಡಲು ನಿರಾಕರಿಸಿತು. ಇದರಿಂದಾಗಿ ಅಮೇರಿಕೆಯ ಮೇಲೆ ಅವಲಂಬಿಸಿ ಇರದೆ ತನ್ನ ಸ್ವಂತ ಶಕ್ತಿಯ ಮೇಲೆ ಕ್ಷಿಪಣಿ ವಿಕಾಸ ಕಾರ್ಯಕ್ರಮವನ್ನು ಯೋಜಿಸುವ ನೀತಿಯನ್ನು ಭಾರತವು ಸ್ವೀಕರಿಸಿತು. ಇದರಿಂದಲೇ ಭಾರತವು ಅಮೇರಿಕಾ, ಸೋವಿಯತ್ ರಶಿಯಾ, ಫ್ರಾನ್ಸ, ಚೀನ ಮತ್ತು ಜರ್ಮನಿ ಈ ಕ್ಷಿಪಣಿಗಳನ್ನು ವಿಕಸಿತಗೊಳಿಸುವ ರಾಷ್ಟ್ರಗಳ ಪಂಕ್ತಿಯಲ್ಲಿ ವಿರಾಜಮಾನವಾಯಿತು.

**ಎರಡನೆಯ ಅಣುಪರೀಕ್ಷೆ:** 11 ಮೇ 1998 ರಂದು ಭಾರತವು ಅಣ್ವಸ್ತ್ರ ಸಂಪನ್ನತೆಯನ್ನು ಸಿದ್ಧಪಡಿಸುವುದಕ್ಕಾಗಿ ಪೋಖರಣದಲ್ಲಿ ಎರಡನೆಯ ಅಣುಸ್ಫೋಟ ಪರೀಕ್ಷೆಯನ್ನು ಮಾಡಿತು. ದಿನಾಲು ಮೂರು ಅಣುಪರೀಕ್ಷೆಗಳನ್ನು ಕೈಕೊಳ್ಳಲಾಯಿತು. ಅದರಲ್ಲಿ ಒಂದು ಹೈಡ್ರೋಜನ್ ಬಾಂಬ್ ಇತ್ತು. 'ಭಾರತದ ಕಡೆಯಿಂದ ಪ್ರಥಮವಾಗಿ ಅಣ್ವಸ್ತ್ರಗಳ ಬಳಕೆಯನ್ನು ಮಾಡಲಾಗುವುದಿಲ್ಲ' ಎಂಬ ಭರವಸೆಯನ್ನು ಪ್ರಧಾನಮಂತ್ರಿ ಅಟಲ ಬಿಹಾರಿ ವಾಜಪೇಯಿಯವರು ನೀಡಿದರು. ಆದರೆ ಅಮೇರಿಕೆಯ ಭಾರತದ ಮೇಲೆ ತತ್ಕಾಲಿಕವಾಗಿ ಆರ್ಥಿಕ ನಿರ್ಬಂಧಗಳನ್ನು ಹೇರಿತು.

## ಕ್ಷಿಪಣಿ ವಿಕಾಸ:

**ಪೃಥ್ವಿ:** 1988ರಲ್ಲಿ 'ಪೃಥ್ವಿ' ಕ್ಷಿಪಣಿಯ ಹಾಗೂ 1989ರಲ್ಲಿ 'ಅಗ್ನಿ' ಈ ಕ್ಷಿಪಣಿಯ ಯಶಸ್ವಿ ಪರೀಕ್ಷೆ ನಡೆಯಿತು. ಜಗತ್ತು ಭಾರತದ ಅಣುಕ್ಷಿಪಣಿ ವಿಕಾಸದ ಕಾರ್ಯಕ್ರಮದತ್ತ ಗಮನ ನೀಡಿತು. ಇಂಟಿಗ್ರೇಟೆಡ್ ಗೈಡೆಡ್ ಮಿಸೈಲ್ ಡೆವ್ಹಲಪ್‌ಮೆಂಟ ಪ್ರೊಗ್ರ್ಯಾಮ್ (IGMDP)ದ ಅಂತರ್ಗತವಾಗಿ ಈ ಕ್ಷಿಪಣಿ ವಿಕಾಸದ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಯಿತು. ಅದಕ್ಕನುಸಾರವಾಗಿ 'ಸಂರಕ್ಷಣ ಸಂಶೋಧನ ಮತ್ತು ವಿಕಾಸ ಸಂಸ್ಥೆಯು (DRDO) ಕ್ಷಿಪಣಿ ನಿರ್ಮಿತಿಯನ್ನು ಆರಂಭಿಸಿತು. ಡಾ. ಎ.ಪಿ.ಜೆ. ಅಬ್ದುಲ ಕಲಾಮ ಇವರ ನೇತೃತ್ವದಲ್ಲಿ ಈ ಸಂಗತಿಗಳು ಸಾಧ್ಯವಾದವು.



ಡಾ. ಎ.ಪಿ.ಜೆ. ಅಬ್ದುಲ ಕಲಾಮ

'ಪೃಥ್ವಿ-1' ಇದು ಭೂಮಿಯ ಮೇಲಿಂದ ಭೂಮಿಯ ಮೇಲೆ ದಾಳಿ ಮಾಡುವ ಕ್ಷಿಪಣಿಯನ್ನು ಕಾಲ್ದಳದ ಕಡೆಗೆ, 'ಪೃಥ್ವಿ-2'ನ್ನು ವಾಯುದಳದ ಕಡೆಗೆ, 'ಪೃಥ್ವಿ-3'ನ್ನು ನೌಕಾದಳದ ಕಡೆಗೆ ಒಪ್ಪಿಸಲಾಯಿತು.ಐದು ನೂರರಿಂದ ಒಂದು ಸಾವಿರ ಕಿಲೊ ಅಣುಸ್ಫೋಟಕಗಳನ್ನು ಹೊತ್ತುಕೊಂಡು ಒಯ್ಯುವ ಸಾಮರ್ಥ್ಯವಿತ್ತು. ನ್ಯೂಕ್ಲಿಯರ ಬ್ಯಾಲಿಸ್ಟಿಕ್ ಮಿಸೈಲ ಮೂಲಕ 150 ರಿಂದ 200

**ಗೊತ್ತಿದೆಯೇ ನಿಮಗೆ ?**

ಭಾರತ ಸರಕಾರದ ಸಂರಕ್ಷಣಾ ವಿಭಾಗದ ಅಂತರ್ಗತವಾಗಿ 1958ರಲ್ಲಿ 'ಸಂರಕ್ಷಣ ಸಂಶೋಧನೆ ಮತ್ತು ವಿಕಾಸ ಸಂಸ್ಥೆಯು (DRDO) ಸ್ಥಾಪನೆಯಾಯಿತು. ಸಂರಕ್ಷಣೆಯ ಸಾಧನಗಳು, ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳ ವಿಷಯದಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡುವುದು ಈ ಸಂಸ್ಥೆಯ ಉದ್ದೇಶವಾಗಿತ್ತು. 1983ರ ನಂತರ ಡಾ. ಎ.ಪಿ.ಜೆ. ಅಬ್ದುಲ ಕಲಾಮ ಇವರ ನೇತೃತ್ವದಲ್ಲಿ ಈ ಸಂಸ್ಥೆಯು ಅನೇಕ ಕ್ಷಿಪಣಿಗಳನ್ನು ವಿಕಸಿತಗೊಳಿಸಿತು. ಕ್ಷಿಪಣಿಗಳ ನಿರ್ಮಿತಿಯಲ್ಲಿ ಡಾ. ಕಲಾಮ ಅವರು ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಡಾ. ಕಲಾಮ ಇವರಿಗೆ ಕ್ಷಿಪಣಿ ಕಾರ್ಯಕ್ರಮದ ಜನಕ ಹಾಗೂ 'ಮಿಸೈಲ ಮ್ಯಾನ' ಎಂದು ಕರೆಯಲಾಗುತ್ತದೆ.

ಕಿಲೋಮೀಟರ ಅಂತರವನ್ನು ಪಾರುಮಾಡುವುದು ಪೃಥ್ವಿ ಈ ಕ್ಷಪಣಿಗೆ ಸಾಧ್ಯವಾಯಿತು.

**ಅಗ್ನಿ:** ಚೀನ ಮತ್ತು ಪಾಕಿಸ್ತಾನಗಳಿಗೆ ಭಾರತದ ಕ್ಷಿಪಣಿಗಳ ಸಾಮರ್ಥ್ಯದ ಕಲ್ಪನೆ ಬರಬೇಕು. ಭಾರತದ ಗಡಿಗಳು ಸುರಕ್ಷಿತವಾಗಿ ಉಳಿಯಬೇಕೆನ್ನುವುದರ ಸಲುವಾಗಿ 'ಅಗ್ನಿ- 1'ರ ಪರೀಕ್ಷೆ ಮಾಡಲಾಯಿತು. ಈ ಯುದ್ಧದ ಕ್ಷಿಪಣಿಯ ವ್ಯಾಪ್ತಿಯು 700 ಕಿಲೋಮೀಟರ ದಷ್ಟು ಇತ್ತು. ನಂತರ 'ಅಗ್ನಿ-2' ಮತ್ತು 'ಅಗ್ನಿ-3' ಇವುಗಳನ್ನೂ ನಿರ್ಮಾಣ ಮಾಡಲಾಯಿತು.

**ಆಕಾಶ, ನಾಗ ಕ್ಷಿಪಣಿಗಳು:** ಭೂಮಿಯ (ನೆಲದ) ಮೇಲಿಂದ ಅಂತರಿಕ್ಷದಲ್ಲಿ ದಾಳಿ ಮಾಡಲು 1990ರಲ್ಲಿ 'ಆಕಾಶ' ಈ ಕ್ಷಿಪಣಿಯ ನಿರ್ಮಿತಿಯಾಯಿತು. 30 ಕಿಲೋಮೀಟರ ವ್ಯಾಪ್ತಿ ಮತ್ತು 720 ಕಿಲೋ ಸ್ಫೋಟಕಗಳನ್ನು ಸುಪರಸಾನಿಕ್ ವೇಗದಿಂದ ಕೊಂಡೊಯ್ಯುವ ಸಾಮರ್ಥ್ಯ ಈ ಕ್ಷಿಪಣಿಯಲ್ಲಿದೆ. ಶತ್ರುವಿನ ಟ್ಯಾಂಕರಗಳನ್ನು ನಷ್ಟಮಾಡುವ ಸಲುವಾಗಿ ಫಾಯರ ಆ್ಯಂಡ ಫರ್ಗೆಟ್ ಸ್ವರೂಪದ 'ನಾಗ' ಈ ಕ್ಷಿಪಣಿಯನ್ನು ತಯಾರಿಸಲಾಯಿತು. ಕ್ಷಿಪಣಿಗಳ ನಿರ್ಮಿತಿಯಿಂದಾಗಿ ಭಾರತವು ಸೈನಿಕ ಸಾಮರ್ಥ್ಯದ ದೃಷ್ಟಿಯಲ್ಲಿ ಸುರಕ್ಷಿತವಾಗಿದೆ.

**ಅಂತರಿಕ್ಷ ಸಂಶೋಧನೆ:** ಕೇರಳ ರಾಜ್ಯದಲ್ಲಿಯ ಥುಂಬಾ ಎಂಬಲ್ಲಿಯ 'ಥುಂಬಾ ಇಕ್ವಿಟೋರಿಯಲ್ ಲಾಂಚ ಸೆಂಟರ'ದ ಮೇಲಿಂದ ಇಂಡಿಯನ್ ನ್ಯಾಶನಲ್ ಕಮಿಟಿ ಫಾರ ಸ್ಪೇಸ ರಿಸರ್ಚ. ಈ ಸಂಸ್ಥೆಯು 1961ರಲ್ಲಿ ಭಾರತದ ಪ್ರಥಮ ಸಂಶೋಧಕ ಆಕಾಶಬಾಣವನ್ನು ಯಶಸ್ವಿ ರೀತಿಯಿಂದ ಪ್ರಕ್ಷೇಪಣೆ ಮಾಡಿತು.

1967ರಲ್ಲಿ ಥುಂಬಾದಿಂದ ಸ್ವದೇಶಿ ನಿರ್ಮಿತಿಯ 'ರೋಹಿಣಿ-75' ಈ ಆಕಾಶಬಾಣವನ್ನು ಯಶಸ್ವಿ ರೀತಿಯಿಂದ ಪ್ರಕ್ಷೇಪಣೆ ಮಾಡಲಾಯಿತು. ಇದರ ಮುಂದಿನ ಹೆಜ್ಜೆಯೆಂದರೆ 1975ರಲ್ಲಿ ಸೋವಿಯತ್ ರಶಿಯಾದ ಸಹಕಾರದಿಂದ ಮೊದಲನೆಯ ಭಾರತೀಯ 'ಆರ್ಯಭಟ್ಟ' ಉಪಗ್ರಹವನ್ನು ಯಶಸ್ವಿ ರೀತಿಯಿಂದ ಪ್ರಕ್ಷೇಪಣೆ ಮಾಡಲಾಯಿತು.

ಈ ಯಶಸ್ಸಿನಿಂದಾಗಿ ಅಂತರಿಕ್ಷದಲ್ಲಿ ಬಿಡಲು ಯೋಗ್ಯವಾದ ಉಪಗ್ರಹಗಳ ರಚನೆ ಮತ್ತು ನಿರ್ಮಿತಿಯನ್ನು ದೇಶದಲ್ಲಿ ಮಾಡಲು ಸಾಧ್ಯವೆಂಬುದು ಸಿದ್ಧವಾಯಿತು. ಭೂಕೇಂದ್ರದ ಕಡೆಯಿಂದ ಉಪಗ್ರಹದ ಕಡೆಗೆ ಸಂದೇಶವನ್ನು ಕಳಿಸುವುದು, ಉಪಗ್ರಹದ ಕಡೆಯಿಂದ ಒಂದ ಕಾರ್ಯಶೈಲಿಯನ್ನು ಭೂಕೇಂದ್ರದಲ್ಲಿ ಗ್ರಹಿಸುವುದು. ಈ ತಂತ್ರಜ್ಞಾನವನ್ನು ವಿಕಸಿತಗೊಳಿಸುವುದಕ್ಕಾಗಿ ಮತ್ತು ಉಪಗ್ರಹದ ಕಾರ್ಯಶೈಲಿಯ ಮೌಲ್ಯಮಾಪನವನ್ನು ಮಾಡುವ ಸಲುವಾಗಿ ಉನ್ನತ ತಂತ್ರಜ್ಞಾನವು ಅವಗತವಾಗಲು ಸಾಧ್ಯವಿದೆಯೆಂಬ ಆತ್ಮವಿಶ್ವಾಸ ಭಾರತೀಯ ವೈಜ್ಞಾನಿಕರಲ್ಲಿ ಮೂಡಿತು.

**ಇಸ್ರೊ (Indian space Research Organisation):** ಅಂತರಿಕ್ಷ ಸಂಶೋಧನೆಯಲ್ಲಿಯ ಮೂಲಭೂತ ಕಾರ್ಯಕ್ರಮ ಮತ್ತು ಆಕಾಶಬಾಣಕ್ಕೆ ಸಂಬಂಧಿಸಿದ ಯಶಸ್ವಿ ಉಪಕ್ರಮವನ್ನು ಸಾಧಿಸಿದ ನಂತರ ಅಂತರಿಕ್ಷ ಕ್ಷೇತ್ರದಲ್ಲಿ ಅಧಿಕ ಸಂಶೋಧನೆಯನ್ನು ಮಾಡುವ ಸಲುವಾಗಿ 15 ಅಗಸ್ಟ 1969ರಂದು 'ಇಸ್ರೊ'ದ ಸ್ಥಾಪನೆ ಮಾಡಲಾಯಿತು. ಇಸ್ರೋದ ಮುಖ್ಯ ಕಚೇರಿ ಬೆಂಗಳೂರು ಎಂಬಲ್ಲಿದೆ. ಅಂತರಿಕ್ಷದಲ್ಲಿ ಉಪಗ್ರಹಗಳನ್ನು ಬಿಡುವ ಸಲುವಾಗಿ ಇಸ್ರೋ ಇದು ಆಂಧ್ರಪ್ರದೇಶ ರಾಜ್ಯದಲ್ಲಿಯ ಶ್ರೀಹರಿಕೋಟಾದಲ್ಲಿಯ ಅಂತರಿಕ್ಷ ಕೇಂದ್ರವನ್ನು ಕಾರ್ಯಾನ್ವಿತಗೊಳಿಸಿತು.

**ಭಾಸ್ಕರ-1:** 1979ರಲ್ಲಿ ಪೃಥ್ವಿಯ ಪೃಷ್ಠಭಾಗದ ಮೇಲಿನ ವಿವಿಧ ಸಂಗತಿಗಳ ನಿರೀಕ್ಷಣೆ ದೂರಸಂವೇದನ ತಂತ್ರದಿಂದ ಸಾಧ್ಯವಾಗಬೇಕು ಎಂಬುದರ ಸಲುವಾಗಿ ಇಸ್ರೊ ತಯಾರಿಸಿದ 'ಭಾಸ್ಕರ-1' ಈ ದೂರಸಂವೇದಕ ಪ್ರಾಯೋಗಿಕ ಉಪಗ್ರಹವನ್ನು ಭಾರತವು ಸೋವಿಯತ್ ರಶಿಯಾ ದೇಶದೊಳಗಿಂದ ಕಳಿಸಿತು. ದೇಶದಲ್ಲಿಯ ನೀರಿನ ಸಂಗ್ರಹಗಳು, ಖನಿಜ ಸಂಗ್ರಹಗಳು ಮತ್ತು ಹವಾಮಾನ. ಇವುಗಳನ್ನು ಊಹಿಸಿ ದೇಶದ ವಿಕಾಸಕ್ಕಾಗಿ ದೂರಸಂವೇದನ ತಂತ್ರವು ಉಪಯುಕ್ತವಾಗುವಂತಹದಿತ್ತು. ಈ ತಂತ್ರಜ್ಞಾನದ ನೆರವಿನಿಂದ ತೆಗೆದ ಭೂಗರ್ಭದ, ಪರಿಸರದ ಮತ್ತು ಅರಣ್ಯದ ಛಾಯಾಚಿತ್ರಗಳು ಮಹತ್ವದ್ದಾಗಿದ್ದವು. ಈ ಉಪಗ್ರಹದ ಮೂಲಕ ದೊರೆತ ಮಾಹಿತಿಯ ಛಾಯಾಚಿತ್ರಗಳು ಮಹತ್ವದ್ದಾಗಿದ್ದವು. ಈ ಉಪಗ್ರಹದ ಮೂಲಕ ದೊರೆತ ಮಾಹಿತಿಯ ಉಪಯೋಗವು ಸಮುದ್ರ ಶಾಸ್ತ್ರ (ಓಶನಾಗ್ರಾಫಿ)ದಲ್ಲಿ ಆಯಿತು. 1981ರಲ್ಲಿ 'ಭಾಸ್ಕರ-2' ಈ ಉಪಗ್ರಹವನ್ನು ಸೋವಿಯತ್ ರಶಿಯಾ ಈ ದೇಶದಿಂದ ಪ್ರಕ್ಷೇಪಿಸಲಾಯಿತು.

**ಆ್ಯಪಲ್:** ಇಸ್ರೋ ಇದು ಸಂಪೂರ್ಣವಾಗಿ ಭಾರತದಲ್ಲಿ ನಿರ್ಮಿಸಲಾದ 'ಆ್ಯಪಲ್' ಎಂಬ ಭಾರತದ ಪ್ರಥಮ ದೂರಸಂಚಾರ ಉಪಗ್ರಹವನ್ನು 19 ಜೂನ 1981 ರಂದು 'ಫ್ರೆಂಚ ಗಿಯಾನಾ' ದಿಂದ ಕಳುಹಿಸಿತು. 'ಆ್ಯಪಲ್' ದಿಂದ ಶಿಕ್ಷಣ ಕ್ಷೇತ್ರಕ್ಕೆ ಸಹಾಯ ದೊರೆಯಿತು. ಆಪತ್ಕಾಲೀನ ದೂರಸಂಚಾರ ಸೇವೆಯನ್ನು ಪೂರೈಸುವ ಉದ್ದೇಶ ಸಫಲವಾಯಿತು.

**ಇನ್‌ಸ್ಯಾಟ್ (Indian National Satelite):** ಅಗಸ್ಟ 1983ರಲ್ಲಿ 'ಇನ್‌ಸ್ಯಾಟ್-1 ಬಿ' ಈ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಲಾಯಿತು. ಇದರಿಂದಾಗಿ ಭಾರತದ ದೂರಸಂಚಾರ, ದೂರದರ್ಶನ, ಆಕಾಶವಾಣಿ, ಹವಾಮಾನದ ಅಂದಾಜನ್ನು ಊಹಿಸುವುದು ಮತ್ತು ಅಂತರಿಕ್ಷ ವಿಭಾಗ ಮುಂತಾದ ಕ್ಷೇತ್ರಗಳಲ್ಲಿ ಕ್ರಾಂತಿಯುಂಟಾಯಿತು. ಇನ್‌ಸ್ಯಾಟದಿಂದಾಗಿ ದೇಶದಲ್ಲಿಯ 207 ಆಕಾಶವಾಣಿ ಕೇಂದ್ರಗಳನ್ನು ಪರಸ್ಪರರೊಂದಿಗೆ ಜೋಡಿಸಲು

ಸಾಧ್ಯವಾಯಿತು. ಸಂಕಟಗ್ರಸ್ತರ ಶೋಧ ಮತ್ತು ಬಿಡುಗಡೆ (ಹಡಗು ಇಲ್ಲವೆ ವಿಮಾನ ಅಪಘಾತದ ಪ್ರಸಂಗದಲ್ಲಿ), ಹವಾಮಾನದ ಅಂದಾಜು, ಬಿರುಗಾಳಿಗಳ ಶೋಧ ಮತ್ತು ಪರೀಕ್ಷಣೆ, ಟೆಲಿಮೆಡಿಸಿನ್ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಇದರ ಉಪಯೋಗವಾಗುತ್ತಿದೆ. ಇನ್‌ಸ್ಯಾಟ್ ವ್ಯವಸ್ಥೆಯಲ್ಲಿಯ ಟೆಲಿಮೆಡಿಸಿನ್ ಈ ಸೇವೆಯಿಂದಾಗಿ ಗ್ರಾಮೀಣ ಮತ್ತು ದುರ್ಗಮ ಭಾಗಗಳಲ್ಲಿಯ ಜನರಿಗೆ ತಜ್ಞ ಡಾಕ್ಟರರ ಸಲಹೆ ಮತ್ತು ಔಷಧೋಪಚಾರಗಳು ಸುಲಭವಾಗಿ ದೊರೆಯಲು ಸಾಧ್ಯವಾಗುತ್ತದೆ. ಗ್ರಾಮೀಣ ಮತ್ತು ಚಿಕ್ಕ ಊರುಗಳಲ್ಲಿಯ ವೈದ್ಯಕೀಯ ಸೇವಾಕೇಂದ್ರಗಳು ದೊಡ್ಡ ನಗರಗಳಲ್ಲಿಯ ಸುಪರ ಸ್ಪೆಶಾಲಿಟಿ ಸೇವೆಯು ಲಭ್ಯವಿರುವ ಆಸ್ಪತ್ರೆಗಳ ಜೊತೆ ಇನ್‌ಸ್ಯಾಟ್ ಮೂಲಕ ಜೋಡಿಸಲ್ಪಟ್ಟಿವೆ.

**ತಂತ್ರಜ್ಞಾನದಲ್ಲಿಯ ಪ್ರಗತಿ:** ಪಶ್ಚಿಮ ಬಂಗಾಲದಲ್ಲಿಯ ಬರದ್ವಾನ ಜಿಲ್ಲೆಯ ಚಿತ್ತರಂಜನ ಎಂಬಲ್ಲಿ ರೇಲ್ವೆ ಇಂಜನ್ನುಗಳನ್ನು ತಯಾರಿಸುವ 'ಚಿತ್ತರಂಜನ ಲೋಕೋಮೊಟಿವ್ಹ ವರ್ಕ್ಸ್' ಎಂಬ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಈ ಕಾರ್ಖಾನೆಯಲ್ಲಿ ಉಗಿಯ ಇಂಜನ್ನು, ಡಿಝೆಲ ಮತ್ತು ವಿದ್ಯುತ್ ಇಂಜನ್ನುಗಳನ್ನು ತಯಾರಿಸಲಾಯಿತು. ವಾರಾಣಸಿಯಲ್ಲಿಯ ಡಿಝೆಲ ಲೋಕೊಮೋಟಿವ್ಹ ವರ್ಕ್ಸ್‌ದಲ್ಲಿ ಮೊದಲನೆಯ ಡಿಝೆಲ ಇಂಜನ್ನಿನ ನಿರ್ಮಿತಿಯಾಯಿತು. ಇಲ್ಲಿಂದಲೇ ಶ್ರೀಲಂಕಾ, ಬಾಂಗಲಾದೇಶ, ಟಾಂಝಾನಿಯಾ ಮತ್ತು ವ್ಹಿಯೆತನಾಮಗಳಿಗೆ ಇಂಜನ್ನುಗಳ ನಿರ್ಯಾತ ಆರಂಭವಾಯಿತು.

**ಟೆಲೆಕ್ಸ ಸೇವೆ:** ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಶೀಘ್ರಗತಿಯಿಂದ ಬೆರಳಚ್ಚಿನ ರೂಪದಲ್ಲಿ ಸಂದೇಶವನ್ನು ಕಳಿಸುವ ಟೆಲೆಕ್ಸ್ ಸೇವೆಯನ್ನು 1963ರಲ್ಲಿ ಕೇಂದ್ರದ ಸಂಪರ್ಕ ಇಲಾಖೆಯು ಆರಂಭಿಸಿತು. 1969ರಲ್ಲಿ ಪ್ರಥಮವಾಗಿ ದಿಲ್ಲಿಯಲ್ಲಿ ದೇವನಾಗರಿ ಲಿಪಿಯಲ್ಲಿ ಟೆಲೆಕ್ಸ್ ಸೇವೆ ಆರಂಭವಾಯಿತು. ನಂತರ ಭಾರತದ ತುಂಬೆಲ್ಲ ಅದರ ವಿಸ್ತಾರವಾಯಿತು. ಈ ಸೇವೆಯ ಉಪಯೋಗವು ಎಲ್ಲಾ ಕ್ಷೇತ್ರಗಳಲ್ಲೂ ಆರಂಭವಾಯಿತು. 1990ರ ನಂತರ ಇಂಟರ್ನೆಟ್‌ನ ಉದಯದ ನಂತರ ಈ ಸೇವೆಯ ಮಹತ್ವವು ಕೊನೆಗೊಂಡಿತು.

**ಉಪಗ್ರಹವುಳ್ಳ ದೂರಸಂಚಾರ ಕೇಂದ್ರ:** ಕೃತ್ರಿಮ ಉಪಗ್ರಹದ ಸಹಾಯದಿಂದ ದೇಶಾಂತರ್ಗತ ಉಪಗ್ರಹದ ಮೂಲಕ ಸಂದೇಶ (ಸ್ಯಾಟೆಲೈಟ್ ಕಮ್ಯುನಿಕೇಶನ್) ಸಾಧ್ಯವಾಗ ಬೇಕೆನ್ನುವ ಸಲುವಾಗಿ ಉಪಗ್ರಹಕ್ಕೆ ಸಂದೇಶವನ್ನು ಕಳಿಸುವ ಸಲುವಾಗಿ ಮತ್ತು ಉಪಗ್ರಹದ ಮೇಲಿಂದ ಸಂದೇಶವನ್ನು ಗ್ರಹಣ ಮಾಡುವ ಸಲುವಾಗಿ ಅವಶ್ಯಕವಾಗಿದ್ದ ದೇಶಾಂತರ್ಗತ (ಡೊಮೆಸ್ಟಿಕ್) ಉಪಗ್ರಹದ ದೂರಸಂಚಾರ ಭೂಕೇಂದ್ರವನ್ನು 1967ರಲ್ಲಿ ಅಹಮದಾಬಾದ ಹತ್ತಿರದ 'ಜೋಧಪೂರ ಟೇಕರಾ' ಭಾಗದಲ್ಲಿ ಸ್ಥಾಪಿಸಲಾಯಿತು. ಇದರಿಂದಾಗಿ ಭಾರತೀಯ ಶಾಸ್ತ್ರಜ್ಞರಿಗೆ ಮತ್ತು ತಂತ್ರಜ್ಞರಿಗೆ ಭೂಕೇಂದ್ರವನ್ನು ಸ್ಥಾಪಿಸುವ ಮತ್ತು ಅದರ ಕಾರ್ಯಪ್ರಣಾಲಿಯ ಬಗ್ಗೆ ದೇಶಾಂತರ್ಗತ ತರಬೇತಿಯನ್ನು ನೀಡುವುದು ಸುಲಭವಾಯಿತು. 1970ರಲ್ಲಿ ಪುಣೆಯ ಹತ್ತಿರದ ಆರ್ವಿ ಎಂಬಲ್ಲಿ ಅಂತರ್ದೇಶೀಯ ದೂರಸಂಚಾರ ಸೇವೆಗಾಗಿ ಸುಸಜ್ಜಿತವಾದ ಭೂಕೇಂದ್ರವನ್ನು ಸ್ಥಾಪಿಸಲಾಯಿತು.

ಪಿನ್‌ಕೋಡ: 15 ಅಗಸ್ಟ 1972ರಿಂದ ಭಾರತೀಯ ಅಂಚೆ ಮತ್ತು ತಂತಿ ವಿಭಾಗವು ದೇಶದಲ್ಲಿ ಆರು ಅಂಕಗಳ ಪೋಸ್ಟಲ್ ಇಂಡೆಕ್ಸ್ ಕೋಡ್ (ಪಿನ್ ಕೋಡ) ಪದ್ಧತಿಯನ್ನು ಆರಂಭಿಸಿತು. ಪತ್ರಗಳ ಹಂಚಿಕೆಯಲ್ಲಿ ದಕ್ಷತೆಯನ್ನು ತರುವುದು ಅದರ ಉದ್ದೇಶವಿದೆ. ಈ ಪದ್ಧತಿಯಲ್ಲಿ ದೇಶದ ಒಂಬತ್ತು ವಿಭಾಗಗಳನ್ನು ಮಾಡಲಾಯಿತು. ಪಿನ್ ಕೋಡದಲ್ಲಿಯ ಮೊದಲನೆಯ ಕ್ರಮಾಂಕವು ಮುಖ್ಯ ವಿಭಾಗವನ್ನು ತೋರಿಸುತ್ತದೆ. ಎರಡನೆಯ ಅಂಕವು ಉಪವಿಭಾಗವನ್ನು, ಮೂರನೆಯ ಅಂಕವು ಉಪವಿಭಾಗದಲ್ಲಿಯ ಪ್ರಮುಖ ಹಂಚುವಿಕೆ ಜಿಲ್ಲೆಯನ್ನು ತೋರಿಸುತ್ತದೆ. ಅದರಂತೆ ಉಳಿದ ಮೂರು ಅಂಕಗಳ ಮೂಲಕ ಸ್ಥಾನಿಕ ಹಂಚುವಿಕೆ ಅಂಚೆಕಚೇರಿಯ ಸ್ಥಾನವನ್ನು ನಿಶ್ಚಿತಪಡಿಸಲಾಯಿತು. ಮಹಾರಾಷ್ಟ್ರಕ್ಕಾಗಿ 40, 41, 42, 43 ಮತ್ತು 44 ಇವು ಮೊದಲಿನ ಎರಡು ಅಂಕಗಳಿವೆ. ಪತ್ರವು ಶೀಘ್ರಗತಿಯಿಂದ ಮುಟ್ಟುವ ಸಲುವಾಗಿ 1986ರಲ್ಲಿ 'ಸ್ಪೀಡ ಪೋಸ್ಟ' ಸೇವೆಯನ್ನು ಆರಂಭಿಸಲಾಯಿತು.

**ಆಯ್‌ಎಸ್‌ಡಿ (ಇಂಟರನ್ಯಾಶನಲ್ ಸಬಸ್ಕ್ರಾಯಬರ ಡಾಯಲ್ಡ ಟೇಲಿಫೋನ ಸರ್ವ್ಹಿಸ):** 1972 ರಲ್ಲಿ ಮುಂಬಯಿಯಲ್ಲಿ 'ಓವ್ಹರಸೀಜ ಕಮ್ಯುನಿಕೇಶನ್ಸ್ ಸರ್ವ್ಹೀಸ'ನ ಸ್ಥಾಪನೆಮಾಡಿ ಅಂತರರಾಷ್ಟ್ರೀಯ ದೂರಸಂಚಾರ ಸೇವೆಯ ವ್ಯವಸ್ಥೆ ಮಾಡುವ ಕಾರ್ಯ ಆರಂಭವಾಯಿತು. 1976ರಲ್ಲಿ ಮುಂಬಯಿ ಮತ್ತು ಲಂಡನ ಈ ಎರಡು ನಗರಗಳಲ್ಲಿ ಪ್ರತ್ಯಕ್ಷ ದೂರಧ್ವನಿ ಸಂಪರ್ಕವುಂಟಾಗಿ ಆಯಎಸ್‌ಡಿ ಸೇವೆ ಆರಂಭವಾಯಿತು. ದೂರಧ್ವನಿಯಂತೆ ಟೆಲೆಕ್ಸ್, ಟೆಲಿಪ್ರಿಂಟರ, ರೇಡಿಯೋ ಛಾಯಾಚಿತ್ರಗಳು ಮುಂತಾದ ಸೇವೆಗಳು ಆರಂಭವಾದವು. 1986ರಲ್ಲಿ ವಿದೇಶ ಸಂಚಾರ ನಿಗಮ ಲಿಮಿಟೆಡ್ (VSNL) ಇದು ಈ ಕ್ಷೇತ್ರದಲ್ಲಿ ಇನ್ನೂ ಮುಂದಿನ ಹೆಜ್ಜೆಯನ್ನಿಟ್ಟಿತು. ಅದಕ್ಕೆ ಮೊದಲು ಮಹಾನಗರ ಟೆಲಿಫೋನ ನಿಗಮ ಲಿಮಿಟೆಡ್ ಇದು ದೊಡ್ಡ ನಗರಗಳಲ್ಲಿಯ ದೂರಸಂಚಾರ ಸೇವೆಗಾಗಿ ಸ್ಥಾಪನೆ ಮಾಡಲಾದ ಸಾರ್ವಜನಿಕ ಕಂಪನಿಯಾಗಿತ್ತು. 1990 ರಲ್ಲಿ ದಶಕದಲ್ಲಿ VSNL ಇದು ಭಾರತದಲ್ಲಿ ಇಂಟರ್ನೆಟ್ ಸೇವೆಯನ್ನು ಒದಗಿಸುವ ಪ್ರಮುಖ ಕಂಪನಿ ಎಂಬ ಸ್ಥಾನವನ್ನು ಪಡೆಯಿತು. ಈ ಕ್ಷೇತ್ರದಲ್ಲಿ ಸ್ಯಾಮ್ ಪಿತ್ರೋದಾ ಇವರ ಕೊಡುಗೆ ಅಮೂಲ್ಯವಾಗಿದೆ.

**ಮೊಬೈಲ:** 22 ಅಗಸ್ಟ 1994ರಂದು ಭಾರತದಲ್ಲಿ

ಮೊಬೈಲ ಸೇವೆ ಆರಂಭವಾಯಿತು. ಆ ಸಮಯದಲ್ಲಿ ಮೊಬೈಲ ಹ್ಯಾಂಡಸೆಟ್ ಬೆಲೆ 45 ಸಾವಿರ ರೂಪಾಯಿ ಮತ್ತು

**ಚರ್ಚಿಸಿರಿ.**

ಭ್ರಮಣಧ್ವನಿ (ಮೊಬೈಲ) ತಂತ್ರಜ್ಞಾನದಲ್ಲಿ ಉಂಟಾದ ವಿವಿಧ ಬದಲಾವಣೆಗಳ ಬಗ್ಗೆ ಮಾಹಿತಿಯನ್ನು ಪಡೆಯಿರಿ. ಅದರ ಲಾಭ-ಹಾನಿಗಳನ್ನು ಕುರಿತು ಚರ್ಚಿಸಿರಿ.

ಕಾಲ ದರ ಪ್ರತಿ ನಿಮಿಷಕ್ಕೆ 17 ರೂಪಾಯಿ ಇತ್ತು. 1999ರಲ್ಲಿ ಈ ಕ್ಷೇತ್ರದಲ್ಲಿ ಅನೇಕ ಖಾಸಗಿ ಕಂಪನಿಗಳು ಬಂದವು. ಇದರಿಂದಾಗಿ ಸೇವೆಯು ಅಗ್ಗವಾಗತೊಡಗಿತು.

**ಭಾರತ ಸಂಚಾರ ನಿಗಮ ಲಿಮಿಟೆಡ್ (BSNL)** ಕ್ರಿ.ಶ. 2000ರಲ್ಲಿ ದೂರ ಸಂಚಾರ ವಿಭಾಗದ ಪುನರ್ರಚನೆ ಮಾಡಲಾಯಿತು. ಧೋರಣಾತ್ಮಕ ನಿರ್ಣಯಗಳ ಜವಾಬ್ದಾರಿಯನ್ನು ದೂರಸಂಚಾರ ವಿಭಾಗದ ಕಡೆಗೆ ಶಾಶ್ವತವಾಗಿಟ್ಟು ಗ್ರಾಹಕರಿಗೆ ಪ್ರತ್ಯಕ್ಷ ಸೇವೆಯನ್ನು ಒದಗಿಸುವ ಸಲುವಾಗಿ 'ಭಾರತ ಸಂಚಾರ ನಿಗಮ ಲಿಮಿಟೆಡ್‌ನ ಸ್ಥಾಪನೆ ಮಾಡಲಾಯಿತು. ದೂರಧ್ವನಿ ಸೇವೆಯ ಜೊತೆಗೆ ಸೆಲ್ಯೂಲರ ಫೋನ, ಇಂಟರ್ನೆಟ್, ಬ್ರಾಡಬ್ಯಾಂಡ ಸೇವೆಗಳು ಲಭ್ಯವಾದವು.

**ಆಯಿಲ್ ಆ್ಯಂಡ್ ನ್ಯಾಚರಲ್ ಗ್ಯಾಸ್ ಕಾರ್ಪೊರೇಶನ್ (ಓಎನ್‌ಜಿಸಿ):** ಖನಿಜ ಎಣ್ಣೆ ಮತ್ತು ನೈಸರ್ಗಿಕ ವಾಯುವಿನ ಸಂಗ್ರಹವನ್ನು ಶೋಧಿಸುವುದು ಮತ್ತು ಅವುಗಳ ಉತ್ಪಾದನೆಯನ್ನು ಹೆಚ್ಚಿಸುವುದರ ಸಲುವಾಗಿ 1956ರಲ್ಲಿ ಖನಿಜ ಎಣ್ಣೆ ಮತ್ತು ನೈಸರ್ಗಿಕ ವಾಯು ಆಯೋಗವನ್ನು ಅಂದರ 'ಆಯಿಲ್ ಆ್ಯಂಡ್ ನ್ಯಾಚರಲ್ ಗ್ಯಾಸ ಕಾರ್ಪೊರೇಶನ್' (ಓಎನ್‌ಜಿಸಿ) ಸ್ಥಾಪಿಸಲಾಯಿತು. ಆಸಾಮ ರಾಜ್ಯದ ದಿಗ್ಬೋಯಿಯ ನಂತರ ಗುಜರಾತದಲ್ಲಿಯ ಅಂಕಲೇಶ್ವರ ಪರಿಸರದಲ್ಲಿ ಖನಿಜ ಎಣ್ಣೆಯದ ಸಂಗ್ರಹಗಳು ದೊರೆತವು.

ಖನಿಜ ತೈಲ ಮತ್ತು ನೈಸರ್ಗಿಕ ವಾಯು ಆಯೋಗವು (ಓಎನ್‌ಜಿಸಿ) 1974ರಲ್ಲಿ 'ಸಾಗರಸಮ್ರಾಟ' ಈ ಡ್ರಿಲಶಿಪ್ ಮುಖಾಂತರ 'ಬಾಂಬೆ ಹಾಯ್' ಪರಿಸರದಲ್ಲಿ ರಶಿಯನ್ ಸಂಶೋಧಕರ ನೆರವಿನಿಂದ ಎಣ್ಣೆ ಬಾವಿಗಳನ್ನು ಅಗೆಯಲು ಆರಂಭಿಸಿತು. ಇಲ್ಲಿ 1975 ರಿಂದ ಖನಿಜ ತೈಲ ಮತ್ತು ನೈಸರ್ಗಿಕ ವಾಯು ದೊರೆಯಲು ಆರಂಭವಾಯಿತು. ನಂತರ ಈ ಭಾಗದಲ್ಲಿ 8500 ಕ್ಕಿಂತ ಹೆಚ್ಚು ಎಣ್ಣೆ ಬಾವಿಗಳನ್ನು ಮತ್ತು 33 ನೈಸರ್ಗಿಕ ವಾಯುವಿನ ಬಾವಿಗಳನ್ನು ಅಗೆಯಲಾಯಿತು. ಇದರಿಂದಾಗಿ ಭಾರತದಲ್ಲಿಯ ಖನಿಜ ತೈಲದ ಒಟ್ಟು ಉತ್ಪಾದನೆಯಲ್ಲಿ ಈ ಕ್ಷೇತ್ರದ ಪಾಲು ಶೇಕಡಾ 38ರ ವರೆಗೆ ತಲುಪಿತು. ಅಲ್ಲದೆ ದೇಶದ ಖನಿಜ ತೈಲದ ಒಟ್ಟು ಅವಶ್ಯಕತೆಯಲ್ಲಿಯ ಶೇಕಡಾ 14 ರಷ್ಟು ಅವಶ್ಯಕತೆಯು ಈ ಕ್ಷೇತ್ರದಿಂದಾಗಿ ಪೂರ್ಣವಾಯಿತು.



**ಗೊತ್ತಿದೆಯೇ ನಿಮಗೆ ?**

ಈ. ಶ್ರೀಧರನ್ 'ಮೆಟ್ರೋಮ್ಯಾನ್' ಈ ಉಪನಾಮದಿಂದ ಪ್ರಸಿದ್ಧರಾಗಿದ್ದಾರೆದಿಲ್ಲಿ ಮೆಟ್ರೋ ಮತ್ತು ಕೊಂಕಣ ರೇಲ್ವೆ ಅವರ ಮಹತ್ವದ ಕಾರ್ಯಗಳಾಗಿವೆ.

**ಕೊಂಕಣ ರೈಲು:** 1998ರಲ್ಲಿ ಕೊಂಕಣ ರೈಲು ಆರಂಭವಾಯಿತು. ಗೋವಾ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ಈ ನಾಲ್ಕು ರಾಜ್ಯಗಳಲ್ಲಿ ಹರಡಿದ ಸುಮಾರು 760 ಕಿಲೋಮೀಟರ ಉದ್ದಳತೆಯ ಕೊಂಕಣ ರೈಲು ಮಾರ್ಗದಲ್ಲಿ ತಂತ್ರಜ್ಞಾನದ ಅನೇಕ ವಿಕ್ರಮಗಳು ಪ್ರಸ್ಥಾಪಿತವಾಗಿವೆ. ಈ ಮಾರ್ಗದಲ್ಲಿ ಒಟ್ಟು 92 ಸುರಂಗ ಮಾರ್ಗಗಳಿವೆ. ಈ ಮಾರ್ಗದಲ್ಲಿಯ ಕಾರಬುಡೆ ಎಂಬಲ್ಲಿಯ 6.5 ಕಿ.ಮೀ. ಉದ್ದಳತೆಯ ಸುರಂಗ ಮಾರ್ಗವು ಅತ್ಯಂತ ದೊಡ್ಡ ಸುರಂಗ ಮಾರ್ಗವಾಗಿದೆ. ಈ ಮಾರ್ಗದಲ್ಲಿ 179 ದೊಡ್ಡ ಮತ್ತು 1819 ಸಣ್ಣ ಸೇತುವೆಗಳು ಇವೆ. ಅವುಗಳಲ್ಲಿ ಹೊನ್ನಾವರ ಹತ್ತಿರದ ಶರಾವತಿ ನದಿಯ ಮೇಲಿನ 2065.8 ಮೀಟರ ಉದ್ದಳತೆಯ ಸೇತುವೆಯು ಎಲ್ಲಕ್ಕಿಂತ ದೊಡ್ಡ ಸೇತುವೆಯಾಗಿದೆ. ರತ್ನಾಗಿರಿ ಹತ್ತಿರದ ಪನವಲ ನದಿಯ ಮೇಲಿನ 64 ಮೀಟರ ಎತ್ತರದ ಸೇತುವೆಯು ಅತ್ಯಂತ ಎತ್ತರವಾದ ಸೇತುವೆಯಾಗಿದೆ. ಬಂಡೆ ಕುಸಿತವಾಗುವ ಮಾರ್ಗದಲ್ಲಿ ಇಂಜನ್ನುಗಳಲ್ಲಿ ಸೆನ್ಸರ್ ಕೂಡಿಸಲಾಗಿದೆ.

**ರೈಲು ಮತ್ತು ತಂತ್ರಜ್ಞಾನ:** ಆಧುನಿಕ ಭಾರತದ ಇತಿಹಾಸದಲ್ಲಿ ರೈಲು ಅಂಗೀಕರಿಸಿದ ತಂತ್ರಜ್ಞಾನದ ಪಾಲು ಬಹುದೊಡ್ಡದಾಗಿದೆ.

ರೈಲು ಪ್ರವಾಸದ ಮೀಸಲಾತಿ (ರಿಝರ್ವೇಶನ್) ವ್ಯವಸ್ಥೆಯಲ್ಲಿ ದಕ್ಷತೆ, ನಿಷ್ಪಕ್ಷತೆ ಮತ್ತು ಸುಸೂತ್ರತೆ ಉಂಟಾಗಬೇಕೆಂದು 1984ರಲ್ಲಿ ದಿಲ್ಲಿಯಲ್ಲಿ ಪ್ರಪ್ರಥಮವಾಗಿ ಗಣಕೀಕೃತ ಮೀಸಲಾತಿ ವ್ಯವಸ್ಥೆಯನ್ನು ಮಾಡಲಾಗಿದೆ. ಇದೇ ವರ್ಷ ಕೋಲಕತ್ತಾದಲ್ಲಿ ಮೆಟ್ರೋ ರೈಲು ಪ್ರಾರಂಭವಾಯಿತು.

ಈ ರೀತಿ ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿ ಸತತ ಪ್ರಗತಿಯನ್ನು ಸಾಧಿಸಿದೆ. ಹೊಸ ಹೊಸ ಸಂಶೋಧನೆಗಳನ್ನು ಮಾಡಿದೆ. ಭಾರತವು ಇಪ್ಪತ್ತೊಂದನೆಯ ಶತಮಾನದಲ್ಲಿಯ ಒಂದು ಮಹತ್ವದ ದೇಶವಾಗಿದೆ. ಭಾರತವು ತಂತ್ರಜ್ಞಾನದ ಉಪಯೋಗವನ್ನು ಜಗತ್ತಿನಲ್ಲಿ ಶಾಂತಿಯನ್ನು ನಿರ್ಮಿಸುವ ಸಲುವಾಗಿಯೇ ಮಾಡಿದೆ. ಭಾರತವು 21ನೇ ಶತಮಾನದಲ್ಲಿ ಪ್ರಮುಖ ದೇಶವಾಗುವ ಉದ್ದೇಶದಿಂದ ಕಾರ್ಯ ಮಾಡುತ್ತಿದೆ.

ಮುಂದಿನ ಪಾಠದಲ್ಲಿ ಉದ್ಯೋಗ ಮತ್ತು ವ್ಯಾಪಾರಗಳ ಕ್ಷೇತ್ರಗಳಲ್ಲಿ ಮಾಡಿದ ಪ್ರಗತಿಯನ್ನು ಕುರಿತು ಮಾಹಿತಿಯನ್ನು ಪಡೆಯುವವರಿದ್ದೇವೆ.

## ಸ್ವಾಧ್ಯಾಯ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ಕೆಳಗಿನ ವಿಧಾನಗಳನ್ನು ಪೂರ್ಣಮಾಡಿರಿ.**

(1) ಅಣುಶಕ್ತಿ ಆಯೋಗದ ಮೊದಲನೆಯ ಅಧ್ಯಕ್ಷರೆಂದು ................ ಇವರ ನೇಮಕ ಮಾಡಲಾಯಿತು.
- (ಅ) ಡಾ. ಹೋಮಿ ಭಾಭಾ
- (ಬ) ಡಾ. ಹೋಮಿ ಸೇಠನಾ
- (ಕ) ಡಾ. ಎ.ಪಿ.ಜೆ. ಅಬ್ದುಲ್ ಕಲಾಮ
- (ಡ) ಡಾ. ರಾಜಾರಾಮಣ್ಣಾ

(2) ಇಸ್ರೊ ಸಂಪೂರ್ಣವಾಗಿ ಭಾರತದಲ್ಲಿ ತಯಾರಿಸಿದ ................ ಇದು ಮೊದಲನೆಯ ದೂರಸಂಚಾರ ಉಪಗ್ರಹವಾಗಿದೆ.
- (ಅ) ಆರ್ಯಭಟ್ಟ (ಬ) ಇನ್‌ಸ್ಯಾಟ 1ಬಿ
- (ಕ) ರೋಹಿಣಿ-75 (ಡ) ಆ್ಯಪಲ್

**(ಬ) ಕೆಳಗಿನವುಗಳಲ್ಲಿಯ ತಪ್ಪಾದ ಜೊತೆಯನ್ನು ಗುರುತಿಸಿರಿ ಬರೆಯಿರಿ.**

(1) ಪೃಥ್ವಿ- ಭೂಮಿಯ ಮೇಲಿಂದ ಭೂಮಿಯ ಮೇಲೆ ದಾಳಿ ಮಾಡುವ ಕ್ಷಿಪಣಿ

(2) ಅಗ್ನಿ- ಭೂಮಿಯ ಮೇಲಿಂದ ನೀರಿನ ಕೆಳಗಡೆ ದಾಳಿ ಮಾಡುವ ಕ್ಷಿಪಣಿ


(3) ಆಕಾಶ- ಭೂಮಿಯ ಮೇಲಿಂದ ಅಂತರಿಕ್ಷದಲ್ಲಿ ದಾಳಿ ಮಾಡುವ ಕ್ಷಿಪಣಿ

(4) ನಾಗ- ಶತ್ರುಗಳ ಟ್ಯಾಂಕರಗಳನ್ನು ನಷ್ಟಮಾಡುವ ಕ್ಷಿಪಣಿ

C3B73D

**2. (ಅ) ಕೊಟ್ಟ ಸೂಚನೆಯಂತೆ ಕೃತಿ ಪೂರ್ಣಮಾಡಿರಿ.**

**ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿಯ ಭಾರತದ ಪ್ರಗತಿಯ ಕಾಲರೇಷೆಯನ್ನು ದಶಕಾನುಸಾರವಾಗಿ ತಯಾರಿಸಿರಿ.**




**(ಬ) ಟಿಪ್ಪಣಿ ಬರೆಯಿರಿ.**

(1) ಅಂತರಿಕ್ಷ ಸಂಶೋಧನೆ

(2) ಟೆಲೆಕ್ಸ್ ಸೇವೆ

(3) ಪೋಖರಣ ಅಣು

(4) ಭಾಸ್ಕರ-1

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಪಂ. ನೆಹರೂರವರು ಅಣುಶಕ್ತಿ ಆಯೋಗದ ಸ್ಥಾಪನೆ ಮಾಡಿದರು.

(2) ಭಾರತವು ಅಣುಪರೀಕ್ಷೆಯನ್ನು ಮಾಡುವ ನಿರ್ಣಯವನ್ನು ಕೈಗೊಂಡಿತು.

(3) ಅಮೇರಿಕೆಯು ಭಾರತದ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿತು.

**4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ನಿಮ್ಮ ಬಳಕೆಯಲ್ಲಿರುವ ಯಾವ ಯಾವ ಸೌಕರ್ಯಗಳ ಮೇಲೆ ಉಪಗ್ರಹ ತಂತ್ರಜ್ಞಾನದ ಪ್ರಭಾವ ಬಿದ್ದುದು ಕಂಡುಬರುತ್ತದೆ ?

(2) ಡಾ. ಎ.ಪಿ.ಜೆ. ಅಬ್ದುಲ್ ಕಲಾಮ ಇವರನ್ನು 'ಮಿಸಾಯಿಲ ಮ್ಯಾನ' ಎಂದು ಏಕೆ ಸಂಬೋಧಿಸಲಾಗುತ್ತದೆ?

(3) ಗಣಕೀಕೃತ ರೈಲ್ವೆ ರಿಜರ್ವೇಶನ ಹೇಗೆ ಮಾಡಲಾಗುತ್ತದೆ ?

(4) ಕೊಂಕಣ ರೈಲಿನ ವೈಶಿಷ್ಟ್ಯಗಳು ಯಾವವು- ಎಂಬುದನ್ನು ಬರೆಯಿರಿ.

**ಉಪಕ್ರಮ**

(1) ಅಂತರಜಾಲದ ಸಹಾಯದಿಂದ 'ಥುಂಬಾ ಇಕ್ವೆಟೋರಿಯಲ್ ಲಾಂಚ ಸೆಂಟರ'ದ ಮಾಹಿತಿ ಪಡೆಯಿರಿ.

(2) ನಿಮ್ಮ ಹತ್ತಿರದ ಆಕಾಶವಾಣಿ ಕೇಂದ್ರಕ್ಕೆ/ದೂರದರ್ಶನ ಕೇಂದ್ರಕ್ಕೆ ಭೇಟಿ ನೀಡಿರಿ ಮತ್ತು ಮಾಹಿತಿ ಪಡೆಯಿರಿ.

# 8 ಉದ್ಯೋಗ ಮತ್ತು ವ್ಯಾಪಾರ

ಈ ಪಾಠದಲ್ಲಿ ನಾವು ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ಉದ್ಯೋಗ ಮತ್ತು ವ್ಯಾಪಾರ. ಇವುಗಳನ್ನು ಕುರಿತು ಮಾಹಿತಿ ಪಡೆಯುವವರಿದ್ದೇವೆ.

ಭಾರತವು ಸ್ವತಂತ್ರವಾದ ನಂತರ ಔದ್ಯೋಗಿಕ ವಿಕಾಸಕ್ಕೆ ಚಾಲನೆ ನೀಡುವ ಸಲುವಾಗಿ 1948 ರಲ್ಲಿ ಔದ್ಯೋಗಿಕ ಯೋಜನೆಗಳಿಗೆ ದೀರ್ಘಾವಧಿಯ ಸಾಲವನ್ನು ಒದಗಿಸುವ ಉದ್ದೇಶದಿಂದ 'ಭಾರತೀಯ ಔದ್ಯೋಗಿಕ ವಿತ್ತ ಮಹಾಮಂಡಳ'ದ ಸ್ಥಾಪನೆ ಮಾಡಲಾಯಿತು. ಅದರಂತೆ 1954ರಲ್ಲಿ ಔದ್ಯೋಗಿಕ ಕ್ಷೇತ್ರದ ವಿಕಾಸವು ಅಧಿಕ ಪ್ರಮಾಣದಲ್ಲಿ ಆಗಬೇಕೆಂದು 'ಔದ್ಯೋಗಿಕ ವಿಕಾಸ ಮಹಾಮಂಡಳ'ದ ಸ್ಥಾಪನೆ ಮಾಡಲಾಯಿತು.

## ಭಾರತದಲ್ಲಿಯ ಕೆಲವು ಉದ್ಯೋಗಗಳು.

**ವಸ್ತ್ರೋದ್ಯೋಗ:** ದೇಶದ ಒಟ್ಟು ಔದ್ಯೋಗಿಕ ಉತ್ಪಾದನೆಯಲ್ಲಿ ವಸ್ತ್ರೋದ್ಯೋಗದ ಪಾಲು ಸುಮಾರು 14% ಇದೆ.

ವಸ್ತ್ರೋದ್ಯೋಗದಲ್ಲಿ ಯಂತ್ರಮಗ್ಗದ ಉದ್ಯೋಗ ಮತ್ತು ಕೈಮಗ್ಗದ ಉದ್ಯೋಗಗಳ ಸಮಾವೇಶವಾಗುತ್ತದೆ. ಕೈಮಗ್ಗದ ಉದ್ಯೋಗವು ಶ್ರಮಪ್ರಧಾನವಾಗಿದೆ. 'ಟೆಕ್ಸ್‌ಟೈಲ ಕಮಿಟಿ ಆ್ಯಕ್ಟ 1963'ಕ್ಕೆ ಅನುಸಾರವಾಗಿ ವಸ್ತ್ರೋದ್ಯೋಗ ಸಮಿತಿಯ ಸ್ಥಾಪನೆ ಮಾಡಲಗಿದೆ. ದೇಶಾಂತರ್ಗತ ಮಾರುಕಟ್ಟೆ ಮತ್ತು ನಿರ್ಯಾತಕ್ಕಾಗಿ ತಯಾರಿಸಲಾಗುವ ಬಟ್ಟೆಗಳ ಗುಣಮಟ್ಟವನ್ನು ನಿಶ್ಚಿತಗೊಳಿಸುವ ಕಾರ್ಯವು ಈ ಸಮಿತಿಯದಾಗಿದೆ.

**ರೇಶ್ಮೆಯ ಉದ್ಯೋಗ:** ವಸ್ತ್ರೋದ್ಯೋಗ ಇಲಾಖೆಯ ಅಂತರ್ಗತವಾಗಿ ಈ ಉದ್ಯೋಗ ಕೆಲಸ ಮಾಡುತ್ತದೆ. ರೇಶ್ಮೆ ಹುಳುಗಳ ಜಾತಿ ಮತ್ತು ಮಲ್ಬರಿ ಗಿಡಗಳ ಮೇಲಿನ ಸಂಶೋಧನೆಯನ್ನು ಬೆಂಗಳೂರಿನಲ್ಲಿಯ 'ಸೆರಿಬಾಯೊಟಿಕ್ ರಿಸರ್ಚ ಲ್ಯಾಬೊರೇಟರಿ'ಯಲ್ಲಿ ಮಾಡಲಾಗುತ್ತದೆ. ಈ ಉದ್ಯೋಗವು ಪ್ರಾಮುಖ್ಯವಾಗಿ ಕರ್ನಾಟಕ, ಆಂಧ್ರಪ್ರದೇಶ, ಪಶ್ಚಿಮ ಬಂಗಾಲ ಮತ್ತು ಜಮ್ಮು-ಕಾಶ್ಮೀರ ರಾಜ್ಯಗಳಲ್ಲಿ ಇದೆ. ಅದೇರೀತಿ ಈ ಉದ್ಯೋಗದ ಪ್ರಸಾರವನ್ನು ಆದಿವಾಸಿಗಳು ಹೆಚ್ಚಾಗಿ ಇರುವ ರಾಜ್ಯಗಳಲ್ಲಿ ಮಾಡಲಾಗುತ್ತಿದೆ.

**ಸಣಬಿನ ಉದ್ಯೋಗ:** ಭಾರತವು ಸಣಬಿನ ಉತ್ಪಾದನೆಯಲ್ಲಿ ಪ್ರಮುಖ ದೇಶವಾಗಿದೆ. ಭಾರತದಿಂದ ದೊಡ್ಡ ಪ್ರಮಾಣದಲ್ಲಿ ಸಣಬಿನ ಉತ್ಪಾದನೆಯು ನಿರ್ಯಾತವಾಗುತ್ತದೆ. ಸಣಬಿನಿಂದ ಬಟ್ಟೆ, ಚೀಲ, ಹಗ್ಗ ಇತ್ಯಾದಿ ವಸ್ತುಗಳು ದೊರೆಯುತ್ತವೆ.

**ಶಿಲ್ಪಕಲೆ:** ಇದು ಶ್ರಮ ಪ್ರಧಾನ ಕ್ಷೇತ್ರವಾಗಿದೆ. ಹೆಚ್ಚು ಉದ್ಯೋಗಾವಕಾಶ ಕಡಿಮೆ ಹಣ ತೊಡಗಿಸುವುದು, ಹೆಚ್ಚು ಲಾಭ, ನಿರ್ಯಾತಕ್ಕೆ ಪ್ರಾಧಾನ್ಯ ಹಾಗೂ ಹೆಚ್ಚು ಪರಕೀಯ ಚಲನೆಗಳಿಂದಾಗಿ ಈ ಕ್ಷೇತ್ರದಲ್ಲಿ ಶಿಲ್ಪಿಗಳಿಗೆ ಉದ್ಯೋಗ ದೊರಕಿತು. ಗ್ರಾಮೀಣ ಮತ್ತು ಪಟ್ಟಣದ ಕ್ಷೇತ್ರಗಳಲ್ಲಿಯ ಕಸಬುದಾರರಿಗೆ ಮಾರುಕಟ್ಟೆಯನ್ನು ದೊರಕಿಸಿಕೊಡಲು 'ದಿಲ್ಲಿಹಾಟ' ಗಳಂತಹ ಮಾರುಕಟ್ಟೆಯ ವ್ಯವಸ್ಥೆಯು ಅನೇಕ ನಗರಗಳಲ್ಲಿ ಆರಂಭವಾಗಿದೆ. ಮುಂಬಯಿ ಇದು ಅದರಲ್ಲಿಯ ಒಂದು ನಗರವಾಗಿದೆ.



**ಗೊತ್ತಿದೆಯೇ ನಿಮಗೆ ?**

ಸ್ವಯಂ ಉಳಿತಾಯದ ಗುಂಪು ಮತ್ತು ಸ್ವಯಂ ಸೇವೆ ಸಂಸ್ಥೆಗಳ ಎನ್.ಜಿ.ಓ.ದ ಸಹಾಯದಿಂದ ನೇಕಾರರಿಗೆ ನೆರವು ನೀಡುವ 'ಮೆಗಾ ಕ್ಲಸ್ಟರ' ಎಂಬ ಯೋಜನೆ ಇದಾಗಿದೆ. ಅದರಲ್ಲಿ ಕಚ್ಚಾ ಪದಾರ್ಥಗಳು, ಡಿಝೈನ ಸಾಮಗ್ರಿಗಳು, ತಂತ್ರಜ್ಞಾನದ ವಿಕಾಸ, ನೇಕಾರರ ಕಲ್ಯಾಣ ಇತ್ಯಾದಿಗಳಿಗಾಗಿ ನೆರವು ನೀಡಲಾಗುತ್ತದೆ.

**ವಾಹನ ಉದ್ಯೋಗ:** ವಾಹನಗಳ ಉತ್ಪಾದನೆಯಲ್ಲಿ ಭಾರತವು ಪ್ರಮುಖ ದೇಶವಾಗಿದೆ. ಭಾರತವು ನಾಲ್ವತ್ತು ದೇಶಗಳಿಗೆ ವಾಹನಗಳನ್ನು ನಿರ್ಯಾತ ಮಾಡುತ್ತದೆ.

ಭಾರತದಲ್ಲಿಯ ವಾಹನ ಉದ್ಯೋಗಕ್ಕೆ 'ಸನರೈಜ ಕ್ಷೇತ್ರ' ಎಂದು ಹೇಳಲಾಗುತ್ತದೆ. ಉದಾ. ಭಾರತದಲ್ಲಿಯ ಟ್ರ್ಯಾಕ್ಟರ ಉದ್ಯೋಗವು ಅತ್ಯಂತ ದೊಡ್ಡ ಉದ್ಯೋಗವಾಗಿದ್ದು ಜಗತ್ತಿನಲ್ಲಿಯ ಒಟ್ಟು ಉತ್ಪಾದನೆಯಲ್ಲಿ 1/3 ರಷ್ಟು ಟ್ರ್ಯಾಕ್ಟರ ಉತ್ಪಾದನೆ ಭಾರತದಲ್ಲಾಗುತ್ತದೆ. ಭಾರತದ ಟ್ರ್ಯಾಕ್ಟರಗಳನ್ನು ತುರ್ಕಸ್ತಾನ, ಮಲೇಶಿಯಾ ಮತ್ತು ಆಫ್ರಿಕಾ ಖಂಡದ ದೇಶಗಳಿಗೆ ನಿರ್ಯಾತ ಮಾಡಲಾಗುತ್ತದೆ.

**ಸಿಮೆಂಟ ಉದ್ಯೋಗ:** ಗೃಹನಿರ್ಮಾಣ ಮತ್ತು ಮೂಲಭೂತ ಕಟ್ಟಡಗಳ ವಿಕಾಸದಲ್ಲಿ ಸಿಮೆಂಟ ಉದ್ಯೋಗದ ಪಾತ್ರವು ಮಹತ್ವದ್ದಾಗಿದೆ. ತಂತ್ರಜ್ಞಾನದ ವಿಷಯದಲ್ಲಿ ಈ ಉದ್ಯೋಗವು ಅತ್ಯಂತ ಪ್ರಗತಿಶೀಲ ಉದ್ಯೋಗಗಳಲ್ಲಿ ಒಂದಾಗಿದೆ. ಸಧ್ಯದಲ್ಲಿ ಭಾರತವು ಜಗತ್ತಿನಲ್ಲಿ ಸಿಮೆಂಟ ಉತ್ಪಾದನೆಯಲ್ಲಿ ಮಹತ್ವದ ದೇಶವಾಗಿದೆ.

**ಚರ್ಮದ ಉದ್ಯೋಗ:** ಇದು ಭಾರತದಲ್ಲಿ ದೊಡ್ಡ ಉದ್ಯೋಗವಾಗಿದ್ದು ನಿರ್ಯಾತಾಭಿಮುಖ ಉದ್ಯೋಗವಾಗಿದೆ.

**ಉಪ್ಪಿನ ಉದ್ಯೋಗ:** ಇಂದು ಭಾರತವು ಉಪ್ಪಿನ ಉದ್ಯೋಗದಲ್ಲಿಯ ಪ್ರಮುಖ ದೇಶವಾಗಿದೆ. ಭಾರತದಲ್ಲಿ ಪ್ರತಿ ವರ್ಷ 200 ಲಕ್ಷ ಟನ್ ಉಪ್ಪಿನ ಉತ್ಪಾದನೆ

ಯಾಗುತ್ತದೆ. ಆಯೋಡಿನ್‌ಯುಕ್ತ ಉಪ್ಪಿನ ಉತ್ಪಾದನೆಯು 60 ಲಕ್ಷ ಟನ್ನುಗಳಷ್ಟು ಆಗುತ್ತದೆ.

**ಸೈಕಲ್ ಉದ್ಯೋಗ:** ಸೈಕಲ್ ಉತ್ಪಾದನೆಯಲ್ಲಿ ಭಾರತವು ಜಗತ್ತಿನಲ್ಲಿಯ ಒಂದು ಪ್ರಮುಖ ದೇಶವಾಗಿದೆ. ಪಂಜಾಬ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಸೈಕಲ್ಲುಗಳ ಉತ್ಪಾದನೆಯಾಗುತ್ತದೆ. ಲುಧಿಯಾನಾ ನಗರವು ದೇಶದಲ್ಲಿಯ ಪ್ರಮುಖ ಸೈಕಲ ಉತ್ಪಾದನೆಯ ಕೇಂದ್ರವಾಗಿದೆ. ಭಾರತವು ನೈಜೇರಿಯಾ, ಮೆಕ್ಸಿಕೊ, ಕೆನಿಯಾ, ಯುಗಾಂಡಾ ಮತ್ತು ಬ್ರಾಝಿಲ ದೇಶಗಳಿಗೆ ಸೈಕಲ್ಲುಗಳನ್ನು ನಿರ್ಯಾತ ಮಾಡುತ್ತದೆ.

**ಖಾದಿ ಮತ್ತು ಗ್ರಾಮೋದ್ಯೋಗ:** ಗ್ರಾಮೀಣ ಭಾಗದಲ್ಲಿ ಔದ್ಯೋಗೀಕರಣಕ್ಕೆ ಚಾಲನೆ ನೀಡುವ ಸಲುವಾಗಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಸ್ಥಾಪನೆ ಮಾಡಲಾಯಿತು. ಗ್ರಾಮೀಣ ಭಾಗದಲ್ಲಿಯ ಪರಂಪರಾಗತ ಉದ್ಯೋಗ, ಹಸ್ತಕೈಗಾರಿಕೆ, ಗುಡಿಕೈಗಾರಿಕೆ ಅದರಂತೆ ಸ್ಥಾನಿಕ ಮಟ್ಟದಲ್ಲಿ ಲಭ್ಯವಿರುವ ಸಾಧನ ಸಂಪತ್ತು ಮತ್ತು ಮಾನವ ಸಂಪನ್ಮೂಲಗಳನ್ನು ಉಪಯೋಗದಲ್ಲಿ ತರುವ ಲಘು ಕೈಗಾರಿಕೆಗಳ ವಿಕಾಸ ಮಾಡಬೇಕು ಮತ್ತು ರೋಜಗಾರ ನಿರ್ಮಿತಿಯ ಮುಖಾಂತರ ಹಳ್ಳಿಗಳನ್ನು ಸ್ವಾವಲಂಬಿಯನ್ನಾಗಿ ಮಾಡುವುದು ಇವು ಆಯೋಗ ಸ್ಥಾಪನೆಯ ಹಿಂದಿನ ಪ್ರಮುಖ ಉದ್ದೇಶಗಳಾಗಿದ್ದವು.

**ಕೃಷಿ ಉದ್ಯೋಗ:** ಭಾರತದಲ್ಲಿ ಪರಂಪರಾಗತ ಪದ್ಧತಿಯಿಂದ ಮತ್ತು ಆಧುನಿಕ ಪದ್ಧತಿಯಿಂದ ಕೃಷಿ ಮಾಡಲಾಗುತ್ತದೆ. ಕೃಷಿಯ ಅನೇಕ ಕೆಲಸಗಳನ್ನು ಎತ್ತುಗಳ ನೆರವಿನಿಂದ ಮಾಡಲಾಗುತ್ತದೆ. ಅದರಂತೆ ನೇಗಿಲು ಹೊಡೆಯುವುದು, ಬಿತ್ತುವುದು, ಬೆಳೆಗಳನ್ನು ಕೊಯ್ಯುವುದು, ರಾಶಿ ಮಾಡುವುದು ಮುಂತಾದ ಕೆಲಸಗಳನ್ನು ಯಂತ್ರಗಳ ಸಹಾಯದಿಂಧ ಮಾಡಲಾಗುತ್ತಿದೆ.

ಕೃಷಿ ಮತ್ತು ಕೃಷಿಯ ಮೇಲೆ ಆಧಾರಿತ ಇತರ ಕೆಲಸಗಳು ಇದು ಗ್ರಾಮೀಣ ಭಾಗದಲ್ಲಿಯ ಪ್ರಮುಖ ಉದ್ಯೋಗವಾಗಿದೆ. ಹಳ್ಳಿಗಳಲ್ಲಿ ಬೇಸಾಯ ಮತ್ತು ಪಶುಪಾಲನೆಯ ಉದ್ಯೋಗಗಳು ನಡೆಯುತ್ತವೆ. ಕೃಷಿಯ ಕೆಲಸಗಳು ಮತ್ತು ಕೃಷಿ ಉತ್ಪಾದನೆ ಇವುಗಳ ಮೇಲೆ ಪ್ರತಿಶತ 70 ರಷ್ಟು ಸಮಾಜವು ಅವಲಂಬಿಸಿದೆ. ಕೃಷಿ ಉದ್ಯೋಗದಲ್ಲಿ ಪುರುಷರ ಜೊತೆಗೆ ಮಹಿಳೆಯರ ಪಾಲು ಕೂಡ ಹಿರಿದಾಗಿದೆ.

ಭಾರತದಲ್ಲಿ ಕೃಷಿ ಉದ್ಯೋಗವು ವಿವಿಧ ಋತುಗಳಲ್ಲಿ ನಡೆಯುತ್ತದೆ. ಹೊಲದಲ್ಲಿ ಅನೇಕ ಪ್ರಕಾರದ ಬೆಳೆಗಳನ್ನು ಬೆಳೆಯಲಾಗುತ್ತದೆ. ಪ್ರಾಮುಖ್ಯವಾಗಿ ಜೋಳ, ಹತ್ತಿ, ಕಬ್ಬು ಇವುಗಳ ಮೇಲೆ ಪ್ರಕ್ರಿಯೆ ಮಾಡಿ ಬಟ್ಟೆ ಮತ್ತು ಸಕ್ಕರೆ ತಯಾರಿಸುವ ಉದ್ಯೋಗಗಳೂ ನಡೆಯುತ್ತವೆ.

ಹಣ್ಣು ಮತ್ತು ಕಾಯಿಪಲ್ಲೆಗಳ ಉತ್ಪಾದನೆಯು ಕೃಷಿಯಿಂದಲೇ ಆಗುತ್ತಿದೆ ಇತ್ತೀಚಿಗೆ ಅವುಗಳ ಮೇಲೆ ಪ್ರಕ್ರಿಯೆ ಮಾಡುವ ಅನೇಕ ಉದ್ಯೋಗಗಳು ನಡೆಯುತ್ತಿವೆ. ಕೃಷಿಯಿಂದ ಮಾನವನ ಮೂಲಭೂತ ಅವಶ್ಯಕತೆಗಳು ಪೂರ್ಣವಾಗುತ್ತವೆ. ಕೃಷಿ ಉದ್ಯೋಗಕ್ಕೆ ಪ್ರೋತ್ಸಾಹ ದೊರೆಯಬೇಕೆಂದು ಗ್ರಾಮೀಣ ಭಾಗಗಳಲ್ಲಿಯ ಬ್ಯಾಂಕು ಮತ್ತು ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಸಾಲವನ್ನು ನೀಡಲಾಗುತ್ತದೆ. ಪಂಚಾಯತಿ ಸಮಿತಿಯ ಮುಖಾಂತರ ಕೃಷಿಯಲ್ಲಿಯ ಸುಧಾರಣೆಗಾಗಿ ತರಬೇತಿ ಭೇಟಿ ಯೋಜನೆ, ಕೃಷಿ ಪ್ರವಾಸ ಮತ್ತು ರೈತರ ಮೇಳಗಳನ್ನು ಆಯೋಜಿಸಲಾಗುತ್ತದೆ. ಕೃಷಿ ಸಲಕರಣೆಗಳು, ಬೀಜಗಳು ಮತ್ತು ಗೊಬ್ಬರಗಳ ಪೂರೈಕೆಯನ್ನೂ ಮಾಡಲಾಗುತ್ತದೆ. ಕೃಷಿ ವಿಶ್ವವಿದ್ಯಾಲಯದ ವಿಸ್ತಾರ ಸೇವೆ ವಿಭಾಗದ ವತಿಯಿಂದ ರೈತರಿಗೆ ಮಣ್ಣಿನ ಪರೀಕ್ಷೆ, ಫಲೋದ್ಯಾನ ಸಸ್ಯಮಡಿ, ಮೀನುಗಾರಿಕೆ, ಕೋಳಿ ಸಾಕಾಣಿಕೆ, ಮೀಸಲಾದ ಸ್ಥಳದಲ್ಲಿ ಕುರಿಸಾಕಾಣಿಕೆ, ಆಕಳು-ಎಮ್ಮೆಗಳ ಸಂಗೋಪನೆ, ಹಾಲಿನ ಉದ್ಯೋಗ ಮುಂತಾದವುಗಳ ತರಬೇತಿಯನ್ನೂ ನೀಡಲಾಗುತ್ತದೆ. ಜಿಲ್ಲಾ ವ್ಯವಸಾಯ ಮಾರ್ಗದರ್ಶನ ಸಂಸ್ಥೆಯಿಂದ ಮಾರ್ಗದರ್ಶನ ದೊರೆಯುತ್ತದೆ. ಉತ್ಪಾದಿಸಿದ ವಸ್ತುಗಳ ಸಂಗ್ರಹಕ್ಕಾಗಿ ಉಗ್ರಾಣಗಳನ್ನು ಕಟ್ಟಲು ಆರ್ಥಿಕ ನೆರವು ನೀಡಲಾಗುತ್ತದೆ.

ಭಾರತವು ಆಹಾರಧಾನ್ಯದ ಉತ್ಪಾದನೆಯಲ್ಲಿ ಮತ್ತು ಫಸಲು ಪದ್ಧತಿಗಳಲ್ಲಿ ಸ್ವಯಂಪೂರ್ಣವಾಗುತ್ತಿದೆ. ಹನಿ ನೀರಾವರಿ, ಸೇಂದ್ರೀಯ ಕೃಷಿಗಳಂತಹ ಆಧುನಿಕ ಪದ್ಧತಿಗಳಿಂದ ಕೃಷಿ ಮಾಡಲಾಗುತ್ತಿದೆ.

**ಭಾರತ ಸರಕಾರದ ನೀತಿ:** ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಕಾಗದ ಉದ್ಯೋಗ, ಔಷಧ ಉದ್ಯೋಗ, ಮೋಟಾರು-ಟ್ರ್ಯಾಕ್ಟರ ಉದ್ಯೋಗ, ಚರ್ಮದ ವಸ್ತುಗಳು, ಬಟ್ಟೆಯ ಉದ್ಯೋಗ, ಖಾದ್ಯ ಪದಾರ್ಥ ಪ್ರಕ್ರಿಯೆಯ ಉದ್ಯೋಗ, ಎಣ್ಣೆ, ಬಣ್ಣ, ಸಕ್ಕರೆ ಮುತಾದ ಉದ್ಯೋಗಗಳ ಮೇಲೆ ಲಕ್ಷವನ್ನು ಕೇಂದ್ರೀಕರಿಸಲಾಯಿತು.

1970ರ ಔದ್ಯೋಗಿಕ ಪರವಾನಿಗೆ ನೀತಿಗನುಸಾರವಾಗಿ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳ ತಗಲುವ ಎಲ್ಲ ಕಾರ್ಖಾನೆಗಳನ್ನು ಭಾರೀ ಉದ್ಯಮಗಳ ಕ್ಷೇತ್ರದಲ್ಲಿ ತರುವಂತೆ ನಿರ್ಧರಿಸಲಾಯಿತು. ಸರಕಾರಿ ಕ್ಷೇತ್ರಕ್ಕಾಗಿ ಮೀಸಲಾಗಿ ಇರಿಸದೇ ಇದ್ದ ಭಾರೀ ಉದ್ಯಮಗಳಲ್ಲಿ ಹಣವನ್ನು ವಿನಿಯೋಗಿಸಲು ದೊಡ್ಡ ಉದ್ಯೋಗ ಸಂಸ್ಥೆ ಮತ್ತು ವಿದೇಶಿ ಕಂಪನಿಗಳಿಗೆ ಸ್ವಾತಂತ್ರ್ಯವನ್ನು ನೀಡಬೇಕೆಂದು ನಿರ್ಧರಿಸಲಾಯಿತು. ಈ ನೀತಿಗನುಸಾರವಾಗಿ 1972ನೇ ಇಸ್ವಿಯ ಕೊನೆಯಲ್ಲಿ ಸರಕಾರದ ನೋಂದಣಿ ಕಾರ್ಯಾಲಯದಲ್ಲಿ 3 ಲಕ್ಷ 18 ಸಾವಿರ ಲಘು ಕೈಗಾರಿಕೆಗಳು ನೋಂದಾಯಿಸಲ್ಪಟ್ಟವು.

**ಖನಿಜ ಸಂಪತ್ತು:** ದೇಶದ ಔದ್ಯೋಗಿಕ ವಿಕಾಸದಲ್ಲಿ

ಲೋಹ ಮತ್ತು ಕಲ್ಲಿದ್ದಲು ಈ ಎರಡು ಖನಿಜಗಳ ಪಾಲು ತುಂಬಾ ಹಿರಿದಾಗಿರುತ್ತದೆ. ನಮ್ಮ ದೇಶದಲ್ಲಿ ಲೋಹ, ಮ್ಯಾಂಗನೀಜ, ಇದ್ದಲು ಮತ್ತು ಖನಿಜ ತೈಲಗಳ ಸಾಕಷ್ಟು ಸಂಗ್ರಹಗಳು ದೊರೆತಿವೆ.

**ಅರಣ್ಯ ಸಂಪತ್ತು:** ವನಸ್ಪತಿಗಳ ಮೇಲೆ ಆಧಾರಿತವಾದ ಉದ್ಯೋಗಗಳಿಗಾಗಿ ಸರಕಾರವು ಕೆಲವು ಅರಣ್ಯಗಳನ್ನು ಮೀಸಲಾಗಿರಿಸಿದೆ. ಅರಣ್ಯ ಸಂರಕ್ಷಣೆಯ ಕಾರ್ಯವನ್ನು ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳು ಮತ್ತು ಸ್ಥಳೀಯ ಜನತೆ, ಮಾಡುತ್ತವೆ. ಕಟ್ಟಡ, ಕಾಗದ, ವರ್ತಮಾನ ಪತ್ರದ ಕಾಗದ, ರೇಷ್ಮೆ, ಕಡ್ಡಿಪೆಟ್ಟಿಗೆ, ಔಷಧಿ ವನಸ್ಪತಿ, ಜೇನು ತುಪ್ಪ, ಅರಗು ಮತ್ತು ಬಣ್ಣದ ಕೆಲಸಗಳಿಗಾಗಿ ತಗಲುವ ಕಚ್ಚಾಪದಾರ್ಥಗಳ ಮೇಲೆ ಆಧಾರಿತ ಉದ್ಯೋಗಗಳಿಗಾಗಿ ಅರಣ್ಯಗಳು ಅವಶ್ಯಕವಾಗಿವೆ.

**ಮೀನುಗಾರಿಕೆ:** ನದಿ, ಕಾಲುವೆ, ಕೆರೆ, ಸರೋವರಗಳ ಸಿಹಿ ನೀರಿನಲ್ಲಿ ದೊರೆಯುವ ಮೀನುಗಳು ಮತ್ತು ಸಮುದ್ರಗಳ ನೀರಿನಲ್ಲಿ ದೊರೆಯುವ ಮೀನುಗಳು ಇವುಗಳಿಂದ ಮತ್ಸ್ಯೋದ್ಯೋಗ ಉತ್ಪಾದನೆಯಾಗುತ್ತದೆ. ಈ ಉದ್ಯೋಗದ ರಕ್ಷಣೆಗಾಗಿ ಬಂದರುಗಳ ಸ್ಥಾಪನೆ, ಹಳೆಯ ಬಂದರುಗಳ ವಿಕಾಸ, ಮತ್ಸ್ಯಬೀಜ, ಶಾಖ ಕೊಡುವ ಕೇಂದ್ರಗಳು ಮತ್ತು ಮತ್ಸ್ಯ ವ್ಯವಸಾಯ ಕೇಂದ್ರಗಳನ್ನು ತಯಾರಿಸಲಾಗಿದೆ.

**ಪ್ರವಾಸೋದ್ಧಿಮೆ:** ಭಾರತಕ್ಕೆ ಸಮೃದ್ಧವಾದ ಸಾಂಸ್ಕೃತಿಕ ಪರಂಪರೆ ಲಭಿಸಿದೆ. ನಮ್ಮ ದೇಶದ ಮೂಲೆ-ಮೂಲೆಗಳಲ್ಲಿ ವಿವಿಧ ಧರ್ಮದ ಜನರ ಪ್ರಾರ್ಥನಾ ಸ್ಥಳಗಳು, ತೀರ್ಥಕ್ಷೇತ್ರಗಳು, ನದಿಗಳ ಸಂಗಮ, ಕೋಟೆಗಳು ಮತ್ತು ಗುಹೆಗಳು ಇವೆ. ಇದರಿಂದಾಗಿ ದೇಶ-ವಿದೇಶಗಳಲ್ಲಿಯ ಜನರು ಪ್ರವಾಸಕ್ಕಾಗಿ ವರ್ಷವಿಡಿ ಭಾರತಕ್ಕೆ ಬರುತ್ತಿರುತ್ತಾರೆ. ಪ್ರವಾಸ ವಿಕಾಸ ಮಹಾಮಂಡಳದ ವತಿಯಿಂದ ಪ್ರವಾಸಿಗರಿಗೆ ವಾಸಿಸುವ ಮತ್ತು ಪ್ರವಾಸದ ಸೌಕರ್ಯಗಳನ್ನು ನೀಡಲಾಗುತ್ತದೆ. ಈ ಸ್ಥಳಗಳಲ್ಲಿ ವಿವಿಧ ವಸ್ತುಗಳ ಮಾರಾಟ ಮತ್ತು ಹೊಟೇಲ ವ್ಯವಸಾಯಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತವೆ.

ಪ್ರವಾಸಿಗರಿಗೆ ಆ ಭಾಗಗಳ ಮಾಹಿತಿ ನೀಡುವುದಕ್ಕಾಗಿ ಕೆಲವು ಸ್ಥಳಗಳಲ್ಲಿ ಮಾರ್ಗದರ್ಶಕರಿರುತ್ತಾರೆ. ವಾಹನಗಳು ತಲುಪಲಾರದ ಕೆಲವು ದುರ್ಗಮ ಭಾಗಗಳಲ್ಲಿ ಅಲ್ಲಿಯ ಸ್ಥಳೀಯ ಜನರು ಪ್ರತಿಫಲವನ್ನು ಪಡೆದು ಪ್ರವಾಸಿಗರಿಗೆ ಸಹಾಯ ಮಾಡುತ್ತಾರೆ. ಇದರಿಂದಾಗಿಯೂ ದಿನಗೂಲಿ ದೊರೆಯುತ್ತದೆ.

**ವ್ಯಾಪಾರ-ಆಯಾತ-ನಿರ್ಯಾತ:** 1951ರಲ್ಲಿ ಈ ಯೋಜನೆಯು ಆರಂಭವಾದ ನಂತರ ಔದ್ಯೋಗಿಕ ವಸ್ತು ಮತ್ತು ಅದಕ್ಕೆ ತಗಲುವ ಕಚ್ಚಾ ಸರಕುಗಳ ಆಯಾತವು ದೊಡ್ಡ ಪ್ರಮಾಣದಲ್ಲಿ ಹೆಚ್ಚಿತು. ಭಾರತದ ಆಯಾತದಲ್ಲಿ ಯಂತ್ರ ಸಾಮಗ್ರಿಗಳು, ಕಬ್ಬಿಣ, ಖನಿಜ ತೈಲ, ಗೊಬ್ಬರ, ಔಷಧಗಳು ಮುಂತಾದವುಗಳ ಸಮಾವೇಶವಾಗುತ್ತದೆ.

ಸ್ವಾತಂತ್ರ್ಯಪ್ರಾಪ್ತಿಯ ನಂತರ ಭಾರತವು ಪರಕೀಯ ಚಲಾವಣೆಯನ್ನು ಪಡೆಯುವ ಉದ್ದೇಶದಿಂದ ನಿರ್ಯಾತಕ್ಕೆ ಚಾಲನೆ ನೀಡಿತು. ಭಾರತದ ನಿರ್ಯಾತದಲ್ಲಿ ಚಹಾ, ಕಾಫಿ, ಮಸಾಲೆಯ ಪದಾರ್ಥಗಳು, ನೂಲಿನ ಬಟ್ಟೆಗಳು, ಚರ್ಮ, ಪಾದತ್ರಾಣಗಳು, ಮುತ್ತು, ಅಮೂಲ್ಯ ವಜ್ರಗಳು ಇತ್ಯಾದಿ ವಸ್ತುಗಳ ಸಮಾವೇಶವಾಗುತ್ತದೆ.

**ಅಂತರ್ಗತ ವ್ಯಾಪಾರ:** ಭಾರತದ ಅಂತರ್ಗತ ವ್ಯಾಪಾರವು ರೈಲುಮಾರ್ಗ, ಜಲಮಾರ್ಗ, ರಸ್ತೆ, ವಾಯುಸಾರಿಗೆ ಮುಂತಾದ ಮಾರ್ಗಗಳಿಂದ ನಡೆಯುತ್ತದೆ. ಮುಂಬಯಿ, ಕೋಲ್ಕತಾ, ಕೋಚಿ, ಚೆನ್ನೈ ಈ ಬಂದರಗಳು ಮಹತ್ವದ್ದಾಗಿವೆ. ಅಂತರ್ಗತ ವ್ಯಾಪಾರದಲ್ಲಿ ಇದ್ದಲು, ಹತ್ತಿ, ನೂಲಿನ ಬಟ್ಟೆ, ಅಕ್ಕಿ, ಗೋದಿ, ಕಚ್ಚಾ ಸಣಬು, ಕಬ್ಬಿಣ, ಉಕ್ಕು ಎಣ್ಣೆಯ ಕಾಳುಗಳು, ಉಪ್ಪು, ಸಕ್ಕರೆ ಮುಂತಾದ ವಸ್ತುಗಳ ಸಮಾವೇಶವಾಗುತ್ತದೆ.

ದೇಶದಲ್ಲಿಯ ಉದ್ಯೋಗಧಂದೆಗಳ ವಿಕಾಸದಿಂದಾಗಿ ಜೀವನಶೈಲಿ ಮತ್ತು ಜೀವನಮಟ್ಟಗಳ ದರ್ಜೆ ಹೆಚ್ಚುತ್ತಿದೆ. ಉದ್ಯೋಗದ ಅನೇಕ ಅವಕಾಶಗಳು ಲಭ್ಯವಾಗುತ್ತವೆ. ಒಟ್ಟಿನಲ್ಲಿ ದೇಶದ ಪ್ರಗತಿಗೆ ಸಹಾಯವಾಗುತ್ತದೆ.

ಮುಂದಿನ ಪಾಠದಲ್ಲಿ ನಾವು ಭಾರತೀಯರ ಬದಲಾಗುತ್ತಿರುವ ಜೀವನ ಎಂಬ ವಿಷಯ ಬಗ್ಗೆ ಮಾಹಿತಿ ಪಡೆಯುವವರಿದ್ದೇವೆ.



## ಸ್ವಾಧ್ಯಾಯ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯುದ್ಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) 1948 ರಲ್ಲಿ ................. ಈ ಉದ್ದೇಶದಿಂದ ಭಾರತೀಯ ಔದ್ಯೋಗಿಕ ವಿತ್ತ ಮಹಾಮಂಡಳದ ಸ್ಥಾಪನೆ ಮಾಡಲಾಯಿತು.

(ಅ) ಔದ್ಯೋಗಿಕ ಕ್ಷೇತ್ರದ ವಿಕಾಸ ಹೆಚ್ಚಾಗಬೇಕು.

(ಬ) ಔದ್ಯೋಗಿಕ ಯೋಜನೆಗಳಿಗೆ ದೀರ್ಘಾವಧಿಯ ಸಾಲವನ್ನು ಒದಗಿಸುವುದು.

(ಕ) ರೋಜಗಾರು ನಿರ್ಮಿತಿಯಾಗಬೇಕು.

(ಡ) ತಯಾರಾದ ವಸ್ತುವಿನ ಗುಣಮಟ್ಟವನ್ನು ನಿಶ್ಚಿತಪಡಿಸುವುದು.

(2) ಭಾರತದಲ್ಲಿಯ ........... ಉದ್ಯೋಗಕ್ಕೆ 'ಸನ್‌ರೈಜ ಕ್ಷೇತ್ರ' ಎಂದು ಹೇಳಲಾಗುತ್ತದೆ.
(ಅ) ಸಣಬಿನ (ಬ) ವಾಹನ
(ಕ) ಸಿಮೆಂಟ್ (ಡ) ಖಾದಿ ಮತ್ತು ಗ್ರಾಮೋದ್ಯೋಗ

(3) ವಸ್ತ್ರೋದ್ಯೋಗ ಸಮಿತಿಯ ಪ್ರಮುಖ ಕಾರ್ಯವು ............
(ಅ) ಬಟ್ಟೆಯ ಉತ್ಪಾದನೆ ಮಾಡುವುದು
(ಬ) ಬಟ್ಟೆಗಳ ಗುಣಮಟ್ಟವನ್ನು ನಿಶ್ಚಿತಗೊಳಿಸುವುದು
(ಕ) ಬಟ್ಟೆಯ ನಿರ್ಯಾತ ಮಾಡುವುದು
(ಡ) ಜನರಿಗೆ ರೋಜಗಾರು ಒದಗಿಸಿಕೊಡುವುದು

(4) ............. ನಗರವು ಭಾರತದಲ್ಲಿಯ ಪ್ರಮುಖ ಸೈಕಲ ಉತ್ಪಾದನೆಯ ಕೇಂದ್ರವಾಗಿದೆ.
(ಅ) ಮುಂಬಯಿ (ಬ) ಲುಧಿಯಾನಾ
(ಕ) ಕೋಚಿ (ಡ) ಕೋಲಕತಾ

**(ಬ) ಕೆಳಗಿನವುಗಳಲ್ಲಿ ತಪ್ಪಾದ ಜೊತೆಯನ್ನು ಗುರುತಿಸಿ ಬರೆಯಿರಿ.**

(1) ಭಾರತೀಯ ಔದ್ಯೋಗಿಕ ವಿತ್ತ ಮಹಾಮಂಡಳ- ಔದ್ಯೋಗಿಕ ಯೋಜನೆಗಳಿಗೆ ದೀರ್ಘಾವಧಿಯ ಸಾಲವನ್ನು ಒದಗಿಸುವುದು.
(2) ಔದ್ಯೋಗಿಕ ವಿಕಾಸ ಮಹಾಮಂಡಳ- ಔದ್ಯೋಗಿಕ ಕ್ಷೇತ್ರದ ವಿಕಾಸ ಮಾಡುವುದು.
(3) ವಸ್ತ್ರೋದ್ಯೋಗ ಸಮಿತಿ: ನೇಕಾರರ ಕಲ್ಯಾಣ ಮಾಡುವುದು.
(4) ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ: ಗ್ರಾಮೀಣ ಭಾಗದಲ್ಲಿಯ ಔದ್ಯೋಗೀಕರಣಕ್ಕೆ ಚಾಲನೆ ನೀಡುವುದು.

**2. (ಅ) ಕೊಟ್ಟ ಸೂಚನೆಯಂತೆ ಕೃತಿ ಪೂರ್ಣಮಾಡಿರಿ.**

**ಚೌಕಟ್ಟನ್ನು ಪೂರ್ಣ ಮಾಡಿರಿ.**

| | |
|---|---|
| ಭಾರತಕ್ಕೆ ಆಯಾತವಾಗುವ ವಸ್ತುಗಳು | |
| ಭಾರತದಿಂದ ನಿರ್ಯಾತವಾಗುವ ವಸ್ತುಗಳು | |

**(ಬ) ಟಿಪ್ಪಣಿ ಬರೆಯಿರಿ.**
(1) ಭಾರತದ ಆಯಾತ-ನಿರ್ಯಾತ
(2) ಭಾರತದ ಅಂತರ್ಗತ ವ್ಯಾಪಾರ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**
(1) ಭಾರತದಲ್ಲಿ ಪ್ರವಾಸ ಉದ್ಯೋಗವು ಬೆಳೆದಿದೆ.
(2) ಭಾರತದ ಜನರ ಜೀವನಶೈಲಿ ಮತ್ತು ಜೀವನ ಮಟ್ಟಗಳ ದರ್ಜೆ ಹೆಚ್ಚುತ್ತಿದೆ.

**4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**
(1) ಕೃಷಿ ಉದ್ಯೋಗಕ್ಕೆ ಪ್ರೋತ್ಸಾಹ ದೊರೆಯಬೇಕೆಂದು ಸರಕಾರವು ಯಾವ ಪ್ರಯತ್ನ ಮಾಡುತ್ತದೆ ?
(2) ಪ್ರವಾಸೋದ್ದಿಮೆಯಿಂದ ಜನರಿಗೆ ರೋಜಗಾರು ಹೇಗೆ ದೊರೆಯುತ್ತದೆ ?
(3) ಭಾರತದಲ್ಲಿ ಅರಣ್ಯ ಸಂಪತ್ತಿನ ಮೇಲೆ ಆಧಾರಿತ ಯಾವ ಉದ್ಯೋಗಗಳು ನಡೆಯುತ್ತವೆ ?

**ಉಪಕ್ರಮ**
(1) ಯಶಸ್ವಿ ಉದ್ಯಮಿಗಳ ಭಾವಚಿತ್ರಗಳನ್ನು ಸಂಗ್ರಹಿಸಿರಿ.
(2) ನಾವು ಬಳಸುತ್ತಿರುವ ದೈನಂದಿನ ವಸ್ತುಗಳಲ್ಲಿ ಯಾವ ವಸ್ತುಗಳು ಪರಿಸರದಲ್ಲಿ ತಯಾರಾಗುತ್ತವೆ, ಯಾವ ವಸ್ತುಗಳನ್ನು ಹೊರಗಿನಿಂದ ತರಲಾಗುತ್ತದೆ ಯೆಂಬುದರ ಕೋಷ್ಟಕವನ್ನು ತಯಾರಿಸಿರಿ.

C3K351

# 9 ಬದಲಾಗುತ್ತಿರುವ ಜೀವನ: ಭಾಗ 1

ಇಲ್ಲಿಯವರೆಗೆ ನಾವು ಕ್ರಿ.ಶ. 1961 ರಿಂದ ಕ್ರಿ.ಶ. 2000ದ ವರೆಗಿನ ಕಾಲಖಂಡವನ್ನು ಅಭ್ಯಸಿಸಿದೆವು. ಇಪ್ಪತ್ತನೇ ಮತ್ತು ಇಪ್ಪತ್ತೊಂದನೆಯ ಶತಮಾನದಲ್ಲಿ ಬದಲಾವಣೆಯ ವೇಗವು ಪ್ರಚಂಡವಾಗಿದೆ. ಮಾನವನ ಜೀವನವು ಕ್ಷಿಪ್ರಗತಿಯಿಂದ ಬದಲಾಗುತ್ತ ನಡೆದಿದೆ. ಹಿಂದೆ ನಾವು ಯಾವುದರ ಕಲ್ಪನೆಯನ್ನೂ ಮಾಡಿರಲಿಲ್ಲವೋ ಆ ಸಂಗತಿಗಳು ವಾಸ್ತವದಲ್ಲಿ ಬಂದಿವೆ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಧರ್ಮವು ಮನುಷ್ಯನ ಒಂದು ಮಹತ್ವದ ಪರಿಚಯವಾಗಿತ್ತು. ಹಿಂದೂ, ಮುಸ್ಲಿಂ, ಕ್ರೈಸ್ತ, ಶೀಖ, ಜೈನ, ಬೌದ್ಧ, ಪಾರಶೀ ಮತ್ತು ಜ್ಯೂ ಮುಂತಾದ ಧರ್ಮಗಳ ಎದುರಿಗೆ ಆಧುನಿಕೀಕರಣವು ಆಹ್ವಾನಗಳನ್ನು ಒಡ್ಡಿದೆ. ನಮ್ಮ ಪರಂಪರಾಗತ ವಿಚಾರ ಸರಣಿಯಲ್ಲಿ ಡಾ. ಬಾಬಾ ಸಾಹೇಬ ಅಂಬೇಡಕರ ಇವರು ದೊಡ್ಡ ಪ್ರಮಾಣದಲ್ಲಿ ಬದಲಾವಣೆಯನ್ನುಂಟು ಮಾಡಿದರು. ಭಾರತೀಯ ಸಂವಿಧಾನದ ಮುಖಾಂತರ ಡಾ. ಬಾಬಾ ಸಾಹೇಬ ಅಂಬೇಡಕರ ಇವರು ಈ ಬದಲಾವಣೆಗಳನ್ನು ಮಾಡಿದ್ದಾರೆ.



**ಡಾ. ಬಾಬಾ ಸಾಹೇಬ ಅಂಬೇಡಕರ**

ನಮ್ಮ ಸಂವಿಧಾನದ ಪ್ರಕಾರ ಕಾನೂನಿನ ಎದುರಿಗೆ ಸರ್ವ ಭಾರತೀಯರು ಸಮಾನರಾಗಿದ್ದು ಧರ್ಮ, ವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳಗಳ ಕಾರಣದಿಂದ ಭೇದಭಾವ ಮಾಡುವುದನ್ನು ಪ್ರತಿಬಂಧಿಸಲಾಗಿದೆ. ಎಲ್ಲ ನಾಗರಿಕರಿಗೆ ಭಾಷಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತತೆಯಿಂದ ಮತ್ತು ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳದೇ ಒಂದೆಡೆ ಸೇರುವ ಮತ್ತು ಸಂಘಟಿತರಾಗುವ, ಭಾರತದ ರಾಜ್ಯಕ್ಷೇತ್ರದಲ್ಲಿ ಮುಕ್ತವಾಗಿ ಸಂಚರಿಸುವ, ವಾಸಿಸುವ ಮತ್ತು ಶಾಶ್ವತವಾಗಿ ನೆಲೆಸುವ, ಯಾವುದೇ ಉದ್ಯೋಗವನ್ನು ಮಾಡುವ ಹಕ್ಕು ಇದೆ. ಭಾರತದಲ್ಲಿಯ ಯಾವುದೇ ಭಾಗದಲ್ಲಿ ವಾಸಿಸುವ ನಾಗರಿಕರಿಗೆ ತಮ್ಮ ಭಾಷೆ, ಲಿಪಿ ಮತ್ತು ಸಂಸ್ಕೃತಿಗಳನ್ನು ರಕ್ಷಿಸುವ ಹಕ್ಕು ಇದೆ.

ಸಂವಿಧಾನದಲ್ಲಿಯ ಈ ಏರ್ಪಾಟಿನಿಂದಾಗಿ ಜಾತಿ ವ್ಯವಸ್ಥೆಯ ಚೌಕಟ್ಟಿಗೆ ಧಕ್ಕೆ ತಗುಲಿತು. ವಂಶಪರಂಪರಾಗತ ಉದ್ಯೋಗದ ಕಲ್ಪನೆಯು ಕಾಲಬಾಹ್ಯವಾಗಲು ಸಹಾಯವಾಯಿತು. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆಯಾಗಲು ಆರಂಭವಾಯಿತು. ಈ ಏರ್ಪಾಟುಗಳ ಪರಿಣಾಮವು ಯಂತ್ರದ ಮೇಲೆ ಹೇಗೆ ಆಯಿತೆಂಬುದು ಕೆಳಗಿನ ಚೌಕಟ್ಟಿನಿಂದ ತಿಳಿದುಬರುವುದು.

ಮೇಲಿನ ಏರ್ಪಾಟುಗಳಿಂದಾಗಿ ಸಮಾಜದಲ್ಲಿ ಚಿಕ್ಕ-ದೊಡ್ಡ ಬದಲಾವಣೆಗಳು ಸಾವಕಾಶವಾಗಿ ಉಂಟಾಗುತ್ತಿವೆ. ಈಗ ಹೊಟೆಲಗಳಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವಿದೆ. ಧರ್ಮ, ವಂಶ, ಜಾತಿ, ಲಿಂಗ ಈ ಕಾರಣಗಳ ಮೇಲಿಂದ ಪ್ರವೇಶವನ್ನು ನಿರಾಕರಿಸಲಾಗುವುದಿಲ್ಲ ಎಂಬ ಬೋರ್ಡುಗಳನ್ನು ನಾವು ನೋಡುತ್ತೇವೆ.

**ಗೊತ್ತಿದೆಯೇ ನಿಮಗೆ ?**

ಬ್ರಿಟಿಶರ ಕಾಲದಲ್ಲಿ ರೈಲಿನಲ್ಲಿ ನಾಲ್ಕು ಪ್ರಕಾರದ ಡಬ್ಬಿಗಳಿದ್ದವು. ಫರ್ಸ್ಟ, ಸೆಕಂಡ, ಇಂಟರ ಮತ್ತು ಥರ್ಡ ಕ್ಲಾಸ ಎಂಬ ವರ್ಗಗಳಿದ್ದವು. ಮೂರನೆಯ ವರ್ಗದಲ್ಲಿಯ ಪ್ರಯಾಣಿಕರಿಗಾಗಿ ನಾಮಮಾತ್ರ ಸೌಕರ್ಯಗಳು ಮತ್ತು ಪ್ರಯಾಣಿಕರ ಕಡೆಗೆ ನೋಡುವ ನಕಾರಾತ್ಮಕ ದೃಷ್ಟಿಕೋನಗಳಿಂದಾಗಿ ಈ ವರ್ಗವು ಭಾರತೀಯ ಸಮಾಜ ವ್ಯವಸ್ಥೆಯ ಪ್ರತೀಕವೇ ಆಗಿತ್ತು. 1978ರ ರೈಲು ಮುಂಗಡ ಪತ್ರದಲ್ಲಿ ಮಧು ದಂಡವತೆಯವರು ತೃತೀಯ ಶ್ರೇಣಿಯ ವ್ಯವಸ್ಥೆಯನ್ನು ತೆಗೆದು ಹಾಕಿದರು. ನಂತರ ಪುಣೆ-ಮುಂಬಯಿ ನಡುವಿನ 'ಸಿಂಹಗಡ ಎಕ್ಸಪ್ರೆಸ್', ಮುಂಬಯಿ-ಕೋಲ್ಕತಾಗಳ ನಡುವಿನ 'ಗೀತಾಂಜಲಿ ಎಕ್ಸಪ್ರೆಸ' ಈ ವರ್ಗರಹಿತ ರೈಲುಗಳು ಆರಂಭವಾದವು.

ಹಿಂದಿನ ಕಾಲದಲ್ಲಿ ರಾಜಪ್ರಭುತ್ವದ ವಿರುದ್ಧ ವಿಚಾರ ವ್ಯಕ್ತಪಡಿಸಲು ನಿರ್ಬಂಧಗಳಿದ್ದವು. ಈಗ ಭಾರತೀಯ ನಾಗರಿಕರು ವರ್ತಮಾನ ಪತ್ರಗಳ ಇಲ್ಲವೆ ಭಾಷಣದ ಹಾಗೂ ಅನ್ಯ ಮಾಧ್ಯಮಗಳ ಮುಖಾಂತರ ಸರಕಾರದ ವಿರುದ್ಧ ವಿಚಾರಗಳನ್ನು ವ್ಯಕ್ತಪಡಿಸಬಹುದು. ನಮಗೆ ಒಪ್ಪಿಗೆಯಾಗದಿರುವ ವಿಷಯಗಳನ್ನು ನಾವು ಮಾತನಾಡಿ ತೋರಿಸಬಹುದು. ಈ ಅತ್ಯಂತ ದೊಡ್ಡ ಬದಲಾವಣೆಯು ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ಆಗಿದೆ.

**ಕುಟುಂಬ ಸಂಸ್ಥೆ:** ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಕುಟುಂಬ ಸಂಸ್ಥೆಯು ಭಾರತೀಯ ಸಮಾಜದ ಒಂದು ಪ್ರಮುಖ ಪರಿಚಯವಾಗಿತ್ತು. ಭಾರತವು 'ಅವಿಭಕ್ತ ಕುಟುಂಬ ಪದ್ಧತಿಯ ದೇಶ' ವೆಂದು ಜಗತ್ತಿನ ತುಂಬೆಲ್ಲ ಗುರುತಿಸಲ್ಪಡುತ್ತಿತ್ತು. ಜಾಗತೀಕರಣದ ಅಲೆಯಲ್ಲಿ ವಿಭಕ್ತ

ಕುಟುಂಬ ಪದ್ಧತಿಗೆ ಚಾಲನೆ ದೊರಕಿದೆ.

**ಸಮಾಜಕಲ್ಯಾಣ:** ಕಲ್ಯಾಣಕಾರಿ ರಾಜ್ಯವನ್ನು ಸ್ಥಾಪಿಸುವ ಉದ್ದೇಶವನ್ನು ಭಾರತೀಯ ಸಂವಿಧಾನದಲ್ಲಿಯೇ ಸಮೂದಿಸಲಾಗಿದೆ. ಭಾರತವು ಹೀಗೆ ನಮೂದಿಸುವ ಪ್ರಪ್ರಥಮ ದೇಶವಾಗಿದೆ. ಭಾರತೀಯ ನಾಗರಿಕರಿಗೆ ಪೂರ್ಣ ಉದ್ಯೋಗ, ಆರೋಗ್ಯ ಸೌಕರ್ಯಗಳು, ಶಿಕ್ಷಣ ಮತ್ತು ವಿಕಾಸದ ಅವಕಾಶವನ್ನು ಒದಗಿಸುವುದು. ಸಮಾಜಕಲ್ಯಾಣ ಕಾರ್ಯಕ್ರಮದ ಉದ್ದೇಶವಾಗಿದೆ. ಭಾರತೀಯ ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿಷಮತೆಯು ದೊಡ್ಡ ಪ್ರಮಾಣದಲ್ಲಿದೆ. ವಿಕಾಸದ ಅವಕಾಶಗಳನ್ನು ಮಹಿಳೆಯರು, ಮಕ್ಕಳು, ವಿಕಲಚೇತನರು, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪಸಂಖ್ಯಾತರ ವರೆಗೆ ತಲುಪಿಸುವುದು ಅವಶ್ಯಕವಾಗಿದೆ. ಅದು ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿಯ ಸರಕಾರದ ಮುಂದಿನ ಎಲ್ಲಕ್ಕೂ ದೊಡ್ಡ ಆಹ್ವಾನವಾಗಿತ್ತು. ಅದರ ಸಲುವಾಗಿ ಭಾರತವು 14 ಜೂನ 1964ರಂದು ಸಮಾಜ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಿತು. ಈ ಇಲಾಖೆಯ ಅಂತರ್ಗತವಾಗಿ ಪೋಷಣೆ ಮತ್ತು ಮಕ್ಕಳ ವಿಕಾಸ, ಸಾಮಾಜಿಕ ಸುರಕ್ಷತೆ ಮತ್ತು ಸಾಮಾಜಿಕ ಸಂರಕ್ಷಣೆ, ಮಹಿಳಾ ಕಲ್ಯಾಣ ಮತ್ತು ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇದೇ ಪ್ರಕಾರದ ವ್ಯವಸ್ಥೆಯನ್ನು ಘಟಕರಾಜ್ಯ ಮಟ್ಟದಲ್ಲಿ ಮಾಡಲಾಗಿದೆ.

**ಪರಿಶಿಷ್ಟಜಾತಿ ಮತ್ತು ಪಂಗಡ:** 1971ರ ಜನಗಣನೆಗನುಸಾರವಾಗಿ ದೇಶದಲ್ಲಿ ಪ್ರತಿಶತ 22% ರಷ್ಟು ಜನರು ಪರಿಶಿಷ್ಟಜಾತಿ-ಪಂಗಡದವರಾಗಿದ್ದಾರೆ. ಇವರೆಲ್ಲರ ಸಲುವಾಗಿ ಕಾನೂನು ಮಾಡಿ ಶೈಕ್ಷಣಿಕ ಶಿಷ್ಯವೃತ್ತಿ ಮತ್ತು ಪ್ರತಿನಿಧಿತ್ವವನ್ನು ನೀಡಿ ಸಂಸತ್ತಿನಲ್ಲಿ ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮತ್ತು ಸರಕಾರಿ ಸೇವೆಗಳಲ್ಲಿ ಕೆಲವು ಸ್ಥಳಗಳನ್ನು ಮೀಸಲಿರಿಸಲಾಗಿದೆ.

**ಸಾರ್ವಜನಿಕ ಆರೋಗ್ಯ:** ಸರಕಾರದ ಪ್ರಾಥಮಿಕ ಕರ್ತವ್ಯವೆಂದು ಭಾರತೀಯರ ಜೀವನಮಟ್ಟವನ್ನು ಹೆಚ್ಚಿಸಬೇಕು, ಅವರ ಪೋಷಣೆ ಸರಿಯಾಗಿ ಆಗುವಂತೆ ಮಾಡಬೇಕು ಸಾರ್ವಜನಿಕ ಆರೋಗ್ಯವೂ ಸುಧಾರಿಸಬೇಕು ಎಂದು ಭಾರತದ ಸಂವಿಧಾನದಲ್ಲಿ ನಮೂದಿಸಲಾಗಿದೆ. ಈ ಸಂದರ್ಭದಲ್ಲಿ ಕೇಂದ್ರ ಸರಕಾರದ ಆರೋಗ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಯು ರಾಜ್ಯ ಸರಕಾರಕ್ಕೆ ಸಹಾಯ ಮಾಡುತ್ತದೆ. ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಸ್ವರೂಪದ ಆರೋಗ್ಯ ಮತ್ತು ವೈದ್ಯಕೀಯ ಸೇವೆಯನ್ನು ಗ್ರಾಮೀಣ, ಆದಿವಾಸಿ ಮತ್ತು ಬಡಜನರಿಗೆ ಒದಗಿಸುವ ಉದ್ದೇಶವಿತ್ತು. ಆರೋಗ್ಯದ ಸಂದರ್ಭದಲ್ಲಿ ಭಾರತದಲ್ಲಿ ಅಲೋಪಥಿ, ಯುನಾನಿ, ಹೋಮಿಯೊಪಥಿ, ಆಯುರ್ವೇದ ಮತ್ತು ನಿಸರ್ಗೋಪಚಾರ ಪದ್ಧತಿಗಳಿಗೆ ಮಾನ್ಯತೆ ನೀಡಿ ಜನರ ಆರೋಗ್ಯವನ್ನು ಉತ್ತಮವಾಗಿರುವ ಪ್ರಯತ್ನ ಆರಂಭವಾಯಿತು.

ಆರೋಗ್ಯ ಕ್ಷೇತ್ರದಲ್ಲಿಯ ಬದಲಾವಣೆಯಿಂದಾಗಿ ಭಾರತೀಯರ ಜೀವನವು ಹೆಚ್ಚಿಗೆ ಹೆಚ್ಚು ಚಿಂತಾರಹಿತವಾಗಲು ಸಹಾಯವಾಯಿತು. 1962 ರಲ್ಲಿ ತಮಿಳುನಾಡು ರಾಜ್ಯದ ವೆಲ್ಲೂರು ಎಂಬಲ್ಲಿಯ ಕ್ರಿಶ್ಚನ್ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ, ಡಾ. ಎನ್. ಗೋಪಿನಾಥ ಇವರ ನೇತೃತ್ವದಲ್ಲಿ ಭಾರತದಲ್ಲಿ 'ಓಪನ್ ಹಾರ್ಟ್ ಶಸ್ತ್ರಚಿಕಿತ್ಸೆ'ಯನ್ನು ಯಶಸ್ವಿಯಾಗಿ ಮಾಡಲಾಯಿತು. ಅದರಿಂದಾಗಿ ಇಂಥ ಉಪಚಾರಗಳಿಗಾಗಿ ವಿದೇಶಗಳಿಗೆ ಹೋಗುವ ಅವಶ್ಯಕತೆ ಉಳಿಯಲಿಲ್ಲ.

'ಜಯಪೂರ ಫೂಟ'ದ ಶೋಧದಿಂದ ಭಾರತದಲ್ಲಿಯ ವಿಕಲ ಚೇತನರ ಆಯುಷ್ಯ ಬದಲಾಗಿ ಹೋಯಿತು. 1968ರ ಮೊದಲು ಯಾವೊಬ್ಬ ವ್ಯಕ್ತಿಗೆ ಅಪಘಾತವಾಗಿ ಅವನ ಕಾಲಿಗೆ ಗಾಯವಾದರೆ ಅವನು ತನ್ನ ಮುಂದಿನ ಆಯುಷ್ಯವನ್ನು ಅಡಚಣೆಯಲ್ಲಿ ಕಳೆಯಬೇಕಾಗುತ್ತಿತ್ತು. ಇದರ ಮೇಲಿನ ಉಪಾಯವೆಂದು ಡಾ. ಪ್ರಮೋದ ಸೇಠಿ ಇವರು ರಾಮಚಂದ್ರ ಶರ್ಮಾ ಎಂಬ ಕಸಬುದಾರನ ಸಹಾಯದಿಂದ ಕೃತ್ರಿಮ ಕೈ, ಕಾಲು, ಮೂಗು ಮತ್ತು ಕಿವಿಗಳನ್ನು ತಯಾರಿಸಿದರು.

ಜಯಪೂರ ಫೂಟ ತಂತ್ರಜ್ಞಾನವನ್ನು ಬಳಸಿ ತಯಾರಿಸಿದ ಕೃತ್ರಿಮ ಅವಯವಗಳಿಂದಾಗಿ ಅಂಗವಿಕಲ ವ್ಯಕ್ತಿಗಳು ಬರಿಗಾಲಿನಿಂದ ಒರಟಾದ ನೆಲದ ಮೇಲಿಂದ ನಡೆಯುವುದು, ಓಡುವುದು, ಸೈಕಲ್ ನಡೆಸುವುದು, ಹೊಲದಲ್ಲಿ ಕೆಲಸ ಮಾಡುವುದು, ಗಿಡ ಏರುವುದು ಮತ್ತು ಗಿರ್ಯಾರೋಹಣ ಮಾಡುವುದು ಮುಂತಾದ ಕೆಲಸಗಳನ್ನು ಸುಲಭವಾಗಿ ಮಾಡುವರು. ಈ ಕೃತ್ರಿಮ ಕಾಲುಗಳಲ್ಲಿ ಬೂಟ ಹಾಕುವ ಅಗತ್ಯವಿಲ್ಲದ್ದರಿಂದ ಬೂಟುಗಳ ಖರ್ಚು ಉಳಿಯುತ್ತದೆ. ಕಾಲು ಮಡಿಚುವುದು, ಮಂಡೆ ಹಾಕಿ ಕೂಡುವದು, ಕೃತ್ರಿಮ ಕಾಲುಗಳಿಂದಾಗಿ ಸಾಧ್ಯವಾದವು. ನೀರಿನಲ್ಲಿ ಒದ್ದೆಯಾದ ಸ್ಥಿತಿಯಲ್ಲಿ ಕೆಲಸ ಮಾಡಲು ಈ ಕಾಲುಗಳು ಅನುಕೂಲಕರವಾಗಿವೆ.

**ಮೂತ್ರಪಿಂಡ ಕಸಿ ಮಾಡುವುದು (ಕಿಡ್ನಿ ಟ್ರಾನ್ಸ್‌ಪ್ಲಾಂಟ್):** ಭಾರತದಲ್ಲಿ ಈ ಶಸ್ತ್ರಕ್ರಿಯೆಯು ಸಾಧ್ಯವಾದುದರಿಂದ ರೋಗಿಗಳ ಜೀವವನ್ನು ಉಳಿಸುವುದರಲ್ಲಿ ಡಾಕ್ಟರರಿಗೆ ಯಶಸ್ಸು ದೊರೆಯಿತು. 1971 ಕ್ಕಿಂತ ಮೊದಲು ಇಂಥ ಶಸ್ತ್ರಚಿಕಿತ್ಸೆಗಳು ಭಾರತದಲ್ಲಿ ಹೆಚ್ಚಾಗಿ ಆಗುತ್ತಿರಲಿಲ್ಲ, ತಮಿಳುನಾಡುನಲ್ಲಿಯ ವೆಲ್ಲೂರು ಎಂಬಲ್ಲಿಯ ಖ್ರಿಶ್ಚನ್ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಈ ಶಸ್ತ್ರ ಚಿಕಿತ್ಸೆಯು 1971 ರಲ್ಲಿ ಯಶಸ್ವಿಯಾಯಿತು. ಡಾ. ಜಾನಿ ಮತ್ತು ಡಾ. ಮೋಹನ ರಾವ ಇವರು ಜೀವಂತ ವ್ಯಕ್ತಿಯು ದಾನಮಾಡಿದ ಮೂತ್ರಪಿಂಡವನ್ನು ರೋಗಿಯ ಶರೀರದಲ್ಲಿ ಯಶಸ್ವಿ ರೀತಿಯಿಂದ ಕಸಿ ಮಾಡಿದರು. ಈಗ ಅವಿಕಸಿತ ದೇಶಗಳಲ್ಲಿಯ ರೋಗಿಗಳು ಈ ಶಸ್ತ್ರಚಿಕಿತ್ಸೆಯನ್ನು

ಮಾಡಿಸಿಕೊಳ್ಳುವ ಸಲುವಾಗಿ ಭಾರತಕ್ಕೆ ಬರುತ್ತಾರೆ.

**ಟೆಸ್ಟಟ್ಯೂಬ ಬೇಬಿ:** ಭಾರತದಲ್ಲಿ ಮೊದಲಿನಿಂದಲೂ ಭಾರತೀಯರು ಮಕ್ಕಳಾಗುವುದನ್ನು ವಿಶೇಷ ಮಹತ್ವದ ಸಂಗತಿ ಎಂದು ಮನ್ನಿಸುತ್ತಿದ್ದರು. ಮಗು ಬೇಕಾದ ಪತಿ-ಪತ್ನಿಗಳಿಗೆ ಈ ಸಮಸ್ಯೆಗೆ ಉಪಾಯವೆಂದು 1978 ರಿಂದ 'ಟೆಸ್ಟಟ್ಯೂಬ ಬೇಬಿ' ಎಂಬ ತಂತ್ರಜ್ಞಾನ ಲಭ್ಯವಾಯಿತು. ಕೋಲ್ಕತಾದಲ್ಲಿ ಡಾ. ಸುಭಾಷ ಮುಖೋಪಾಧ್ಯಾಯ ಇವರ ಮಾರ್ಗದರ್ಶನದಲ್ಲಿ 'ಟೆಸ್ಟಟ್ಯೂಬ ಬೇಬಿ'ಯ ಪ್ರಯೋಗವು ಯಶಸ್ವಿಯಾಯಿತು. ಇದು ಕೃತ್ರಿಮ ಗರ್ಭಧಾರಣೆಯ ತಂತ್ರದ ಪ್ರಥಮ ಯಶಸ್ವಿ ಪ್ರಯೋಗವೆನಿಸಿತು. ಈ ತಂತ್ರಜ್ಞಾನದ ಮೂಲಕ 'ದುರ್ಗಾ' ಈ ಹುಡುಗಿಯ ಜನನವಾಯಿತು. ಇದರಿಂದಾಗಿ ಮಕ್ಕಳು ಬೇಕಾಗಿದ್ದ ಪೋಷಕರ ಪ್ರಶ್ನೆ ಬಗೆಹರಿಯಲು ಸಹಾಯವಾಯಿತು.

**ಲಸಿಕೆ ಹಾಕುವುದು:** 1978ರ ಮೊದಲು ಭಾರತದಲ್ಲಿ ಪ್ರತಿ ವರ್ಷ ಹುಟ್ಟಿದ ಹತ್ತು ಮಕ್ಕಳಲ್ಲಿ ಆರು ಮಕ್ಕಳು ಹುಟ್ಟಿದ ಮೊದಲನೆಯ ವರ್ಷದಲ್ಲಿಯೇ ಪ್ರಾಣಘಾತಕ ಸಂಕಟಗಳನ್ನು ಎದುರಿಸಬೇಕಾಗುತ್ತಿತ್ತು. ಪೋಲಿಯೊ, ದಡಾರ, ಧನುರ್ವಾತ, ಕ್ಷಯ, ಘಟಸರ್ಪ, ಕೋಡಗ ಕೆಮ್ಮು ಇವುಗಳ ಮೇಲೆ ಪ್ರಭಾವಿ ಉಪಾಯ ಮಾಡಲು ಲಸಿಕೆ ಹಾಕುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಯಿತು. 1995 ರಲ್ಲಿ 'ಪಲ್ಸಪೋಲಿಯೊ' ಲಸಿಕೆ ಹಾಕುವ ಅಭಿಯಾನವನ್ನು ಕೈಗೆತ್ತಿಕೊಳ್ಳಲಾಯಿತು. ಇದರಿಂದಾಗಿ ಪೋಲಿಯೊ ನಿಯಂತ್ರಣದಲ್ಲಿ ಬಂದಿತು.

## ನಗರೀಕರಣ

ಪಟ್ಟಣದಲ್ಲಿ ಅಥವಾ ನಗರ ಕ್ಷೇತ್ರದಲ್ಲಿ ಜನವಸತಿಯು ಕೇಂದ್ರೀಕರಿಸುವ ಕ್ರಿಯೆಗೆ ನಗರೀಕರಣ ಎನ್ನುತ್ತಾರೆ. ಬೆಳೆಯುತ್ತಿರುವ ಜನಸಂಖ್ಯೆಯು ನಗರೀಕರಣದ ಮಹತ್ವದ ಕಾರಣವಾಗಿದೆ. ಹವೆ, ನೀರು, ಸಮೂಹ ಜೀವನಕ್ಕಾಗಿ ಅವಶ್ಯಕವಾಗಿರುವ ಆರ್ಥಿಕ ಮತ್ತು ಸಾಮಾಜಿಕ ಸಂಸ್ಥೆ ಈ ಘಟಕಗಳು ನಗರೀಕರಣದ ಮೇಲೆ ಪ್ರಭಾವಬೀರುತ್ತವೆ.

ಮೃತ್ಯುದರದಲ್ಲಿಯ ಇಳಿಕೆ, ಔದ್ಯೋಗೀಕರಣ, ಗ್ರಾಮೀಣ ಭಾಗದಲ್ಲಿ ರೋಜಗಾರು ಲಭ್ಯವಾಗದಿರುವಿಕೆ, ಪಟ್ಟಣಗಳಲ್ಲಿಯ ಉದ್ಯೋಗಾವಕಾಶಗಳು ಮತ್ತು ವ್ಯಾಪಾರ, ಸ್ಥಳಾಂತರ. ಇವು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಗರಗಳ ಜನಸಂಖ್ಯೆ ಹೆಚ್ಚುತ್ತಿರುವ ಪ್ರಮುಖ ಕಾರಣಗಳಾಗಿವೆ.

ನಗರಗಳ ಮೇಲಿನ ಈ ಭಾರವನ್ನು ತಡೆಯಬೇಕಾದರೆ- ಸಣ್ಣ ಸಣ್ಣ ಊರುಗಳಲ್ಲಿ ಉದ್ಯೋಗಗಳನ್ನು (ರೋಜಗಾರ) ಒದಗಿಸುವುದು, ಆರ್ಥಿಕ ವಿಕಾಸದ ಸಮತೋಲನವನ್ನು ಸಾಧಿಸುವುದು, ಆರ್ಥಿಕ ವಿಕಾಸಕ್ಕೆ ಚಾಲನೆ ನೀಡುವುದು, ಮಹಾನಗರಗಳ ಹೆಚ್ಚಳವನ್ನು ನಿಯಂತ್ರಿಸುವುದು, ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ಅವಶ್ಯಕ ಸೇವೆ ಮತ್ತು ಸೌಕರ್ಯಗಳನ್ನು ಪೂರೈಸುವುದು. ಇವೇ ಮುಂತಾದ ಉಪಾಯಗಳನ್ನು ಮಾಡಬೇಕಾಗುತ್ತದೆ.

## ಗ್ರಾಮೀಣ ಭಾಗ

ಸ್ವತಂತ್ರವಾಗಿ ಇಲ್ಲವೆ ಸಾಮೂಹಿಕವಾಗಿ ಸ್ವತ: ಉಳುತ್ತಿರುವ ಭೂಮಿಯ ಹತ್ತಿರ ವಾಸಿಸುವ ರೈತರ ಶಾಶ್ವತ ವಸತಿಗೆ ಊರು ಎಂದು ಕರೆಯುತ್ತಾರೆ. ಕೃಷಿಯ ಶೋಧವಾದಂದಿನಿಂದ ಊರು ಅಸ್ತಿತ್ವದಲ್ಲಿ ಬಂದಿತು. ಭಾರತದಲ್ಲಿಯ ಹಳ್ಳಿ ಪದ್ಧತಿಯು ವಿರಳ ಜನಸಂಖ್ಯೆಯಿರುವ ಪದ್ಧತಿಯಾಗಿದೆ. ಸುತ್ತಲೂ ಹರಡಿದ ಮತ್ತು ನಡುವೆ ದಟ್ಟ-ದಟ್ಟವಾಗಿ ನೆಲೆಗೊಂಡ ಮನೆಗಳು. ಇದು ಭಾರತೀಯ ಹಳ್ಳಿಯ ಪ್ರಮುಖ ವೈಶಿಷ್ಟ್ಯವಾಗಿದೆ. ಗ್ರಾಮೀಣ ಸಮುದಾಯ ಎಷ್ಟೇ ದೊಡ್ಡದಾಗಿದ್ದರೂ ಅದು ನಗರ ಸಮುದಾಯದ ತುಲನೆಯಲ್ಲಿ ತುಂಬಾ ಚಿಕ್ಕದಾಗಿರುತ್ತದೆ ಹಳ್ಳಿಗಿಂತ ಚಿಕ್ಕ ಗುಂಪು ಎಂದರೆ ವಸತಿ.

ಸಂಪೂರ್ಣ ಭಾರತದಲ್ಲಿಯ ಗ್ರಾಮರಚನೆಯು ಒಂದು ಸಮಾನವಾಗಿಲ್ಲ. ಪ್ರಾದೇಶಿಕ ಸ್ವರೂಪದ ಪ್ರಕಾರ ಮತ್ತು ಸ್ಥಳದ ವೈಶಿಷ್ಟ್ಯಗಳಿಗನುಸಾರವಾಗಿ ಅದರಲ್ಲಿ ವ್ಯತ್ಯಾಸವಿರುತ್ತದೆ.

**ಸ್ವಾತಂತ್ರ್ಯೋತ್ತರ ಕಾಲಖಂಡ:** ಗ್ರಾಮ ವಿಕಾಸದ ದೃಷ್ಟಿಯಿಂದ ಸಾಮೂಹಿಕ ವಿಕಾಸ ಯೋಜನೆಯನ್ನು ಆರಂಭಿಸಲಾಯಿತು. ಅದರ ಮೂಲಕ ಕೃಷಿ ತಂತ್ರವನ್ನು ಬದಲಿಸುವುದು, ನೀರಾವರಿಯನ್ನು ಹೆಚ್ಚಿಸುವುದು, ಶಿಕ್ಷಣದ ಪ್ರಸಾರ ಮಾಡುವುದು, ಭೂಸುಧಾರಣೆಯ ಕಾನೂನನ್ನು ಸಮ್ಮತಿಸುವುದು. ಮುಂತಾದ ಯೋಜನೆಗಳನ್ನು ರೂಪಿಸಲಾಯಿತು. ಈ ಯೋಜನೆಗನುಸಾರವಾಗಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು, ಗ್ರಾಮೀಣ ಭಾಗದಲ್ಲಿ ಸಂಪರ್ಕ, ಆರೋಗ್ಯ ಮತ್ತು ಶಿಕ್ಷಣದ ಪ್ರಸಾರ ಮಾಡುವುದು ಇತ್ಯಾದಿ ಉದ್ದೇಶಗಳಿದ್ದವು. ಹಳ್ಳಿಗಳಲ್ಲಿಯ ಆರ್ಥಿಕ ವಿಕಾಸಕ್ಕೆ ಪ್ರಾಧಾನ್ಯತೆ ನೀಡಬೇಕೆಂದು ನಿರ್ಧರಿಸಲಾಯಿತು. ಅದರ ಸಲುವಾಗಿ ಸರಕಾರವು ಗ್ರಾಮಪಂಚಾಯತಿಯ ಮುಖಾಂತರ ಈ ಕಾರ್ಯವನ್ನು ಆರಂಭಿಸಿತು. ಗ್ರಾಮ ಪಂಚಾಯತಿಯ ರಚನೆಯಲ್ಲಿ ಎಲ್ಲಾ ಜಾತಿ-ಪಂಗಡಗಳಲ್ಲಿಯ ಜನರನ್ನು ಒಂದುಗೂಡಿಸಲು ಆರಂಭವಾಯಿತು. ಅದರ ಸಲುವಾಗಿ ಗ್ರಾಮ ಪಂಚಾಯತಿ, ಪಂಚಾಯತ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳ ಅಧಿಕಾರಗಳನ್ನು ಹೆಚ್ಚಿಸಲಾಯಿತು.

**ಬದಲಾಗುತ್ತಿರುವ ಆರ್ಥಿಕ ಜೀವನ:** ಮೊದಲು ಹಳ್ಳಿಗಳ ಜೀವನವು ಆರ್ಥಿಕ ದೃಷ್ಟಿಯಿಂದ ಸ್ವಯಂಪೂರ್ಣವಾಗಿತ್ತು. ಊರಲ್ಲಿಯ ಬಹುಸಂಖ್ಯೆ ಜನರು ಕೃಷಿಯ ಮೇಲೆ ಅವಲಂಬಿಸಿದ್ದರು. ಕಸಬುದಾರರಿಗೆ ಅವರ ಕೆಲಸದ ಪ್ರತಿಫಲವೆಂದು ಕೃಷಿಯಲ್ಲಿಯ ಉತ್ಪಾದನೆಯನ್ನು ಹಂಚಲಾಗುತ್ತಿತ್ತು. ಈಗ ಈ ಪರಿಸ್ಥಿತಿ ಬದಲಾಗಿದೆ.

ಗ್ರಾಮೀಣ ಭಾಗವು ಕೃಷಿ ಮತ್ತು ಕೃಷಿಯ ಮೇಲೆ ಆಧಾರಿತ ಸಹ ಉದ್ಯೋಗಗಳೊಂದಿಗೆ ಜೋಡಿಸಲ್ಪಟ್ಟಿದೆ ಹಾಗೂ ನಗರಗಳಲ್ಲಿಯ ಸಮಾಜವು ಕೃಷಿರಹಿತ ಉತ್ಪಾದನೆ ಮತ್ತು ಸೇವಾ ಉದ್ಯೋಗಗಳೊಂದಿಗೆ ಜೋಡಿಸಲ್ಪಟ್ಟಿದೆ.

**ಗ್ರಾಮೀಣ ವಿಕಾಸ:** ಭಾರತದಲ್ಲಿ 1961ರಲ್ಲಿ ಪ್ರತಿಶತ 82% ರಷ್ಟು ಜನರು ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿದ್ದರು ಹಾಗೂ 1971 ರಲ್ಲಿ ಈ ಪ್ರಮಾಣವು ಪ್ರತಿಶತ 80.1% ರಷ್ಟು ಇತ್ತು. ಆಹಾರಧಾನ್ಯ ಮತ್ತು ಇತರ ಕಚ್ಚಾ ಸರಕುಗಳ ಉತ್ಪಾದನೆ ಮಾಡಿ ನಗರಗಳ ಅವಶ್ಯಕತೆಗಳನ್ನು ಪೂರೈಸುವುದು, ನಗರಗಳಲ್ಲಿಯ ಔದ್ಯೋಗಿಕ ವಿಭಾಗಗಳಿಗೆ ಶ್ರಮಿಕರನ್ನು ಪೂರೈಸುವುದು, ನೈಸರ್ಗಿಕ ಸಾಧನ-ಸಂಪತ್ತನ್ನು ನೋಡಿಕೊಳ್ಳುವುದು ಮುಂತಾದ ಸಂಗತಿಗಳನ್ನು ಇಲ್ಲಿಯ ವರೆಗೆ ಗ್ರಾಮೀಣ ಭಾಗವು ಮಾಡುತ್ತಬಂದಿದೆ. ಇದರಿಂದಾಗಿ ಆರ್ಥಿಕ ವ್ಯವಸಾಯಗಳ ವಿಕಾಸ ಮಾಡುವುದು, ಸಾಮಾಜಿಕ ಅವಶ್ಯಕತೆ ಮತ್ತು ಸೌಕರ್ಯಗಳ ವಿಕಾಸ ಮಾಡುವುದು, ಸಾಂಸ್ಕೃತಿಕ, ಸಾಮಾಜಿಕ ಮತ್ತು ವೈಚಾರಿಕ ದೃಷ್ಟಿಕೋನದಲ್ಲಿ ಬದಲಾವಣೆಯನ್ನುಂಟು ಮಾಡುವುದು. ಈ ಮೂರು ಮಹತ್ವದ ಆಹ್ವಾನಗಳು ಗ್ರಾಮೀಣ ವಿಕಾಸ ಸಂದರ್ಭದಲ್ಲಿವೆ. ಭೂಸುಧಾರಣೆ ಮತ್ತು ನೀರಾವರಿ ಯೋಜನೆಗಳಿಗೆ ಚಾಲನೆ ನೀಡುವುದು ಅವಶ್ಯಕವಾಗಿದೆ.

**ಸಾಮಾಜಿಕ ಅವಶ್ಯಕತೆಗಳು ಮತ್ತು ಸೌಕರ್ಯಗಳು:** ಸಾರ್ವಜನಿಕ ಸ್ವಚ್ಛತೆ ಮತ್ತು ಆರೋಗ್ಯದ ಸೌಕರ್ಯಗಳ ಕಡೆಗೆ ಪ್ರಾಧಾನ್ಯ ಕ್ರಮದಿಂದ ಲಕ್ಷ ನೀಡುವುದು ಅವಶ್ಯಕವಾಗಿದೆ. ಹನ್ನೆರಡು ತಿಂಗಳು ನೀರಿನ ಪೂರೈಕೆಯ ಸೌಕರ್ಯ ವಿಲ್ಲದಿರುವುದು, ಸ್ವಚ್ಛತಾಗೃಹಗಳ ಅಭಾವ, ತೆರೆದ ಒಳಚರಂಡಿ, ಇಕ್ಕಟಾದ ರಸ್ತೆಗಳು, ಅಪೂರ್ಣ ವಿದ್ಯುತ್ತೀಕರಣ, ಔಷಧೋಪಚಾರದ ಕೊರತೆ ಮುಂತಾದ ಸಮಸ್ಯೆಗಳು ಗ್ರಾಮೀಣ ಭಾಗವನ್ನು ಇಂದಿಗೂ ಸುತ್ತುವರಿದಿವೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉಚ್ಚ ಶಿಕ್ಷಣದ ವರೆಗೆ ಇರುವ ಉತ್ತಮ ದರ್ಜೆಯ ಸೌಕರ್ಯಗಳ ಅಭಾವ, ಮನರಂಜನೆಯ ಕೇಂದ್ರಗಳು ಮತ್ತು ವಾಚನಾಲಯಗಳ ಕಡಿಮೆ ಸಂಖ್ಯೆ ಇರುವಿಕೆಯಿಂದಾಗಿ ಗ್ರಾಮೀಣ ಭಾಗದ ಕಡೆಗೆ ವಿಶೇಷ ಲಕ್ಷವಹಿಸುವ ಅವಶ್ಯಕತೆಯಿದೆ.

ಭಾರತ ಸರಕಾರದ ಮೊದಲಿನ ನಾಲ್ಕೂ ಪಂಚವಾರ್ಷಿಕ ಯೋಜನೆಗಳಲ್ಲಿ ಸಮೂಹ ವಿಕಾಸ ಯೋಜನೆಗೆ ಮಹತ್ವದ ಸ್ಥಾನವಿತ್ತು. ಮಹಾರಾಷ್ಟ್ರ ರಾಜ್ಯವು ಈ ಯೋಜನೆ ಅಂತರ್ಗತವಾಗಿ ಪ್ರಭಾವಿ ಕಾರ್ಯವನ್ನು ಮಾಡಿತು. ಮಹಾರಾಷ್ಟ್ರದಲ್ಲಿ 1962 ರಲ್ಲಿ ಜಿಲ್ಲಾ ಪರಿಷತ್ತುಗಳ ಸ್ಥಾಪನೆ ಮಾಡಲಾಯಿತು. 1970-71 ರಲ್ಲಿ ಮಹಾರಾಷ್ಟ್ರದಲ್ಲಿ ಪೌಷ್ಟಿಕ ಆಹಾರ ಯೋಜನೆಯನ್ನು ಆರಂಭಿಸಲಾಯಿತು. ಬಾವಿಗಳನ್ನು ತೋಡುವುದು ಮತ್ತು ನಲ್ಲಿಯ ಮುಖಾಂತರ ನೀರಿನ ಪೂರೈಕೆಯನ್ನು ಮಾಡುವ ಸಲುವಾಗಿ 'ಗ್ರಾಮೀಣ ನೀರಿನ ಪೂರೈಕೆಯ ಯೋಜನೆ'ಯನ್ನು ಆರಂಭಿಸಲಾಯಿತು. 1971ರ ಕೊನೆಯಲ್ಲಿ 1677 ಚಿಕ್ಕ ನೀರಾವರಿಯ ಕೆಲಸಗಳನ್ನು ಪೂರ್ಣಮಾಡಲಾಯಿತು.

**ಗ್ರಾಮೀಣ ವಿದ್ಯುತ್ತೀಕರಣ:** ಗ್ರಾಮೀಣ ಭಾಗದಲ್ಲಿ ವಿಕಾಸಕ್ಕಾಗಿ ವಿದ್ಯುಚ್ಛಕ್ತಿಯ ಅವಶ್ಯಕತೆ ಇರುತ್ತದೆ. ಕೃಷಿಗೆ ನೀರಿನ ಪೂರೈಕೆ ಮಾಡುವ ಸಲುವಾಗಿ ಸ್ವಯಂಚಲಿತ ಪಂಪುಗಳು ಬೇಕಾಗುತ್ತವೆ, ಹಾಲು ಮತ್ತು ತತ್ತಿಗಳಂತಹ ನಾಶಹೊಂದುವ ಪದಾರ್ಥಗಳನ್ನು ಕಾಯ್ದಿಡುವುದು, ಹಣ್ಣು ಮತ್ತು ಕಾಯಿಪಲ್ಲೆಗಳನ್ನು ಸುರಕ್ಷಿತವಾಗಿಡುವುದು, ಗೊಬ್ಬರ ಯೋಜನೆಗಳನ್ನು ನಡೆಸುವುದು, ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡುವ ಸಲುವಾಗಿ ರಾತ್ರಿ ಪ್ರಕಾಶದ ಸೌಕರ್ಯವಿರುವುದು, ಫ್ಯಾನ, ದೂರದರ್ಶನ ಇತ್ಯಾದಿ ಯಂತ್ರಗಳಿಗಾಗಿ ವಿದ್ಯುತ್ತಿನ ಅವಶ್ಯಕತೆ ಇರುತ್ತದೆ. ಭಾರತದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಮೂರು ಸಾವಿರ ಹಳ್ಳಿಗಳ ವಿದ್ಯುತ್ತೀಕರಣವಾಗಿತ್ತು. 1973 ರಲ್ಲಿ ಈ ಸಂಖ್ಯೆಯು 1,38,646 ಹಳ್ಳಿಗಳ ವರೆಗೆ

**ಜಾಗತೀಕರಣ ಪೂರ್ವ ಕಾಲಖಂಡದಲ್ಲಿಯ ಗ್ರಾಮೀಣ ಮತ್ತು ನಗರದ ಸಮಾಜ**

| ಗ್ರಾಮೀಣ ಸಮುದಾಯ | ನಗರ ಸಮುದಾಯ |
|---|---|
| ಕೃಷಿ ಮತ್ತು ಸಹ-ಉದ್ಯೋಗಗಳಿಗೆ ಪ್ರಾಧಾನ್ಯ | ಕೃಷಿರಹಿತ ಉತ್ಪಾದನೆ ಮತ್ತು ಸೇವಾ ವ್ಯವಸಾಯ (ಉದ್ಯೋಗ)ಗಳಿಗೆ ಪ್ರಾಧಾನ್ಯ |
| ಆಕಾರದಲ್ಲಿ ಚಿಕ್ಕದು. ಭಾಷೆ, ಸಂಸ್ಕೃತಿ ಮತ್ತು ಪರಂಪರೆ ಒಂದೇ ಪ್ರಕಾರದ್ದು | ಆಕಾರದಲ್ಲಿ ದೊಡ್ಡದು. ಭಾಷೆ, ಸಂಸ್ಕೃತಿ ಮತ್ತು ಪರಂಪರೆ ಅನೇಕ ಪ್ರಕಾರದ್ದು |
| ಪ್ರಾಥಮಿಕ ಸ್ವರೂಪದ ಉದ್ಯೋಗಗಳು, ಹೊರಗಿನ ಜನರನ್ನು ಗ್ರಾಮೀಣ ಉದ್ಯೋಗಗಳಲ್ಲಿ ಸಮಾವೇಶಗೊಳಿಸುವುದಕ್ಕಿಂತ ಊರಿಂದ ಪಟ್ಟಣಗಳಿಗೆ ಕಳುಹಿಸುವದು | ದೊಡ್ಡ-ದೊಡ್ಡ ಉದ್ಯಮಗಳು ಮತ್ತು ಉತ್ಪಾದನೆ ಜಾಗತಿಕ ಮಟ್ಟದ ಸಲುವಾಗಿ ಅನ್ಯಭಾಗಗಳಿಂದ ಬರುವವರನ್ನು ಸಮಾವೇಶಗೊಳಿಸುವ ಸಮುದಾಯ |
| ವಂಶಪರಂಪರಾಗತ ವ್ಯವಸಾಯಗಳ ಪ್ರಮಾಣ ಹೆಚ್ಚು | ವಂಶಪರಂಪರಾಗತ ವ್ಯವಸಾಯಗಳ ಪ್ರಮಾಣ ಕಡಿಮೆ |
| ಕುಟುಂಬ ಪ್ರಮುಖ ಮತ್ತು ಕುಟುಂಬ ವ್ಯವಸ್ಥೆಗೆ ಪ್ರಾಧಾನ್ಯತೆ | ಕುಟುಂಬಕ್ಕೆ ಕಡಿಮೆ ಪ್ರಾಧಾನ್ಯ, ವ್ಯಕ್ತಿಗೆ ಪ್ರಾಧಾನ್ಯ, ಅವಿಭಕ್ತ ಕುಟುಂಬ ಪದ್ಧತಿಯ ವಿಘಟನೆ. |

ತಲುಪಿತು. 1966 ರಿಂದ ಪಂಪ್ ಮತ್ತು ಕೊಳವೆಯ ಬಾವಿಗಳಿಗೆ ಹೆಚ್ಚು ವಿದ್ಯುತ್ತನ್ನು ನೀಡುವ ಯೋಜನೆಯನ್ನು ರೂಪಿಸಲಾಯಿತು. 1969ರಲ್ಲಿ 'ಗ್ರಾಮೀಣ ವಿದ್ಯುತ್ತೀಕರಣ ನಿಗಮ'ವನ್ನು ಸ್ಥಾಪಿಸಲಾಯಿತು. ಇದರಿಂದಲೇ ಆಂಧ್ರಪ್ರದೇಶ, ಗುಜರಾತ, ಕರ್ನಾಟಕ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಗ್ರಾಮೀಣ ವಿದ್ಯುತ್ತೀಕರಣ ಸಹಕಾರಿ ಸಂಸ್ಥೆಗಳು ಅಸ್ತಿತ್ವದಲ್ಲಿ ಬಂದವು.

**ಔದ್ಯೋಗಿಕ ವಿಕಾಸ:** ಗ್ರಾಮೀಣ ಔದ್ಯೋಗಿಕ ವಿಕಾಸಕ್ಕೆ ಚಾಲನೆ ನೀಡುವ ಸಲುವಾಗಿ 'ಗ್ರಾಮೋದ್ಯೋಗ ಯೋಜನಾ ಸಮಿತಿ'ಯನ್ನು ಸ್ಥಾಪಿಸಲಾಯಿತು. 1972ರ ಕೊನೆಯ ವರೆಗೆ ಈ ಯೋಜನೆಯಲ್ಲಿ ಒಂದು ಲಕ್ಷ ಆರು ಸಾವಿರ ಜನರಿಗೆ ಉದ್ಯೋಗ ದೊರಕಿತು.

ಗ್ರಾಮೀಣ ಭಾಗದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ವಿಶೇಷ ಬುದ್ಧಿವಂತ ವಿದ್ಯಾರ್ಥಿಗಳಿಗೆ ಉತ್ಕೃಷ್ಟ ಶಿಕ್ಷಣವನ್ನು ನೀಡುವ ಸಲುವಾಗಿ ಮಹಾರಾಷ್ಟ್ರ ಸರಕಾರವು ಸಾತಾರಾ, ಔರಂಗಾಬಾದ, ನಾಶಿಕ ಮತ್ತು ಚಿಖಲದರಾ ಗಳಲ್ಲಿ ವಿದ್ಯಾನಿಕೇತನ ಎಂಬ ವಸತಿಗೃಹವುಳ್ಳ ಮಾಧ್ಯಮಿಕ ಶಾಲೆಗಳನ್ನು ಆರಂಭಿಸಿತು. ಕೋಠಾರಿ ಆಯೋಗದ ಶಿಫಾರಸಿಗನುಸಾರವಾಗಿ ಮಹಾರಾಷ್ಟ್ರದಲ್ಲಿ ರಾಹುರಿ, ಅಕೋಲಾ, ಪರಭಣಿ ಮತ್ತು ದಾಪೋಲಿಗಳಲ್ಲಿ ಕೃಷಿ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಮಹಾರಾಷ್ಟ್ರವು ಮಾಡಿದ ಕಾರ್ಯವನ್ನು ಗಮನಿಸಿ ಯುನೆಸ್ಕೊ ಇದು 1972ರಲ್ಲಿ ಸಾಕ್ಷರತಾ ಪ್ರಸಾರ ಗೌರವದ ಅಂತರರಾಷ್ಟ್ರೀಯ ಪಾರಿತೋಷಕವನ್ನು ಮಹಾರಾಷ್ಟ್ರಕ್ಕೆ ನೀಡಿತು.

ಈ ರೀತಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆರಂಭದಲ್ಲಿ ಬಂದ ಅಡೆತಡೆಗಳನ್ನು ಎದುರಿಸುತ್ತ ಭಾರತವು ವಿಕಾಸವನ್ನು ಮಾಡಲು ಆರಂಭಿಸಿತು. ಮುಂದಿನ ಪಾಠದಲ್ಲಿ ನಾವು ಅನ್ಯ ಕ್ಷೇತ್ರದಲ್ಲಿಯ ಪ್ರಗತಿಯ ಅಭ್ಯಾಸ ಮಾಡುವವರಿದ್ದೇವೆ.



## ಸ್ವಾಧ್ಯಾಯ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಿಧಾನಗಳನ್ನು ಪೂರ್ಣಮಾಡಿರಿ.**

(1) ಡಾ. ಎನ್. ಗೋಪಿನಾಥ ಇವರ ನೇತೃತ್ವದಲ್ಲಿ ಭಾರತದ ............. ಎಂಬ ನಗರದಲ್ಲಿ ಮೊದಲನೆಯ ಓಪನ್ ಹಾರ್ಟ ಶಸ್ತ್ರಚಿಕಿತ್ಸೆಯು ಯಶಸ್ವಿಯಾಯಿತು.

(ಅ) ಚೆನ್ನೈ (ಬ) ವೆಲ್ಲೂರು
(ಕ) ಹೈದರಾಬಾದ (ಡ) ಮುಂಬಯಿ

(2) ................ ಇವರನ್ನು 'ಜಯಪೂರ ಫೂಟ'ದ ಜನಕರೆಂದು ಗುರುತಿಸಲಾಗುತ್ತದೆ.

(ಅ) ಡಾ. ಎನ್. ಗೋಪಿನಾಥ
(ಬ) ಡಾ. ಪ್ರಮೋದ ಸೇಠಿ
(ಕ) ಡಾ. ಮೋಹನ ರಾವ
(ಡ) ಇವರಲ್ಲಿ ಯಾರೂ ಇಲ್ಲ

**2. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಗುರುತಿಸಿ ಬರೆಯಿರಿ.**

(1) ಡಾ. ಎನ್. ಗೋಪಿನಾಥ- ಓಪನ್ ಹಾರ್ಟ ಶಸ್ತ್ರಚಿಕಿತ್ಸೆ
(2) ರಾಮಚಂದ್ರ ಶರ್ಮಾ- ಕುಶಲ ಕಸಬುದಾರ
(3) ಡಾ. ಸುಭಾಷ ಮುಖೋಪಾಧ್ಯಾಯ- ಟೆಸ್ಟ್ಟ್ಯೂಬ ಬೇಬಿ
(4) ಡಾ. ಮೋಹನ ರಾವ- ಪೋಲಿಯೋ

**3. ಟಿಪ್ಪಣಿ ಬರೆಯಿರಿ.**

(1) ಕುಟುಂಬ ಸಂಸ್ಥೆ
(2) ಜಯಪೂರ ಫೂಟ ತಂತ್ರಜ್ಞಾನ
(3) ನಗರೀಕರಣ
(4) ಬದಲಾಗುತ್ತಿರುವ ಆರ್ಥಿಕ ಜೀವನ

**4. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಪಲ್ಸ ಪೋಲಿಯೊ ಲಸಿಕೆ ಹಾಕುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಯಿತು.
(2) ಗ್ರಾಮೀಣ ನೀರಿನ ಪೂರೈಕೆಯ ಯೋಜನೆಯನ್ನು ಆರಂಭಿಸಲಾಯಿತು.

**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಸಂವಿಧಾನದ ಪ್ರಕಾರ ಯಾವ ಕಾರಣಗಳ ಮೇಲಿಂದ ಭೇದಭಾವ ಮಾಡುವುದನ್ನು ಪ್ರತಿಬಂಧಿಸಲಾಗಿದೆ.
(2) ಸಮಾಜ ಕಲ್ಯಾಣ ಕಾರ್ಯಕ್ರಮದ ಉದ್ದೇಶಗಳು ಯಾವವು ?
(3) ಗ್ರಾಮೀಣ ವಿಕಾಸ ಸಂದರ್ಭದಲ್ಲಿ ಯಾವ ಆಹ್ವಾನಗಳಿವೆ ?

**6. ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಭಾರತದಲ್ಲಾದ ಮಹತ್ವದ ಬದಲಾವಣೆಗಳ ಪರಿಶೀಲನೆ ಮಾಡಿರಿ.**

## ಉಪಕ್ರಮ

ಕೆಳಗಿನ ಅಂಶಗಳ ಆಧಾರದಿಂದ ನಿಮ್ಮ ಪರಿಸರದಲ್ಲಿಯ ಯಾವುದೊಬ್ಬ ಹಿರಿಯ ವ್ಯಕ್ತಿಯನ್ನು ಸಂದರ್ಶಿಸಿರಿ.

- ಮನೆಗಳ ರಚನೆಯಲ್ಲಿ ಉಂಟಾದ ಬದಲಾವಣೆ
- ಕೃಷಿಯ ಸಂದರ್ಭದಲ್ಲಿಯ ಬದಲಾವಣೆ
- ವಾಹನಗಳ ಲಭ್ಯತೆ

C3TY6N

# 10 ಬದಲಾಗುತ್ತಿರುವ ಜೀವನ: ಭಾಗ 2

ಈ ಪಾಠದಲ್ಲಿ ನಾವು ಭಾಷೆ, ಕ್ರೀಡೆ, ನಾಟಕ, ಚಲನಚಿತ್ರ, ವರ್ತಮಾನಪತ್ರಗಳು ಹಾಗೂ ದೂರದರ್ಶನ. ಈ ಕ್ಷೇತ್ರಗಳಲ್ಲಿ ಉಂಟಾದ ಬದಲಾವಣೆಗಳ ವಿಷಯವಾಗಿ ಮಾಹಿತಿಯನ್ನು ಪಡೆಯುವವರಿದ್ದೇವೆ.

**ಭಾಷೆ:** ಭಾರತದಲ್ಲಿ ಹಿಂದಿ, ಆಸಾಮಿ, ಬಂಗಾಲಿ, ಗುಜರಾತಿ, ಕನ್ನಡ, ಕಾಶ್ಮೀರಿ, ಮಲ್ಯಾಳಮ್, ಮರಾಠಿ, ಉಡಿಯಾ, ಪಂಜಾಬಿ, ಸಂಸ್ಕೃತ, ತಮಿಳು, ತೆಲುಗು, ಉರ್ದು, ಕೊಂಕಣಿ, ಮಣಿಪುರಿ, ನೇಪಾಳಿ ಮತ್ತು ಸಿಂಧಿ ಈ ಭಾಷೆಗಳು ಮಹತ್ವದ್ದಾಗಿವೆ. ಆದಾಗ್ಯೂ ಈ ಪ್ರಕ್ರಿಯೆಯಿಂದ ಪ್ರಾದೇಶಿಕ ಭಾಷೆಗಳ ಅಸ್ತಿತ್ವವು ಗಂಡಾಂತರದಲ್ಲಿ ಸಿಲುಕಬಾರದು ಎಂಬುದರ ಕಾಳಜಿ ವಹಿಸಬೇಕು. ಈ ಭಾರತೀಯ ಭಾಷೆಗಳ ಆಡುಭಾಷೆಗಳು ಕೂಡ ಇವೆ. ಅವುಗಳ ಸಂಖ್ಯೆ ಈಗ ಕಡಿಮೆಯಾಗುತ್ತಿದೆ. ತಕ್ಕ ಸಮಯದಲ್ಲಿಯೇ ಅವುಗಳನ್ನು ಕಾಪಾಡಬೇಕು. ಇಲ್ಲದಿದ್ದರೆ ಒಂದು ಅಮೂಲ್ಯ ಸಂಪತ್ತು ನಷ್ಟವಾಗಬಹುದು. ಹೀಗಿದ್ದರೂ ಕೂಡ ಎಲ್ಲೆಡೆ ತಲುಪಿದ ಹಿಂದಿ ಭಾಷೆಯು ಹಿಂದಿ ಚಲನಚಿತ್ರಗಳ ಮೂಲಕ ಭಾಷಿಕ ದೃಷ್ಟಿಯಿಂದ ದೇಶವನ್ನು ಜೋಡಿಸುವ ಕಾರ್ಯ ಮಾಡಿದೆ.



**ಗೊತ್ತಿದೆಯೇ ನಿಮಗೆ?**

1961 ರಲ್ಲಿ ನಾಗಾಲ್ಯಾಂಡಿನ ಭಾಷಿಕ ವಿವರಣೆಯು ಕೆಳಗಿನಂತಿದೆ.

ಭಾಷೆ ಮತ್ತು ಜನಸಂಖ್ಯೆ- ಇವುಗಳ ಪ್ರಮಾಣ

| | |
|---|---|
| ಅಂಗಾಮಿ - 33766 | ಸೆಮಾ - 47439 |
| ಲೋಥಾ - 26565 | ಎವ್ಹೋ - 55904 |
| ರೇಂಗಮಾ - 5786 | ಚಾರವೆಸಂಗ - 339 |
| ಖೇಝಾ - 7295 | ಸಂಗತಮ ಪೋಚುರಿ-2736 |
| ಸಂಗತಮ - 15508 | ಕೌನಿಯಾಕ- 46653 |
| ಚಾಂಗ - 11329 | ಫೋಮ - 13385 |
| ಯೀಮಚುಂಗ್ರೆ-10187 | ಖೀಮನುಂಗಮ - 12434 |
| ಝೆಲಿಯಂಗ ಸೆಮಿ-6472 | ಲಿಯಾಂಗಮೆ - 2969 |
| ಕುಕೀ-ಚೀರೂ - 1175 | ಮಕವರೆ - 769 |
| ತಿಖಿರ - 2468 | |

ಈ ವಿವಿಧತೆಯ ಪರಿಣಾಮವು ಕೋಹಿಮಾ ಆಕಾಶವಾಣಿ ಕೇಂದ್ರದ ಮೇಲೆ ಆಯಿತು. ಈ ಕೇಂದ್ರವು 25 ಭಾಷೆಗಳಲ್ಲಿ ಪ್ರಸಾರಣೆ ಮಾಡಬೇಕಾಗುತ್ತಿತ್ತು. ಇದರಲ್ಲಿ ಇಂಗ್ಲೀಷ, ಹಿಂದಿ, ನಾಗಾಜನರ ಆಡುಭಾಷೆ ಹಾಗೂ ಇತರ 16 ನಾಗಾ ಭಾಷೆಗಳ ಸಮಾವೇಶ ಇದೆ.

1990ರ ನಂತರ ಆರಂಭವಾದ ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಇಂಗ್ಲಿಷ ಭಾಷೆಯ ಪ್ರಾಬಲ್ಯತೆ ಹೆಚ್ಚುತ್ತ ನಡೆದಿದೆ. ಇಂಗ್ಲೀಷ ಇದು ಹೊಟ್ಟೆಹೊರೆಯುವ ಭಾಷೆಯಾಗುತ್ತ ನಡೆದಿದೆ. ಇಂಗ್ಲೀಷ ಭಾಷೆಯಿಂದಾಗಿ ನೌಕರಿಯ ಅನೇಕ ಅವಕಾಶಗಳು ಲಭ್ಯವಾಗುತ್ತಿವೆ. ಇಂಗ್ಲೀಷ ಕಲಿಯುವುದರಲ್ಲಿ ಭಾರತೀಯರು ಎಲ್ಲರಿಗಿಂತ ಮುಂದಿದ್ದಾರೆ. ಆದಾಗ್ಯೂ ಈ ಪ್ರಕಿಯೆಯಿಂದ ಪ್ರಾದೇಶಿಕ ಭಾಷೆಗಳ ಅಸ್ತಿತ್ವಕ್ಕೆ ಧಕ್ಕೆ ತಗಲದಂತೆ ಕಾಳಜಿ ವಹಿಸಬೇಕಾಗಿದೆ.

**ಶೋಧಿಸೋಣ.**

ವಿವಿಧ ಸಾಧನಗಳ ಆಧಾರದಿಂದ (ಕೋಶ, ಗೂಗಲ್, ವಿಕಿಪಿಡಿಯಾ, ಸಂಶೋಧಕರ ಲೇಖನಗಳು) ಮಹಾರಾಷ್ಟ್ರದಲ್ಲಿಯ ಆಡುಭಾಷೆಗಳ ಮಾಹಿತಿಯನ್ನು ಶೋಧಿಸೋಣ.

**ಕ್ರೀಡೆ:** ಸ್ವಾತಂತ್ರ್ಯಪೂರ್ವಕಾಲದಲ್ಲಿ ಕ್ರೀಡಾಕ್ಷೇತ್ರದಲ್ಲಿ ಕೆಲವೇ ಕ್ರೀಡೆಗಳ ಹೆಸರುಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಇದರಲ್ಲಿ ಬದಲಾವಣೆಯನ್ನುಂಟು ಮಾಡುವ ಕಾರ್ಯವನ್ನು ಕೆಲವು ಆಟಗಾರರು ಮಾಡಿದರು. ಅದರಿಂದಾಗಿ ಕ್ರೀಡೆ ಮತ್ತು ಕ್ರೀಡಾಪಟು ಇಬ್ಬರಿಗೂ ಮಹತ್ವ ಬಂದಿತು. ಇವುಗಳಲ್ಲಿಯ ಒಂದು ಉದಾಹರಣೆಯೆಂದರೆ ಗೀತ ಸೇಠಿ. ಬಿಲಿಯರ್ಡ್ಸ್ ಈ ಆಟದ ಸ್ನೂಕರ ಎಂಬ ಪ್ರಕಾರದಲ್ಲಿ ಸೇಠಿ ಇವರು ಜಾಗತಿಕ ಪ್ರಾವೀಣ್ಯವನ್ನು ಪಡೆದರು. ವಯಸ್ಸಿನ 15ನೇ ವರ್ಷದಲ್ಲಿ ಬಿಲಿಯರ್ಡ್ಸ್‌ನ ಕುಮಾರ ರಾಷ್ಟ್ರೀಯ ಸ್ಪರ್ಧೆಯನ್ನು ಅವರು ಗೆದ್ದರು. ಮುಂದೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಅವರು ಸರ್ವೋತ್ಕೃಷ್ಠ ವಿಜೇತರಾದರು. ಜಾಗತಿಕ ವ್ಯಾವಸಾಯಿಕ ಸ್ಪರ್ಧೆಯಲ್ಲಿ ಐದುಸಲ, ಜಾಗತಿಕ ಹವ್ಯಾಸಿ ಬಿಲಿಯರ್ಡ್ಸ್ ಸ್ಪರ್ಧೆಯಲ್ಲಿ ಮೂರು ಸಲ ಅವರು ವಿಜೇತರಾದರು. ಈ ಆಟಕ್ಕೆ ಅವರು ಜನಪ್ರೀಯತೆಯನ್ನು ದೊರಕಿಸಿಕೊಟ್ಟರು. ವರ್ತಮಾನ ಪತ್ರಗಳಲ್ಲಿ ಈ ಆಟದ ಸುದ್ದಿಗಳು ಬರುವುದಕ್ಕೆ ಸೇಠಿಯವರ ಕರ್ತೃತ್ವವೇ ಕಾರಣ. ಭಾರತದಲ್ಲಿಯ ಉದಯೋನ್ಮುಖ ಆಟಗಾರರಿಗೆ ಅವರು ಹೊಸ ಕ್ಷೇತ್ರವನ್ನು ದೊರಕಿಸಿಕೊಟ್ಟರು.

1983ರಲ್ಲಿ ಕಪಿಲದೇವ ಇವರ ನೇತೃತ್ವದಲ್ಲಿ ಭಾರತವು ಕ್ರಿಕೆಟ್ ವಿಶ್ವಕಪ್ ಸ್ಪರ್ಧೆಯಲ್ಲಿ ಐತಿಹಾಸಿಕ ವಿಜಯವನ್ನು ಗಳಿಸಿತು. ಹಾಗೂ ಆ ಆಟವು ದೇಶದ ತುಂಬೆಲ್ಲ ಬಹಳಷ್ಟು ಜನಪ್ರಿಯತೆಯನ್ನು ಗಳಿಸಿತು. ಇದೇ ವರ್ಷ ಸುನೀಲ ಗಾವಸಕರ ಇವರು ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಸರ್ವಾಧಿಕ ಶತಕಗಳ ವಿಕ್ರಮವನ್ನು ಮಾಡಿದರು. 1985ರಲ್ಲಿ ಭಾರತವು 'ಬೆನ್ಸನ್ ಆ್ಯಂಡ್ ಹೆಜೆಸ್' ಕ್ರಿಕೆಟ್ ಸ್ಪರ್ಧೆಯಲ್ಲಿ ಜಯಗಳಿಸಿತು. ಇದರ ಪರಿಣಾಮವಾಗಿ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲಿ ಹೆಚ್ಚು-ಕಡಿಮೆ

ಪ್ರಮಾಣದಲ್ಲಿ ಕ್ರಿಕೆಟ್ ಆಟವು ಆರಂಭವಾಯಿತು. ದೇಶಿ ಆಟಗಳು ಹಿಂದೆ ಬಿದ್ದು ಕ್ರಿಕೆಟ್ ಆಟವು ಮುಂದೆ ಬಂದಿತು. ಕ್ರಿಕೆಟ್ ಆಟವನ್ನು ಕೇಂದ್ರ ಸ್ಥಾನದಲ್ಲಿಟ್ಟು ಕೆಲವು ಚಲನಚಿತ್ರಗಳ ನಿರ್ಮಿತಿ ಮಾಡಲಾಯಿತು.



ಸುನೀಲ ಗಾವಸಕರ

ದೂರದರ್ಶನದಲ್ಲಿ ಪೂರ್ಣ ಐದು ದಿನದ ಮತ್ತು ಒಂದು ದಿನದ ಆಟದ ಪ್ರಸಾರಣೆ ಆರಂಭವಾಯಿತು.

ಏಶಿಯಾಡ್ ಮತ್ತು ಒಲಿಂಪಿಕ್ ಸ್ಪರ್ಧೆಗಳಲ್ಲಿ ಭಾರತವು ಭಾಗವಹಿಸಿತ್ತು. ಕ್ರಿ.ಶ. 2000ದ ಒಲಿಂಪಿಕ್‌ನಲ್ಲಿ ಕರನಾಮ ಮಲ್ಲೇಶ್ವರಿ ಇವಳು ಭಾರ ಎತ್ತುವ (ವೇಟ ಲಿಫ್ಟಿಂಗ) ಸ್ಪರ್ಧೆಯಲ್ಲಿ ಪದಕವನ್ನು ಗೆದ್ದಳು. ಅವಳು ಒಲಿಂಪಿಕ್‌ನಲ್ಲಿ ಪದಕ ಗೆಲ್ಲುವ ಪ್ರಥಮ ಭಾರತೀಯ ಮಹಿಳೆಯಾಗಿದ್ದಾಳೆ. ಹಾಕಿ, ಈಜು, ಧನುರ್ವಿದ್ಯೆ, ಭಾರ ಎತ್ತುವುದು, ಟೆನಿಸ್, ಬ್ಯಾಡಮಿಂಟನ್ ಮುಂತಾದ ಸ್ಪರ್ಧೆಗಳಲ್ಲಿ ಭಾರತದ ಪ್ರತಿನಿಧಿತ್ವ ಹೆಚ್ಚುತ್ತಿದೆ.



ಕರನಾಮ ಮಲ್ಲೇಶ್ವರಿ

**ನಾಟಕ ಮತ್ತು ಚಲನಚಿತ್ರ:** ನಾಟಕ ಮತ್ತು ಚಲನಚಿತ್ರ ಇದು ಭಾರತೀಯರ ಜೀವನದಲ್ಲಿಯ ಮಹತ್ವದ ಘಟಕವಾಗಿದೆ. ಮೊದಲು ನಾಟಕಗಳು ಸಾಕಷ್ಟು ಸಮಯ - ಕೆಲವೊಮ್ಮೆ ರಾತ್ರಿಯಿಡೀ ನಡೆಯುತ್ತಿದ್ದವು. ಈಗಿನ ಕಾಲದಲ್ಲಿ ನಾಟಕಗಳ ಸ್ವರೂಪ, ತಂತ್ರ, ವೇಳೆ ಬದಲಾಗಿ ಹೋಗಿವೆ. ಬೇರೆ ಬೇರೆ ಕ್ಷೇತ್ರಗಳಲ್ಲಿಯ ಜನರು ನಾಟಕಗಳಲ್ಲಿ ಭಾಗವಹಿಸತೊಡಗಿದರು. ಸಂಗೀತ ರಂಗಮಂಚದ ಮಹತ್ವವು ಮೊದಲಿಗಿಂತ ಕಡಿಮೆಯಾಗತೊಡಗಿತು. ಪೌರಾಣಿಕ ಮತ್ತು ಐತಿಹಾಸಿಕ ವಿಷಯಗಳ ಬದಲಾಗಿ ರಾಜಕಾರಣ, ಸಮಾಜಕಾರಣ ಈ ವಿಷಯಗಳಿಗೆ ಪ್ರಾಧಾನ್ಯ ದೊರೆಯತೊಡಗಿತು.

ಚಲನಚಿತ್ರಗಳ ಕ್ಷೇತ್ರದಲ್ಲಿ ಕೃಷ್ಣಧವಲ ಚಲನಚಿತ್ರಗಳ ನಂತರ ಬಣ್ಣದ ಚಲನಚಿತ್ರಗಳ ಯುಗ ಬಂದಿತು. ಮನರಂಜನೆಯ ಕ್ಷೇತ್ರದಲ್ಲಿ ಹಿಂದಿ ಚಲನಚಿತ್ರಗಳ ಸ್ಥಾನವು ಅವರ್ಣನೀಯವಾಗಿದೆ. ಸಮಕಾಲೀನ ಪರಿಸ್ಥಿತಿಯ ಚಿತ್ರಣವು ಚಲನಚಿತ್ರಗಳಲ್ಲಿ ಮೂಡತೊಡಗಿತು. ಚಿತ್ರೀಕರಣದ ಸ್ಥಳಗಳು ದೇಶದ ಹೊರಗಡೆ ಹೋಗತೊಡಗಿದವು. ದೇಶ-ವಿದೇಶಗಳಲ್ಲಿಯ ವೈವಿಧ್ಯಪೂರ್ಣ ಸ್ಥಳಗಳು ಜನರಿಗೆ ಕಾಣತೊಡಗಿದವು. ಪರಕೀಯ ಭಾಷೆಗಳಲ್ಲಿಯ ಚಲನಚಿತ್ರಗಳು ಅನುವಾದಿತವಾಗತೊಡಗಿದವು, ಇಂಗ್ಲೀಷ ಚಲನಚಿತ್ರಗಳನ್ನು ತೋರಿಸುವಾಗ ಹಿಂದಿ ಅನುವಾದವು ಪರದೆಯ ಮೇಲೆ ಕಾಣತೊಡಗಿದವು, ಹಿಂದಿ ಚಲನಚಿತ್ರಗಳು ಜಾಗತಿಕ ಚಲನಚಿತ್ರಗಳೊಂದಿಗೆ ಸ್ಪರ್ಧೆ ಮಾಡತೊಡಗಿದವು. ಹಿಂದಿ ಚಲನಚಿತ್ರಗಳು ಜಗತ್ತಿನ ತುಂಬೆಲ್ಲ ತಲುಪಿದವು. ರಾಜಕಾರಣ, ಸಮಾಜಕಾರಣ, ಉದ್ಯಮ, ತಂತ್ರಜ್ಞಾನ ಇವುಗಳ ಪ್ರತಿಬಿಂಬವು ಚಲನಚಿತ್ರಗಳಲ್ಲಿ ಮೂಡತೊಡಗಿದವು. ಮೊದಲು 3-4 ತಾಸುಗಳ ವರೆಗೆ ನಡೆಯುವ ಸಿನಿಮಾ ಒಂದೂವರೆ ತಾಸಿನ ವರೆಗೆ ಬರತೊಡಗಿತು. ಒಂದೇ ಪರದೆ ಮತ್ತು ಒಂದೇ ಚಿತ್ರಮಂದಿರ ಎಂಬ ಕಲ್ಪನೆಯು ಬದಲಾಗಿದೆ. ಇದರಿಂದಾಗಿ ಒಂದೇ ಚಲನಚಿತ್ರವು 100 ವಾರ ನಡೆಯುವ ಪ್ರಮಾಣವು ಮುಗಿದು ಒಂದು ಚಲನಚಿತ್ರವು ಒಂದೇ ಸಮಯದಲ್ಲಿ ದೇಶ-ವಿದೇಶಗಳಲ್ಲಿ ಸಾವಿರಾರು ಚಿತ್ರ ಮಂದಿರಗಳಲ್ಲಿ ಕಾಣತೊಡಗಿತು. ಇದರಿಂದಾಗಿ ಚಲನಚಿತ್ರಗಳ ಅರ್ಥವ್ಯವಸ್ಥೆಯು ಬದಲಾಗಿ ಹೋಯಿತು. ಚಲನಚಿತ್ರ ನಿರ್ಮಿತಿಗೆ ಉದ್ದಿಮೆಯ ದರ್ಜೆ ಪ್ರಾಪ್ತವಾಯಿತು. ಈ ಉದ್ದಿಮೆಯು ಕೋಟ್ಯಾವಧಿ ಜನರನ್ನು ಸಮಾವೇಶಗೊಳಿಸತೊಡಗಿತು. ಪ್ರಾದೇಶಿಕ ಭಾಷೆಗಳಲ್ಲಿಯ ಚಲನಚಿತ್ರಗಳ ಉದ್ಯಮವು ಅರಳಿತು.

**ವರ್ತಮಾನ ಪತ್ರಗಳು:** ಬದಲಾಗುತ್ತಿರುವ ಜೀವನಶೈಲಿಯ ಪ್ರಭಾವವು ವರ್ತಮಾನ ಪತ್ರ ಮತ್ತು ಪ್ರಸಾರ ಮಾಧ್ಯಮಗಳ ಮೇಲೆ ಆಯಿತು. ಈ ಮಾಧ್ಯಮಗಳ ಪ್ರಭಾವವು ವೈಯಕ್ತಿಕ ಮತ್ತು ಸಾಮೂಹಿಕ ಜೀವನದ ಮೇಲೂ ಆಯಿತು. ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ದೈನಂದಿನ ಘಟನೆಗಳ ಸುದ್ದಿಯನ್ನು ನೀಡುವುದು, ಜಾಹೀರಾತುಗಳನ್ನು ಮುದ್ರಿಸಿ ಉದ್ಯೋಗ ವ್ಯವಸಾಯಗಳಿಗೆ ಚಾಲನೆ ನೀಡುವುದು, ಜನಮತವನ್ನು ರೂಪಿಸುವುದು, ಜನಮತ ವಿಧಾಯಕ ಕಾರ್ಯಕ್ಕಾಗಿ ಪ್ರಭಾವಿತಗೊಳಿಸಿ ಪ್ರಸಂಗದಲ್ಲಿ ನೇತೃತ್ವವನ್ನು ಮಾಡುವುದು, ಜನರಿಗೆ ಶಿಕ್ಷಣವನ್ನು ನೀಡುವುದು, ಸರಕಾರದ ವ್ಯವಸ್ಥೆಯ ಮೇಲೆ ಅಂಕುಶವನ್ನಿಡುವುದು. ಇಂಥ ವಿವಿಧ ಉದ್ದೇಶಗಳಿಂದ ವರ್ತಮಾನ ಪತ್ರಗಳು ಕಾರ್ಯನಿರತವಾಗಿದ್ದವು. ಆ ಕಾಲದಲ್ಲಿ ವರ್ತಮಾನಪತ್ರಗಳು ಕೃಷ್ಣಧವಲ ಬಣ್ಣಗಳಲ್ಲಿ ಮುದ್ರಿಸಲ್ಪಡುತ್ತಿದ್ದವು.

ಮುಂದೆ ಕಾಲ ಬದಲಾಯಿತು ಹಾಗೂ ವರ್ತಮಾನ ಪತ್ರಗಳು ವರ್ಣಮಯವಾದವು. ಮೊದಲು ತಾಲೂಕು ಇಲ್ಲವೆ ಜಿಲ್ಲೆಯ ಮುಖಪತ್ರವೆಂದು ಗುರುತಿಸಲ್ಪಡುವ ವರ್ತಮಾನ ಪತ್ರಗಳು ತುಂಬಾ ದೊಡ್ಡ ಪ್ರಮಾಣದಲ್ಲಿ ರಾಜ್ಯಮಟ್ಟದ ಸರಪಳಿಯ ಸ್ವರೂಪದ ವರ್ತಮಾನ ಪತ್ರಗಳೊಂದಿಗೆ ಸ್ಪರ್ಧಿಸಬೇಕಾಗುತ್ತಿದೆ. ವರ್ತಮಾನ ಪತ್ರಗಳು ಈಗ ಸಾಕಷ್ಟು ಕ್ರಿಯಾಶೀಲವಾಗುತ್ತಿವೆ. ಬರಗಾಲಪೀಡಿತರಿಗಾಗಿ ನಿಧಿ ಸಂಗ್ರಹಿಸುವುದು, ಮಹಾಪೂರ ಪೀಡಿತರಿಗಾಗಿ ನಿಧಿಸಂಗ್ರಹಿಸುವುದು, ಬುದ್ಧಿವಂತ ಆದರೆ ಆರ್ಥಿಕ ದೃಷ್ಟಿಯಿಂದ ದುರ್ಬಲ ಘಟಕದಲ್ಲಿಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ನೆರವು ನೀಡುವುದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು

ಆಯೋಜಿಸುವುದು ಇಲ್ಲವೆ ಸಮರ್ಥಿಸುವುದು ಮುಂತಾದ ವಿವಿಧ ಮಾರ್ಗಗಳಿಂದ ವರ್ತಮಾನ ಪತ್ರಗಳು ನಮ್ಮ ಜೀವನದ ಅವಿಭಾಜ್ಯ ಅಂಗಗಳಾಗಿವೆ.

**ದೂರದರ್ಶನ:** ಭಾರತದಲ್ಲಿ ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿ ದೂರದರ್ಶನದ ಆಗಮನವಾಯಿತು. ಆರಂಭದಲ್ಲಿ ಕೃಷ್ಣಧವಲವಾಗಿದ್ದ ದೂರದರ್ಶನವು ನಂತರ ವರ್ಣಮಯವಾಯಿತು. ಆರಂಭದಲ್ಲಿ ಕೆಲವೇ ಕಾರ್ಯಕ್ರಮಗಳು ಮತ್ತು ನಿರ್ಧಾರಿತ ವೇಳೆಯಲ್ಲಿ ಮನರಂಜನೆ ಹೀಗೆ ದೂರದರ್ಶನದ ಸ್ವರೂಪವಿತ್ತು. ನಂತರ ಶೈಕ್ಷಣಿಕ ಉಪಕ್ರಮ, ವಾರ್ತಾಪತ್ರಗಳು, ರಾಷ್ಟ್ರಪತಿ- ಪ್ರಧಾನ ಮಂತ್ರಿಗಳ ಪ್ರಯಾಣಗಳ ಸವಿಸ್ತಾರ ವಾರ್ತಾಪ್ರಸಾರ, ಸಮಾಚಾರ, ಹೀಗೆ ಒಂದೊಂದು ಉಪಕ್ರಮಗಳು ಬೆಳೆಯುತ್ತ ಹೋದವು. ರಾಮಾಯಣ ಮತ್ತು ಮಹಾಭಾರತ ಈ ಧಾರಾವಾಹಿಗಳ ಕಾಲದಲ್ಲಿ ಬಹುಸಂಖ್ಯ ಜನರು ದೂರದರ್ಶನದ ಎದುರು ಕುಳಿತಿರುತ್ತಿದ್ದರು. ಈ ಮಾಧ್ಯಮದ ಜನಪ್ರಿಯತೆಯ ರುಚಿಯನ್ನು ಈ ಧಾರಾವಾಹಿಗಳು ತೋರಿಸಿಕೊಟ್ಟವು. 1991ರ ಇರಾಕ ಯುದ್ಧದ ಜೀವಂತ ದೃಶ್ಯದ ವಾರ್ತಾಪ್ರಸಾರವನ್ನು ಸಿಎನ್‌ಎನ್ ವಾಹಿನಿಯು ಇಡೀ ಜಗತ್ತಿಗೆ ತೋರಿಸಿತು. ಈ ಅವಸ್ಥೆಯಲ್ಲಿ ಭಾರತದಲ್ಲಿಯ ವೃತ್ತವಾಹಿನಿಗಳ ವಿಶ್ವವೇ ಬದಲಾಗಿ ಹೋಯಿತು. 1998ರಲ್ಲಿ ಸ್ಟಾರ (ಸ್ಯಾಟೆಲೈಟ್ ಟೆಲಿವ್ಹಿಜನ್ ಏಶಿಯಾ ರಿಜನ್) ಎಂಬ ಖಾಸಗಿ ಉದ್ಯೋಗ ಸಮೂಹವು ಭಾರತದಲ್ಲಿ ಬಂದಿತು. ಇದರಿಂದಾಗಿ ಆರಂಭದ ಕಾಲದಲ್ಲಿಯ ನಿರಸ, ಒಂದೇ ರಾಗದ, (ಬೇಸರ ಹಿಡಿಸುವ) ಪ್ರಚಾರದ ಸ್ವರೂಪದ ಸಮಾಚಾರಗಳ ವಿಶ್ವವೇ ಬದಲಾಗಿ ಹೋಯಿತು.

ಭಾಷೆ, ಸಾದರಪಡಿಸುವ ತಂತ್ರ, ತಂತ್ರದಿಂದ ಸುಸಜ್ಜಿತ ಸ್ಟುಡಿಯೊ ಮತ್ತು ಓಬಿ (ಔಟಡೋರ ಬ್ರಾಡಕಾಸ್ಟಿಂಗ್) ವ್ಯಾನ್‌ಗಳ ಬಳಕೆ- ಇವುಗಳಿಂದಾಗಿ ಈ ವಾಹಿನಿಗಳು ವಿಸ್ತಾರವನ್ನುಂಟು ಮಾಡಿದವು. ಇದರಿಂದಾಗಿ ವಾರ್ತೆಗಳನ್ನು ಬರೆಯುವುದರಲ್ಲಿ ಸ್ವಾತಂತ್ರ್ಯ, ವೈವಿಧ್ಯ ಬಂದಿತು. ದೇಶದ ಮೂಲೆ-ಮೂಲೆಗಳು ಜೋಡಿಸಲ್ಪಟ್ಟವು. ಇದರ ಪರಿಣಾಮವು ರಾಜಕಾರಣದ ಮೇಲೂ ಆಯಿತು. ಸಂಪೂರ್ಣ ದೇಶ ಬದಲಾಗತೊಡಗಿತು.

ಇಲ್ಲಿಯ ವರೆಗೆ ನಾವು ಆಧುನಿಕ ಭಾರತದ ಇತಿಹಾಸವನ್ನು ಅಭ್ಯಸಿಸಿದೆವು. ಮುಂದಿನ ವರ್ಷ ವ್ಯಾವಹಾರಿಕ ಜಗತ್ತಿನಲ್ಲಿ 'ಇತಿಹಾಸ' ಈ ವಿಷಯದ ಅನ್ವಯವನ್ನು ಹೇಗೆ ಮಾಡುವುದು ಎಂಬುದನ್ನು ನಾವು ಕಲಿಯುವವರಿದ್ದೇವೆ. ಇತಿಹಾಸವು ದೈನಂದಿನ ಜೀವನದ ಭಾಗವು ಹೇಗೆ ಆಗಬಹುದು ಎಂಬುದನ್ನು ನಾವು ನೋಡುವವರಿದ್ದೇವೆ.

C43U8B



## ಸ್ವಾಧ್ಯಾಯ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ವಿಧಾನಗಳನ್ನು ಪೂರ್ಣಮಾಡಿರಿ.**

(1) ಭಾರತವು ................ ಇವರ ನೇತೃತ್ವದಲ್ಲಿ ವಿಶ್ವಕಪ್ ಕ್ರಿಕೆಟ್ ಸ್ಪರ್ಧೆಯನ್ನು ಗೆದ್ದಿತು.
(ಅ) ಸುನೀಲ ಗಾವಸಕರ (ಬ) ಕಪಿಲದೇವ
(ಕ) ಸಯ್ಯದ ಕಿರ್ಮಾಣಿ (ಡ) ಸಂದೀಪ ಪಾಟೀಲ

(2) ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಭಾರತದಲ್ಲಿ ................ ಭಾಷೆಯ ಮಹತ್ವ ಹೆಚ್ಚುತ್ತಿದೆ.
(ಅ) ಪಂಜಾಬಿ (ಬ) ಫ್ರೆಂಚ್
(ಕ) ಇಂಗ್ಲೀಷ (ಡ) ಹಿಂದಿ

**2. ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**
**ಮುಂದಿನ ಕೊಷ್ಟಕ ಪೂರ್ಣ ಮಾಡಿರಿ.**

| | | |
|---|---|---|
| 1. | ಭಾರತದಲ್ಲಿಯ ಮಹತ್ವದ ಭಾಷೆಗಳು | ................ ................ |
| 2. | ಒಲಿಂಪಿಕ್ ಸ್ಪರ್ಧೆಯಲ್ಲಿ ಪದಕಗಳಿಸಿದ ಕ್ರೀಡಾಪಟು | ................ ................ |
| 3. | ನೀವು ನೋಡಿದ ಬಾಲ ಚಲನಚಿತ್ರ | ................ ................ |
| 4. | ವಿವಿಧ ಸಮಾಚಾರಗಳ ಪ್ರಸಾರಣೆಯನ್ನು ಮಾಡುವ ವೃತ್ತವಾಹಿನಿಗಳ ಹೆಸರುಗಳು | ................ ................ |

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಭಾರತದಲ್ಲಿ ಎಲ್ಲೆಡೆ ಹೆಚ್ಚು-ಕಡಿಮೆ ಪ್ರಮಾಣದಲ್ಲಿ ಕ್ರಿಕೆಟ್ ಆಟವು ಆರಂಭವಾಯಿತು

(2) ಚಲನಚಿತ್ರಗಳ ಅರ್ಥವ್ಯವಸ್ಥೆಯು ಬದಲಾಗುತ್ತಿದೆ.

**4. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಭಾರತೀಯ ಭಾಷೆಗಳ ಆಡುಭಾಷೆಗಳನ್ನು ಕಾಪಾಡುವುದು ಏಕೆ ಅವಶ್ಯಕವಾಗಿದೆ?

(2) ವರ್ತಮಾನ ಪತ್ರಗಳ ಬದಲಾಗುತ್ತಿರುವ ಸ್ವರೂಪವನ್ನು ಸ್ಪಷ್ಟಪಡಿಸಿರಿ.

(3) ದೂರದರ್ಶನ ಈ ಮಾಧ್ಯಮದಲ್ಲಿ ಯಾವ ಬದಲಾವಣೆಗಳಾಗಿವೆ ?

## ಉಪಕ್ರಮ

(1) ಅಂತರಜಾಲದ ಸಹಾಯದಿಂದ ದಾದಾಸಾಹೇಬ ಫಾಳಕೆಯವರನ್ನು ಕುರಿತು ಮಾಹಿತಿಯನ್ನು ಪಡೆಯಿರಿ. ದಾದಾಸಾಹೇಬ ಫಾಳಕೆ ಪುರಸ್ಕಾರದಿಂದ ಸನ್ಮಾನಿತರಾದ ವ್ಯಕ್ತಿಗಳ ಯಾದಿಯನ್ನು ತಯಾರಿಸಿರಿ.

(2) ಪ್ರಜಾಪ್ರಭುತ್ವದ ನಾಲ್ಕನೆಯ ಸ್ತಂಭವಾದ 'ವರ್ತಮಾನಪತ್ರ' ಈ ವಿಷಯವನ್ನು ಕುರಿತು ಶಾಲೆಯಲ್ಲಿ ನಿಬಂಧ ಸ್ಪರ್ಧೆಯನ್ನು ಆಯೋಜಿಸಿರಿ.

# ರಾಜ್ಯಶಾಸ್ತ್ರ

## ಭಾರತ ಮತ್ತು ಜಗತ್ತು

### ಅನುಕ್ರಮಣಿಕೆ


| ಅ.ನಂ. | ಪಾಠಗಳ ಹೆಸರು | ಪುಟ ಕ್ರಮಾಂಕ |
|---|---|---|
| 1. | ಮಹಾಯುದ್ಧದ ನಂತರದ ರಾಜಕೀಯ ಚಟುವಟಿಕೆಗಳು | 57 |
| 2. | ಭಾರತದ ಪರರಾಷ್ಟ್ರ ಧೋರಣೆಯ ಆಗುಹೋಗುಗಳು | 65 |
| 3. | ಭಾರತದ ಸುರಕ್ಷಾ ವ್ಯವಸ್ಥೆ | 72 |
| 4. | ಸಂಯುಕ್ತ ರಾಷ್ಟ್ರ ಸಂಘ | 77 |
| 5. | ಭಾರತ ಮತ್ತು ಅನ್ಯ ದೇಶಗಳು | 84 |
| 6. | ಅಂತರರಾಷ್ಟ್ರೀಯ ಸಮಸ್ಯೆಗಳು | 91 |


ಎಂಟನೆಯ ಇಯತ್ತೆಯವರೆಗೆ ನಾಗರಿಕ ಶಾಸ್ತ್ರವೆಂದು ಕಲಿಸುವ ವಿಷಯವನ್ನು ಒಂಬತ್ತನೆಯ ಇಯತ್ತೆಯಿಂದ ರಾಜ್ಯಶಾಸ್ತ್ರ ಎಂಬ ಹೆಸರಿನಿಂದ ನಾವು ಕಲಿಯುವವರಿದ್ದೇವೆ. ನಾಗರಿಕ ಶಾಸ್ತ್ರದ ಹಾಗೆಯೇ ರಾಜ್ಯಶಾಸ್ತ್ರದಲ್ಲಿಯೂ ನಾವು ನಮ್ಮ ರಾಜಕೀಯ ಜೀವನದ ಅಭ್ಯಾಸ ಮಾಡುವವರಿದ್ದೇವೆ. ಈ ವಿಷಯವು ಈಗ ಹೆಚ್ಚು ವ್ಯಾಪಕ ಮತ್ತು ಆಳವಾಗುವುದಿದೆ. ರಾಜಕೀಯ ಜೀವನದಲ್ಲಿ ಹೇಗೆ ಸ್ಥಾನಿಕ ಸರಕಾರ, ಸಂವಿಧಾನ, ಸಂವಿಧಾನದಲ್ಲಿಯ ಮೂಲಭೂತ ಹಕ್ಕುಗಳು ಮತ್ತು ಮಾರ್ಗದರ್ಶಕ ತತ್ವಗಳು ಮುಂತಾದವುಗಳ ಸಮಾವೇಶ ಇರುವದೋ ಹಾಗೆಯೇ ದೇಶದ ಶಾಸನ ವ್ಯವಸ್ಥೆ, ರಾಜ್ಯಕಾರಭಾರ, ಧೋರಣೆಯ ನಿರ್ಮಿತಿ, ಪ್ರಜಾಪ್ರಭುತ್ವ, ವಿವಿಧ ಚಳುವಳಿಗಳು ಇವುಗಳ ಸಮಾವೇಶ ಇರುವದು. ಶಾಸನದ ನಿರ್ಣಯಗಳು, ಶಾಸನದ ಧೋರಣೆಗಳು, ಶಾಸನದಿಂದ ಮಾಡಲಾಗುವ ಅಧಿಕಾರದ ಉಪಯೋಗ ಇವುಗಳ ಪರಿಣಾಮವು ಸಾಮಾನ್ಯ ಮಾನವನ ಜೀವನದ ಮೇಲಾಗುವದು. ರಾಜ್ಯಶಾಸ್ತ್ರವು ಇವೆಲ್ಲವುಗಳ ಶಾಸ್ತ್ರಶುದ್ಧ ಮತ್ತು ಚಿಕಿತ್ಸಕ ರೀತಿಯಿಂದ ಅಭ್ಯಾಸ ಮಾಡುವದು. ರಾಜ್ಯಶಾಸ್ತ್ರದ ಅಭ್ಯಾಸದಿಂದ ನಮಗೆ ರಾಜಕೀಯ ಚಟುವಟಿಕೆಗಳು, ರಾಜಕೀಯ ಪ್ರವಾಹ ಮತ್ತು ಪ್ರಕ್ರಿಯೆ ಇವುಗಳು ಹೆಚ್ಚೆಚ್ಚು ಆಕಲನ (ತಿಳಿವಳಿಕೆ) ಆಗಬಹುದು.

ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಲು ಮತ್ತು ಪ್ರಾವೀಣ್ಯತೆಯನ್ನು ದೊರಕಿಸಲು ಈ ಆಕಲನೆಯ ಲಾಭವಾಗಬಹುದು.

# ಕ್ಷಮತಾ ವಿಧಾನಗಳು

| ಅ.ನಂ. | ಘಟಕಗಳು | ಕ್ಷಮತೆಗಳು |
|---|---|---|
| 1. | 1945 ರಿಂದಿ ನಿಂದಿನ ಜಗತ್ತು ಮಹತ್ವದ ಪ್ರವಾಹ | ☐ ಶಸ್ತ್ರಾಸ್ತ್ರ ಸ್ಪರ್ಧೆಯಿಂದ ಅಂತರರಾಷ್ಟ್ರೀಯ ಶಾಂತತೆಗೆ ಧಕ್ಕೆ ತಗಲುವದು ಎಂಬ ಅರಿವು ಮೂಡುವದು.<br>☐ ಶೀತಯುದ್ಧದ ನಂತರದ ಕಾಲದಲ್ಲಿಯ ಜಗತ್ತಿನ ಚಟುವಟಿಕೆಗಳ ವಿಶ್ಲೇಷಣೆ ಮಾಡಲು ಬರುವದು.<br>☐ ಜಾಗತೀಕಿಕರಣಕ್ಕೆ ಭಾರತವು ನೀಡಿದ ಪ್ರತಿಕ್ರಿಯೆಯ ಮಾಹಿತಿಯನ್ನು ಮಾಡಿಕೊಳ್ಳಲು ಬರುವದು.<br>☐ ಜಾಗತೀಕಿಕರಣದ ಕುರಿತು ಬೇರೆ ಬೇರೆ ದೇಶಗಳ ಪರಸ್ಪರ ಅವಲಂಬನೆಯನ್ನು ತಿಳಿದುಕೊಂಡು ಆಕುರಿತು ಚರ್ಚೆಯನ್ನು ಮಾಡುವದು. |
| 2. | ಭಾರತದ ಪರರಾಷ್ಟ್ರ ಧೋರಣೆಯ ಆಗುಹೋಗುಗಳು | ☐ ಪರರಾಷ್ಟ್ರ ಧೋರಣೆಯ ಅರ್ಥವನ್ನು ಹೇಳಲು ಬರುವದು.<br>☐ ಪರರಾಷ್ಟ್ರ ಧೋರಣೆಯ ಉದ್ದೇಶಗಳ ಕುರಿತು ಆದರದ ಭಾವನೆಯನ್ನಿಟ್ಟು ಕೊಳ್ಳುವದು.<br>☐ ಸ್ವತಂತ್ರ ಭಾರತದ ಪರರಾಷ್ಟ್ರ ಧೋರಣೆಯನ್ನು ವಿವಿಧ ಘಟನೆಗಳ ಸಹಾಯದಿಂದ ಸ್ಪಷ್ಟ ಪಡಿಸಲು ಬರುವದು.<br>☐ ಭಾರತವು ಅಂತರರಾಷ್ಟ್ರೀಯ ಶಾಂತತೆ ಮತ್ತು ಸುರಕ್ಷಿತತೆಗೆ ಯಾವಾಗಲೂ ಪ್ರಾಧಾನ್ಯತೆಯನ್ನು ಕೊಡುತ್ತದೆ, ಇದರ ಅರಿವನ್ನು ವಿಕಾಸಗೊಳಿಸುವದು. |
| 3. | ಭಾರತದ ಸುರಕ್ಷೆಯ ವ್ಯವಸ್ಥೆ | ☐ ಭಾರತದಲ್ಲಿಯ ಸಂರಕ್ಷಣೆ ವ್ಯವಸ್ಥೆಯ ಸ್ವರೂಪವನ್ನು ತಿಳಿದುಕೊಳ್ಳುವದು.<br>☐ ಸೈನ್ಯ ಮತ್ತು ಅರ್ಧಸೈನ್ಯಪಡೆಗಳ ಕಾರ್ಯಗಳ ವಿಂಗಡನೆ ಮಾಡಲುಬರುವದು.<br>☐ ಮಾನವನ ಸುರಕ್ಷಿತತೆಯ ಸಂಕಲ್ಪನೆಯನ್ನು ಸ್ಪಷ್ಟ ಮಾಡಲು ಬರುವದು.<br>☐ ಅಂತರ್ಗತ ಸುರಕ್ಷಿತತೆಯ ಕುರಿತು ಇರುವ ಆಹ್ವಾನಗಳ ಅರಿವು ಇಡುವದು.<br>☐ ಯಾವುದೇ ಆಹ್ವಾನದ ಅಧ್ಯಯನ ಮಾಡಿ, ಅದರ ಸಂಶೋಧನೆಯ ಪತ್ರಿಕೆಯನ್ನು ತಯಾರಿಸಲು ಬರುವದು. |
| 4. | ಸಂಯುಕ್ತ ರಾಷ್ಟ್ರಸಂಘ | ☐ ಸಂಯುಕ್ತ ರಾಷ್ಟ್ರಸಂಘವು ಒಂದು ಮಹತ್ವದ ಜಾಗತಿಕ ಸಂಘಟನೆಯಾಗಿದೆ ಎಂದು ಹೇಳಲು ಬರುವದು.<br>☐ ಸಂಯುಕ್ತ ರಾಷ್ಟ್ರಸಂಘವು ಶಾಂತತೆಯ ರಕ್ಷಣೆ ಮಾಡುತ್ತದೆ ಎಂದು ತಿಳಿಹೇಳಬಹುದು.<br>☐ ಎಲ್ಲ ರಾಷ್ಟ್ರಗಳ ವಿಕಾಸಕ್ಕಾಗಿ ಶಾಂತತೆಯು ಅವಶ್ಯಕವಾಗಿದೆ ಎಂಬ ಅರಿವನ್ನು ಮೂಡಿಸುವದು.<br>☐ ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಸಮಿತಿಯಲ್ಲಿ ಬದಲಾವಣೆ ಯಾಗುವದು ಅವಶ್ಯಕ ಎಂದು ಸ್ಪಷ್ಟ ಪಡಿಸಲು ಬರುವದು. |
| 5. | ಭಾರತ ಮತ್ತು ಅನ್ಯ ದೇಶಗಳು | ☐ ಭಾರತದ ಭೌಗೋಲಿಕ ಸ್ಥಾನ ಮತ್ತು ಅದರ ಭಾರತದ ಅಂತರ್ಗತ ಮತ್ತು ಪರರಾಷ್ಟ್ರ ಧೋರಣೆಯ ಮೇಲೆ ಆಗುವ ಪರಿಣಾಮಗಳನ್ನು ಸ್ಪಷ್ಟಪಡಿಸಬಹುದು.<br>☐ ನೆರೆಯ ದೇಶಗಳೊಂದಿಗೆ ಗೆಳೆತನದ ಸಂಬಂಧ ಇರಬೇಕು ಎಂಬ ವಿಚಾರವನ್ನು ಧೃಡಗೊಳಿಸುವದು.<br>☐ ಪ್ರಾದೇಶಿಕ ಸಹಕಾರ್ಯಕ್ಕಾಗಿ ಇರುವ ಸಂಘಟನೆಗಳ ಕುರಿತು ಕಾರಣ, ಅರ್ಥ/ನಿರೂಪಣೆ ಮಾಡುವದು.<br>☐ ಭಾರತ ಮತ್ತು ಅನ್ಯ ದೇಶಗಳಲ್ಲಿಯ ಆರ್ಥಿಕ ಮತ್ತು ವ್ಯಾಪಾರದ ಸಂಬಂಧದಲ್ಲಾಗುವ ಬದಲಾವಣೆಗಳ ಪರಿಶೀಲನೆ ಮಾಡಲು ಬರುವದು. |
| 6. | ಅಂತರರಾಷ್ಟ್ರೀಯ ಸಮಸ್ಯೆಗಳು | ☐ ಮಾನವೀ ಹಕ್ಕುಗಳು ಜಗತ್ತಿನಲ್ಲಿಯ ಪ್ರತಿಯೊಬ್ಬ ಮನುಷ್ಯನಿಗೆ ದೊರಕುತ್ತವೆ ಎಂಬ ವಿಚಾರವನ್ನು ವಿಕಸಿತಗೊಳಿಸುವದು.<br>☐ ಭಾರತೀಯ ಸಂವಿಧಾನ ಮತ್ತು ಕಾಯ್ದೆಗಳ ಮೂಲಕ ಮಾನವಿ ಹಕ್ಕುಗಳ ಸಂರಕ್ಷಣೆ ಹೇಗಾಗುವದು ಎಂಬುದನ್ನು ತಿಳಿದುಕೊಳ್ಳುವದು.<br>☐ ಪರಿಸರದ ಅವನತಿ/ನಾಶ ಇದು ಒಂದು ಜಾಗತಿಕ ಸಮಸ್ಯೆಯಾಗಿದೆ ಎಂಬ ಅರಿವು ವಿಕಾಸಗೊಳಿಸುವದು.<br>☐ ವಲಸೆಗಾರರು ಅಂದರೆ ಯಾರು ಎಂಬುದನ್ನು ಸ್ಪಷ್ಟಪಡಿಸಲು ಬರುವದು. |

# 1 ಮಹಾಯುದ್ಧದ ನಂತರದ ರಾಜಕೀಯ ಚಟುವಟಿಕೆಗಳು

**ನಡೆಯಿರಿ, ಸ್ವಲ್ಪ ಪುನರ್ನಿರೀಕ್ಷಣೆ ಮಾಡೋಣ!**

ಈ ಹಿಂದಿನ ಇಯತ್ತೆಗಳ ನಾಗರಿಕ ಶಾಸ್ತ್ರದ ಪಠ್ಯಪುಸ್ತಕಗಳಿಂದ ನಾವು ಸ್ಥಾನಿಕ ಶಾಸನ ಸಂಸ್ಥೆ, ಭಾರತದ ಸಂವಿಧಾನ ಮತ್ತು ನಮ್ಮ ದೇಶದಲ್ಲಿಯ ರಾಜ್ಯಪದ್ಧತಿ ಇಲ್ಲವೆ ಶಾಸನದ ರಚನೆ ಇವುಗಳ ಅಭ್ಯಾಸ ಮಾಡಿದ್ದೇವೆ. ಈ ಇಯತ್ತೆಯಲ್ಲಿ ನಾವು ಈಗ ಭಾರತದ ಜಗತ್ತಿನೊಂದಿಗೆ ಇರುವ ಸಂಬಂಧವನ್ನು ನೋಡುವವರಿದ್ದೇವೆ. ಭೂಗೋಲದ ಅಭ್ಯಾಸದಿಂದ ನಿಮಗೆ ಜಗತ್ತಿನ ಭೌಗೋಲಿಕ ರಚನೆ ತಿಳಿದಿರಬೇಕು. ಇತಿಹಾಸದ ಅಭ್ಯಾಸದಿಂದ ಐತಿಹಾಸಿಕ ಕಾಲದ ಜಗತ್ತಿನ ಚಟುವಟಿಗಳು ತಿಳಿದಿರಬೇಕು. ರಾಜ್ಯಶಾಸ್ತ್ರದ ಅಭ್ಯಾಸದಿಂದ ನಾವು ಈಗ ಭಾರತದ ಜಗತ್ತಿನೊಡನೆ ಇದ್ದ ಸಂಬಂಧ ಮತ್ತು ಮಹತ್ವದ ಜಾಗತಿಕ ಸಮಸ್ಯೆಗಳನ್ನು ತಿಳಿದು ಕೊಳ್ಳುವವರಿದ್ದೇವೆ.

ನಾವೆಲ್ಲರೂ ಬೇರೆ ಬೇರೆ ಕಾರಣಗಳಿಗಾಗಿ, ಅನುಕೂಲತೆಗಳಿಗಾಗಿ, ಸಮಾಜದಲ್ಲಿಯ ವ್ಯಕ್ತಿ, ಸಂಸ್ಥೆ ಮತ್ತು ಸಂಘಟನೆಗಳ ಮೇಲೆ ಅವಲಂಬಿಸಿರುತ್ತೇವೆ. ತಮ್ಮ ಸಾಮಾಜಿಕ ಜೀವನವು ಪರಸ್ಪರ ಅವಲಂಬಿತವಾಗಿರುತ್ತದೆ ಮತ್ತು ಅದರಲ್ಲಿ ಪರಸ್ಪರ ಸಹಕಾರ್ಯವು ಬಹಳ ಮಹತ್ವದ್ದಾಗಿರುತ್ತದೆ ಇದನ್ನು ನಾವು ನೋಡಿದ್ದೇವೆ. ಇದು ಹೇಗೆ ವ್ಯಕ್ತಿ ಮತ್ತು ಸಮಾಜದ ಕುರಿತಾಗಿ ಇದೆಯೋ ಹಾಗೆಯೇ ಅದು ವಿವಿಧ ರಾಷ್ಟ್ರಗಳ ಕುರಿತಾಗಿ ಇದೆ. ಭಾರತದ ಹಾಗೇ ಜಗತ್ತಿನಲ್ಲಿ ಹಲವಾರು ಸ್ವತಂತ್ರ ದೇಶಗಳಿವೆ. ಅವುಗಳಲ್ಲಿ ಸತತವಾಗಿ ಕೊಡ-ತೆಗೆದುಕೊಳ್ಳುವಿಕೆ ನಡೆದಿರುತ್ತದೆ. ವ್ಯವಹಾರವು ನಡೆಯುತ್ತಿರುತ್ತದೆ. ಈ ಸ್ವತಂತ್ರ ದೇಶಗಳು ಒಬ್ಬರೊಬ್ಬರೊಂದಿಗೆ ಕರಾರುಗಳನ್ನು ಮಾಡಿಕೊಳ್ಳುತ್ತಿರುತ್ತವೆ. ಈ ಎಲ್ಲ ಸ್ವತಂತ್ರ ಮತ್ತು ಸಾರ್ವಭೌಮತ್ವವುಳ್ಳ ದೇಶಗಳು ಕೂಡಿ ಒಂದು ವ್ಯವಸ್ಥೆ ನಿರ್ಮಾಣವಾಗುವದು. ಅದನ್ನು ನಾವು ಅಂತರರಾಷ್ಟ್ರೀಯ ವ್ಯವಸ್ಥೆ ಎಂದು ಅನ್ನುತ್ತೇವೆ. ಈ ಅಂತರರಾಷ್ಟ್ರಿಯ ವ್ಯವಸ್ಥೆಯ ಕೆಲ ವೈಶಿಷ್ಟ್ಯಗಳನ್ನು ನಾವು ತಿಳಿದುಕೊಳ್ಳೋಣ.

**ಪರಸ್ಪರಾವಲಂಬನೆ:** ಜಗತ್ತಿನಲ್ಲಿಯ ಎಲ್ಲ ದೇಶಗಳು ಒಂದಿಲ್ಲಾಒಂದು ಕಾರಣಕ್ಕಾಗಿ ಪರಸ್ಪರರ ಮೇಲೆ ಅವಲಂಬಿಸಿ ಇರುತ್ತವೆ. ರಾಷ್ಟ್ರವು ಎಷ್ಟೇ ದೊಡ್ಡದು, ಸಮೃದ್ಧ ಮತ್ತು ವಿಕಸಿತ ವಾಗಿರಲಿ ಅದು ಎಂದಿಗೂ ಎಲ್ಲದರಲ್ಲಿಯೂ ಸ್ವಯಂಪೂರ್ಣವಾಗಿ ಇರಲು ಸಾಧ್ಯವಿಲ್ಲ. ದೊಡ್ಡ ರಾಷ್ಟ್ರಗಳಿಗೂ ಅನ್ಯ ಅವರ ಹಾಗೆಯೇ ದೊಡ್ಡ ಇಲ್ಲವೆ ಚಿಕ್ಕ ರಾಷ್ಟ್ರಗಳನ್ನು ಅವಲಂಬಿಸಿ ಇರಬೇಕಾಗುವದು. ಅಂತೆಯೇ ಪರಸ್ಪರಾವಲಂಬನೆ ಇದು ಅಂತರರಾಷ್ಟ್ರಿಯ ವ್ಯವಸ್ಥೆಯ ಅಂದರೆ ಇಂದಿನ ಜಾಗತಿಕ ವ್ಯವಸ್ಥೆಯ ಒಂದು ಮಹತ್ವದ ವೈಶಿಷ್ಟ್ಯವಾಗಿದೆ.

**ನನ್ನ ಮುಂದಿದ್ದ ಪ್ರಶ್ನೆಗಳು...**

* ವ್ಯಕ್ತಿ ಮತ್ತು ರಾಷ್ಟ್ರಗಳ ಪರಸ್ಪರಾವಲಂಬನದಲ್ಲಿ ಯಾವ ವ್ಯತ್ಯಾಸ ಇದೆ?
* ಶ್ರೀಮಂತ ದೇಶ ಮತ್ತು ಬಡದೇಶ ಹೀಗೆ ಕೆಲವೊಂದು ವಿಭಜನೆ ಇರುತ್ತದೆಯೆ?
* ದೇಶದ ಕಾರಭಾರವು ಹೇಗೆ ಸಂವಿಧಾನದ ಆಧಾರದ ಮೇಲೆ ನಡೆಯುತ್ತದೆಯೋ ಹಾಗೆ ಜಾಗತಿಕ ಮಟ್ಟದಲ್ಲಿ ಒಂದು ಸಂವಿಧಾನ ಇದೆಯೆ ?
* ಅಂತರರಾಷ್ಟ್ರಿಯ ವ್ಯವಸ್ಥೆಯಲ್ಲಿ ಸರ್ವೋಚ್ಚ ಸ್ಥಾನ ಯಾರಿಗೆ ಇರುವದು?

**ಪರರಾಷ್ಟ್ರ ಧೋರಣೆಯ ಮೂಲಕ ಅಂತರರಾಷ್ಟ್ರಿಯ ಸಂಬಂಧ:** ಪ್ರತಿಯೊಂದು ರಾಷ್ಟ್ರವು ತಮ್ಮ ಅಂತರ್ಗತ ವ್ಯವಹಾರಗಳಿಗಾಗಿ ಹಾಗೆಯೇ ಅನ್ಯ ರಾಷ್ಟ್ರಗಳೊಂದಿಗೆ ಹೇಗೆ ವ್ಯವಹರಿಸಬೇಕು, ಈ ಕುರಿತು ನಿಶ್ಚಿತ ಧೋರಣೆಯನ್ನು ನಿರ್ಧರಿಸುವದು. ಇಂಥ ಧೋರಣೆಗೆ ಪರರಾಷ್ಟ್ರ ಧೋರಣೆ ಎಂದು ಅನ್ನುವರು. ಭಾರತದ ಪರರಾಷ್ಟ್ರ ಧೋರಣೆಯ ಅಭ್ಯಾಸವನ್ನು ನಾವು ಹೆಚ್ಚು ವಿಸ್ತಾರವಾಗಿ ಮುಂದಿನ ಪ್ರಕರಣದಲ್ಲಿ ಮಾಡುವವರಿದ್ದೇವೆ.



**ಮಾಡಿ ನೋಡಿರಿ.**

ಒಂದು ತಿಂಗಳ ವೃತ್ತ ಪತ್ರಿಕೆಗಳನ್ನು ಸಂಗ್ರಹಿಸಿ ಅದರಲ್ಲಿಯ ಪರರಾಷ್ಟ್ರಧೋರಣೆಗೆ ಸಂಬಂಧಿಸಿದ ಸುದ್ದಿಗಳ ಸಂಗ್ರಹ ಮಾಡಿರಿ. ಕೆಳಗಿನ ಅಂಶಗಳ ಆಧಾರದಿಂದ ಆ ಸುದ್ದಿಗಳ ವರ್ಗೀಕರಣ ಮಾಡಿರಿ ಮತ್ತು ಅದರ ಪ್ರದರ್ಶನ ಏರ್ಪಡಿಸಿರಿ.

(ಅ) ಪರರಾಷ್ಟ್ರಗಳಲ್ಲಿಯ ಮಹತ್ವದ ಪದವಿಯ ಮೇಲಿದ್ದ ವ್ಯಕ್ತಿಗಳು ನಮ್ಮ ದೇಶಕ್ಕೆ ಕೊಟ್ಟ ಭೆಟ್ಟಿ.

(ಆ) ನಮ್ಮ ದೇಶ ಮತ್ತು ಅನ್ಯ ದೇಶ ಇವುಗಳಲ್ಲಾದ ಕರಾರು.

(ಕ) ನಮ್ಮ ದೇಶದಲ್ಲಿ ತುಂಬಿದ ಯಾವುದೇ ಅಂತರರಾಷ್ಟ್ರೀಯ ಪರಿಷತ್ತು.

(ಡ) ನೆರೆಯ ದೇಶಗಳ ಸಂದರ್ಭದಲ್ಲಿಯ ಆಗುಹೋಗುಗಳು.

**ಹಿನ್ನೆಲೆ:** ಇಂದು ನಾವು ಯಾವ ಜಗತ್ತಿನಲ್ಲಿ ಇರುತ್ತಿದ್ದೇವೊ ಅದು ಅನೇಕ ಘಟನೆಗಳು, ಚಟುವಟಿಕೆಗಳಿಂದ ಆಕಾರಕ್ಕೆ ಬಂದಿದೆ. ಅಂತೆಯೇ ತಮ್ಮ ಇಂದಿನ ಜಗತ್ತನ್ನು ತಿಳಿದುಕೊಳ್ಳಲು ತಮಗೆ ಸ್ವಲ್ಪ ಇತಿಹಾಸದಲ್ಲಿ ಹೋಗಬೇಕಾಗುವದು. ಹಿಂದಿನ ಶತಮಾನದಲ್ಲಿ ಎರಡು ಮಹಾಯುದ್ಧಗಳು ಸಂಭವಿಸಿದ್ದು ನಿಮಗೆ ಗೊತ್ತಿದೆ. ಈ ಎರಡು ಮಹಾಯುದ್ಧಗಳು ಹಿಂದಿನ ಶತಮಾನದಲ್ಲಿಯ ಎಲ್ಲಕ್ಕೂ ಮಹತ್ವದ ಘಟನೆಗಳಾಗಿವೆ ಇದರಿಂದ ಜಗತ್ತು ಬದಲಿಸಿತು. ಜಗತ್ತಿನಲ್ಲಿ ಹೊಸ ಪ್ರವಾಹ ಬಂದಿತು, ಹೊಸ ವಿಚಾರಗಳು ಬಂದವು. ಈ ಮಹಾಯುದ್ಧಗಳಿಂದ ಇನ್ನೂ ಏನೇನು ಘಟಿಸಿತು ಎಂಬುದನ್ನು ತಿಳಿದುಕೊಳ್ಳೋಣ.

**ಮೊದಲನೆಯ ಮಹಾಯುದ್ಧ:** 1914 ರಿಂದ 1918ರ ಈ ಕಾಲಾವಧಿಯಲ್ಲಿ ಮೊದಲನೆಯ ಮಹಾಯುದ್ಧವಾಯಿತು. ಯುರೋಪ ಖಂಡದಲ್ಲಿಯ ಮಹತ್ವದ ದೇಶಗಳು ಇದರಲ್ಲಿ ಸೇರ್ಪಡೆಯಾಗಿದ್ದವು. ಒಟ್ಟಾರೆ ಅಂತರರಾಷ್ಟ್ರೀಯ ಇಲ್ಲವೆ ಜಾಗತಿಕ ವ್ಯವಸ್ಥೆಯಲ್ಲಿ ಯುರೋಪಿಗೆ ಈ ಕಾಲದಲ್ಲಿ ಬಹಳ ಮಹತ್ವವಿತ್ತು. ಮೊದಲನೆಯ ಮಹಾಯುದ್ಧದಿಂದಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಮಾನವ ಮತ್ತು ಆರ್ಥಿಕ ಹಾನಿಯಾಯಿತು. ಯುದ್ಧದಲ್ಲಿ ಭಾಗವಹಿಸಿದ ರಾಷ್ಟ್ರಗಳಿಗೆ ಪ್ರಚಂಡ ಆರ್ಥಿಕ ಹಾನಿಯನ್ನು ಎದುರಿಸಬೇಕಾಯಿತು. ಯುದ್ಧದಲ್ಲಿ ಭಾಗವಹಿಸದವರಿಗೂ ಯುದ್ಧದ ಬಿಸಿ ತಗುಲಿತು. ಗೆದ್ದ ಮತ್ತು ಸೋತ ರಾಷ್ಟ್ರಗಳ ಅರ್ಥವ್ಯವಸ್ಥೆ ಮುರಿದುಬಿದ್ದಿತು.

**ಮೊದಲನೆಯ ಮಹಾಯುದ್ಧದಲ್ಲಿ ಭಾಗವಹಿಸಿದ ರಾಷ್ಟ್ರಗಳು:**

| ಮಿತ್ರ ರಾಷ್ಟ್ರಗಳು | ಮಧ್ಯ ರಾಷ್ಟ್ರಗಳು (ಕೇಂದ್ರ) |
|---|---|
| ಬ್ರಿಟನ, ಫ್ರಾನ್ಸ, ರಶಿಯಾ ಇಟಲಿ, ಅಮೇರಿಕಾ | ಜರ್ಮನಿ, ಸ್ಟ್ರಿಯಾ-ಹಂಗೇರಿ, ತುರ್ಕಸ್ತಾನ, ಬಲ್ಗೇರಿಯಾ |

ಇಂಥ ಯುದ್ಧ ಮುಂದೆ ಎಂದೂ ಆಗಬಾರದು, ಅದಕ್ಕಾಗಿ ಏನಾದರೂ ಉಪಾಯ ಯೋಜನೆಯನ್ನು ಕೈಕೊಳ್ಳಬೇಕು, ಎಂದು ಎಲ್ಲ ರಾಷ್ಟ್ರಗಳಿಗೆ ಅನ್ನಿಸ ಹತ್ತಿತು ಮತ್ತು ಇದರಿಂದಲೇ ರಾಷ್ಟ್ರಸಂಘ ಎಂಬ ಅಂತರರಾಷ್ಟ್ರೀಯ ಸಂಘಟನೆಯ ಸ್ಥಾಪನೆಯಾಯಿತು. ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಿಡಿಸಲು, ಚರ್ಚೆ ಮತ್ತು ಒಪ್ಪಂದ, ಮಾತುಕತೆ ನಡೆಸುವ ಒಂದು ಮಹತ್ವದ ವೇದಿಕೆಯ ರೂಪದಲ್ಲಿ ಅದು ಕಾರ್ಯ ನಡೆಸಿತು. ಯುದ್ಧ ನಡೆಯದಂತೆ ನೋಡಿಕೊಳ್ಳುವದೇ ರಾಷ್ಟ್ರಸಂಘದ ಮುಖ್ಯ ಜವಾಬ್ದಾರಿಯಾಗಿತ್ತು.

ಮೊದಲನೆಯ ಮಹಾಯುದ್ಧ ಮುಗಿದ ನಂತರ ಯುರೋಪದಲ್ಲಿ ಮತ್ತು ಯುರೋಪದ ಹೊರಗೂ ಅನೇಕ ಮಹತ್ವದ ಬದಲಾವಣೆಗಳಾದವು. ಉದಾ: ಯುರೋಪದಲ್ಲಿಯ ಹಿಂದಿನ ಸಾಮ್ರಾಜ್ಯಗಳು ನಾಶವಾದವು ಮತ್ತು ಅದರಿಂದ ಹೊಸ ರಾಷ್ಟ್ರಗಳು ಅಸ್ತಿತ್ವದಲ್ಲಿ ಬಂದವು.

ಆಫ್ರಿಕಾ ಮತ್ತು ಏಶಿಯಾ ಖಂಡಗಳಲ್ಲಿ ಯುರೋಪದ ಅನೇಕ ದೇಶಗಳ ವಸಾಹತುಗಳಿದ್ದವು. ಈ ವಸಾಹತುಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಚಳುವಳಿಗಳು ಪ್ರಾರಂಭವಾದವು. ಯುರೋಪಿನ ರಾಷ್ಟ್ರಗಳ ವರ್ಚಸ್ವಕ್ಕೆ ಈ ಚಳುವಳಿಗಳು ದೊಡ್ಡ ಆವ್ಹಾಹನೆ ನೀಡಿದವು.

ಮೊದಲನೆಯ ಮಹಾಯುದ್ಧದ ನಂತರ ಶಾಂತತೆಯನ್ನು ಪ್ರಸ್ಥಾಪಿಸಲು ರಾಷ್ಟ್ರಸಂಘದ ನಿರ್ಮಾಣವಾಯಿತು. ಆದರೆ ರಾಷ್ಟ್ರಸಂಘಕ್ಕೆ ಯುದ್ಧವನ್ನು ತಡೆಹಿಡಿಯಲು ಸಾಧ್ಯವಾಗಲಿಲ್ಲ, ಜರ್ಮನಿ, ಇಟಲಿ, ಸ್ಪೇನ, ಮುಂತಾದ ದೇಶಗಳಲ್ಲಿ ಸರ್ವಾಧಿಕಾರಿ ಆಡಳಿತ ಅಸ್ತಿತ್ವಕ್ಕೆ ಬಂದಿತು. ಈ ಎಲ್ಲ ಚಟುವಟಿಕೆಯ ಪರಿಣಾಮವು ಎರಡನೆಯ ಮಹಾಯುದ್ಧದಲ್ಲಿ ಆಯಿತು.



**ಮೊದಲನೆಯ ಮಹಾಯುದ್ಧದಲ್ಲಿ ಸಹಭಾಗಿಗಳಾದ ಭಾರತೀಯ ಸೈನಿಕರು.**


**ವಿಚಾರ ಮಾಡಿರಿ ಮತ್ತು ಬರೆಯಿರಿ.**

ಜರ್ಮನಿಯಲ್ಲಿ ಹಿಟ್ಲರನ ಸರ್ವಾಧಿಕಾರಿ ಆಡಳಿತದ ಉದಯವಾಯಿತು. ಜರ್ಮನಿಯಲ್ಲಿಯ ಪ್ರಜಾಪ್ರಭುತ್ವ ಪರಂಪರೆ ಬಲಶಾಲಿಯಾಗಿ ಇದ್ದಿದ್ದರೆ ಏನಾಗುತ್ತಿತ್ತು? ಸರ್ವಾಧಿಕಾರಿ ಆಡಳಿತ ಅಸ್ತಿತ್ವದಲ್ಲಿ ಬರಕೂಡದು. ಎಂದು ತಾವು ಯಾವ ಕಾಳಜಿ ತಗೆದುಕೊಳ್ಳಬೇಕು?

**ನಿಮಗೆ ಏನು ಅನ್ನಿಸುತ್ತದೆ ?**

ಯುದ್ಧವನ್ನು ತಡೆಹಿಡಿಯಲು ರಾಷ್ಟ್ರಸಂಘದ ನಿರ್ಮಾಣವಾಯಿತು. ಆದರೆ ಯುದ್ಧವನ್ನು ತಡೆಹಿಡಿಯುವಲ್ಲಿ ರಾಷ್ಟ್ರಸಂಘ ವಿಫಲವಾಯಿತು. ರಾಷ್ಟ್ರಸಂಘವು ಯುದ್ಧವನ್ನು ತಡೆಹಿಡಿಯಲು ಯಾವ ಉಪಾಯ ಯೋಜನೆಯನ್ನು ಮಾಡಬೇಕಾಗಿತ್ತು.

**ಎರಡನೆಯ ಮಹಾಯುದ್ಧ:-** 1939 ರಿಂದ 1945ರ ಕಾಲಾವಧಿಯಲ್ಲಿ ಎರಡನೆಯ ಮಹಾಯುದ್ಧವಾಯಿತು. ಮೊದಲನೆಯ ಮಹಾಯುದ್ಧಕ್ಕಿಂತ ಎರಡನೆಯ ಮಹಾಯುದ್ಧವು ಹೆಚ್ಚು ಸಂಹಾರಕಾರಕವಾಗಿತ್ತು. ಮೊದಲನೆಯ ಮಹಾಯುದ್ಧದೊಂದಿಗೆ ಹೋಲಿಸಿದರೆ



ಜಗತ್ತು - ರಾಜಕೀಯ (ಪ್ರಮುಖ ದೇಶಗಳು)
ರಶಿಯಾ
ಅಲಾಸ್ಕಾ (ಯು.ಎಸ್.ಎ.)
ಕೆನಡಾ
ಗ್ರೀನಲ್ಯಾಂಡ (ಡೆನ್ಮಾರ್ಕ್)
ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು
ಮೆಕ್ಸಿಕೋ
ಕ್ಯೂಬಾ
ಕೊಸ್ಟಾ ರಿಕಾ
ಪನಾಮಾ
ಗಯಾನಾ
ಇಕ್ವೆಡೋರ್
ಪೇರು
ಬ್ರಾಝಿಲ
ಪರಾಗ್ವೆ
ಚಿಲಿ
ಅರ್ಜೆಂಟಿನಾ
ಉರುಗ್ವೆ
ಆಯಿಸಲ್ಯಾಂಡ
ಯುನಾಯಟೆಡ್ ಕಿಂಗ್ಡಮ
ನಾರ್ವೆ
ಡೆನ್ಮಾರ್ಕ್
ಬೇಲಾರೂಸ
ಯುಕ್ರೇನ
ಫ್ರಾನ್ಸ
ಪೋರ್ತುಗಾಲ
ಸ್ಪೇನ್
ಮೊರೊಕ್ಕೋ
ತುರ್ಕಸ್ಥಾನ
ಸಿರಿಯಾ
ಇರಾಣ
ಅಲ್ಜೀರಿಯಾ
ಲಿಬಿಯಾ
ಈಜಿಪ್ತ
ಪಶ್ಚಿಮ ಸಹಾರಾ
ಮಾರಿಟಾನಿಯಾ
ಮಾಲಿ
ನಾಯಜರ
ಚಾಡ
ಸುದಾನ
ಸೇನೆಗಲ
ಗಿನಿ
ಸಿಯರಾಲಿಯೋನ
ಲಾಯಬೇರಿಯಾ
ಆಯವರಿ ಕೋಸ್ಟ
ನಾಯಜೇರಿಯಾ
ಗ್ಯಾಬನ
ಝೈರೆ
ಇಥಿಯೋಪಿಯಾ
ಸೋಮಾಲಿಯಾ
ಕೆನ್ಯಾ
ಟಾಂಝಾನಿಯಾ
ಅಂಗೋಲಾ
ನಾಮಿಬಿಯಾ
ಬೋತ್ಸವಾನಾ
ದಕ್ಷಿಣ ಆಫ್ರಿಕಾ
ಮಾದಾಗಾಸ್ಕರ
ಮಾರಿಶಿಸ
ಸೌದಿ ಅರೇಬಿಯಾ
ಕುವೈತ
ಓಮಾನ
ಮಾಲದಿವ
ಕಝಾಕಸ್ತಾನ
ಮಂಗೋಲಿಯಾ
ಚೀನ
ಉತ್ತರ ಕೊರಿಯಾ
ದಕ್ಷಿಣ ಕೊರಿಯಾ
ಜಪಾನ
ಭಾರತ
ಶ್ರೀಲಂಕಾ
ಮ್ಯಾನಮಾರ
ಥಾಯಲ್ಯಾಂಡ
ವಿಯೆಟನಾಮ
ತೈವಾನ
ಫಿಲಿಪಾಯಿನ್ಸ್
ಮಲೇಶಿಯಾ
ಇಂಡೋನೇಶಿಯಾ
ಪಾಪುಆ ನ್ಯೂಗಿನಿ
ಆಸ್ಟ್ರೇಲಿಯಾ
ನ್ಯೂಝಿಲ್ಯಾಂಡ
ಫಿಜಿ
ಅಂಟಾರ್ಕ್ಟಿಕಾ
ಉ.
0
5000 ಕಿಮೀ.
60⁰
30⁰ ಉ.
0⁰
30⁰ ದ.
60⁰
150⁰
120⁰
90⁰
60⁰
30⁰ ಪ.
0⁰
30⁰ ಪೂ.
60⁰
90⁰
120⁰
150⁰

ಇದು ಹೆಚ್ಚು ವ್ಯಾಪಕವಲ್ಲದೆ, ಈ ಯುದ್ಧದಲ್ಲಿ ಹೆಚ್ಚು ಪ್ರಗತಿಯುಳ್ಳ ತಂತ್ರಜ್ಞಾನದ ಬಳಕೆ ಮಾಡಲಾಗಿತ್ತು. ಈ ಯುದ್ಧದಲ್ಲಿ ಭಾಗವಹಿಸಿದ ರಾಷ್ಟ್ರಗಳ ಮೇಲೆ ಮತ್ತೊಮ್ಮೆ ಆರ್ಥಿಕ ಸಂಕಟ ಬಂದೊದಗಿತು.

**ಬರೆಯುತ್ತಾ ಇರಿ.**

1939 ರಿಂದ 1945ರ ಕಾಲಾವಧಿಯಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಗಿತ್ತು. ಇದೇ ಕಾಲದಲ್ಲಿ ಭಾರತದಲ್ಲಿ ಯಾವ ಚಟುವಟಿಕೆಗಳು ಆರಂಭವಾಗಿದ್ದವು?

ಮಹಾಯುದ್ಧದಿಂದ ಭಾರತದ ಮೇಲೆ ಯಾವ ಪರಿಣಾಮವಾಯಿತು ?

**ಎರಡನೆಯ ಮಹಾಯುದ್ಧದಲ್ಲಿ ಸಹಭಾಗಿಯಾದ ರಾಷ್ಟ್ರಗಳು**

| | |
|---|---|
| ಮಿತ್ರ ರಾಷ್ಟ್ರಗಳು | ಬ್ರಿಟನ, ಫ್ರಾನ್ಸ, ಆಷ್ಟ್ರೇಲಿಯಾ, ಕೆನಡಾ, ನ್ಯೂಝಿಲೆಂಡ, ಭಾರತ, ಸೋವ್ಹಿಯತ ರಶಿಯಾ, ಚೀನ, ಅಮೇರಿಕಾ. |
| ಅಕ್ಷ ರಾಷ್ಟ್ರಗಳು | ಜರ್ಮನಿ, ಜಪಾನ, ಇಟಲಿ. |

ಎರಡನೆಯ ಮಹಾಯುದ್ಧದಲ್ಲಿ ಅಮೇರಿಕೆಯ ಮಹತ್ವದ ಸಹಭಾಗವಿತ್ತು. ಅಮೇರಿಕೆಯು ಅಣುಬಾಂಬನ್ನು ನಿರ್ಮಿಸಿತ್ತು. ಯುದ್ಧವನ್ನು ಮುಗಿಸಲು ಅಮೇರಿಕೆಯು ಜಪಾನಿನ ಹಿರೋಸೀಮಾ ಮತ್ತು ನಾಗಾಸಾಕಿ ಈ ಎರಡು ಪಟ್ಟಣಗಳ ಮೇಲೆ ಅನುಕ್ರಮವಾಗಿ 6 ಅಗಷ್ಟ ಮತ್ತು 9 ಅಗಷ್ಟ 1945 ರಂದು ಅಣುಬಾಂಬನ್ನು ಹಾಕಿತು. ಯುರೋಪದಲ್ಲಿ ಜರ್ಮನಿಯ ಪರಾಭವದ ನಂತರ ಮತ್ತು ಏಶಿಯಾದಲ್ಲಿ ಜಪಾನಿನ ಪರಾಭವದ ನಂತರ ಎರಡನೇ ಮಹಾಯುದ್ಧದ ಮುಕ್ತಾಯವಾಯಿತು. ಎರಡನೆಯ ಮಹಾಯುದ್ಧದ ನಂತರದ ಕಾಲದಲ್ಲಿ ಜಾಗತಿಕ ಮಟ್ಟದಲ್ಲಿ ಕೆಲ ಆಗು ಹೋಗುಗಳು ಘಟಿಸಿದವು. ಅದರಲ್ಲಿಯ ಒಂದು ಮಹತ್ವದ ಘಟನೆಯಂದರೆ ಶೀತಯುದ್ಧದ ಪ್ರಾರಂಭ ಹೌದು. 1945 ರಿಂದ 1991ರ ಪ್ರದೀರ್ಘಕಾಲದ ವರೆಗೆ ಶೀತಯುದ್ಧವು ವ್ಯಾಪಿಸಿತ್ತು. ಈ ಕಾಲದಲ್ಲಿಯ ಕೆಲವು ಬದಲಾವಣೆಗಳನ್ನು ನಾವು ಗಮನಿಸೋಣ.

**ಶೀತಯುದ್ಧ:** ಎರಡನೆಯ ಮಹಾಯುದ್ಧದಲ್ಲಿ ಮಿತ್ರರಾಗಿದ್ದ ಅಮೇರಿಕಾ ಮತ್ತು ಸೋವ್ಹಿಯತ್ ರಶಿಯಾ ಯುದ್ಧ ಮುಗಿದ ನಂತರ ಪರಸ್ಪರ ಸ್ಪರ್ಧಕರಾದವು. ಈ ಸ್ಪರ್ಧೆಯು ಜಾಗತಿಕ ರಾಜಕಾರಣದ 40-45 ವರ್ಷಗಳ ಕಾಲಖಂಡವನ್ನು ವ್ಯಾಪಿಸಿತು. ಈ ಎರಡೂ ದೇಶಗಳಲ್ಲಿ ಪ್ರತ್ಯಕ್ಷ ಯುದ್ಧ ನಡೆಯಲಿಲ್ಲ ಆದರೆ ಯುದ್ಧವು ಯಾವಾಗ ನಡೆಯುವದೋ ಎಂಬ ಯುದ್ಧದ ವಾತಾವರಣ ನಿರ್ಮಾಣವಾಯಿತು. ಪ್ರತ್ಯಕ್ಷ ಯುದ್ಧ ನಡೆಯದಿದ್ದರೂ ಯುದ್ಧದ ವಾತಾವರಣದ ವರ್ಣನೆಯನ್ನು ಶೀತಯುದ್ಧ ವೆಂದು ಹೇಳಬಹುದು. ಈ ಕಾಲದಲ್ಲಿ ಅಮೇರಿಕೆಯು ಮಹಾಶಕ್ತಿಶಾಲಿ ದೇಶವಾಗಿದ್ದರೂ ಕೂಡಾ ಸೋವ್ಹಿಯತ್ ರಶಿಯಾವು ಸಹ ಅಣ್ವಸ್ತ್ರಗಳ ನಿರ್ಮಾಣ ಮಾಡಿ ತನ್ನ ಸೈನಿಕ ಸಾಮರ್ಥ್ಯವನ್ನು ಹೆಚ್ಚಿಸಿ ಮಹಾಶಕ್ತಿಶಾಲಿಯಾಗಲು ಪ್ರಯತ್ನಿಸಿತು. ಅಮೇರಿಕಾ ಮತ್ತು ಸೋವ್ಹಿಯತ್ ರಶಿಯಾ ಈ ಎರಡು ಮಹಾಶಕ್ತಿಗಳಲ್ಲಿಯ ಸಂಘರ್ಷ, ಸತ್ತೆಗಾಗಿ ಸ್ಪರ್ಧೆ, ಶಸ್ತ್ರಾಸ್ತ್ರ ಸ್ಪರ್ಧೆ ವಿಚಾರಗಳಲ್ಲಿಯ ಮತಭೇದ, ಅಸೂಹೆ, ಒಬ್ಬರೊಬ್ಬರನ್ನು ಮುಗಿಸುವ ವೃತ್ತಿ ಈ ಎಲ್ಲ ಕಾರಣಗಳಿಂದ ಶೀತಯುದ್ಧವು ಪ್ರಾರಂಭವಾಗಿತ್ತು.

**ಶೀತಯುದ್ಧದ ಪರಿಣಾಮ:**

- **ಸೈನಿಕ ಸಂಘಟನೆಗಳ ನಿರ್ಮಾಣ:** ಶೀತಯುದ್ಧದ ಕಾಲದಲ್ಲಿ ಎರಡೂ ಮಹಾಶಕ್ತಿ ದೇಶಗಳು ಸೈನಿಕ ಸಂಘಟನೆಗಳನ್ನು ನಿರ್ಮಿಸಿದ್ದವು. ಅವುಗಳಲ್ಲಿ ಸೇರ್ಪಡೆಯಾಗುವ ರಾಷ್ಟ್ರಗಳ ಸಂರಕ್ಷಣೆಯ ಹೊಣೆಯನ್ನು ಆಯಾ ಮಹಾಶಕ್ತಿಗಳು ತಗೆದುಕೊಂಡಿದ್ದವು. ನಾಟೊ (NATO: North Atlantic Treaty Organization) ಇದು ಅಮೇರಿಕೆಯ ಅಧಿಪತ್ಯದಲ್ಲಿರುವ ಸೈನಿಕ ಸಂಘಟನೆಯಾಗಿತ್ತು. ಆದರೆ ವಾರ್ಸಾ ಕರಾರ ಇದು ಸೋವಿಯತ್ ರಶಿಯಾದ ಸೈನಿಕ ಸಂಘಟನೆ ಯಾಗಿತ್ತು.

**ನಿಮಗೆ ಏನು ಅನ್ನಿಸುತ್ತದೆ ?**

* ತಂತ್ರಜ್ಞಾನದಲ್ಲಿಯ ಪ್ರಗತಿ ಮತ್ತು ಅಂತರರಾಷ್ಟ್ರೀಯ ಶಾಂತತೆ ಇವುಗಳಲ್ಲಿ ಏನಾದರು ಸಂಬಂಧ ವಿರುತ್ತದೆಯೆ?
* ಮಾನವ ಕಲ್ಯಾಣಕ್ಕಾಗಿ ತಂತ್ರಜ್ಞಾನದ ಉಪಯೋಗವನ್ನು ಹೇಗೆ ಮಾಡಬಹುದು

- **ಜಗತ್ತಿನ ದ್ವಿಧ್ರುವೀಕರಣ:** ಶೀತಯುದ್ಧದ ಕಾಲದಲ್ಲಿ ಜಗತ್ತಿನ ಬಹಳಷ್ಟು ದೇಶಗಳು ಈ ಎರಡು ಶಕ್ತಿಬಣಗಳಲ್ಲಿ ಸೇರ್ಪಡೆಯಾಗಿದ್ದವು. ರಾಷ್ಟ್ರಗಳು ಹೀಗೆ ಎರಡು ಗುಂಪಿನಲ್ಲಿ ಹಂಚಿ ಹೋಗುವದಕ್ಕೆ ದ್ವಿಧ್ರುವೀಕರಣ ಎನ್ನುವರು. ಇದರಿಂದ ಶೀತಯುದ್ಧದ ವಾತಾವರಣ ಹೆಚ್ಚಿ ಭೀಕರ ಪರಿಸ್ಥಿತಿ ನಿರ್ಮಾಣವಾಯಿತು.

**ಇದನ್ನು ಮಾಡಿ ನೋಡಿರಿ.**

ಕ್ಯೂಬಾದ ಸಂಘರ್ಷ (1962) ಇದು ಶೀತಯುದ್ಧ ಕಾಲದ ಒಂದು ಅತ್ಯಂತ ಮಹತ್ವದ ಘಟನೆಯಾಗಿತ್ತು. ಈ ಸಂಘರ್ಷದ ಕುರಿತು ಹೆಚ್ಚಿನ ಮಾಹಿತಿಯನ್ನು ದೊರಕಿಸಿಕೊಳ್ಳಿರಿ.



**ನಿಮಗೆ ಗೊತ್ತಿದೆಯೇ?**

1917 ರಲ್ಲಿ ರಶಿಯಾದಲ್ಲಿ ಸಾಮ್ಯವಾದಿ ಕ್ರಾಂತಿಯಾಯಿತು ಮತ್ತು ಅದರಿಂದ ಸೋವ್ಹಿಯತ್ ರಶಿಯಾವು ಅಸ್ತಿತ್ವದಲ್ಲಿ ಬಂದಿತು. ಅಲ್ಪಾವಧಿಯಲ್ಲಿಯೇ ಸೋವ್ಹಿಯತ್ ರಶಿಯಾವು ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಮಹಾಸತ್ತೆ ಎಂದು ಆಕಾರ ಪಡೆಯಿತು. ಆದರೆ ಅಮೇರಿಕಾ ಮತ್ತು ಸೋವ್ಹಿಯತ್ ರಶಿಯಾಗಳಲ್ಲಿ ಮತಭೇದಗಳಿದ್ದವು.

- ಅಮೇರಿಕೆಯು ಬಂಡವಾಳವನ್ನು ಪುರಸ್ಕರಿಸುವ ಪ್ರಜಾ ಪ್ರಭುತ್ವ ರಾಜ್ಯವಾಗಿದ್ದರೆ, ಸೋವ್ಹಿಯತ್ ರಶಿಯಾವು ಸಮಾಜವಾದ ಮತ್ತು ಒಂದೇ ಪಕ್ಷದ ಸರ್ವಾಧಿಕಾರವನ್ನು ಪುರಸ್ಕರಿಸುವ ರಾಜ್ಯವಾಗಿತ್ತು. ಈ ಎರಡೂ ಮಹಾಶಕ್ತಿ ದೇಶಗಳಿಗೆ ಜಗತ್ತಿನಲ್ಲಿ ತಮ್ಮ ವರ್ಚಸ್ವವನ್ನು ಹೆಚ್ಚಿಸುವದಿತ್ತು. ಅಮೇರಿಕೆಗೆ ಬಂಡವಾಳ ಶಾಹಿಯ ಪ್ರಸಾರ ಮಾಡುವದಿದ್ದರೆ. ಸೋವ್ಹಿಯತ್ ರಶಿಯಾಗೆ ಸಮಾಜವಾದದ ಪ್ರಸಾರ ಮಾಡುವದಿತ್ತು.
- ತಮ್ಮ ಪ್ರಭಾವವನ್ನು ಹೆಚ್ಚಿಸಲು ಎರಡೂ ಮಹಾಶಕ್ತಿ ದೇಶಗಳು ಚಿಕ್ಕಚಿಕ್ಕ ದೇಶಗಳನ್ನು ತಮ್ಮ ತಮ್ಮ ಗುಂಪಿನಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಹತ್ತಿದವು. ಇದರ ಪರಿಣಾಮವಾಗಿ ಯುರೋಪದ ವೈಚಾರಿಕ ಮಟ್ಟದಲ್ಲಿ ವಿಭಜನೆಯಾಯಿತು. ಪಶ್ಚಿಮ ಯುರೋಪ ಮತ್ತು ಅಲ್ಲಿಯ ದೇಶಗಳು ಅಮೇರಿಕೆಯ ಗುಂಪಿನಲ್ಲಿ ಸೇರಿಕೊಂಡವು. ಆದರೆ ಪೂರ್ವ ಯುರೋಪದಲ್ಲಿಯ ದೇಶಗಳು ಸೋವ್ಹಿಯತ್ ರಶಿಯಾದ ಗುಂಪಿನಲ್ಲಿ ಸೇರ್ಪಡೆಯಾದವು. ತಮ್ಮ ತಮ್ಮ ಗುಂಪಿನಲ್ಲಿಯ ರಾಷ್ಟ್ರಗಳಿಗೆ ಸೈನಿಕ ಮತ್ತು ಆರ್ಥಿಕ ಸಹಾಯವನ್ನು ಕೊಡುವ ಧೋರಣೆಯನ್ನು ಈ ಮಹಾಶಕ್ತಿಗಳು ಸ್ವೀಕರಿಸಿದವು.

- **ಶಸ್ತ್ರಾಸ್ತ್ರ ಸ್ಪರ್ಧೆ:** ಈ ಎರಡೂ ಶಕ್ತಿಬಣಗಳು. ಒಂದನ್ನೊಂದು ಹೆದರಿಸಲು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಶಸ್ತ್ರಾಸ್ತ್ರಗಳ ನಿರ್ಮಾಣವನ್ನು ಮಾಡಹತ್ತಿದವು. ಹೆಚ್ಚೆಚ್ಚು ಸಂಹಾರಕಾರಕ ಶಸ್ತ್ರಾಸ್ತ್ರಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಮತ್ತು ಅದಕ್ಕೆ ಬೇಕಾಗುವ ತಂತ್ರಜ್ಞಾನವನ್ನು ದೊರಕಿಸಲು ಸ್ಪರ್ಧೆ ಪ್ರಾರಂಭವಾಯಿತು. ಆದರೆ ಶಸ್ತ್ರಾಸ್ತ್ರ ಸ್ಪರ್ಧೆಯಿಂದ ಜಾಗತಿಕ ಶಾಂತತೆಗೆ ಧಕ್ಕೆ ತಗಲಬಹುದೆಂಬ ಅರಿವು ಎರಡೂ ಶಕ್ತಿಬಣಗಳಿಗೆ ಒಂದು ಶಸ್ತ್ರಾಸ್ತ್ರ ನಿಯಂತ್ರಣದ ಮತ್ತು ನಿಃಶಸ್ತ್ರೀಕರಣದ ಪ್ರಯತ್ನವನ್ನು ಇದೇ ಕಾಲದಲ್ಲಿ ಮಾಡಲಾಯಿತು.
- **ಪ್ರಾದೇಶಿಕ ಸಂಘಟನೆಗಳ ನಿರ್ಮಾಣ-** ಮಹಾಸತ್ತೆಗಳ ಸ್ಪರ್ಧೆಯಲ್ಲಿ ವಿಕಸನಶೀಲ ರಾಷ್ಟ್ರಗಳು ಪರಸ್ಪರರಿಗೆ ಸಹಾಯ ಮಾಡಲು ತಮ್ಮ ತಮ್ಮಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಸಂಘಟನೆಗಳ ನಿರ್ಮಾಣ ಮಾಡಿದವು. ಅವುಗಳಿಗೆ ಆರ್ಥಿಕ ವಿಕಾಸ ಮಹತ್ವದ್ದಾಗಿತ್ತು. ಯುರೋಪದಲ್ಲಿಯ ದೇಶಗಳು ಯುರೋಪಿನ ಆರ್ಥಿಕ ಸಂಘದ ನಿರ್ಮಾಣ ಮಾಡಿದರೆ ಆಗ್ನೆಯ ಏಶಿಯಾದ ದೇಶಗಳು (ಸಿಂಗಾಪುರ, ಥಾಯಲ್ಯಾಂಡ, ಮಲೇಶಿಯಾ, ಇಂಡೋನೇಶಿಯಾ, ಫಿಲಿಪೈನ್ಸ ಮುಂತಾದವು) ಆಸಿಯಾನ (ASEAN) ಸಂಘಟನೆಯ ನಿರ್ಮಾಣ ಮಾಡಿದವು.
- **ಅಲಿಪ್ತವಾದ-** ಶೀತಯುದ್ಧ ಪ್ರಾರಂಭವಾದ ನಂತರದ ಕಾಲದಲ್ಲಿ ಒಂದೆಡೆ ಜಗತ್ತಿನ ದ್ವಿಧ್ರುವೀಕರಣ ವಾಗುತ್ತಿತ್ತು ಆದರೆ ಅದೇ ವೇಳೆಗೆ ಕೆಲದೇಶಗಳಿಗೆ ಎರಡೂ ಮಹಾಸತ್ತೆಗಳ ಸ್ಪರ್ಧೆಯಲ್ಲಿ ಭಾಗವಹಿಸುವದು ಬೇಡವಾಗಿತ್ತು. ಇಂಥ ರಾಷ್ಟ್ರಗಳು ಎರಡೂ ಶಕ್ತಿಬಣಗಳಲ್ಲಿ ಸೇರದೇ ಅಲಿಪ್ತವಾಗಿರುವ ಧೋರಣೆಯನ್ನು ಸ್ವೀಕರಿಸಿದವು. ಇದಕ್ಕೆ ಅಲಿಪ್ತವಾದ ಎನ್ನುವರು. ಅಲಿಪ್ತವಾದವು ಶೀತಯುದ್ಧ ಕಾಲದ ಒಂದು ಮಹತ್ವದ ಚಳುವಳಿಯಾಗಿತ್ತು.

ಎರಡನೆಯ ಮಹಾಯುದ್ಧದ ನಂತರ ಏಶಿಯಾ ಮತ್ತು ಆಫ್ರಿಕಾ ಖಂಡಗಳಲ್ಲಿಯ ಹೊಸದಾಗಿ ಸ್ವತಂತ್ರವಾದ ದೇಶಗಳು ಅಲಿಪ್ತತೆಯ ವಿಚಾರಕ್ಕೆ ಬೆಂಬಲ ನೀಡಿದವು ಮತ್ತು ಇದೊಂದು ಮಹತ್ವದ ಚಳುವಳಿಯಾಯಿತು. ಭಾರತದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೇಹರು, ಯುಗೋಸ್ಲಾವ್ಹಿಯಾದ ಅಧ್ಯಕ್ಷ ಮಾರ್ಶಲ ಟಿಟೊ, ಇಜಿಪ್ತದ ಅಧ್ಯಕ್ಷ ಗಮಾಲ ಅಬ್ದುಲ ನಾಸೇರ, ಇಂಡೋನೇಶಿಯಾದ ರಾಷ್ಟ್ರಾಧ್ಯಕ್ಷ ಡಾ. ಅಹಮ್ಮದ ಸುಕಾರ್ನೊ ಮತ್ತು ಘಾನಾದ ರಾಷ್ಟ್ರಾಧ್ಯಕ್ಷ ಕ್ವಾಮೆ ನಕ್ರುಮಾ ಇವರ ನೇತೃತ್ವದಲ್ಲಿ ಈ ಚಳುವಳಿಯ ಪ್ರಾರಂಭ 1961 ರಿಂದ ಆಯಿತು.

**ಅಲಿಪ್ತವಾದ ಚಳುವಳಿಯ ಮೂಲ್ಯಮಾಪನ:** ಅಲಿಪ್ತವಾದಿ ಚಳುವಳಿಯು ವಸಾಹತುವಾದ, ಸಾಮ್ರಾಜ್ಯವಾದ ಮತ್ತು ವಂಶವಾದ ಇವುಗಳಿಗೆ ವಿರೋಧಿಸಿದೆ. ಅಂತರರಾಷ್ಟ್ರೀಯ ಪ್ರಶ್ನೆಗಳನ್ನು ಶಾಂತತಾಮಯ ಮಾರ್ಗದಿಂದ ಬಿಡಿಸಲು ಈ ಚಳುವಳಿಯು ಪ್ರೋತ್ಸಾಹಿಸಿದೆ. ಪಂಡಿತ ಜವಾಹರಲಾಲ ನೇಹರುರವರ ಮಾರ್ಗದರ್ಶನದಲ್ಲಿ ಭಾರತವು ಈ ಚಳುವಳಿಯ ನೇತೃತ್ವ ವಹಿಸಿದೆ. ನಂತರದ ಕಾಲದಲ್ಲಿಯೂ ಭಾರತವು ಈ ಚಳುವಳಿಗೆ ಸಕ್ರಿಯ ಬೆಂಬಲ ನೀಡಿದೆ. ಶೀತಯುದ್ಧ

ಕೊನೆಗೊಂಡರೂ ಈ ಚಳುವಳಿಯ ಮಹತ್ವ ಕಡಿಮೆಯಾಗಿಲ್ಲ.

ಮಾನವತಾವಾದ, ಜಾಗತೀಕ ಶಾಂತತೆ ಮತ್ತು ಸಮಾನತೆ ಈ ಶಾಶ್ವತ ಮೂಲ್ಯಗಳ ಮೇಲೆ ಅಲಿಪ್ತವಾದ ಚಳುವಳಿಯು ಆಧರಿಸಿದೆ. ಈ ಚಳುವಳಿಯು ಅಲ್ಪವಿಕಸಿತ ರಾಷ್ಟ್ರಗಳಿಗೆ ಒಟ್ಟಿಗೆ ಬರುವಂತೆ ಪ್ರೇರೇಪಿಸಿದೆ.

ಅಂತರರಾಷ್ಟ್ರೀಯ ಪ್ರಶ್ನೆಯನ್ನು ಶಾಂತತಾಮಯ ಮಾರ್ಗದಿಂದ ಬಿಡಿಸಲು ಈ ಚಳುವಳಿಯು ಪ್ರೋತ್ಸಾಹಿಸಿದೆ. ನಿಃಶಸ್ತ್ರೀಕರಣ, ಮಾನವಿ ಹಕ್ಕುಗಳ ಸಂವರ್ಧನೆ ಇವುಗಳ ಕುರಿತು ಮಹತ್ವದ ಪಾತ್ರ ವಹಿಸುತ್ತ ಅಲಿಪ್ತವಾದಿ ಚಳುವಳಿಯು ಬಡ ಮತ್ತು ಅವಿಕಸಿತ ರಾಷ್ಟ್ರಗಳ ಸಮಸ್ಯೆಗಳನ್ನು ಕಠೋರವಾಗಿ ಮಂಡಿಸಿದೆ. ಒಂದು ಹೊಸ ಅಂತರರಾಷ್ಟ್ರಿಯ ಆರ್ಥಿಕ ವ್ಯವಸ್ಥೆ (NIEO)ಯ ಬೇಡಿಕೆಯನ್ನು ಈ ಚಳುವಳಿಯು ಮಾಡಿದೆ.

ಸ್ವಲ್ಪದರಲ್ಲಿ ಹೇಳುವದಾದರೆ, ಶೀತಯುದ್ಧವು ಕೊನೆಗೊಂಡರೂ ಅಲಿಪ್ತವಾದಿ ಚಳುವಳಿಯ ಮಹತ್ವ ಕಡಿಮೆಯಾಗಿಲ್ಲ. ಈ ಚಳುವಳಿಯು ಅಲ್ಪವಿಕಸಿತ ರಾಷ್ಟ್ರಗಳಿಗೆ ಒಟ್ಟಿಗೆ ಸೇರುವಂತೆ ಪ್ರೇರೆಪಿಸಿದೆ. ಈ ಚಳುವಳಿಯು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಹಲವಾರು ಪ್ರವಾಹವನ್ನು ಅಂತರರಾಷ್ಟ್ರೀಯ ರಾಜಕಾರಣದಲ್ಲಿ ತಂದಿದೆ. ಈ ರಾಷ್ಟ್ರಗಳಿಗೆ ಅಂತರರಾಷ್ಟ್ರಿಯ ರಾಜಕಾರಣದಲ್ಲಿ ಸನ್ಮಾನದಿಂದ ಎದ್ದು ನಿಲ್ಲುವ ಒಂದು ಹೊಸ ವಿಶ್ವಾಸ ನೀಡಿದೆ

**ಶೀತಯುದ್ಧದ ಅಂತ್ಯ:** 1945 ರಿಂದ ಜಾಗತಿಕ ರಾಜಕಾರಣದಲ್ಲಿ ಪ್ರಭಾವಶಾಲಿಯಾಗಿರುವ ಶೀತಯುದ್ಧವು ನಂತರ ಕೊನೆಗೊಂಡಿತು. ಶೀತಯುದ್ಧದ ಕೊನೆ ಇದೊಂದು ಹಿಂದಿನ ಶತಮಾನದ ಕೊನೆಗೆ ಆದ ಅತ್ಯಂತ ಮಹತ್ವದ ಘಟನೆ ಯಾಗಿತ್ತು. ಶೀತಯುದ್ಧದ ಕೊನೆಯಾಗಲು ಹಲವಾರು ಕಾರಣಗಳು ಕಾರಣೀಭೂತವಾಗಿದ್ದವು. ಉದಾಹರಣೆಗಾಗಿ–

(1) ಸೋವ್ಹಿಯತ್ ರಶಿಯಾವು ಮುಕ್ತ ಆರ್ಥಿಕ ಧೋರಣೆಯನ್ನು ಸ್ವಿಕರಿಸಿತು, ರಾಜ್ಯದ ಅರ್ಥವ್ಯವಸ್ಥೆಯ ಮೇಲಿನ ನಿಯಂತ್ರಣವನ್ನು ಶಿಥಿಲಗೊಳಿಸಿತು.

(2) ಸೋವ್ಹಿಯತ್ ರಶಿಯಾದ ಆಗಿನ ಅಧ್ಯಕ್ಷ ಮಿಖಾಯಿಲ್ ಗೋರ್ಬಾಚೆವ್ಹ ಇವರು ''ಪೆರೆಸ್ತ್ರೊಇಕಾ'' (ಪುನರ್ರಚನೆ) ಮತ್ತು ಗ್ಲಾಸನೋಸ್ತ (ಮುಕ್ತತೆ) ಈ ಧೋರಣೆಗಳನ್ನು ಅನುಷ್ಠಾನಕ್ಕೆ ತಂದರು. ಈ ಧೋರಣೆಗಳಿಂದ ಮಾಧ್ಯಮಗಳ ಮೇಲಿನ ನಿಯಂತ್ರಣ ಕಡಿಮೆಯಾಯಿತು. ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆಗಳಾದವು. ಅಂದರೆ ಈ ಕ್ಷೇತ್ರಗಳ ಪುನರ್ರಚನೆ ಮಾಡಲಾಯಿತು. ಇದರಿಂದ ಪ್ರಜಾಪ್ರಭುತ್ವಕರಣಕ್ಕೆ ಚಾಲನೆ ದೊರಕಿತು.

(3) ಪೂರ್ವ ಯುರೋಪದಲ್ಲಿಯ ಸೋವ್ಹಿಯತ್ ರಶಿಯಾದ ಪ್ರಭಾವದೊಳಗಿನ ದೇಶಗಳು ಬಂಡವಾಳ ಶಾಹಿ ಮತ್ತು ಪ್ರಜಾಪ್ರಭುತ್ವ ಮಾರ್ಗಗಳ ಸ್ವೀಕಾರ ಮಾಡಿದ್ದರಿಂದ ಅಲ್ಲಿಯ ಆಡಳಿತ ಬದಲಾದವು.

(4) ಸೋವ್ಹಿಯತ್ ರಶಿಯಾದ ವಿಘಟನೆ ಆಯಿತು ಮತ್ತು ಅದರಿಂದ ಅನೇಕ ಹೊಸ ಸ್ವತಂತ್ರ ರಾಷ್ಟ್ರಗಳ ನಿರ್ಮಾಣವಾಯಿತು. ರಶಿಯಾ ಇದು ಸೋವ್ಹಿಯತ್ ರಶಿಯಾದಲ್ಲಿಯ ಎಲ್ಲಕ್ಕೂ ದೊಡ್ಡ ದೇಶವಾಗಿತ್ತು.



**ಹೀಗೆ ಏಕೆ?**

- ನಾಟೊ ಈ ಸಂಘಟನೆ ಈಗಲೂ ಅಸ್ತಿತ್ವದಲ್ಲಿ ಇದೆ ಆದರೆ ಅದರ ಸ್ವರೂಪ ಈಗ ಸೈನಿಕ ಸ್ವರೂಪದ್ದಿಲ್ಲ. ಈ ಸಂಘಟನೆಯಲ್ಲಿ ಎಷ್ಟು ದೇಶಗಳಿವೆ ಎಂಬುದನ್ನು ಕಂಡುಹಿಡಿಯಿರಿ.

**ಶಬ್ದವನ್ನು ಸೂಚಿಸಿರಿ.**

ಒಂದೇ ಮಹಾಸತ್ತೆ ಇರುವದು. ಮತ್ತು ಅದರ ಮೇಲೆ ಯಾವಾಗ ಅನೇಕ ದೇಶಗಳು ಅವಲಂಬಿಸಿ ಇರುವವು ಆವಾಗ ಆ ಅಂತರರಾಷ್ಟ್ರೀಯ ವ್ಯವಸ್ಥೆಗೆ ನಾವು ಏಕಧ್ರುವೀಯ ವ್ಯವಸ್ಥೆ ಅನ್ನುತ್ತೇವೆ. ಎರಡು ಮಹಾಸತ್ತೆಗಳಲ್ಲಿ ಆದ ರಾಷ್ಟ್ರಗಳ ಹಂಚುವಿಕೆಗೆ ದ್ವಿಧ್ರುವೀಕರಣ ಅನ್ನುತ್ತಾರೆ.

ಯಾವಾಗ ಅನೇಕ ದೇಶಗಳು ಮಹಾಸತ್ತೆಯಂದು ಅಂತರರಾಷ್ಟ್ರೀಯ ವ್ಯವಸ್ಥೆಯಲ್ಲಿ ಆಕಾರಕ್ಕೆ ಬರುವವೊ ಆಗ ಆ ವ್ಯವಸ್ಥೆಗೆ ಏನನ್ನ ಬಹುದು ?

‘ಯುದ್ಧದ ಟೊಳ್ಳುತನ’ ಈ ವಿಷಯದ ಮೇಲೆ ನಿಬಂಧ ಬರೆಯಿರಿ. ಅದಕ್ಕಾಗಿ ಕೆಲವೊಂದು ಅಂಶಗಳನ್ನು ಇಲ್ಲಿ ಕೊಡಲಾಗಿದೆ. ಅದರ ಮೇಲೆ ಚರ್ಚೆ ಮಾಡಿರಿ.

* ಯಾವುದೇ ಸಮಸ್ಯೆ, ಚರ್ಚೆ ಮತ್ತು ಮಾತುಕತೆಯಿಂದ ಬಿಡಿಸಲು ಬರುವದು.
* ಯುದ್ಧದಿಂದ ಸಮಸ್ಯೆಗಳನ್ನು ಬಿಡಿಸಲಾಗುವದಿಲ್ಲ.
* ಯುದ್ಧದಿಂದ ವಿಕಾಸವು ಕುಂಠಿತವಾಗುವದು.

## ಶೀತಯುದ್ಧದ ನಂತರದ ಜಗತ್ತು

ಸೋವಿಯತ್ ರಶಿಯಾದ ವಿಘಟನೆಯೊಂದಿಗೆ ಶೀತಯುದ್ಧವು ಕೊನೆಗೊಂಡಿತು. ಒಂದು ಕಾಲದ ಈ ಮಹಾಸತ್ತೆಯ ವಿಘಟನೆಯಾದುದರಿಂದ ಜಾಗತಿಕ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳಾದವು. ಉದಾ;

- ಜಾಗತಿಕ ರಾಜಕಾರಣದಲ್ಲಿ ಅಮೇರಿಕಾ ಇದೊಂದೇ ಮಹಾಸತ್ತೆ ಉಳಿಯಿತು.
- ರಾಷ್ಟ್ರ-ರಾಷ್ಟ್ರಗಳಲ್ಲಿಯ ವ್ಯಾಪಾರ ಮತ್ತು ಆರ್ಥಿಕ ಸಂಬಂಧ ಬೆಳೆಯಲು ಅನುಕೂಲವಾದ ವಾತಾವರಣ ನಿರ್ಮಾಣವಾಯಿತು. ಬಂಡವಾಳ, ಶ್ರಮ, ಮಾರುಕಟ್ಟೆ, ಮಾಹಿತಿ ಇವುಗಳ ಪ್ರಸಾರ ಜಗತ್ತಿನ ತುಂಬಾ ಆಯಿತು. ಜನರಲ್ಲಿಯ ವಿಚಾರ-ಕಲ್ಪನೆಗಳ ಮುಕ್ತ ಸಂಚಾರವೂ ಆಗ ತೊಡಗಿತು.
- ಎಲ್ಲ ರಾಷ್ಟ್ರಗಳು ವ್ಯಾಪಾರಿ ಸಂಬಂಧಗಳಿಗೆ ಪ್ರಾಧಾನ್ಯತೆ ಕೊಡುವದಾಗಿ ನಿರ್ಧರಿಸಿದ್ದರಿಂದ ಅನ್ಯ ರಾಷ್ಟ್ರಗಳಿಗೆ ''ಸಹಾಯ'' ಮಾಡುವ ಕಲ್ಪನೆ ಹಿಂದೆ ಬಿದ್ದಿತು. ಬದಲಾಗಿ ಆರ್ಥಿಕ ಸಂಬಂಧ ಪ್ರಸ್ಥಾಪಿಸುವ ಪ್ರಯತ್ನವಾಗ ಹತ್ತಿತು. ಅಂದರೆ ಹಿಂದೆ ತಮ್ಮ ವಿರುದ್ಧವಾಗಿದ್ದ ಒಂದು ರಾಷ್ಟ್ರಕ್ಕೆ 'ಶತ್ರುರಾಷ್ಟ್ರ' ವೆಂದು ಸಂಭೋದಿಸುವ ಬದಲಾಗಿ ''ಸ್ಪರ್ಧಕ ರಾಷ್ಟ್ರ'' ಎಂಬ ಸಂಕಲ್ಪನೆ ಮುಂದೆ ಬಂದಿತು.
- ಸಂಯುಕ್ತ ರಾಷ್ಟ್ರಸಂಘ ಈ ಸಂಘಟನೆಯ ಜವಾಬ್ದಾರಿಯು ಹೆಚ್ಚಾಯಿತು. ಜಾಗತಿಕ ಶಾಂತತೆ ಮತ್ತು ಸುರಕ್ಷಿತತೆಯನ್ನು ಉಳಿಸಲು ಸಂಯುಕ್ತ ರಾಷ್ಟ್ರಸಂಘಕ್ಕೆ ಹೆಚ್ಚಿನ ಕಠೋರ ಪ್ರಯತ್ನ ಮಾಡಬೇಕಾಗುತ್ತಿದೆ.
- ಪರಿಸರ ರಕ್ಷಣೆ, ಮಾನವಿ ಹಕ್ಕುಗಳ ಜೋಪಾಸನೆ, ಸ್ತ್ರೀ-ಪುರುಷ ಸಮಾನತೆ, ನೈಸರ್ಗಿಕ ಸಂಕಟಗಳನ್ನು ಎದುರಿಸುವ ಅಂಶಗಳಿಗೆ ಜಾಗತಿಕ ಸ್ವರೂಪ ಪ್ರಾಪ್ತವಾಯಿತು.

**ಜಾಗತಿಕೀಕರಣ ಎಂದರೇನು?** ಶೀತಯುದ್ಧದ ನಂತರ ವ್ಯಾಪಾರ ಮತ್ತು ಆರ್ಥಿಕ ಸಂಬಂಧದಲ್ಲಿ ಮುಕ್ತತೆ ಬಂದಿತು. ಈ ಹಿಂದೆ ಹೇಳಿದ ಹಾಗೆ ಬಂಡವಾಳ, ಶ್ರಮ, ಮಾರುಕಟ್ಟೆ ಮತ್ತು ಮಾಹಿತಿಯ ಸಂಚಾರ ಜಗತ್ತಿನಲ್ಲೆಲ್ಲಾ ಆಗತೊಡಗಿತು. ಜಗತ್ತಿನಲ್ಲಿಯ ಜನರಲ್ಲಿ ವಿಚಾರ, ಕಲ್ಪನೆಗಳ ಕೊಡ-ಕೊಳ್ಳುವಿಕೆ ಹೆಚ್ಚಾಯಿತು. ಮಾಹಿತಿ ತಂತ್ರಜ್ಞಾನದಲ್ಲಿಯ ಕ್ರಾಂತಿಯಿಂದ ಜಗತ್ತಿನ ಘಟನೆ ಮತ್ತು ಚಟುವಟಿಕೆಗಳು ಎಲ್ಲೆಡೆ ತಿಳಿಯ ತೊಡಗಿದವು. ದೇಶಗಳ ಸೀಮಾರೇಷೆಗಳಿಗೆ ಹಿಂದಿನ ಹಾಗೆ ಮಹತ್ವ ಉಳಿದಿಲ್ಲ, ಈ ಎಲ್ಲ ಪ್ರಕ್ರಿಯೆಗಳಿಗೆ ಜಾಗತಿಕೀಕರಣ ವೆಂದು ಕರೆಯುತ್ತಾರೆ. ಜಾಗತಿಕೀಕರಣದ ಕೆಲ ಲಾಭಗಳ ಜೊತೆಗೆ ಹಾನಿಯೂ ಆಗಿದೆ. ಉದಾ: ವಿವಿಧ ರಾಷ್ಟ್ರಗಳ ಅರ್ಥವ್ಯವಸ್ಥೆಯು ಪರಸ್ಪರರೊಂದಿಗೆ ಜೋಡಿಸಿದ್ದರಿಂದ ವ್ಯಾಪಾರವು ಹೆಚ್ಚಾಗಿದೆ. ಆರ್ಥಿಕ ಒಟ್ಟುಗೂಡಿಸುವಿಕೆ ಹೆಚ್ಚಿದೆ. ಮಾರುಕಟ್ಟೆಯಲ್ಲಿ ಹೇರಳತೆ ಬಂದಿತು. ಆದರೆ ಅದರೊಂದಿಗೆ ಬಡ ಮತ್ತು ಶ್ರೀಮಂತ ರಾಷ್ಟ್ರಗಳಲ್ಲಿಯ ಕಂದಕ ಕಡಿಮೆಯಾಗಿಲ್ಲ.

ಈ ಪ್ರಕರಣದಲ್ಲಿ ನಾವು 1945 ರಿಂದ ಜಾಗತೀಕ ಆಗುಹೋಗುಗಳ ಅಭ್ಯಾಸ ಮಾಡಿದೆವು. ಶೀತಯುದ್ಧ ಕಾಲದ ಜಗತ್ತು, ಅದರಲ್ಲಿಯ ಶಸ್ತ್ರಾಸ್ತ್ರ ಸ್ಪರ್ಧೆ ಮತ್ತು ನಿಃಶಸ್ತ್ರಿಕರಣದ ಪ್ರಯತ್ನ ತಿಳಿದುಕೊಂಡಿದ್ದೇವೆ. ಜಾಗತಿಕೀಕರಣದ ಅರ್ಥವನ್ನೂ ಅಭ್ಯಸಿಸಿದ್ದೇವೆ. ಮುಂದಿನ ಪ್ರಕರಣದಲ್ಲಿ ನಾವು ಭಾರತದ ಪರರಾಷ್ಟ್ರ ಧೋರಣೆಯ ಅಭ್ಯಾಸ ಮಾಡುವವರಿದ್ದೇವೆ.

**ಶೋಧ ಮಾಡಿರಿ ಮತ್ತು ಸಹಭಾಗಿಗಳಾಗಿರಿ!**

ಪರಿಸರ ರಕ್ಷಣೆಗಾಗಿನ ಯಾವುದಾದರೂ ಎರಡು ಜಾಗತಿಕ ಸಂಘಟನೆಗಳ ಕುರಿತು ಮಾಹಿತಿಯನ್ನು ದೊರಕಿಸಿಕೊಳ್ಳಿರಿ. ಅವುಗಳ ಉದ್ದೇಶಗಳು ನಿಮಗೆ ಸರಿ ಅನ್ನಿಸಿದರೆ ಅವುಗಳಲ್ಲಿಯ ಸಹಭಾಗದ ಅವಸರ ಯಾವುದು ಎಂಬುದನ್ನು ಶೋಧಿಸಿರಿ.



## ಸ್ವಾಧ್ಯಾಯ

1. **ಕೆಳಗೆಕೊಟ್ಟ ಪರ್ಯಾಯಗಳಿಂದ ಯೋಗ್ಯ ಪರ್ಯಾಯ ಶಬ್ದವನ್ನಾರಿಸಿ ವಿಧಾನಗಳನ್ನು ಪೂರ್ಣ ಮಾಡಿರಿ.**

(1) ಸ್ವತಂತ್ರ ಮತ್ತು ಸಾರ್ವಭೌಮ ದೇಶಗಳಿಂದ ಕೂಡಿ ನಿರ್ಮಾಣವಾಗುವ ವ್ಯವಸ್ಥೆ -
(ಅ) ರಾಜಕೀಯ ವ್ಯವಸ್ಥೆ
(ಬ) ಅಂತರರಾಷ್ಟ್ರೀಯ ವ್ಯವಸ್ಥೆ
(ಕ) ಸಾಮಾಜಿಕ ವ್ಯವಸ್ಥೆ
(ಡ) ಇವುಗಳಲ್ಲಿ ಯಾವುದೂ ಇಲ್ಲ

(2) ರಾಷ್ಟ್ರಸಂಘದ ಮುಖ್ಯ ಹೊಣೆ (ಜವಾಬ್ದಾರಿ)-
(ಅ) ಯುದ್ಧವನ್ನು ತಡೆಹಿಡಿಯುವದು
(ಬ) ವಸಾಹತುಗಳ ಸ್ವಾತಂತ್ರ್ಯ
(ಕ) ರಾಷ್ಟ್ರಗಳ ಅರ್ಥ ವ್ಯವಸ್ಥೆ ಸುಧಾರಿಸುವದು
(ಡ) ನಿಃಶಸ್ತ್ರೀಕರಣ ಮಾಡುವದು

(3) ಶೀತಯುದ್ಧವು ………… ಈ ಘಟನೆಯಿಂದ ಮುಗಿಯಿತು.

(ಅ) ಸಂಯುಕ್ತ ರಾಷ್ಟ್ರಸಂಘದ ಸ್ಥಾಪನೆ

(ಬ) ಸೋವ್ಹಿಯತ್ ರಶಿಯಾದ ವಿಘಟನೆ

(ಕ) ಸೈನಿಕ ಸಂಘಟನೆಗಳ ನಿರ್ಮಿತಿ

(ಡ) ಕ್ಯೂಬಾದ ಸಂಘರ್ಷ

**2. ಕೆಳಗಿನ ವಿಧಾನಗಳು ಸರಿಯೋ, ತಪ್ಪೋ ಎಂಬುದನ್ನು ಸಕಾರಣ ಸ್ಪಷ್ಟಪಡಿಸಿರಿ.**

(1) ಮೊದಲನೆಯ ಮಹಾಯುದ್ಧದ ನಂತರ ರಾಷ್ಟ್ರ ಸಂಘದ ಸ್ಥಾಪನೆ ಯಾಯಿತು

(2) ಶೀತಯುದ್ಧದಿಂದಾಗಿ ಜಗತ್ತಿನ ಏಕಧ್ರುವೀಕರಣ ವಾಯಿತು

(3) ಮಿಖಾಯಿಲ ಗೋರ್ಬಾಚೆವ್ಹ ಇವರ ಧೋರಣೆಗಳಿಂದ ಪ್ರಜಾಪ್ರಭುತ್ವವಾದಕ್ಕೆ ಚಾಲನೆ ದೊರಕಿತು

**3. ಮುಂದಿನ ಸಂಕಲ್ಪನೆಯನ್ನು ಸ್ಪಷ್ಟಪಡಿಸಿರಿ.**

(1) ಶೀತಯುದ್ಧ (2) ಅಲಿಪ್ತವಾದ

(3) ಪರಸ್ಪರಾವಲಂಬನೆ (4) ದ್ವಿಧ್ರುವೀಕರಣ

(5) ಜಾಗತಿಕೀಕರಣ

**4. ಮುಂದಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ.**

(1) ಮೊದಲನೆ ಮಹಾಯುದ್ಧ ಮತ್ತು ಎರಡನೆ ಮಹಾಯುದ್ಧ ಇವುಗಳಲ್ಲಿ ಮುಂದಿನ ಅಂಶಗಳ ಸಹಾಯದಿಂದ ಹೊಂದಾಣಿಕೆ ಮಾಡಿರಿ.

| ಅಂಶಗಳು | ಮೊದಲನೆಯ ಮಹಾಯುದ್ಧ | ಎರಡನೆಯ ಮಹಾಯುದ್ಧ |
|---|---|---|
| 1. ಕಾಲಖಂಡ | | |
| 2. ಸಹಭಾಗಿ ರಾಷ್ಟ್ರಗಳು | | |
| 3. ಪರಿಣಾಮ – (ರಾಜಕೀಯ ಮತ್ತು ಆರ್ಥಿಕ) | | |
| 4. ಯುದ್ಧದ ನಂತರ ಸ್ಥಾಪನೆಯಾದ ಅಂತರರಾಷ್ಟ್ರೀಯ ಸಂಘಟನೆಗಳು | | |

(2) ಶೀತಯುದ್ಧದ ಕೊನೆಯಾಗಲು ಯಾವ ಅಂಶಗಳು ಕಾರಣಿಭೂತ ವಾಗಿದ್ದವು ?

(3) ಶೀತಯುದ್ಧದ ಸಮಾಪ್ತಿಯ ನಂತರ ಜಾಗತಿಕ ರಾಜಕಾರಣದಲ್ಲಿ ಯಾವ ಮಹತ್ವದ ಬದಲಾವಣೆಗಳಾದವು ?

**ಉಪಕ್ರಮ:**

(1) ಜಗತ್ತಿನಲ್ಲಿಯ ವಿವಿಧ ರಾಷ್ಟ್ರಗಳು ಪರಸ್ಪರರ ಮೇಲೆ ಅವಲಂಬಿಸಿ ಇರುತ್ತವೆ ಎಂಬುದನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿರಿ.

(2) ''ವಸುದೈವ ಕುಟುಂಬಕಮ್'' ಈ ಮೂಲ್ಯವು ಸಮಾಜದಲ್ಲಿ ಬೇರು ಬಿಡಲು ನೀವು ಏನು ಮಾಡುವವರಿದ್ದೀರಿ ಎಂಬುದನ್ನು ನಿಮ್ಮ ವರ್ಗದಲ್ಲಿ ಚರ್ಚೆ ಮಾಡಿರಿ.

C4CQ9Y

# 2 ಭಾರತದ ಪರರಾಷ್ಟ್ರ ಧೋರಣೆಯ ಆಗು ಹೋಗುಗಳು

ಈ ಪ್ರಕರಣದಲ್ಲಿ ನಾವು ಹೊಸದಾಗಿ ಏನು ಕಲಿಯುವವರು ಇದ್ದೇವೆ ?

ಅಂತರರಾಷ್ಟ್ರೀಯ ವ್ಯವಸ್ಥೆ, ಅದರ ಸ್ವರೂಪ ಮತ್ತು ಹಿಂದಿನ ಶತಮಾನದಲ್ಲಿಯ ಶೀತಯುದ್ಧ ಮತ್ತು ಅದರ ಪರಿಣಾಮ ಮುಂತಾದವುಗಳನ್ನು ತಿಳಿದುಕೊಂಡ ನಂತರ ಈಗ ನಾವು ಅವುಗಳಿಗೆ ಸಂಬಂಧಿಸಿದ ಅನ್ಯ ವಿಷಯಗಳ ಪರಿಚಯ ಮಾಡಿ ಕೊಳ್ಳುವವರಿದ್ದೇವೆ. ಅದನ್ನನುಸರಿಸಿ ಪರರಾಷ್ಟ್ರ ಧೋರಣೆಯ ಅರ್ಥ, ಅದರ ಮೇಲೆ ಪರಿಣಾಮ ಬೀರುವ ಘಟಕಗಳು ಅಲ್ಲದೆ ನಾವು ಭಾರತದ ಪರರಾಷ್ಟ್ರ ಧೋರಣೆಯ ಸ್ವರೂಪವನ್ನು ತಿಳಿದುಕೊಳ್ಳುವರಿದ್ದೇವೆ.

## ಪರರಾಷ್ಟ್ರ ಧೋರಣೆ:

**ಅರ್ಥ ಮತ್ತು ಮಹತ್ವ:** ಎಲ್ಲ ದೇಶಗಳು ಅಂತರರಾಷ್ಟ್ರಿಯ ವ್ಯವಸ್ಥೆಯ ಘಟಕವಾಗಿರುತ್ತವೆ. ಅದರಲ್ಲಿಯ ಯಾವುದೇ ರಾಷ್ಟ್ರವು ಎಲ್ಲ ರೀತಿಯಿಂದ ಸ್ವಯಂ ಪೂರ್ಣವಾಗಿರುವದಿಲ್ಲ. ಅಂತೆಯೇ ಅಂತರರಾಷ್ಟ್ರಿಯ ವ್ಯವಸ್ಥೆಯಲ್ಲಿ ಪರಸ್ಪರಾವಲಂಬನ ಇರುವದು ಇದು ನಮಗೆ ತಿಳಿದಿದೆ. ಈ ಪರಸ್ಪರಾವಲಂಬನ ಕೇವಲ ಕೆಲ ಬೆರಳೆಣಿಕೆಗಳಷ್ಟು ದೇಶಗಳ ಲಾಭಕ್ಕಾಗಿ ಇಲ್ಲವೆ ಹಿತಕ್ಕಾಗಿ ಇರಕೂಡದು. ಅದು ಪ್ರತಿಯೊಂದು ರಾಷ್ಟ್ರದ ಹಿತಕ್ಕಾಗಿ ಇರಬೇಕು. ಎಂದು ಪ್ರಯತ್ನಿಸಬೇಕಾಗುವದು. ಯಾವ ರಾಷ್ಟ್ರದೊಂದಿಗೆ ಗೆಳೆತನ ಮಾಡಬೇಕು, ಯಾವ ಗುಂಪಿನಲ್ಲಿ ಸೇರ್ಪಡೆಯಾಗಬೇಕು ಇಲ್ಲವೆ ಅಂತರರಾಷ್ಟ್ರಿಯ ರಾಜಕಾರಣದಲ್ಲಿ ಯಾವ ಪಾತ್ರ ವಹಿಸಬೇಕು ಮುಂತಾದವುಗಳ ಕುರಿತು ಪ್ರತಿಯೊಂದು ದೇಶಕ್ಕೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುವದು. ಹೀಗೆ ನಿರ್ಣಯ ತೆಗೆದುಕೊಳ್ಳುವಾಗ ಅದು ವಿಚಾರಪೂರ್ವಕವಾಗಿ ತೆಗೆದುಕೊಳ್ಳಬೇಕಾಗುವದು. ಈ ವೈಚಾರಿಕ ಚೌಕಟ್ಟಿಗೆ ಪರರಾಷ್ಟ್ರ ಧೋರಣೆ ಎನ್ನುವರು. ಪ್ರತಿಯೊಂದು ಸ್ವತಂತ್ರ ಮತ್ತು ಸಾರ್ವಭೌಮ ರಾಷ್ಟ್ರವು ತಮ್ಮ ಪರರಾಷ್ಟ್ರ ಧೋರಣೆಯನ್ನು ನಿರ್ಧರಿಸುವದು. ಅಂತೆಯೇ ರಾಷ್ಟ್ರಗಳಲ್ಲಿಯ ಪರಸ್ಪರ ಸಂಬಂಧಗಳ ಅಭ್ಯಾಸಮಾಡುವ ಅಂತರರಾಷ್ಟ್ರಿಯ ರಾಜಕಾರಣದಲ್ಲಿ ಪರರಾಷ್ಟ್ರ ಧೋರಣೆಗೆ ಬಹಳ ಮಹತ್ವ ಇರುವದು.



**ಇದು ನಿಮಗೆ ಗೊತ್ತಿದೆಯೇ ?**

ನಮಗೆ ಯಾವಾಗ ಒಂದು ದೇಶದ ಅಭ್ಯಾಸ ಮಾಡುವದಿದೆಯೋ ಆವಾಗ ಆ ದೇಶದ ಸಂವಿಧಾನ ಮತ್ತು ಪರರಾಷ್ಟ್ರ ಧೋರಣೆಯನ್ನು ತಿಳಿದುಕೊಳ್ಳುವದು ಅವಶ್ಯಕವಾಗಿ ಇರುತ್ತದೆ.

**ರಾಷ್ಟ್ರೀಯ ಹಿತಸಂಬಂಧ:** ಪರರಾಷ್ಟ್ರ ಧೋರಣೆ ಅಂದರೇನು? ಇದನ್ನು ನಾವು ಸ್ವಲ್ಪದರಲ್ಲಿ ತಿಳಿದುಕೊಂಡಿದ್ದೇವೆ. ರಾಷ್ಟ್ರಿಯ ಹಿತಸಂಬಂಧ ಮತ್ತು ಪರರಾಷ್ಟ್ರ ಧೋರಣೆ ಇವುಗಳ ಬಹಳ ಸಮೀಪದ ಸಂಬಂಧ ಇರುತ್ತದೆ. ರಾಷ್ಟ್ರಿಯ ಹಿತಸಂಬಂಧಗಳ ಜೋಪಾಸನೆಯನ್ನು ಪರರಾಷ್ಟ್ರ ಧೋರಣೆಗಳ ಮೂಲಕ ಮಾಡಲಾಗುವದು. ಅಂತೆಯೇ ಪರರಾಷ್ಟ್ರ ಧೋರಣೆಯ ವಿಸ್ತೃತ ಅಭ್ಯಾಸ ಮಾಡುವ ಮುಂಚೆ ನಮಗೆ ರಾಷ್ಟ್ರಿಯ ಹಿತಸಂಬಂಧಗಳ ಅರ್ಥ ಮತ್ತು ಅದರ ಮಹತ್ವವನ್ನು ತಿಳಿದುಕೊಳ್ಳಬೇಕಾಗುವದು.

ರಾಷ್ಟ್ರೀಯ ಹಿತಸಂಬಂಧವೆಂದರೆ, ತಮ್ಮ ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವವನ್ನು ಸುರಕ್ಷಿತವಾಗಿಡಲು ಮಾಡಬೇಕಾದ ಉಪಾಯ ಯೋಜನೆ. ತಮ್ಮ ಆರ್ಥಿಕ ವಿಕಾಸವನ್ನು ಸಾಧಿಸಿ, ತಮ್ಮ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಪ್ರಯತ್ನವೂ ರಾಷ್ಟ್ರಿಯ ಹಿತಸಂಬಂಧದಲ್ಲಿ ಸಮಾವೇಶವಾಗುವದು. ತಮ್ಮ ರಾಷ್ಟ್ರಕ್ಕಾಗಿ ಲಾಭದ ಮತ್ತು ಯಾವುದು ಒಳ್ಳೆಯದಾಗಿದೆ ಎಂಬುದರ ವಿಚಾರಮಾಡಿ ಯಾವಾಗ ನಿರ್ಣಯವನ್ನು ತೆಗೆದುಕೊಳ್ಳಲಾಗುವದೋ ಅದಕ್ಕೆ ನಾವು ರಾಷ್ಟ್ರಿಯ ಹಿತಸಂಬಂಧದ ಜೋಪಾಸನೆ ಎನ್ನುವೆವು. ಈ ಅರ್ಥದಿಂದ ಯಾವುದೇ ರಾಷ್ಟ್ರದ ರಾಷ್ಟ್ರಿಯ ಹಿತಸಂಬಂಧಗಳಲ್ಲಿ ಕೆಳಗಿನ ಘಟಕಗಳ ಸಮಾವೇಶ ವಾಗಿರುವದು.

- ತಮ್ಮ ದೇಶದ ಸ್ವಾತಂತ್ರ್ಯ, ಸಾರ್ವಭೌಮತ್ವ ಮತ್ತು ಅಖಂಡತೆಯ ರಕ್ಷಣೆ ಮಾಡುವದು. ಅಂದರೆ ಸಂರಕ್ಷಣೆ ಇದು ಸರ್ವೋಚ್ಚ ರಾಷ್ಟ್ರೀಯ ಹಿತವಾಗಿರುವದು.
- ರಾಷ್ಟ್ರೀಯ ವಿಕಾಸ ಇದು ಕೂಡಾ ಒಂದು ಮಹತ್ವದ ರಾಷ್ಟ್ರೀಯ ಹಿತವಾಗಿದೆ. ಆರ್ಥಿಕ ದೃಷ್ಟಿಯಿಂದ ದುರ್ಬಲವಾಗಿರುವ ರಾಷ್ಟ್ರಕ್ಕೆ ತಮ್ಮ ಸ್ವಾತಂತ್ರ್ಯದ ರಕ್ಷಣೆ ಮಾಡುವದು ಕಠಿಣವಾಗುತ್ತದೆ. ಅಂತೆಯೇ ಸಂರಕ್ಷಣೆಯ ನಂತರ ಆರ್ಥಿಕ ವಿಕಾಸ ಇದು ರಾಷ್ಟ್ರಿಯ ಹಿತ ಮಹತ್ವದ್ದೆಂದು ತಿಳಿಯಲಾಗುತ್ತದೆ.

**ರಾಷ್ಟ್ರೀಯ ಹಿತಸಂಬಂಧ ಮತ್ತು ಪರರಾಷ್ಟ್ರ ಧೋರಣೆ:** ಸಂರಕ್ಷಣೆ ಮತ್ತು ಆರ್ಥಿಕ ವಿಕಾಸ ಈ ರಾಷ್ಟ್ರಿಯ ಹಿತಸಂಬಂಧಗಳ ಜೋಪಾಸನೆ ಆಗಬಹುದೆಂಬ ದೃಷ್ಟಿಯಿಂದ ಪರರಾಷ್ಟ್ರ ಧೋರಣೆಯನ್ನು ನಿರ್ಧರಿಸಲಾಗುತ್ತದೆ. ಅಂತೆಯೇ ರಾಷ್ಟ್ರಿಯ ಹಿತಸಂಬಂಧ ಇದು ಉದ್ದಿಷ್ಟವೆಂದು ತಿಳಿಯಲಾಗುತ್ತದೆ. ಮತ್ತು ಪರರಾಷ್ಟ್ರ ಧೋರಣೆ ಇದು ಅದನ್ನು ದೊರಕಿಸುವ ಸಾಧನವಾಗಿದೆ. ಪರಿಸ್ಥಿತಿ ಮತ್ತು ಕಾಲಕ್ಕೆ

ತಕ್ಕಂತೆ ರಾಷ್ಟ್ರದ ಉದ್ದೇಶಗಳಲ್ಲಿ ಬದಲಾವಣೆ ಆಗುತ್ತವೆ. ಅದಕ್ಕನುಸರಿಸಿ ರಾಷ್ಟ್ರಿಯ ಹಿತಸಂಬಂಧಗಳಲ್ಲಿಯೂ

**ನಡೆಯಿರಿ, ಚರ್ಚೆ ಮಾಡೋಣ.**

ಪರಿಸ್ಥಿತಿ ಮತ್ತು ಕಾಲಕ್ಕೆ ತಕ್ಕಂತೆ ಪರರಾಷ್ಟ್ರ ಧೋರಣೆಯಲ್ಲಿ ಬದಲಾವಣೆಯಾಗುತ್ತಿದ್ದರೂ ಕೆಲ ದೇಶಗಳ ಪರರಾಷ್ಟ್ರ ಧೋರಣೆ ಕೆಲ ಶಾಶ್ವತ ಮೂಲ್ಯಗಳ ಮೇಲೆ ಆಧರಿಸಿರುತ್ತದೆ. ಉದಾ: ಭಾರತದ ಪರರಾಷ್ಟ್ರ ಧೋರಣೆ ಅಂತರರಾಷ್ಟ್ರಿಯ ಶಾಂತತೆ, ಮಾನವಿ ಹಕ್ಕುಗಳು, ಸುರಕ್ಷಿತತೆ ಈ ಮೂಲ್ಯಗಳ ಮೇಲೆ ಆಧರಿಸಿದೆ. ಅದನ್ನು ಸಾಧ್ಯಗೊಳಿಸಲು ಪರರಾಷ್ಟ್ರ ಧೋರಣೆಯಲ್ಲಿ ಯಾವ ಅಂಶಗಳು ಇರಬೇಕೆಂದು ನಿಮಗೆ ಅನಿಸುತ್ತದೆ ?

ಬದಲಾವಣೆ ಆಗುತ್ತದೆ. ಈ ಬದಲಾವಣೆಯ ಪ್ರತಿಬಿಂಬವು ಪರರಾಷ್ಟ್ರ ಧೋರಣೆಯಲ್ಲಿ ಕಂಡುಬರುವದು. ಅಂತೆಯೇ ಪರರಾಷ್ಟ್ರ ಧೋರಣೆ ಪ್ರವಾಹಿಯಾಗಿರುತ್ತದೆ.

**ಪರರಾಷ್ಟ್ರ ಧೋರಣೆಯನ್ನು ನಿಶ್ಚಿತಗೊಳಿಸುವ ಘಟಕಗಳು:** ಅಂತರರಾಷ್ಟ್ರಿಯ ವ್ಯವಸ್ಥೆಯಲ್ಲಿ ಯಾವ ರಾಷ್ಟ್ರದೊಂದಿಗೆ ಯಾವ ರೀತಿಯ ಸಂಬಂಧ ಇಡಬೇಕು ಎಂಬುದು ಪರರಾಷ್ಟ್ರ ಧೋರಣೆಯ ಆಧಾರದಿಂದ ನಿರ್ಧರಿಸಲಾಗುವದು. ಆದರೆ ಪರರಾಷ್ಟ್ರ ಧೋರಣೆಯನ್ನು ನಿರ್ಧರಿಸುವಾಗ ಅನೇಕ ಘಟಕಗಳ ಪರಿಣಾಮ ಅದರ ಮೇಲಾಗುತ್ತಿರುತ್ತದೆ.

**1) ದೇಶದ ಭೌಗೋಲಿಕ ಸ್ಥಾನ:** ನೀವು ದುಂಡಾದ ಪೃಥ್ವಿ ನೋಡಿರಬಹುದು ಇಲ್ಲವೆ ಜಗತ್ತಿನ ರಾಜಕೀಯ ನಕಾಶೆಯನ್ನು ನೋಡಿರಬಹುದು. ಅದರಿಂದ ಯಾವುದೇ ರಾಷ್ಟ್ರದ ಭೌಗೋಲಿಕ ಸ್ಥಾನ ನಿಮಗೆ ಕಾಣಿಸಬಹುದು. ಕೆಲದೇಶಗಳು ಇತರ ದೇಶಗಳಿಗಿಂತ ದೂರ ಅಂತರಿನಲ್ಲಿ ಇವೆ. ಮತ್ತು ಕೆಲರಾಷ್ಟ್ರಗಳ ಅಕ್ಕಪಕ್ಕದಲ್ಲಿ ಅನೇಕ ನೆರೆ ದೇಶಗಳಿವೆ. ಕೆಲ ರಾಷ್ಟ್ರಗಳ ಹತ್ತಿರ ಸಾಕಷ್ಟು ಖನಿಜ ಸಂಪತ್ತು ಇದೆ ಸ್ವಲ್ಪದರಲ್ಲಿ ದೇಶದ ಆಕಾರ, ಜನಸಂಖ್ಯೆ, ಭೂಮಿಯ ಮಣ್ಣಿನ ಗುಣಮಟ್ಟ, ದೇಶಕ್ಕೆ ಲಭಿಸಿದ ಸಮುದ್ರದಂಡೆ, ನೈಸರ್ಗಿಕ ಸಾಧನ ಸಂಪತ್ತಿನ ಉಪಲಬದ್ಧತೆ ಈ ಎಲ್ಲವುಗಳನ್ನು ಪರರಾಷ್ಟ್ರ ಧೋರಣೆಯನ್ನು ನಿರ್ಧರಿಸುವಾಗ ಗಮನಕ್ಕೆ ತಗೆದುಕೊಳ್ಳಬೇಕಾಗುವದು.

**2) ರಾಜಕೀಯ ವ್ಯವಸ್ಥೆ:** ಪ್ರಜಾಪ್ರಭುತ್ವ ಸ್ವರೂಪದ ರಾಜಕೀಯ ವ್ಯವಸ್ಥೆಯಲ್ಲಿ ಸಂಸತ್ತಿಗೆ ಪರರಾಷ್ಟ್ರ ಧೋರಣೆಯ ನಿರ್ಮಿತಿಯಲ್ಲಿ ಮಹತ್ವದ ಸ್ಥಾನವಿರುವದು. ಏಕೆಂದರೆ ಪರರಾಷ್ಟ್ರ ಧೋರಣೆಯ ಸಂಬಂಧದಲ್ಲಿಯ ವಿಷಯಗಳ ಮೇಲೆ ಸಂಸತ್ತಿನಲ್ಲಿ ಚರ್ಚೆಯಾಗುವದು. ವಿರೋಧ ಪಕ್ಷವು ಪ್ರಶ್ನೆಗಳನ್ನು ಕೇಳಿ ಪರರಾಷ್ಟ್ರ ಧೋರಣೆಯ ಮೇಲೆ ನಿಯಂತ್ರಣ ಇಡಲು ನೋಡುವದು.

ಸಂಘರಾಜ್ಯ ವ್ಯವಸ್ಥೆ ಇರುವ ದೇಶಗಳಿಗೆ ಪರರಾಷ್ಟ್ರ ಧೋರಣೆಯನ್ನು ನಿರ್ಧರಿಸುವಾಗ ಘಟಕ ರಾಜ್ಯಗಳ ಬಗ್ಗೆಯೂ ವಿಚಾರ ಮಾಡಬೇಕಾಗುವದು. ಏಕೆಂದರೆ ನೆರೆಯ ರಾಷ್ಟ್ರಗಳಲ್ಲಿಯ ಆಗು ಹೋಗುಗಳ ಪರಿಣಾಮ ಘಟಕ ರಾಜ್ಯಗಳ ಮೇಲಾಗುವದು. ಉದಾ: ಶ್ರೀಲಂಕಾದಲ್ಲಿಯ ಆಗುಹೋಗುಗಳ ಪರಿಣಾಮ ತಮಿಳುನಾಡಿನ ಮೇಲೆ ಆಗುವದು. ಮತ್ತು ಬಾಂಗಲಾದೇಶದಲ್ಲಿ ಏನಾದರೂ



**ಹೀಗೆ ಏಕೆ ಮಾಡಬೇಕಾಗುತ್ತದೆ ?**

ತಮ್ಮ ದೇಶದಲ್ಲಿಯ ಶಾಂತತೆ ಮತ್ತು ಸ್ಥೈರ್ಯ ಎಷ್ಟೊಂದು ಮಹತ್ವದ್ದಾಗಿರುತ್ತದೆಯೋ ಅಷ್ಟೇ ಅದು ನೆರೆಯ ದೇಶಗಳಲ್ಲಿಯೂ ಇರುವದು ಮಹತ್ವದ್ದಾಗಿರುತ್ತದೆ. ಅಂತೆಯೇ ನೆರೆಯ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ನಿರ್ಮಾಣವಾಗಲೆಂದು ಭಾರತಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ.

ಘಟಿಸಿದರೆ ಪಶ್ಚಿಮ ಬಂಗಾಲ ಮತ್ತು ಈಶಾನ್ಯಕಡೆಯ ರಾಜ್ಯಗಳ ಮೇಲೂ ಅದರ ಪರಿಣಾಮವಾಗುತ್ತದೆ.

**3. ಅರ್ಥವ್ಯವಸ್ಥೆ:** ಆಧುನಿಕ ಕಾಲದಲ್ಲಿ ಯಾವುದೇ ದೇಶದ ಆರ್ಥಿಕ ಸ್ಥಿತಿಗೆ ಪರರಾಷ್ಟ್ರ ಧೋರಣೆ ನಿರ್ಧರಿಸುವಲ್ಲಿ ಬಹಳ ಮಹತ್ವ ಪ್ರಾಪ್ತವಾಗಿದೆ. ಆರ್ಥಿಕ ವಿಕಾಸ ಇದು ಎಲ್ಲ ರಾಷ್ಟ್ರಗಳ ಎಲ್ಲಕ್ಕೂ ಮಹತ್ವದ ಉದ್ದೇಶವಾಗಿದೆ. ಅದರಿಂದ ಅರ್ಥವ್ಯವಸ್ಥೆಯ ಪರರಾಷ್ಟ್ರ ಧೋರಣೆಯ ಮೇಲೆ ಎರಡು ಪ್ರಕಾರಗಳಿಂದ ಪರಿಣಾಮವಾಗುತ್ತದೆ.

(1) ದೇಶದ ಅರ್ಥವ್ಯವಸ್ಥೆಯನ್ನು ಭದ್ರಗೊಳಿಸಲು ಅನ್ಯ ರಾಷ್ಟ್ರಗಳೊಂದಿಗೆ ಪ್ರಸ್ಥಾಪಿಸಲಾಗುವ ಆರ್ಥಿಕ ಸಂಬಂಧ, ಆಯಾತ-ನಿರ್ಯಾತ, ಜಾಗತಿಕ ವ್ಯಾಪಾರದಲ್ಲಿ ಸಹಭಾಗ ಮುಂತಾದ ಅಂಶಗಳು ಪರರಾಷ್ಟ್ರ ಧೋರಣೆಗೆ ಆಕಾರ ಕೊಡುತ್ತವೆ.

(2) ಸಧ್ಯದ ಜಾಗತಿಕ ವ್ಯವಸ್ಥೆಯಲ್ಲಿ ಆರ್ಥಿಕ ಸುರಕ್ಷಿತತೆಯ ಅಂಶಗಳು ರಾಷ್ಟ್ರಿಯ ಸುರಕ್ಷಿತತೆಯಷ್ಟೆ ಮಹತ್ವದ್ದೆಂದು ತಿಳಿಯಲಾಗುವದು. ಆರ್ಥಿಕ ಸುರಕ್ಷಿತತೆ ಎಷ್ಟೊಂದು ಭದ್ರವೋ ಅಷ್ಟು ಸಾಮರ್ಥ್ಯಶಾಲಿ ರಾಷ್ಟ್ರವೆಂದು ಮಾನ್ಯತೆ ದೊರಕುವದು. ಭದ್ರವಾದ ಅರ್ಥವ್ಯವಸ್ಥೆಯುಳ್ಳ ದೇಶಗಳು ಕಡಿಮೆ ಪರಾವಲಂಬಿಗಳಾಗಿರುತ್ತವೆ ಮತ್ತು ಅವರಿಗೆ ಸ್ವತಂತ್ರವಾಗಿ ಪರರಾಷ್ಟ್ರ ಧೋರಣೆಯನ್ನು ನಿರ್ಧರಿಸಲು ಬರಬಹುದು.

**4. ರಾಜಕೀಯ ನೇತೃತ್ವ:** ಪರರಾಷ್ಟ್ರ ಧೋರಣೆಯನ್ನು

**ನಿಮಗೆ ಒಪ್ಪಿಗೆ ಇದೆಯೆ ? ಒಪ್ಪಿಗೆ ಇದ್ದರೆ ಏಕೆ ಮತ್ತು ಒಪ್ಪಿಗೆ ಇರದಿದ್ದರೆ ಏಕೆ ಇಲ್ಲ ಎಂಬುದನ್ನು ವಿಸ್ತಾರವಾಗಿ ಬರೆಯಿರಿ.**

ರಾಷ್ಟ್ರದ ಆರ್ಥಿಕ ಸಾಮರ್ಥ್ಯ ಹೆಚ್ಚಿಸಲು ಕೇವಲ ಬಡತನವನ್ನು ದೂರ ಮಾಡುವದರ ಕಡೆಗೆ ಒತ್ತು ಕೊಡದೆ ಸಂಪತ್ತು ಮತ್ತು ಕ್ರಯಶಕ್ತಿ ಹೆಚ್ಚಿಸುವ ಪ್ರಯತ್ನ ಮಾಡಬೇಕು.

ನಿರ್ಧರಿಸುವಲ್ಲಿ ರಾಷ್ಟ್ರಪತಿ, ಪ್ರಧಾನಮಂತ್ರಿ, ಪರರಾಷ್ಟ್ರ ಮಂತ್ರಿ, ಸಂರಕ್ಷಣಾ ಮಂತ್ರಿ, ಅರ್ಥಮಂತ್ರಿ, ಗೃಹಮಂತ್ರಿ ಇವರ ಪಾಲು ಇರುವುದು.

ಪರರಾಷ್ಟ್ರ ಧೋರಣೆಯಲ್ಲಿಯ ಶಾಂತತೆಯನ್ನು ಉಳಿಸಿ ಅದನ್ನು ಸುಧಾರಿಸುವ ಪ್ರಯತ್ನ ಈ ಪದವಿಯ ಮೇಲಿರುವ ವ್ಯಕ್ತಿಗಳು ಮಾಡುವರು. ಉದಾ: ಪಂಡಿತ ಜವಾಹರಲಾಲ ನೇಹರುರವರು ಭಾರತದ ಪರರಾಷ್ಟ್ರ ಧೋರಣೆಯಲ್ಲಿ

**ಯಾದಿಯನ್ನು ಪೂರ್ಣ ಮಾಡಿರಿ.**

ಕೆಳಗೆ ಕೆಲವು ಮುಂದಾಳುಗಳ ಹೆಸರುಗಳನ್ನು ಮತ್ತು ಅವರು ಮಾಡಿದ ಕಾರ್ಯಗಳ ಮಾಹಿತಿಯನ್ನು ಕೊಡಲಾಗಿದೆ. ಉದಾ: ಲಾಲಬಹಾದ್ದೂರ ಶಾಸ್ತ್ರಿ: ತಾಷ್ಕಂದ ಕರಾರು ಹೀಗೆ ಮುಂದಿನ ಯಾದಿ ಪೂರ್ಣ ಗೊಳಿಸಿರಿ.

(ಅ) ಇಂದಿರಾ ಗಾಂಧಿ : .............

(ಬ) ರಾಜೀವ ಗಾಂಧಿ : .............

(ಕ) ಅಟಲ ಬಿಹಾರಿ ವಾಜಪೇಯಿ : .............

ಕೆಳಗಿನ ಧೋರಣೆಗಳಿಗೆ ಬೆಂಬಲಿಸುವ ಪ್ರಧಾನ ಮಂತ್ರಿಗಳು ಯಾರು ಇದ್ದಾರೆ ?

ಅ) ................ : ಪೂರ್ವದ ಕಡೆಗೆ ನೋಡಿ.

ಬ) ................ : ಅಂತರರಾಷ್ಟ್ರಿಯ ಮಟ್ಟದಿಂದ ಭಾರತದಲ್ಲಿ ಹಣ ವಿನಿಯೋಗಿಸಲು ಪ್ರಯತ್ನ.

ಅಲಿಪ್ತವಾದವನ್ನು ಸೇರಿಸಿದರು. ಅಟಲ ಬಿಹಾರಿ ವಾಜಪೇಯಿಯವರು ಭಾರತ-ಚೀನ ಸಂಬಂಧ ಸುಧಾರಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು.

**5. ಆಡಳಿತ ಘಟಕ:** ಪರರಾಷ್ಟ್ರ ಧೋರಣೆಯ ನಿರ್ಮಾಣದಲ್ಲಿ ಪರರಾಷ್ಟ್ರ ವ್ಯವಹಾರ ಮಂತ್ರಾಲಯ, ಪರರಾಷ್ಟ್ರ ಸಚಿವರು, ಪರದೇಶದಲ್ಲಿಯ ರಾಯಭಾರಿ ಕಚೇರಿ, ರಾಜನೈತಿಕ ಅಧಿಕಾರಗಳು ಮುಂತಾದ ಆಡಳಿತದ ಘಟಕಗಳ ಸಮಾವೇಶ ಇರುವದು. ಪರರಾಷ್ಟ್ರ ಧೋರಣೆಗೆ ಸಂಬಂಧಿಸಿದ ಅಂತಿಮ ನಿರ್ಣಯವನ್ನು ಒಂದುವೇಳೆ ಪ್ರಧಾನಮಂತ್ರಿ ಮತ್ತು ಅವರ ಮಂತ್ರಿ ಮಂಡಳವು ತಗೆದುಕೊಳ್ಳುತ್ತಿದ್ದರೂ. ಆ ನಿರ್ಣಯದ ವರೆಗೆ ತಲುಪಲು ಆಢಳಿತ ವರ್ಗದವರು ಸಹಾಯಮಾಡುವರು. ಪರರಾಷ್ಟ್ರ ಧೋರಣೆಗೆ ಅವಶ್ಯಕವಾಗಿರುವ ಮಾಹಿತಿಯನ್ನು ಸಂಗ್ರಹಿಸುವದು, ಅದರ ವಿಶ್ಲೇಷಣೆ ಮಾಡುವದು, ಅದಕ್ಕೆ ಆಧರಿಸಿರುವ ಯೋಗ್ಯ ಸಲಹೆಯನ್ನು ಕೊಡುವದು. ಈ ಮುಂತಾದ ಕಾರ್ಯಗಳನ್ನು ಆಡಳಿತ ಅಧಿಕಾರಿಗಳು

**ನೀವು ಏನು ಮಾಡುವಿರಿ ?**

ನೀವು ಪರರಾಷ್ಟ್ರ ಸಚಿವ ಪದವಿಯ ಮೇಲೆ ಕೆಲಸ ಮಾಡುತ್ತಿದ್ದೀರಿ. ಪ್ರಧಾನ ಮಂತ್ರಿಗಳು ಚೀನಕ್ಕೆ ಬೆಟ್ಟಿ ಕೊಡುವವರಿದ್ದಾರೆ. ಪರರಾಷ್ಟ್ರ ಸಚಿವರೆಂದು ಪರರಾಷ್ಟ್ರ ವ್ಯವಹಾರ ಮಂತ್ರಾಲಯದ ವತಿಯಿಂದ ನೀವು ಪ್ರಧಾನ ಮಂತ್ರಿಗಳಿಗೆ ಚರ್ಚೆಗಾಗಿ ಯಾವ ವಿಷಯವನ್ನು ಸೂಚಿಸುವಿರಿ ?

ಮಾಡುವರು. ಹಾಗೆಯೇ ರಾಷ್ಟ್ರಿಯ ಸುರಕ್ಷೆ ಸಲಹಾಗಾರ ಇವರೂ ಕೂಡಾ ಮಹತ್ವದ ಪಾತ್ರ ವಹಿಸುವರು.

## ಭಾರತದ ಪರರಾಷ್ಟ್ರ ಧೋರಣೆ

ಪರರಾಷ್ಟ್ರ ಧೋರಣೆಯ ಕುರಿತ ಪ್ರಾಥಮಿಕ ಮಾಹಿತಿಯನ್ನು ಪಡೆದುಕೊಂಡ ನಂತರ ಈಗ ನಾವು ಭಾರತದ ಪರರಾಷ್ಟ್ರ ಧೋರಣೆ ಕುರಿತು ಮಾಹಿತಿಯನ್ನು ಪಡೆದುಕೊಳ್ಳುವವರಿದ್ದೇವೆ.

1947 ರಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿತು ಮತ್ತು ಅಂದಿನಿಂದ ಭಾರತವು ತನ್ನ ಪರರಾಷ್ಟ್ರ ಧೋರಣೆಯನ್ನು ಸ್ವತಂತ್ರವಾಗಿ ರೂಪಿಸಲು ಪ್ರಾರಂಭಿಸಿತು. ಭಾರತದ ಸಂವಿಧಾನದಲ್ಲಿಯ ಮಾರ್ಗದರ್ಶಕ ತತ್ವಗಳಲ್ಲಿ ರಾಜ್ಯವು ಪರರಾಷ್ಟ್ರ ಧೋರಣೆಯನ್ನು ಹೇಗೆ ರೂಪಿಸಬೇಕು ಎಂಬುದರ ವ್ಯವಸ್ಥೆ ಮಾಡಿದೆ. ಮಾರ್ಗದರ್ಶಕ ತತ್ವಗಳಲ್ಲಿಯ ಕಲಂ 51ರ ಪ್ರಕಾರ ಪರರಾಷ್ಟ್ರ ಧೋರಣೆಯ ಒಂದು ವ್ಯಾಪಕವಾದ ಚೌಕಟ್ಟನ್ನು ಸ್ಪಷ್ಟ ಪಡಿಸಿದೆ. ಅದಕ್ಕನುಸರಿಸಿ ಭಾರತವು ಅಂತರರಾಷ್ಟ್ರಿಯ ಶಾಂತತೆ ಮತ್ತು ಸುರಕ್ಷಿತತೆಯ ಜೋಪಾನಕ್ಕೆ ಪ್ರಾಧಾನ್ಯತೆ ಕೊಡಬೇಕು. ತಮ್ಮ ಅಂತರರಾಷ್ಟ್ರಿಯ ಸಮಸ್ಯೆ ಇಲ್ಲವೆ ವಾದವಿವಾದಗಳನ್ನು ಶಾಂತತೆಯ ಮಾರ್ಗದಿಂದ ಬಗೆಹರಿಸಿಕೊಳ್ಳಬೇಕು ಎಂದು ಸ್ಪಷ್ಟ ಪಡಿಸಿದೆ. ಅನ್ಯ ರಾಷ್ಟ್ರಗಳೊಂದಿಗೆ ಮೈತ್ರಿಪೂರ್ಣ ಸಂಬಂಧವನ್ನಿಡಬೇಕು ಮತ್ತು ಅಂತರರಾಷ್ಟ್ರಿಯ ಕಾಯದೆಯ ಆದರ ಮಾಡಬೇಕು ಇವುಗಳನ್ನು ಸಹ ತಮ್ಮ ಪರರಾಷ್ಟ್ರಧೋರಣೆಯ

**ಭಾರತದ ಸಂವಿಧಾನದ ಕಲಮು 51**

- ಅಂತರರಾಷ್ಟ್ರೀಯ ಶಾಂತತೆ ಮತ್ತು ಸುರಕ್ಷಿತತೆಯ ಸ್ಥಾಪನೆ ಮಾಡುವದು.
- ರಾಷ್ಟ್ರರಾಷ್ಟ್ರಗಳಲ್ಲಿ ನ್ಯಾಯ ಮತ್ತು ಸನ್ಮಾನದ ಸಂಬಂಧ ಪ್ರಸ್ಥಾಪಿಸುವದು.
- ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಅಂತರರಾಷ್ಟ್ರೀಯ ಕಾಯ್ದೆ ಮತ್ತು ಕರಾರು ಇವುಗಳ ಕುರಿತು ಆದರವನ್ನು ಹೆಚ್ಚಿಸುವದು.
- ಮಧ್ಯಸ್ಥರ ಸಹಾಯದಿಂದ ಅಂತರರಾಷ್ಟ್ರೀಯ ವಾದ-ವಿವಾದಗಳನ್ನು ಶಾಂತತೆಯ ಮಾರ್ಗದಿಂದ ಬಿಡಿಸುವದು.

ಉದ್ದೇಶಗಳೆಂದು ತಿಳಿಯಲಾಗಿದೆ. ಭಾರತದ ಇಲ್ಲಿಯ ವರೆಗಿನ ಪರರಾಷ್ಟ್ರ ಧೋರಣೆ ಈ ಚೌಕಟ್ಟಿನಲ್ಲಿಯೇ ವಿಕಸಿತವಾಗಿದೆ.

**ಭಾರತದ ಪರರಾಷ್ಟ್ರ ಧೋರಣೆಯ ಇನ್ನೂ ಕೆಲವು ವೈಶಿಷ್ಟ್ಯಗಳು ಕೆಳಗಿನಂತಿವೆ :**

* ನೆರೆಯ ದೇಶಗಳೊಂದಿಗೆ ಮತ್ತು ಅನ್ಯ ದೇಶಗಳೊಂದಿಗೆ ಮೈತ್ರಿಯುತ ಸಂಬಂಧ ಬೆಳೆಸುವಾಗ ತಮ್ಮ ದೇಶದ ಸಂರಕ್ಷಣೆಗೆ ಧಕ್ಕೆ ತಗಲದ ಹಾಗೆ ಕಾಳಜಿ ವಹಿಸಬೇಕು. ರಾಷ್ಟ್ರದ ಭೌಗೋಲಿಕ ಸೀಮಾರೇಷೆ ಸುರಕ್ಷಿತವಾಗಿರಬೇಕು. ಈ ಕುರಿತು ಒಪ್ಪಂದ ಇಲ್ಲವೆ ಮಾತುಕತೆ ನಡೆಸದೇ ಇರುವದು.
* ಭಾರತದ ಐಕ್ಯತೆ ಮತ್ತು ಏಕಾತ್ಮತೆಯ ಸಂರಕ್ಷಣೆ ಮಾಡುವದು.
* ಬೇರೆ ದೇಶದಲ್ಲಿ ವಾಸಿಸುವ ತಮ್ಮ ನಾಗರಿಕರ ಹಿತರಕ್ಷಣೆ ಮಾಡುವದು. ಈ ಜವಾಬ್ದಾರಿಯನ್ನು ಆಯಾ ದೇಶಗಳಲ್ಲಿಯ ಭಾರತೀಯ ಧೂತಾವಾಸವು ಪೂರ್ಣಗೊಳಿಸುವದು.
* ಭಾರತದ ಆರ್ಥಿಕ ವಿಕಾಸಕ್ಕಾಗಿ ಪರರಾಷ್ಟ್ರಗಳೊಂದಿಗೆ ಆರ್ಥಿಕ ಮತ್ತು ವ್ಯಾಪಾರಿ ಸಂಬಂಧವನ್ನು ಪ್ರಸ್ಥಾಪಿಸುವದು.

**ಭಾರತದ ಪರರಾಷ್ಟ್ರ ಧೋರಣೆಯ ಪರಾಮರ್ಶೆ:** ಭಾರತದ ಪರರಾಷ್ಟ್ರ ಧೋರಣೆಯ ಪರಾಮರ್ಶೆಯನ್ನು ನಾವು ಎರಡು ಹಂತದಲ್ಲಿ ತೆಗೆದುಕೊಳ್ಳೋಣ. ಮೊದಲನೆ ಹಂತವು ಸ್ವಾತಂತ್ರ್ಯದಿಂದ 1990ರ ವರೆಗೆ ಮನ್ನಿಸೋಣ. ಎರಡನೆ ಹಂತವು 1990 ದಿಂದ ಇಲ್ಲಿಯ ವರೆಗೆ ಇರಬಹುದು.

## ಭಾರತದ ಪರರಾಷ್ಟ್ರ ಧೋರಣೆ: ಪ್ರಾರಂಭದ ಹಂತ-

ಪಂಡಿತ ಜವಾಹರರಾಲ ನೇಹರುವರು ಭಾರತದ ಪರರಾಷ್ಟ್ರ ಧೋರಣೆಯ ರೂಪರೇಷೆಯನ್ನು ಪ್ರಾರಂಭದ ಕಾಲದಲ್ಲಿ ಮಾಡಿದರು. ಭಾರತದ ಪರರಾಷ್ಟ್ರ ಧೋರಣೆಯ ಮೂಲಕ ಅವರು ವಸಾಹತುವಾದಕ್ಕೆ ವಿರೋಧಿಸಿದರು. ಅಂತರರಾಷ್ಟ್ರವಾದದ ಪಾತ್ರ ವಹಿಸಿ ಜಾಗತಿಕ ಶಾಂತತೆ ಮತ್ತು ಸುರಕ್ಷಿತತೆಗೆ ಪ್ರಾಧಾನ್ಯತೆ ನೀಡಿದರು. ಈ ಕಾಲದಲ್ಲಿಯ ಭಾರತದ ಪರರಾಷ್ಟ್ರ ಧೋರಣೆಯ ಮೇಲೆ ಮೂರು ಅಂಶಗಳ ಪ್ರಭಾವವಿತ್ತು. (1) ಎಲ್ಲ ಅಂತರರಾಷ್ಟ್ರೀಯ ಆಗುಹೋಗುಗಳ ಆಕಲನೆ ಯಾವುದೇ ಸತ್ತೆಯ ಒತ್ತಡವಿಲ್ಲದೆ, ಸ್ವತಂತ್ರವಾಗಿ ಮಾಡುವ ಪ್ರಯತ್ನ ಮಾಡಿದರು. ಶಾಂತತೆ ಇದು ಯಾವಾಗಲೂ ಭಾರತದ ಪರರಾಷ್ಟ್ರ ಧೋರಣೆಯ ವೈಶಿಷ್ಟ್ಯವಾಗಿದೆ. (2) ಪಾಕಿಸ್ತಾನ ಮತ್ತು ಚೀನ ಈ ದೇಶಗಳಿಂದ ಅಪಾಯವನ್ನು ಗಮನದಲ್ಲಿಟ್ಟು ಕೊಳ್ಳಲಾಯಿತು. (3) ಸ್ವಾವಲಂಬನೆಯ ಆಗ್ರಹ ಮತ್ತು ಅದರ ಮೇಲಿರುವ ಪರರಾಷ್ಟ್ರ ಧೋರಣೆಯ ಒತ್ತು. ಇದೂ ಕೂಡಾ ಆಗಿನ ಪರರಾಷ್ಟ್ರ ಧೋರಣೆಯ ವೈಶಿಷ್ಟ್ಯವಾಗಿತ್ತು.

ಪ್ರಾರಂಭಕಾಲದಿಂದ ಭಾರತವು ತನ್ನ ಪರರಾಷ್ಟ್ರ ಧೋರಣೆಯ ಮೂಲಕ ಏಶಿಯಾ ಖಂಡದಲ್ಲಿಯ ದೇಶಗಳೊಂದಿಗೆ ಸಂಬಂಧ ಬೆಳೆಸುವ ಪ್ರಯತ್ನ ಮಾಡಿದೆ. ಏಶಿಯಾದ ರಾಷ್ಟ್ರಗಳೊಂದಿಗೆ ಸಹಕಾರ್ಯಮಾಡಿ ವಿಕಾಸ ಸಾಧಿಸುವ ಮತ್ತು ತಮ್ಮ ಸ್ವಾತಂತ್ರ್ಯವು ಅಬಾಧಿತವಾಗಿ ಇಡುವ ಪ್ರಯತ್ನ ಈ ಕಾಲದಲ್ಲಿ ಆಯಿತು. ಈ ಪ್ರಾದೇಶಿಕ ಇಲ್ಲವೆ ಕ್ಷೇತ್ರಿಯ ವಿಕಾಸದ ಕಲ್ಪನೆ ಮುಂದೆ ಆಫ್ರಿಕೆಯ ವರೆಗೆ ವಿಸ್ತಾರವಾಯಿತು. ಆದರೆ ಕೆಲ ಆಫ್ರೊ ಆಶಿಯಾಯಿ ದೇಶಗಳು ಅಮೇರಿಕಾ ಮತ್ತು ಸೋವಿಯತ್ ರಶಿಯಾ ಇವರ ಶೀತಯುದ್ಧ ಕಾಲದ ಸೈನಿಕ ಸಂಘಟನೆಗಳ ಸದಸ್ಯರಾದವು. ಇದರಿಂದ ಪ್ರಾದೇಶಿಕ ವಿಕಾಸದ ಪ್ರಕ್ರಿಯೆಯು ನಿಂತಿತು. ಆನಂತರ ಯಥಾವಕಾಶವಾಗಿ ಯಾವ ದೇಶಗಳು ಶೀತಯುದ್ಧದಲ್ಲಿಯ ಸೈನಿಕ ಸಂಘಟನೆಗಳಲ್ಲಿ ಸಮಾವೇಶವಾಗಿರಲಿಲ್ಲವೋ ಅವರು ಅಲಿಪ್ತವಾದ ಸಂಕಲ್ಪನೆಗೆ ಬೆಂಬಲ ನೀಡಿದರು. ಶಾಂತತೆ ಮತ್ತು ಸ್ವಾತಂತ್ರ್ಯ ಈ ಎರಡು ತತ್ವಗಳು ಅಲಿಪ್ತವಾದಿ ಧೋರಣೆಯ ಮೂಲಭೂತ ತತ್ವಗಳಾದವು.

ಈ ಕಾಲದಲ್ಲಿ ಭಾರತಕ್ಕೆ ನೆರೆಯ ರಾಷ್ಟ್ರಗಳೊಂದಿಗೆ ಬಂದ ಸಂಘರ್ಷವನ್ನು ಎದುರಿಸಬೇಕಾಯಿತು. ಭಾರತ ಮತ್ತು ಪಾಕಿಸ್ತಾನಗಳಲ್ಲಿ 1947-48 ಮತ್ತು 1965ರಲ್ಲಿ ಕಾಶ್ಮೀರದ ಪ್ರಶ್ನೆಯಿಂದ ಯುದ್ಧಗಳಾದವು. 1971ರಲ್ಲಿ ಆದ ಮೂರನೆಯ ಯುದ್ಧದಿಂದ ಪಾಕಿಸ್ತಾನದಿಂದ ಬೇರೆಯಾಗಿ ಸ್ವತಂತ್ರ ಬಾಂಗಲಾದೇಶದ ನಿರ್ಮಾಣವಾಯಿತು.

1970ರ ದಶಕದಲ್ಲಿ ಭಾರತದ ಪರರಾಷ್ಟ್ರ ಧೋರಣೆಯಲ್ಲಿ ಒಂದು ಪ್ರಕಾರದ ಸ್ಥೈರ್ಯವಿತ್ತು. ದಕ್ಷಿಣ ಏಶಿಯಾದಲ್ಲಿ ಒಂದು ಪ್ರಬಲ ಪ್ರಾದೇಶಿಕ ಸತ್ತೆಯೆಂದು ಭಾರತದ ಉದಯವಾಗಿತ್ತು. 1974ರಲ್ಲಿ ಭಾರತವು

ಅಣುಪರೀಕ್ಷೆ (Test) ಮಾಡಿ ಅಣುಸಂಶೋಧನೆಯ ಕ್ಷೇತ್ರದಲ್ಲಿಯ ತನ್ನ ಕ್ಷಮತೆಯನ್ನು ಸಿದ್ಧಪಡಿಸಿತು. 1980 ರಿಂದ ಮಾತ್ರ ಕೆಲ ಬದಲಾವಣೆಗೆ ಪ್ರಾರಂಭವಾಯಿತು. ದಕ್ಷಿಣ ಆಶಿಯಾ ರಾಷ್ಟ್ರಗಳಲ್ಲಿ ಸಹಕಾರ್ಯ ಹೆಚ್ಚಿಸಬೇಕೆಂದು ಸಾರ್ಕ ಈ ಸಂಘಟನೆಯ ಸ್ಥಾಪನೆ ಮಾಡಲಾಯಿತು. ಚೀನದ ಜೊತೆಗೆ ಇದ್ದ ಸಂಬಂಧವನ್ನು ಸುಧಾರಿಸಲು ಭಾರತವು ಮಾತುಕತೆ ನಡೆಸಿತು. ಸುರಕ್ಷಿತತೆಯ ಕ್ಷೇತ್ರದಲ್ಲಿಯ ಸಹಕಾರ್ಯಕ್ಕಾಗಿ ಅಮೇರಿಕೆಯೊಂದಿಗೆ ಭಾರತವು ಕೊಡ-ತೆಗೆದುಕೊಳ್ಳುವಿಕೆಯನ್ನು ಪ್ರಾರಂಭಿಸಿತು.

### ಮೊದಲ ಹಂತ: 1947 ರಿಂದ 1990

* ಶೀತಯುದ್ಧದ ಹಿನ್ನೆಲೆಯಲ್ಲಿ ಭಾರತವು ಅಲಿಪ್ತವಾದದ ಸ್ವೀಕಾರ ಮಾಡಿತು. ಇದರಿಂದ ಎಲ್ಲ ರಾಷ್ಟ್ರಗಳೊಂದಿಗೆ ಮೈತ್ರಿಯುತ ಸಂಬಂಧ ಇಡುವದು. ವಿಕಾಸಕ್ಕಾಗಿ ಯೋಗ್ಯವಾದ ಸಹಾಯವನ್ನು ವಿವಿಧ ರಾಷ್ಟ್ರಗಳಿಂದ ಪಡೆಯುವದು ಇವುಗಳಿಗೆ ಈ ಕಾಲದಲ್ಲಿ ಪ್ರಾಧಾನ್ಯತೆ ಇತ್ತು. ಅಲಿಪ್ತವಾದಿ ಧೋರಣೆಯಿಂದ ಭಾರತಕ್ಕೆ ತನ್ನ ವಿಕಾಸಕ್ಕಾಗಿ ಎರಡೂ ಮಹಾಸತ್ತೆಗಳಿಂದ ಸಹಾಯ ದೊರಕಿಸಲು ಸಾಧ್ಯವಾಯಿತು.
* ಸಂರಕ್ಷಣಾ ವ್ಯವಸ್ಥೆಯು ಬಲಶಾಲಿಯಾಗಿ ಇಡುವದರ ಮೇಲೆ ಈ ಕಾಲದಲ್ಲಿ ಒತ್ತು ನೀಡಲಾಯಿತು-ಅದಕ್ಕಾಗಿ ತಂತ್ರಜ್ಞಾನದ ಆಯಾತ ಮಾಡಲಾಯಿತು. ಸೋವ್ಹಿಯತ್ ರಶಿಯಾ, ಫ್ರಾನ್ಸ ಮತ್ತು ಜರ್ಮನಿ ಮುಂತಾದ ದೇಶಗಳು ಇದಕ್ಕಾಗಿ ಭಾರತಕ್ಕೆ ಸಹಾಯ ಮಾಡಿದವು.

ಈ ಕಾಲಖಂಡದಲ್ಲಿ ಭಾರತಕ್ಕೆ ಕೆಲ ಆವ್ಹಾನಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಪಾಕಿಸ್ತಾನದೊಂದಿಗೆ ಸಂಘರ್ಷ, ಬಾಂಗಲಾದೇಶದ ನಿರ್ಮಿತಿ ಹಾಗೆಯೇ ಚೀನದೊಂದಿಗೆ ಸಂಘರ್ಷ ಇವು ಸಮಾವೇಶವಾಗಿದ್ದವು.

**ಭಾರತದ ಪರರಾಷ್ಟ್ರ ಧೋರಣೆಯಲ್ಲಿ ಪಂಡಿತ ನೇಹರುರವರ ಕೊಡುಗೆ:**

- ಜಾಗತಿಕ ಇಲ್ಲವೆ ಅಂತರರಾಷ್ಟ್ರಿಯ ಆಗುಹೋಗುಗಳ ಬಗ್ಗೆ ತಾವು ಸ್ವತಂತ್ರವಾಗಿ ಆಕಲನೆ ಮಾಡಬೇಕು ಎಂಬುದು ಅವರ ಪಾತ್ರವಾಗಿತ್ತು.
- ಶಾಂತತೆಯ ಧೋರಣೆಗೆ ಅವರು ಬೆಂಬಲ ನೀಡಿದರು.

### ಎರಡನೆಯ ಹಂತ: 1991 ರಿಂದ ಇಲ್ಲಿಯ ವರೆಗೆ

* ಭಾರತದ ಎರಡನೆ ಹಂತದಲ್ಲಿಯ ಪರರಾಷ್ಟ್ರ ಧೋರಣೆಯು ಹೆಚ್ಚು ವ್ಯಾಪಕ ಮತ್ತು ಗತಿಯುಳ್ಳದ್ದಾಯಿತು. ಶೀತಯುದ್ಧದ ನಂತರದ ಕಾಲದಲ್ಲಿ ರಾಜಕೀಯ ಮತ್ತು ಸೈನಿಕ ಸಂಬಂಧಗಳಿಗೆ ಪ್ರಾಧಾನ್ಯತೆ ಉಳಿಯಲಿಲ್ಲ. ಪರರಾಷ್ಟ್ರ ಧೋರಣೆಯಲ್ಲಿ ಅರ್ಥಕಾರಣ, ವ್ಯಾಪಾರ, ಶಿಕ್ಷಣ ಮತ್ತು ತಂತ್ರಜ್ಞಾನ ಹೀಗೆ ಅನೇಕ ಅಂಶಗಳ ಸಮಾವೇಶವಾಯಿತು. 1991ರ ನಂತರ ಭಾರತವು ಆರ್ಥಿಕ ವ್ಯವಸ್ಥೆಯ ಮೇಲಿನ ಸರಕಾರಿ ನಿಯಂತ್ರಣವನ್ನು ಕಡಿಮೆ ಮಾಡಿ ಮುಕ್ತ ಆರ್ಥಿಕ ಧೋರಣೆಯನ್ನು ಸ್ವೀಕರಿಸಿತು. ಇದರಿಂದ ಸಹಜವಾಗಿ ನೆರೆಯ ದೇಶಗಳೊಂದಿಗಿದ್ದ ವ್ಯಾಪಾರದಲ್ಲಿ ಹೆಚ್ಚಳವಾಯಿತು. ಜಾಗತಿಕ ವ್ಯಾಪಾರದಲ್ಲಿ ತಮ್ಮ ಸಹಭಾಗ ಹೆಚ್ಚಿತು. ಆರ್ಥಿಕ ವಿಕಾಸದ ಬೆಲೆ ಹೆಚ್ಚಿಸುವ ಪ್ರಯತ್ನವಾಗಹತ್ತಿತ್ತು.

**ನಿಮಗೆ ಶೋಧಿಸಲು ಬರಬಹುದೆ ?**

* ಆರ್ಥಿಕ ವಿಕಾಸ ಬೆಲೆ ಅಂದರೇನು ?
* ಭಾರತ, ನೇಪಾಳ, ಭೂತಾನ ಇವುಗಳ ಆರ್ಥಿಕ ವಿಕಾಸ ಬೆಲೆಯ ಕೋಷ್ಟಕವನ್ನು ತಯಾರಿಸಿರಿ.

* 1990ರ ನಂತರದ ದಶಕದಲ್ಲಿ ಆಗ್ನೇಯ ಆಶಿಯಾಯಿ ರಾಷ್ಟ್ರಗಳೊಂದಿಗೆ ಅಂದರೆ ಸಿಂಗಾಪೂರ, ಥಾಯಲ್ಯಾಂಡ, ವ್ಹಿಯೆತನಾಮ, ಮುಂತಾದ ರಾಷ್ಟ್ರಗಳೊಂದಿಗೆ ಇದ್ದ ನಮ್ಮ ಆರ್ಥಿಕ ಸಂಬಂಧ ಮತ್ತಷ್ಟು ಭದ್ರವಾಯಿತು. ಇಸ್ರಾಯಲ್, ಜಪಾನ, ಚೀನ, ಯುರೋಪದ ಸಂಘ ಇವುಗಳೊಂದಿಗೆ ಇದ್ದ ತಮ್ಮ ಕೊಡ-ತೆಗೆದುಕೊಳ್ಳುವಿಕೆ ಹೆಚ್ಚಾಯಿತು.
* ಅಂತರರಾಷ್ಟ್ರಿಯ ಮತ್ತು ಪ್ರಾದೇಶಿಕ ಮಟ್ಟದಲ್ಲಿಯ ಅನೇಕ ಆರ್ಥಿಕ ಸಂಘಟನೆಗಳಲ್ಲಿ ಭಾರತದ ಸಹಭಾಗ ಹೆಚ್ಚಿತು. ಉದಾ: ಜಿ-20 ಮತ್ತು BRICS (Brazil, Russia, India, China, South Arica)

BRICS
INDIA 2016

ಬ್ರಿಕ್ಸ-ಬೋಧಚಿಹ್ನೆ

**ಮಾಡಿ ನೋಡಿರಿ.**

ಭಾರತ ಮತ್ತು ಅಮೇರಿಕಾ ಈ ಎರಡೂ ದೇಶಗಳಲ್ಲಿ ಅನೇಕ ವಿಷಯಗಳ ಕುರಿತು ಸಾಮ್ಯತೆ ಇದೆ. ಉದಾ: ಎರಡೂ ದೇಶಗಳಲ್ಲಿ ಪ್ರಜಾಪ್ರಭುತ್ವವಿದೆ. ಇಂಥ ಗುಣಸಮಾನತೆ ಇರುವ ಇನ್ನೂ ಕೆಲ ಅಂಶಗಳನ್ನು ಶೋಧಿಸಿರಿ ಮತ್ತು ಅದರ ಒಂದು ಪ್ರಕಲ್ಪ ತಯಾರಿಸಿರಿ.

* ಅಮೇರಿಕದೊಂದಿಗೆ ಇದ್ದ ತಮ್ಮ ಸಂಬಂಧವು ಹೆಚ್ಚು ಧೃಡವಾಗಿದೆ. ಪರಸ್ಪರರ ಮೇಲಿನ ವಿಶ್ವಾಸ ಹೆಚ್ಚಿದೆ. ಅಂತರರಾಷ್ಟ್ರಿಯ ಸಮೂಹದಲ್ಲಿ ಭಾರತದ ಸ್ಥಾನ ಎತ್ತರಕ್ಕೆ ಮುಟ್ಟಿದೆ.
* ಭಾರತದ ಅಣುಧೋರಣೆ ಭಾರತದ ಪರರಾಷ್ಟ್ರ ಧೋರಣೆಯ ಒಂದು ಮಹತ್ವದ ಭಾಗವಾಗಿದೆ. ಅಣುಶಕ್ತಿಯ ಅರ್ಥ ಮತ್ತು ಅದರ ಉಪಯೋಗ ಇವುಗಳ ಅಭ್ಯಾಸ ನೀವು ಇತಿಹಾಸ, ಭೂಗೋಲ ಇಲ್ಲವೆ ರಸಾಯನಶಾಸ್ತ್ರ ಈ ವಿಷಯಗಳಲ್ಲಿ ಮಾಡಿರಬಹುದು. ಅಣುಶಕ್ತಿಯ ಮಹತ್ವ ಲಕ್ಷ್ಯದಲ್ಲಿಟ್ಟುಕೊಂಡು ಭಾರತವು ಸ್ವಾತಂತ್ರ್ಯದ ನಂತರ ಕೂಡಲೇ ಅಣುಶಕ್ತಿ ಕಾರ್ಯಕ್ರಮದ ಅಡಿಗಲ್ಲನ್ನು ಹಾಕಿತು. ಅದಕ್ಕಾಗಿ ಅಣುಶಕ್ತಿ ವಿಭಾಗ ಮತ್ತು ಅಣುಶಕ್ತಿ ಆಯೋಗದ ಸ್ಥಾಪನೆ ಮಾಡಿದೆ. ಅಣುಶಕ್ತಿ ಆಯೋಗದ ಮೊದಲನೆ ಅಧ್ಯಕ್ಷ ಡಾ. ಹೋಮಿ ಭಾಭಾ ಇದ್ದರು. ಶಕ್ತಿಯ ನಿರ್ಮಿತಿ ಇದು ಅದರ ಹಿಂದಿನ ಮುಖ್ಯ ಉದ್ದೇಶವಾಗಿದ್ದರೂ ಸೈನಿಕ ಕ್ಷಮತೆ ನಿರ್ಮಾಣ ಮಾಡುವದು ಇದು ಕೂಡಾ ಅದರ ಒಂದು ಉದ್ದಿಷ್ಟವಾಗಿದೆ. ಉದಯಕ್ಕನುಸರಿಸಿ 1974ರಲ್ಲಿ ಭಾರತವು ಪೋಖರಣ ಎಂಬಲ್ಲಿ ಮೊದಲನೇ ಅಣುಪರೀಕ್ಷೆ ಮಾಡಿತು. 1998ರಲ್ಲಿ ಎರಡನೆಯ ಅಣುಪರೀಕ್ಷೆ ಮಾಡಿ ಭಾರತವು ಅಣ್ವಸ್ತ್ರಗಳ ನಿರ್ಮಾಣ ಮಾಡಿದೆ. ಅಣ್ವಸ್ತ್ರಗಳನ್ನು ಹೊತ್ತೊಯ್ಯುವ ಕ್ಷೇಪಣಾಸ್ತ್ರಗಳನ್ನು ನಾವು ತಯಾರಿಸಿದ್ದು ಅದಕ್ಕಾಗಿ ವಾಯುದಳ ಮತ್ತು ನೌಕಾದಳಗಳನ್ನು ಕ್ಷಮತೆ

**ನಿಮಗೆ ಗೊತ್ತಿದೆಯೇ ?**

ಅಣ್ವಸ್ತ್ರಗಳು ಅತ್ಯಂತ ವಿನಾಶಕಾರಿಯಾಗಿರುವವು. ಅಂತೆಯೇ ಎಂದಿಗೂ ಅದರ ಉಪಯೋಗ ವಾಗುವದಿಲ್ಲ. ಅದಕ್ಕಾಗಿ ಸತತವಾಗಿ ಪ್ರಯತ್ನ ಮಾಡುವದು ಅವಶ್ಯಕವಾಗಿದೆ. ಅಣ್ವಸ್ತ್ರಗಳ ಪ್ರಸಾರ ತಡೆ ಹಿಡಿಯಲು ಪ್ರಾಮುಖ್ಯವಾಗಿ ಎರಡು ಕರಾರನ್ನು ಮಾಡಲಾಗಿದೆ. (1) ಅಣ್ವಸ್ತ್ರ ಪ್ರಸಾರಬಂಧನದ ಕರಾರು (NPT) (2) ಎಲ್ಲರನ್ನೊಳಗೊಂಡ ಅಣುಪರೀಕ್ಷೆ ಬಂಧನದ ಕರಾರು (CTBT) ಈ ಎರಡೂ ಕರಾರುಗಳಲ್ಲಿಯ ಶರ್ತುಗಳು ಕೇವಲ ದೊಡ್ಡ ದೇಶಗಳ ಲಾಭಕ್ಕಾಗಿಯೇ ಇದ್ದುದರಿಂದ ಮತ್ತು ವಿಕಸನಶೀಲ ದೇಶಗಳ ಮೇಲೆ ಅನ್ಯಾಯಕಾರಕ ನಿರ್ಬಂಧನೆ ಹಾಕುವದು ಆಗಿದ್ದರಿಂದ ಈ ಕರಾರಿನ ಮೇಲೆ ಭಾರತವು ಸಹಿ ಹಾಕಿಲ್ಲ.

**ಮಾಡಿ ನೋಡಿ**

ಅಣ್ವಸ್ತ್ರಗಳ ನಿರ್ಮಾಣ ಮಾಡುವ ದೇಶಗಳ ಸಂಖ್ಯೆ ಹೆಚ್ಚುತ್ತಲಿದೆ. ಅಣ್ವಸ್ತ್ರಗಳ ಪ್ರಸಾರ ತಡೆಹಿಡಿಯಲು ನಿಮ್ಮ ವರ್ಗದಿಂದ ಒಂದು ನಿವೇದನೆ ತಯ್ಯಾರಿಸಿರಿ. ವೃತ್ತಪತ್ರಿಕೆಯಲ್ಲಿ ಅದನ್ನು ಪ್ರಕಟಿಸಿ ಪ್ರಸಿದ್ಧಪಡಿಸಲು ಪ್ರಯತ್ನಿಸಿರಿ.

ಯುಳ್ಳದ್ದನ್ನಾಗಿ ಮಾಡಲಾಗಿದೆ.

ಭಾರತವು ಈಗ ಒಂದು ಅಣ್ವಸ್ತ್ರಧಾರಿ ರಾಷ್ಟ್ರವಾಗಿದೆ. ಆದರೆ ಒಂದು ಹೊಣೆಗಾರ ಅಣ್ವಸ್ತ್ರಧಾರಿ ರಾಷ್ಟ್ರ ಎಂಬ ಭೂಮಿಕೆಯನ್ನು ಸ್ವೀಕರಿಸಿದೆ. ನಿಃಶಸ್ತ್ರೀಕರಣದ ಪ್ರಯತ್ನಗಳಿಗೆ ಭಾರತವು ಸತತವಾಗಿ ಬೆಂಬಲಿಸುತ್ತಿದೆ. ಕಾರಣ ಜಗತ್ತಿನಲ್ಲಿ ಶಾಂತತೆ ಮತ್ತು ಸುರಕ್ಷಿತತೆ ಇರಬೇಕು ಎಂಬುದೇ ಭಾರತದ ಪಾತ್ರವಾಗಿದೆ.

ಪರರಾಷ್ಟ್ರ ಧೋರಣೆಯ ಈ ರೀತಿ ಪರಾಮರ್ಶೆ ತೆಗೆದುಕೊಂಡನಂತರ ಮುಂದಿನ ಪ್ರಕರಣದಲ್ಲಿ ನಾವು ಭಾರತದ ಸುರಕ್ಷಾ ವ್ಯವಸ್ಥೆಯ ಅಭ್ಯಾಸ ಮಾಡುವವರಿದ್ದೇವೆ.

## ಸ್ವಾಧ್ಯಾಯ

**1. ಕೆಳಗಿನ ಪರ್ಯಾಯ ಶಬ್ದಗಳಿಂದ ಯೋಗ್ಯ ಪರ್ಯಾಯ ಶಬ್ದವನ್ನು ಆಯ್ದು ವಿಧಾನಗಳನ್ನು ಪೂರ್ಣಗೊಳಿಸಿರಿ.**

(1) ಅಣುಶಕ್ತಿ ಆಯೋಗದ. ಸ್ಥಾಪನೆ ಮಾಡುವ ಮುಖ್ಯ ಉದ್ದೇಶ............. ಇದು ಆಗಿತ್ತು.

(ಅ) ಸೈನಿಕ ಕ್ಷಮತೆ ನಿರ್ಮಿಸುವದು

(ಬ) ಅಣುಪರೀಕ್ಷೆ ಮಾಡುವದು

(ಕ) ಅಣ್ವಸ್ತ್ರಗಳ ಪ್ರಸಾರ ತಡೆಹಿಡಿಯುವದು
(ಡ) ಶಕ್ತಿಯ ನಿರ್ಮಿತಿ

(2) ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳ ಎಲ್ಲಕ್ಕೂ ಮಹತ್ವದ ಉದ್ದೇಶವು .................. ಆಗಿದೆ.

(ಅ) ಅಣ್ವಿಕ ವಿಕಾಸ (ಬ) ಆರ್ಥಿಕ ವಿಕಾಸ
(ಕ) ಅಣುಪರೀಕ್ಷೆ (ಡ) ಸುರಕ್ಷಾ ವ್ಯವಸ್ಥೆ

(3) ಭಾರತದ ಪರರಾಷ್ಟ್ರ ಧೋರಣೆಯಲ್ಲಿ ಪ್ರಾಮುಖ್ಯವಾಗಿ ಕೆಳಗಿನ ಅಂಶಗಳು ಮಹತ್ವದ್ದಾಗಿವೆ.

(ಅ) ಮುಕ್ತ ಆರ್ಥಿಕ ಧೋರಣೆ
(ಬ) ಪರಸ್ಪರಾವಲಂಬನೆ
(ಕ) ಅಲಿಪ್ತವಾದ
(ಡ) ಅಣ್ವಿಕ ವಿಕಾಸ

(4) ಇ.ಸ. 1974 ರಲ್ಲಿ ಭಾರತವು .................. ಎಂಬಲ್ಲಿ ಅಣುಪರೀಕ್ಷೆ ಮಾಡಿತು.

(ಅ) ಶ್ರೀಹರಿಕೋಟಾ (ಬ) ಥುಂಬಾ
(ಕ) ಪೋಖರಣ (ಡ) ಜೈತಾಪೂರ

**2. ಮುಂದಿನ ವಿಧಾನಗಳು ಸರಿಯೋ, ತಪ್ಪೋ ಎಂಬುದನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಪಂಡಿತ ನೇಹರುರವರು ಭಾರತ-ಚೀನ ಸಂಬಂಧ ಸುಧಾರಿಸಲು ಮಹತ್ವದ ಕೊಡುಗೆ ನೀಡಿದರು.

(2) ಅಟಲಬಿಹಾರಿ ವಾಜಪೇಯಿಯವರು ಪಾಕಿಸ್ತಾನದೊಂದಿಗೆ ಸಂಬಂಧ ಸುಧಾರಿಸಲು ಮುಂದಾಳುತನ ವಹಿಸಿದರು.

**3. ಸಂಕಲ್ಪನೆಯನ್ನು ಸ್ಪಷ್ಟಪಡಿಸಿರಿ.**

(1) ಭಾರತದ ಪರರಾಷ್ಟ್ರ ಧೋರಣೆ
(2) ರಾಷ್ಟ್ರಿಯ ಹಿತಸಂಬಂಧ
(3) ಜಾಗತಿಕ ಶಾಂತತೆ

**4. ಅಣ್ವಸ್ತ್ರಸಿದ್ಧತೆಯಿಂದ ಜಾಗತಿಕ ಶಾಂತತೆಗೆ ಧಕ್ಕೆ ತಗಲುತ್ತಿದೆ, ಈ ವಿಷಯವಾಗಿ ನಿಮಗೆ ಏನು ಅನ್ನಿಸುತ್ತಿದೆ ?**


**5. ಮುಂದಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ.**

(1) ಭಾರತದ ಪರರಾಷ್ಟ್ರ ಧೋರಣೆಯು ಯಾವ ಮೂಲ್ಯಗಳನ್ನಾಧರಿಸಿದೆ?

(2) ಭಾರತ-ಚೀನಗಳ ಸಂಬಂಧವನ್ನು ಸುಧಾರಿಸಲು ಯಾರು ಯಾರು ಕೊಡುಗೆ ನೀಡಿದರು ?

(3) ಭಾರತದ ಪರರಾಷ್ಟ್ರ ಧೋರಣೆಯ ಉದ್ದೇಶಗಳನ್ನು ಬರೆಯಿರಿ.

**6. ಮುಂದಿನ ಸಂಕಲ್ಪನಾ ಚಿತ್ರವನ್ನು ತಯಾರಿಸಿರಿ.**




**ಉಪಕ್ರಮ:**

ಪ್ರಾಚೀನ ಕಾಲದಲ್ಲಿ ಯಾವ ಯಾವ ದೇಶಗಳೊಂದಿಗೆ ಭಾರತದ ವ್ಯಾಪಾರದ ಸಂಬಂಧವಿತ್ತು ಎಂಬುದರ ಮಾಹಿತಿ ದೊರಕಿಸಿಕೊಳ್ಳಿರಿ.

C4LLBL

# 3 ಭಾರತದ ಸುರಕ್ಷಾ ವ್ಯವಸ್ಥೆ

### ಬನ್ನಿ, ಸ್ವಲ್ಪ ಪುನರ್ನಿರೀಕ್ಷಣೆ ಮಾಡೋಣ!

ಹಿಂದಿನ ಪ್ರಕರಣದಲ್ಲಿ ನಾವು ಭಾರತದ ಪರರಾಷ್ಟ್ರ ಧೋರಣೆಯ ಕುರಿತು ಅಭ್ಯಾಸ ಮಾಡಿದ್ದೇವೆ. ಪರಕೀಯರ ಆಕ್ರಮಣ ಮತ್ತು ಅಂತರ್ಗತ ಅವ್ಯವಸ್ಥೆಯಿಂದ ಸಂರಕ್ಷಣೆ ಮಾಡುವದು, ಸೀಮಾ ರೇಷೆಯನ್ನು ಸುರಕ್ಷಿತವಾಗಿಡುವದು ಇವು ರಾಷ್ಟ್ರದ ಪ್ರಾಥಮಿಕ ಹಿತಸಂಬಂಧಗಳಿರುತ್ತವೆ ಎಂಬುದು ಕೂಡಾ ನಿಮಗೆ ತಿಳಿದಿದೆ. ಅದಕ್ಕಾಗಿ ಪ್ರತಿಯೊಂದು ರಾಷ್ಟ್ರ, ರಾಷ್ಟ್ರೀಯ ಮಟ್ಟದಲ್ಲಿ ಒಂದು ಭದ್ರವಾದ ಸುರಕ್ಷಾ ವ್ಯವಸ್ಥೆಯನ್ನು ನಿರ್ಮಾಣ ಮಾಡುವದು. ಭಾರತವೂ ಕೂಡ ಇಂಥ ರಾಷ್ಟ್ರೀಯ ಸುರಕ್ಷಾ ವ್ಯವಸ್ಥೆಯ ನಿರ್ಮಾಣ ಮಾಡಿದ್ದು ಈ ಪ್ರಕರಣದಲ್ಲಿ ನಾವು ಅದರ ಸ್ವರೂಪ ಮತ್ತು ಸುರಕ್ಷಾ ವ್ಯವಸ್ಥೆಯ ಮುಂದಿದ್ದ ಆವ್ಹಾನಗಳ ವಿಚಾರ ಮಾಡುವವರಿದ್ದೇವೆ.

### ರಾಷ್ಟ್ರೀಯ ಸುರಕ್ಷೆ ಅಂದರೇನು ?

ಅಂತರರಾಷ್ಟ್ರೀಯ ವ್ಯವಸ್ಥೆಯು ಸಾರ್ವಭೌಮ ರಾಷ್ಟ್ರಗಳಿಂದ ಆಗಿದೆ. ಈ ಸಾರ್ವಭೌಮ ರಾಷ್ಟ್ರಗಳು ಒಂದುವೇಳೆ ಒಬ್ಬರಿಗೊಬ್ಬರು ಸಹಕಾರ್ಯ ಮಾಡುತ್ತಿದ್ದರೂ ಅವರಲ್ಲಿ ಕೆಲವೊಂದು ಸಲ ಸಂಘರ್ಷ ಉಂಟಾಗುತ್ತದೆ. ರಾಷ್ಟ್ರರಾಷ್ಟ್ರಗಳಲ್ಲಿ ಸೀಮಾ ರೇಷೆಯ ಕುರಿತು ವಾದ-ವಿವಾದಗಳಿರುತ್ತವೆ, ಒಮ್ಮೊಮ್ಮೆ ನೀರಿನ ಹಂಚಿಕೆಯ ಕುರಿತು ಸಂಘರ್ಷ ಉಂಟಾಗುತ್ತದೆ. ಅಂತರರಾಷ್ಟ್ರೀಯ ಕರಾರುಗಳ ಪಾಲನೆಯನ್ನು ಮಾಡದೇ ಇರುವದು, ಪರಸ್ಪರರೊಂದಿಗೆ ಸತತವಾಗಿ ಸ್ಪರ್ಧೆ ಮಾಡುವದು, ನೆರೆಯ ದೇಶಗಳಿಂದ ವಲಸೆಗಾರರ ಗುಂಪು ಬರುವದು ಇವು ಸಂಘರ್ಷದ ಅನ್ಯ ಕಾರಣಗಳಾಗಿರಬಹುದು. ರಾಷ್ಟ್ರಗಳಲ್ಲಿ ಈ ರೀತಿ ಪರಸ್ಪರ ವಿರುದ್ಧ ಹಿತಸಂಬಂಧ ನಿರ್ಮಾಣವಾದರೆ, ಅದರ ನಿರಾಕರಣೆ ಒಪ್ಪಂದ (ಮಾತುಕತೆ), ಚರ್ಚೆ ಇವುಗಳ ಆಧಾರದಿಂದ ಮಾಡಲಾಗುತ್ತದೆ. ಆದರೆ ಇಂಥ ಪ್ರಯತ್ನಗಳು ಕಡಿಮೆ ಬಿದ್ದರೆ ಯಾವುದೊಂದು ರಾಷ್ಟ್ರವು ಯುದ್ಧದ ವಿಚಾರವನ್ನು ಮಾಡುವದು. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ಆಕ್ರಮಣ ಮಾಡುವದು, ರಾಷ್ಟ್ರದ ಸಾರ್ವಭೌಮತ್ವಕ್ಕೆ ಆವ್ಹಾನ ಕೊಡುವದು. ಇದರಿಂದ ರಾಷ್ಟ್ರದ ಸುರಕ್ಷಿತತೆಗೆ ಧಕ್ಕೆ ತಗಲುವದು. ಆಕ್ರಮಣಶೀಲ ರಾಷ್ಟ್ರಗಳ ಸೈನಿಕ ಸಾಮರ್ಥ್ಯದಿಂದ ಈ ಪ್ರಕಾರದ ಆವ್ಹಾನಗಳು ನಿರ್ಮಾಣವಾಗುತ್ತವೆ. ಯಾವುದೇ ಪರಿಸ್ಥಿತಿಯಲ್ಲಿ ರಾಷ್ಟ್ರದ ಸಾರ್ವಭೌಮತ್ವದ ಮತ್ತು ಅಸ್ತಿತ್ವದ ರಕ್ಷಣೆ ಮಾಡುವದು ಇದು ರಾಜ್ಯದ ಮೊದಲನೆ ಕರ್ತವ್ಯ ಮತ್ತು ಜವಾಬ್ದಾರಿ ಯಾಗಿದ್ದರಿಂದ ರಾಜ್ಯಕ್ಕೆ ತಮ್ಮ ಸುರಕ್ಷಾ ವ್ಯವಸ್ಥೆಯನ್ನು ಯಾವಾಗಲೂ ಸುಸಜ್ಜಿತ ಮತ್ತು ಹೊಸ ಮಾದರಿಯಿಂಧ ಇಡಬೇಕಾಗುವದು. ಇದಕ್ಕೆ ರಾಷ್ಟ್ರೀಯ ಸುರಕ್ಷೆ ಅನ್ನುವರು.



**ಹೇಳಿ ನೋಡೋಣ?**

ಪರಸ್ಪರಪೂರಕ ಮತ್ತು ಪರಸ್ಪರ ವಿರೋಧಿ ಹಿತಸಂಬಂಧಗಳ ಕೆಲವು ಉದಾಹರಣೆಗಳನ್ನು ಭಾರತ ಮತ್ತು ನೆರೆಯ ದೇಶಗಳ ಸಂದರ್ಭದಲ್ಲಿ ನಿಮಗೆ ಹೇಳಲು ಬರಬಹುದೆ ?

### ರಾಷ್ಟ್ರೀಯ ಸುರಕ್ಷೆಯನ್ನು ರಕ್ಷಿಸುವ ಮಾರ್ಗಗಳು-

- ರಾಷ್ಟ್ರದ ಸುರಕ್ಷೆಯ ಸಂಬಂಧವು ಭೌಗೋಲಿಕತೆಗೆ ಅಂಟಿಕೊಂಡಿದೆ, ಏಕೆಂದರೆ ಭೌಗೋಲಿಕ ದೃಷ್ಟಿಯಿಂದ ಹೆಚ್ಚು ಸಮೀಪವಿರುವ ರಾಷ್ಟ್ರಗಳಿಂದ ರಾಷ್ಟ್ರೀಯ ಸುರಕ್ಷಿತತೆಗೆ ಅಪಾಯ ಬಂದೊದಗುವ ಸಾಧ್ಯತೆ ಇರುವದು ತಮ್ಮ ಭೌಗೋಲಿಕ ಸೀಮಾರೇಷೆಗಳಿಗೆ ಇದ್ದ ಅಪಾಯ ಯಾವುದು ಮತ್ತು ಅದು ಯಾರಿಂದ ಇದೆ ಎಂಬುದನ್ನು ತಿಳಿದುಕೊಳ್ಳುವದು ಮಹತ್ವದ್ದಾಗಿದೆ.
- ಈ ಅಪಾಯವನ್ನು ದೂರ ಇಡಬೇಕಾದರೆ ಅದಕ್ಕಾಗಿ ರಾಷ್ಟ್ರಕ್ಕೆ ತಮ್ಮ ಸೈನಿಕ ಶಕ್ತಿಯನ್ನು ಹೆಚ್ಚಿಸಬೇಕಾಗುವದು. ಆಧುನಿಕ ತಂತ್ರಜ್ಞಾನದ ಅವಲಂಬನೆ ಮಾಡಿ ಅಪಾಯದ ಅಂದಾಜು ಕಟ್ಟುವದು, ಶಸ್ತ್ರಾಸ್ತ್ರ ನಿರ್ಮಿತಿ, ಸಂರಕ್ಷಣಾ ದಳಗಳ ಆಧುನಿಕೀಕರಣ ಮತ್ತು ಅದನ್ನು ಹೊಸ ಮಾದರಿ ಯಾಗಿ ಮಾಡುವದು ಈ ಮಾರ್ಗಗಳ ಅವಲಂಬನೆ ಮಾಡಲಾಗುತ್ತದೆ.
- ಯುದ್ಧದ ಮಾರ್ಗದಿಂದ ಸಂಘರ್ಷ ನಿರಾಕರಣೆ ಮಾಡುವದು ಮತ್ತು ರಾಷ್ಟ್ರೀಯ ಸುರಕ್ಷೆಯ ಜೋಪಾನ ಮಾಡುವದು, ಹೆಚ್ಚಿನ ಸಂಘರ್ಷದ ಮತ್ತು ಅಂತರರಾಷ್ಟ್ರೀಯ ಶಾಂತತೆಗೆ ಧಕ್ಕೆ ತಗುಲಿಸುವಂತದ್ದು ಇರುವದು. ಅಂತೆಯೇ ಕೆಲರಾಷ್ಟ್ರಗಳು ಅನ್ಯ ರಾಷ್ಟ್ರಗಳ ಬೆಂಬಲ ಪಡೆದು ರಾಷ್ಟ್ರೀಯ ಸುರಕ್ಷೆಗೆ ಇರುವ ಅಪಾಯವನ್ನು ಕಡಿಮೆ ಮಾಡುವ ಪ್ರಯತ್ನ ಮಾಡುವವು.

**ವಿಚಾರ ಮಾಡಿರಿ ಮತ್ತು ಸೂಚಿಸಿರಿ.**

ಶಸ್ತ್ರ-ಸಾಮರ್ಥ್ಯದ ಕುರಿತು ಎಲ್ಲ ದೇಶಗಳು ಸಮಾನವಾಗಿಲ್ಲ, ಇಂಥ ಪರಿಸ್ಥಿತಿಯಲ್ಲಿ ಒಂದುವೇಳೆ ನಮಗೆ ಶಸ್ತ್ರ ಕಡಿಮೆ ಮಾಡುವಿಕೆಯ ಧೋರಣೆಯನ್ನು ಜಾಗತಿಕ ಮಟ್ಟದಲ್ಲಿ ಉಪಯೋಗಿಸುವದಿದ್ದರೆ. ಏನು ಮಾಡಬೇಕಾಗುವದು.

**ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೇ?**

ಸೈನಿಕ ಶಕ್ತಿ ಹೆಚ್ಚಿಸುವ ಪ್ರಯತ್ನದಲ್ಲಿ ರಾಷ್ಟ್ರಗಳು ಪರಸ್ಪರ ರೊಂದಿಗೆ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಮಾಡುತ್ತವೆ. ಶಸ್ತ್ರ ಸ್ಪರ್ಧೆಯಿಂದ ಅಸುರಕ್ಷಿತತೆಯ ಭಾವನೆ ಹೆಚ್ಚಾಗುವದು. ಅಸುರಕ್ಷಿತತೆಯ ಭಾವನೆಯು ರಾಷ್ಟ್ರಿಯ ಸುರಕ್ಷೆಗೆ ಇರುವ ಅಪಾಯವನ್ನು ಹೆಚ್ಚಿಸುವದು. ಈ ಅಪಾಯವನ್ನು ದೂರ ಮಾಡಲು ಶಸ್ತ್ರ ಸ್ಪರ್ಧೆಯಿಂದಲ್ಲ ಶಸ್ತ್ರ ಕಡಿಮೆ ಮಾಡುವಿಕೆಯ ಅವಶ್ಯಕತೆ ಇದೆ.

**ಪರಿಚ್ಛೇದವನ್ನು ಓದಿ ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅಂತರರಾಷ್ಟ್ರಿಯ ಸಂಘರ್ಷವನ್ನು ಶಾಂತತೆಯ ಮತ್ತು ಮಾತುಕತೆಗಳ ಮೂಲಕ ಬಿಡಿಸುವ ಪ್ರಯತ್ನ ಪ್ರತಿಯೊಂದು ರಾಷ್ಟ್ರವು ಮಾಡಬೇಕು. ಅದಕ್ಕಾಗಿ ರಾಷ್ಟ್ರ-ರಾಷ್ಟ್ರಗಳಲ್ಲಿಯ ಮಾತುಕತೆ ಮತ್ತು ಕೊಡ ತಗೆದುಕೊಳ್ಳುವಿಕೆ ಹೆಚ್ಚಾಗ ಬೇಕು. ರಾಷ್ಟ್ರ-ರಾಷ್ಟ್ರಗಳಲ್ಲಿ ಎಷ್ಟೊಂದು ಹೆಚ್ಚು ಪರಸ್ಪರಾವಲಂಬನ ಅಷ್ಟೊಂದು ಹೆಚ್ಚು ಶಾಂತತೆ ಮತ್ತು ಸುರಕ್ಷಿತತೆ ಹೆಚ್ಚುವದು. ಇದರಿಂದ ಅಂತರರಾಷ್ಟ್ರಿಯ ಸಹಕಾರ್ಯ ಬೆಳೆಯಲು ಚರ್ಚೆ ಮತ್ತು ಮಾತುಕತೆಗಾಗಿ ಬೇರೆ ಬೇರೆ ಮಾದ್ಯಮಗಳು ಮತ್ತು ವೇದಿಕೆಗಳು ಲಭ್ಯವಾಗುವವು. ಆರ್ಥಿಕ ಹಾನಿಯ ಅಂಜಿಕೆಯಿಂದ ರಾಷ್ಟ್ರಗಳು ಯುದ್ಧವನ್ನು ತಪ್ಪಿಸುವ ಪ್ರಯತ್ನ ಮಾಡಬಹುದು.

1. ಮೇಲಿನ ಪರಿಚ್ಛೇದದಿಂದ ಯಾವ ಸಂದೇಶ ದೊರಕುವದು?
2. ರಾಷ್ಟ್ರ-ರಾಷ್ಟ್ರಗಳಲ್ಲಿಯ ಸಂವಾದ ಹೇಗೆ ಬೆಳೆಯಬಹುದು?
3. ಆರ್ಥಿಕ ಹಾನಿ ಮತ್ತು ಯುದ್ಧ ಇವುಗಳಲ್ಲಿ ಯಾವ ಸಂಬಂಧವಿದೆ?

**ಭಾರತದ ಸುರಕ್ಷಾ ವ್ಯವಸ್ಥೆ:** ಭೂದಳ, ನೌಕಾದಳ ಮತ್ತು ವಾಯುದಳ ಈ ಮೂರು ಸಂರಕ್ಷಣೆ ದಳಗಳ ಭಾರತದ ಸುರಕ್ಷಾ ವ್ಯವಸ್ಥೆಯಲ್ಲಿ ಸಮಾವೇಶವಿದೆ. ಭಾರತದ ಭೌಗೋಲಿಕ ಸೀಮೆಗಳ ರಕ್ಷಣೆ ಮಾಡುವ ಜವಾಬದಾರಿ ಭೂದಳದ ಮೇಲೆ ಇದೆ ಅಲ್ಲದೆ ನೌಕಾದಳವು ಭಾರತದ ಸಮುದ್ರ ಸೀಮೆಗಳ ರಕ್ಷಣೆ ಮಾಡುವದು. ಭಾರತದ ವಾಯುಸೀಮೆ ಮತ್ತು ಅವಕಾಶದ ರಕ್ಷಣೆ ಮಾಡುವ ಹೊಣೆ ವಾಯುದಳದ್ದಿರುತ್ತದೆ. ಈ ಮೂರು ದಳಗಳ ಮೇಲೆ ಸಂರಕ್ಷಣ ಮಂತ್ರಾಲಯದ ನಿಯಂತ್ರಣ ಇರುವದು. ಭಾರತದಲ್ಲಿಯ ಭೂದಳವು ಬಹಳ ದೊಡ್ಡದಿದ್ದು ಅದು ಜಗತ್ತಿನಲ್ಲಿ ಏಳನೇ ಕ್ರಮಾಂಕಿನದೆಂದು ತಿಳಿಯಲಾಗುವದು. ಭೂದಳದ ಪ್ರಮುಖನಿಗೆ 'ಜನರಲ್' ಎಂದು ಕರೆಯುವರು. ನೌದಳದ ಪ್ರಮುಖನಿಗೆ 'ಅಡಮಿರಲ್' ಅನ್ನುವರು. ಮತ್ತು ವಾಯುದಳದ ಪ್ರಮುಖನಿಗೆ 'ಏಅರ ಚೀಪ್ ಮಾರ್ಶಲ್' ಎಂದು ಕರೆಯುತ್ತಾರೆ. ಈ ಮೂರೂ ದಳಗಳಲ್ಲಿ ಸಮನ್ವಯ ಇಡುವ ಸಲುವಾಗಿ 2019 ರಲ್ಲಿ



ಭೂದಳ



ನೌದಳ



ವಾಯುದಳ

**ಶೋಧಿಸಿರಿ ಅಂದರೆ ಇನ್ನೂ ತಿಳಿಯಬಹುದು....**

ಸೈನಿಕ ಆಢಳಿತ ವೆಂದರೇನು ?

ಇಂಥ ಆಡಳಿತದಲ್ಲಿಪ್ರಜಾಪ್ರಭುತ್ವಇರುತ್ತದೆಯೆ?

'ಸಂರಕ್ಷಣ ಪ್ರಮುಖ' (Chief of Defence Staff) ಎಂಬ ಹುದ್ದೆಯನ್ನು ನಿರ್ಮಾಣ ಮಾಡಲಾಗಿದೆ. ಈ ಪ್ರಮುಖರ ನೇಮಕವನ್ನು ಭಾರತದ ರಾಷ್ಟ್ರಪತಿಯವರು ಮಾಡುವರು.

ಭಾರತದ ರಾಷ್ಟ್ರಪತಿಯವರು ಎಲ್ಲ ಸಂರಕ್ಷಣ ದಳಗಳ ಸರಸೇನಾಪತಿ (Supreme Commander of the Defence Forces) ಇರುವರು. ರಾಷ್ಟ್ರಪತಿಯವರ ಸಮ್ಮತಿ ಇಲ್ಲದೆ ಸಂರಕ್ಷಣ ದಳಗಳಿಗೆ ಯುದ್ಧ ಅಥವಾ ಶಾಂತತೆಯ ಕುರಿತು ನಿರ್ಣಯವನ್ನು ತಗೆದುಕೊಳ್ಳಲು ಬರುವದಿಲ್ಲ, ಏಕೆಂದರೆ ರಾಷ್ಟ್ರಪತಿಯವರು ನಾಗರಿ ಸತ್ತೆಯ ಪ್ರತಿನಿಧಿತ್ವ ಮಾಡುವರು. ಪ್ರಜಾಪ್ರಭುತ್ವದಲ್ಲಿ ನಾಗರಿ ನೇತೃತ್ವವು ಸೈನಿಕ ನೇತೃತ್ವಕ್ಕಿಂತ ಶ್ರೇಷ್ಠವೆಂದು ತಿಳಿಯಲಾಗುವದು.

ಭಾರತದ ಸುರಕ್ಷಾ ವ್ಯವಸ್ಥೆಯಲ್ಲಿಯ ಮೂರು ಸಂರಕ್ಷಣ ದಳಗಳು ಹೊಸ ಮಾದರಿಯವಾಗಿರಬೇಕು. ಅದಕ್ಕಾಗಿ ಅನೇಕ ಉಪಾಯ ಯೋಜನೆ ಮಾಡಲಾಗುತ್ತದೆ. ಅದಕ್ಕಾಗಿ ಕೆಲ ಸಂಶೋಧನಾ ಸಂಸ್ಥೆಗಳ ಸ್ಥಾಪನೆ ಮಾಡಲಾಗಿದೆ. ಸಂರಕ್ಷಣ ದಳಗಳಲ್ಲಿಯ ಎಲ್ಲ ಶ್ರೇಣಿಗಳ ವ್ಯಕ್ತಿಗಳಿಗೆ ತಮ್ಮ ಕೆಲಸ ಉತ್ತಮ ರೀತಿಯಿಂದ ನಡೆಸಿಕೊಂಡು ಹೋಗಲು ತಮ್ಮ ದೇಶದಲ್ಲಿ ಅನೇಕ ಪ್ರಶಿಕ್ಷಣ ಸಂಸ್ಥೆಗಳೂ ಇವೆ. ಉದಾ: ಪುಣೆಯಲ್ಲಿಯ ನ್ಯಾಶನಲ್ ಡಿಫೆನ್ಸ ಅಕಾಡೆಮಿ, ದಿಲ್ಲಿಯಲ್ಲಿಯ ನ್ಯಾಶನಲ್ ಡಿಫೆನ್ಸ ಕಾಲೇಜ ಮುಂತಾದವುಗಳು.

**ಅರೆಸೈನಿಕ ದಳಗಳು:** ಭಾರತದಲ್ಲಿಯ ಸಂರಕ್ಷಣ ದಳಗಳಿಗೆ ಸಹಾಯ ಮಾಡಲು ಅರೆಸೈನಿಕ ದಳಗಳು ಇರುತ್ತವೆ. ಅವು ಪೂಣತಃ ಸೈನಿಕರಾಗಿರುವದಿಲ್ಲ ಮತ್ತು ನಾಗರಿ ಕೂಡಾ ಇರುವದಿಲ್ಲ, ಅಂತೆಯೇ ಅವರಿಗೆ ''ಅರೆಸೈನಿಕ ದಳಗಳು'' ಎಂದು ಕರೆಯಲಾಗಿದೆ. ಸಂರಕ್ಷಣ ದಳಗಳಿಗೆ ಸಹಾಯ ಮಾಡುವದು ಇವರ ಮುಖ್ಯ ಕೆಲಸ ವಿರುವದು. ಸೀಮಾ ಸುರಕ್ಷಾ ದಳ (Border Security Force), ತಟರಕ್ಷಕ ದಳ (Coast Guard), ಕೇಂದ್ರಿಯ ಕಾಯ್ದಿರಿಸಿದ ಪೋಲಿಸ ದಳ (Central Reserve Police), ಶೀಘ್ರ ಕೃತಿದಳ (Rapid Action Force) ಇವುಗಳು ಅರೆಸೈನಿಕ ದಳದಲ್ಲಿ ಸಮಾವೇಶ ವಾಗುವವು.

ರೇಲ್ವೆ ನಿಲ್ದಾಣ, ಎಣ್ಣೆ ಸಂಗ್ರಹ, ನೀರಿನ ಸಂಗ್ರಹ ಮುಂತಾದ ಮಹತ್ವದ ಸ್ಥಳಗಳ ಸಂರಕ್ಷಣೆ ಮಾಡುವ ಜವಾಬ್ದಾರಿ ಅರೆಸೈನಿಕ ದಳದ್ದಾಗಿರುತ್ತದೆ. ಹಾಗೆಯೇ ನೈಸರ್ಗಿಕ ಇಲ್ಲವೆ ಮಾನವ ನಿರ್ಮಿತ ಆಪತ್ತಿನ ವ್ಯವಸ್ಥಾಪನೆ ಮಾಡುವಲ್ಲಿ ಅವರ ಸಹಭಾಗ ಇರುವದು. ಶಾಂತತೆಯ ಕಾಲದಲ್ಲಿ ದೇಶದ ಅಂತರರಾಷ್ಟ್ರಿಯ ಸೀಮೆಗಳ ರಕ್ಷಣೆ ಮಾಡುವ ಜವಾಬ್ದಾರಿ ಅರೆಸೈನಿಕ ದಳದ ಮೇಲೆ ಇರುತ್ತದೆ.

ಸೀಮೆಯ ಸಮೀಪದ ಭಾಗದಲ್ಲಿರುವ ನಾಗರಿಕರ ಮನಸ್ಸಿನಲ್ಲಿ ಸುರಕ್ಷಿತತೆಯ ಭಾವನೆ ನಿರ್ಮಾಣ ಮಾಡುವದು, ಕಳ್ಳತನ ನಿಲ್ಲಿಸುವದು, ಸೀಮೆಯ ಮೇಲೆ ಕಾವಲು ಮಾಡುವದು ಈ ಕಾರ್ಯಗಳನ್ನು ಸೀಮಾ ಸುರಕ್ಷಾ ದಳವು ಮಾಡುವದು.

ಭಾರತದ ಸಮುದ್ರ ದಂಡೆಗಳ ರಕ್ಷಣೆ ಮಾಡುವ ಸಲುವಾಗಿ ತಟರಕ್ಷಕ ದಳದ ನಿರ್ಮಾಣ ಮಾಡಲಾಗಿದೆ. ಭಾರತದ ಸಮುದ್ರ ಸೀಮಯಲ್ಲಿಯ ಮೀನುಗಾರಿಕೆ ವ್ಯವಸಾಯಕ್ಕೆ ಸಂರಕ್ಷಣೆ ಕೊಡುವದು, ಸಮುದ್ರ ಮಾರ್ಗದಲ್ಲಿಯ ಕಳ್ಳವ್ಯಾಪಾರ ನಿಲ್ಲಿಸುವದು. ಮುಂತಾದ ಕಾರ್ಯಗಳನ್ನು ತಟರಕ್ಷಕ ದಳದವರು ಮಾಡುವರು.

ಕಾಯ್ದೆ ಮತ್ತು ಸುರಕ್ಷಿತತೆಯನ್ನು ರಕ್ಷಿಸಲು, ವಿವಿಧ ರಾಜ್ಯಗಳಲ್ಲಿಯ ಆಢಳಿತಕ್ಕೆ ಸಹಾಯ ಮಾಡುವ ಕೆಲಸವನ್ನು ಕೇಂದ್ರಿಯ ಮೀಸಲು ಪೋಲಿಸ ಪಡೆ ಮಾಡುವದು.

ಬಾಂಬಸ್ಫೋಟ, ದಂಗೆಗಳು ಇವುಗಳಿಂದ ದೇಶದ ಸುರಕ್ಷಿತತೆಗೆ ಧಕ್ಕೆ ಉಂಟಾದರೆ ವೇಗವಾಗಿ ಚಲಿಸಿ ಜನಜೀವನವನ್ನು ವ್ಯವಸ್ಥಿತವಾಗಿ ಮಾಡುವ ಕೆಲಸವನ್ನು ಶೀಘ್ರ ಕೃತಿದಳವು ಮಾಡುವದು.

ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸೈನಿಕ ಶಿಕ್ಷಣದ ಅಭಿರುಚಿ ನಿರ್ಮಾಣವಾಗಲೆಂಬ ಉದ್ದೇಶದಿಂದ ರಾಷ್ಟ್ರಿಯ ಛಾತ್ರಸೇನೆ ಅಂದರೆ ಎನ್.ಸಿ.ಸಿ.ಯ ಸ್ಥಾಪನೆ ಮಾಡಲಾಯಿತು. ಇದರಲ್ಲಿ ಶಾಲೆ, ಮಹಾವಿದ್ಯಾಲಯಗಳಲ್ಲಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಸಹಭಾಗಿಗಳಾಗಲು ಬರುವದು.

**ಗೃಹರಕ್ಷಕ ದಳ:** ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಗೃಹರಕ್ಷಕದಳ (ಹೋಮಗಾರ್ಡ) ಈ ಸಂಘಟನೆಯ ಸ್ಥಾಪನೆ ಮಾಡಲಾಯಿತು. ಗೃಹರಕ್ಷಕ ದಳದಲ್ಲಿ ಸಹಭಾಗಿಯಾಗಿ ನಾಗರಿಕರು ದೇಶದ ಸಂರಕ್ಷಣೆಗೆ ಸಹಾಯ ಮಾಡುವರು. ಇಪ್ಪತ್ತರಿಂದ ಮುವತ್ತೈದು ವರ್ಷ ವಯಸ್ಸಿನ ಸ್ತ್ರಿ-ಪುರುಷ ನಾಗರಿಕರಿಗೆ ಈ ದಳದಲ್ಲಿ ಭರ್ತಿಯಾಗಲು ಬರುವದು.

ಪೋಲಿಸರ ಹಾಗೆಯೇ ಸಾರ್ವಜನಿಕ ಸುರಕ್ಷಿತತೆ ಕಾಪಾಡುವದು, ದಂಗೆ ಮತ್ತು ಬಂದ ಈ ಕಾಲದಲ್ಲಿ ಹಾಲು, ನೀರು, ಮುಂತಾದ ಜೀವನಾವಶ್ಯಕ ವಸ್ತುಗಳ ಪೂರೈಕೆ ಮಾಡುವದು, ಸಾರಿಗೆಯ ವ್ಯವಸ್ಥೆ ಮಾಡುವದು, ಭೂಕಂಪ, ಮಹಾಪೂರ ಇಂತಹ ನೈಸರ್ಗಿಕ ಸಂಕಟಕಾಲದಲ್ಲಿ ಜನರಿಗೆ ಸಹಾಯ ಮಾಡುವದು. ಮುಂತಾದ ಕಾರ್ಯಗಳನ್ನು ಗೃಹರಕ್ಷಕ ದಳದವರು ಮಾಡುವರು.

### ಭಾರತದ ಸುರಕ್ಷಿತತೆಯ ಮುಂದೆ ಇದ್ದ ಆವ್ಹಾನಗಳು

- ಸ್ವಾತಂತ್ರ್ಯದಿಂದ ಇಲ್ಲಿಯವರೆಗೆ ಭಾರತದ ಸುರಕ್ಷಿತತೆಗೆ ಪಾಕಿಸ್ತಾನ ಮತ್ತು ಚೀನ ಈ ರಾಷ್ಟ್ರಗಳು ಧಕ್ಕೆಯನ್ನುಂಟು ಮಾಡುವ ಪ್ರಯತ್ನ ಮಾಡಿವೆ. ಭಾರತ ಮತ್ತು ಪಾಕಿಸ್ತಾನ ಇವುಗಳಲ್ಲಿ ಅನೇಕ ವಾದ ವಿವಾದದ ಪ್ರಶ್ನೆಗಳಿವೆ. ಉದಾ: ಕಾಶ್ಮೀರದ ಸಮಸ್ಯೆ, ನೀರು ಹಂಚುವಿಕೆಯ ಜಗಳ, ಗುಪ್ತರೀತಿಯಿಂದ ದೇಶದಲ್ಲಿ ಸೇರುವವರ ಸಮಸ್ಯೆ, ಸೀಮಾವಾದ ಮುಂತಾದವು. ಈ ಪ್ರಶ್ನೆಗಳನ್ನು ಚರ್ಚೆ ಮತ್ತು ಮಾತುಕತೆಗಳ ಮೂಲಕ ಬಿಡಿಸುವ ಪ್ರಯತ್ನ ಭಾರತ ಸತತವಾಗಿ ಮಾಡುತ್ತಲಿದೆ. (ಭಾರತ-ಪಾಕಿಸ್ತಾನ ಸಂಬಂಧದ ಕುರಿತು ನಿಮಗೆ ಪ್ರಕರಣ 9ರಲ್ಲಿ ಹೆಚ್ಚು ಅಭ್ಯಾಸ ಮಾಡಲು ಸಿಗುವದು).
- ಏಶಿಯಾ ಖಂಡದಲ್ಲಿ ಭಾರತ ಮತ್ತು ಚೀನ ಇವು ಮಹತ್ವದ ದೇಶಗಳಾಗಿವೆ. 1967 ರಲ್ಲಿ ಚೀನದ ಜೊತೆಗೆ ನಮ್ಮ ಯುದ್ಧವೂ ಆಯಿತು. ಭಾರತದ ನೆರೆಯಲ್ಲಿರುವ ರಾಷ್ಟ್ರಗಳ ಮೇಲೆ ತನ್ನ ಪ್ರಭುತ್ವವನ್ನು ಪ್ರಸ್ಥಾಪಿಸುವ ಪ್ರಯತ್ನ ಚೀನವು ಮಾಡುತ್ತಿದ್ದರಿಂದ

ಭಾರತ-ಚೀನ ಸಂಬಂಧದಲ್ಲಿ ಸಂಘರ್ಷ ಉಂಟಾಗಿದೆ. ಸೀಮಾ ರೇಷೆಯ ಕುರಿತು ಭಾರತ-ಚೀನ ಇವುಗಳಲ್ಲಿ ವಾದವಿವಾದ ಇದೆ.

- ಭಾರತದ ಸುರಕ್ಷಿತತೆಗೆ ಕೇವಲ ಹೊರಗಿನ ರಾಷ್ಟ್ರಗಳಿಂದ ಅಷ್ಟೇ ಅಪಾಯ ಇದೆ ಎಂದಲ್ಲ, ಅಂತರ್ಗತ ಕ್ಷೇತ್ರಗಳಿಂದಲೂ ಸುರಕ್ಷಿತತೆಗೆ ಧಕ್ಕೆಯನ್ನುಂಟು ಮಾಡುವ ಪ್ರಯತ್ನವಾಗುತ್ತಿದೆ. ರಾಷ್ಟ್ರಿಯ ಸುರಕ್ಷಿತತೆ ಸಂದರ್ಭದಲ್ಲಿ ಈಗ ಬಾಹ್ಯ ಸುರಕ್ಷಿತತೆ ಮತ್ತು ಅಂತರ್ಗತ ಸುರಕ್ಷಿತತೆ ಎಂಬ ಅಂತರ ಮಹತ್ವದಾಗಿ ಉಳಿದಿಲ್ಲ. ಧರ್ಮ, ಪ್ರಾದೇಶಿಕತೆ, ವೈಚಾರಿಕ, ವಾಂಶಿಕ, ಆರ್ಥಿಕ ಇವುಗಳ ಮೇಲೆ ಆಧರಿಸಿದ ಹಲವಾರು ಬಂಡುಖೋರರ ಚಳುವಳಿ, ಅಂತರ್ಗತ ಕ್ಷೇತ್ರದಲ್ಲಿ ಅಸ್ಥಿರತೆಯನ್ನು ನಿರ್ಮಾಣ ಮಾಡುತ್ತಲಿವೆ. ಉದಾ: ನಕ್ಷಲವಾದಿ ಚಳುವಳಿ.
- ಆತಂಕವಾದ (ಕೊಲೆ ಸುಲಿಗೆಗಳ ವಿಕೋಪ) ಇದು ಭಾರತದ ಅಂತರ್ಗತ ಸುರಕ್ಷೆಯ ಸಂದರ್ಭದಲ್ಲಿಯ ಎಲ್ಲಕ್ಕೂ ದೊಡ್ಡ ಆವ್ಹಾನವಾಗಿದೆ. ಆತಂಕವಾದ ಇದು ಒಂದು ಜಾಗತಿಕ ಸಮಸ್ಯೆಯಾಗಿದ್ದು ಆತಂಕವಾದವು ನಷ್ಟವಾಗಬೇಕೆಂದು ಭಾರತವು ಪ್ರಯತ್ನಿಸುತ್ತಿದೆ.

### ಮಾನವೀ ಸುರಕ್ಷೆ:

ರಾಷ್ಟ್ರೀಯ ಸುರಕ್ಷೆಯ ಕಲ್ಪನೆಯಲ್ಲಿ ಶೀತಯುದ್ಧದ ನಂತರದ ಕಾಲದಲ್ಲಿ ಬದಲಾವಣೆ ಆಗಿದ್ದು ಅದು ಹೆಚ್ಚು ವ್ಯಾಪಕವಾಗಿದೆ. ರಾಷ್ಟ್ರಿಯ ಸುರಕ್ಷೆ ಅಂದರೆ ಕೇವಲ ದೇಶದ ಸುರಕ್ಷೆ ಅಲ್ಲ, ಅದರಲ್ಲಿರುವ ಮಾನವರ ಸುರಕ್ಷೆ ಎಂಬ ಹೊಸ ವಿಚಾರ ಅದರಲ್ಲಿ ಬಂದಿದೆ. ಏಕೆಂದರೆ ದೇಶದ ಸುರಕ್ಷೆ ಇದು ಕೊನೆಯದಾಗಿ ಮಾನವರಿಗಾಗಿಯೇ ಇರುವದು. ಅಂತೆಯೇ ಮನುಷ್ಯನನ್ನು ಕೇಂದ್ರ ಸ್ಥಾನದಲ್ಲಿಟ್ಟು ಹೊಸದಾಗಿ ಮಾಡಿದ ಸುರಕ್ಷೆಯ ವಿಚಾರವೆಂದರೆ ಮಾನವೀ ಸುರಕ್ಷೆ ಹೌದು. ಮಾನವಿ ಸುರಕ್ಷೆಯಲ್ಲಿ ಮಾನವರ ಎಲ್ಲ ಪ್ರಕಾರದ ಅಪಾಯದಿಂದ ಸಂರಕ್ಷಣೆ ಮಾಡಿ ಅವರಿಗೆ ಶಿಕ್ಷಣ, ಆರೋಗ್ಯ ಮತ್ತು ವಿಕಾಸದ ಅವಸರಗಳನ್ನು ದೊರಕಿಸಿ ಕೊಡುವದು ಅಪೇಕ್ಷಿತವಾಗಿದೆ.

ನಿರಕ್ಷರತೆ, ದಾರಿದ್ರ್ಯ, ಅಂಧ:ಶ್ರದ್ಧೆ, ಹಿಂದುಳಿಯುವಿಕೆ, ದೂರ ಮಾಡಿ ಎಲ್ಲರಿಗೂ ಸನ್ಮಾನದಿಂದ ಜೀವಿಸಲು ಪೋಷಕ ವಾತಾವರಣ ನಿರ್ಮಾಣ ಮಾಡುವದು, ಇವುಗಳ ಸಮಾವೇಶವು ಮಾನವೀ ಸುರಕ್ಷೆಯಲ್ಲಿ ಬರುವದು. ಅಲ್ಪಸಂಖ್ಯಾತ ಮತ್ತು ದುರ್ಬಲ ಗುಂಪಿನ ಹಕ್ಕುಗಳ ಸಂರಕ್ಷಣೆಯೂ ಮಾನವೀ ಸುರಕ್ಷೆಗಾಗಿ ಅವಶ್ಯಕವಾಗಿದೆ.

### ಮಾನವೀ ಸುರಕ್ಷೆಗೆ ಇರುವ ಆವ್ಹಾನಗಳು:

(1) ಮಾನವೀ ಸುರಕ್ಷೆಗೆ ಇರುವ ಎಲ್ಲಕ್ಕೂ ದೊಡ್ಡ ಆವ್ಹಾನ ವೆಂದರೆ ಆತಂಕವಾದ. ಆತಂಕವಾದ ಗುರಿ ಸಾಮಾನ್ಯ, ನಿರಪರಾಧ ಮನುಷ್ಯರು ಇರುವರು. ಅವರ ಮನಸ್ಸಿನಲ್ಲಿ ಆತಂಕ ಇಲ್ಲವೆ ಭೀತಿಯನ್ನು ಹುಟ್ಟಿಸಿ ಅವರಲ್ಲಿ ಅಸುರಕ್ಷಿತತೆಯ ಭಾವನೆಯನ್ನು ನಿರ್ಮಾಣ ಮಾಡುವದು ಇದು ಆತಂಕವಾದದ ಉದ್ದೇಶವಾಗಿರುತ್ತದೆ. ಇದರಿಂಧ ಮಾನವೀ ಸುರಕ್ಷೆಗಾಗಿ ಆತಂಕವಾದವನ್ನು ನಷ್ಟ ಮಾಡುವದು ಅವಶ್ಯಕವಾಗಿದೆ.

**ಚರ್ಚೆ ಮಾಡಿರಿ**

- ಮಾನವೀ ಸುರಕ್ಷೆಗಾಗಿ ಪ್ರಜಾಪ್ರಭುತ್ವ ಆಢಳಿತ ವ್ಯವಸ್ಥೆಯೇ ಉಪಯುಕ್ತವಾಗಿದೆ ಎಂದು ನಿಮಗೆ ಅನಿಸುತ್ತದೆಯೇ? ಚರ್ಚೆಯಲ್ಲಿ ನೀವು ಯಾವ ಅಂಶಗಳನ್ನು ಮಂಡಿಸುವಿರಿ?
- ಮಾನವೀ ಸುರಕ್ಷೆಗಾಗಿ ಕೌಟುಂಬಿಕ ಮಟ್ಟದಲ್ಲಿ ಯಾವ ಪ್ರಯತ್ನ ಮಾಡಲು ಬರಬಹುದು ?

(2) ಪರಿಸರ ದಲ್ಲಿಯ ಬದಲಾವಣೆಯಿಂದ ಮತ್ತು ಪರಿಸರದಿಂದ ಕೂಡ ಮಾನವಿ ಜೀವನಕ್ಕೆ ಅಪಾಯ ನಿರ್ಮಾಣವಾಗಿದೆ. ಏಡ್ಸ್, ಡೆಂಗ್ಯೂ, ಚಿಕನಗುನಿಯಾ, ಸ್ವಾಯಿನ್‌ಫ್ಲೂ, ಇಬೊಲಾ ಕೊರೋನದಂತಹ ರೋಗಗಳು ದೊಡ್ಡ ಆವ್ಹಾನವನ್ನು ನೀಡಿವೆ. ಈ ರೋಗಗಳಿಂದ ಮಾನವನ ಸಂರಕ್ಷಣೆ ಮಾಡುವದು ಇದು ಕೂಡಾ ಮಾನವಿ ಸುರಕ್ಷೆಯ ಘಟಕವೆಂದು ತಿಳಿಯಲಾಗುವದು.

**ನಿಮಗೆ ಏನು ಅನ್ನಿಸುವದು ?**

ಸಮಾಜದಲ್ಲಿಯ ಹೆಚ್ಚುತ್ತಿರುವ ಹಿಂಸಾಚಾರವು ಮಾನವಿ ಸುರಕ್ಷೆಗೆ ಧಕ್ಕೆಯನ್ನುಂಟು ಮಾಡುತ್ತದೆ. ಹಿಂಸಾಚಾರ ಹೆಚ್ಚಾಗಬಾರದೆಂದು ಎಲ್ಲ ಸ್ತರಗಳ ಮೇಲೆ ಯಾವರೀತಿಯಿಂದ ಶಾಂತತಾ ಪ್ರಕ್ರಿಯೆಯನ್ನು ನಿರ್ಮಾಣ ಮಾಡಲು ಬರಬಹುದು ?

ಭಾರತದ ಸುರಕ್ಷಾ ವ್ಯವಸ್ಥೆಯ ಸ್ವರೂಪವನ್ನು ನಾವು ಈ ಪ್ರಕರಣದಲ್ಲಿ ಅಭ್ಯಸಿಸಿದ್ದೇವೆ. ರಾಷ್ಟ್ರಿಯ ಸುರಕ್ಷೆಯಿಂದ ಮಾನವೀ ಸುರಕ್ಷೆ ಹೀಗೆ ಸುರಕ್ಷೆಗೆ ಸಂಬಂಧಿಸಿದ ಕಲ್ಪನೆಯಲ್ಲಿ ಆದ ಬದಲಾವಣೆಯನ್ನೂ, ನಾವು ಈ ಪ್ರಕರಣದಲ್ಲಿ ತಿಳಿದುಕೊಂಡಿದ್ದೇವೆ. ಮುಂದಿನ ಪ್ರಕರಣದಲ್ಲಿ ನಾವು ಸಂಯುಕ್ತ ರಾಷ್ಟ್ರ ಸಂಘ ಈ ಅಂತರರಾಷ್ಟ್ರಿಯ ಸಂಘಟನೆಯ ಅಭ್ಯಾಸ ಮಾಡುವವರಿದ್ದೇವೆ. ಮಾನವಿ ಸುರಕ್ಷೆಗಾಗಿ ಅದು ಯಾವ ಉಪಾಯ ಯೋಜನೆಯನ್ನು ಮಾಡುವದು ಎಂಬುದನ್ನು ತಿಳಿದುಕೊಳ್ಳೋಣ.

**1. ಕೆಳಗೆ ಕೊಟ್ಟ ಪರ್ಯಾಯ ಶಬ್ದಗಳಿಂದ ಯೋಗ್ಯ ಪರ್ಯಾಯವನ್ನು ಆರಿಸಿ ವಿಧಾನಗಳನ್ನು ಪೂರ್ಣ ಮಾಡಿರಿ.**

(1) ಭಾರತದ ................ ಇವರು ಎಲ್ಲ ಸಂರಕ್ಷಕ ದಳದ ಸರಸೇನಾಪತಿ ಇರುವರು.
(ಅ) ಪ್ರಧಾನಮಂತ್ರಿ (ಬ) ರಾಷ್ಟ್ರಪತಿ
(ಕ) ಸಂರಕ್ಷಣ (ಡ) ರಾಜ್ಯಪಾಲ

(2) ಭಾರತದ ಸಮುದ್ರ ದಂಡೆಯ ರಕ್ಷಣೆಯ ಜವಾಬ್ದಾರಿ ಇರುವ ದಳ -
(ಅ) ಭೂದಳ (ಬ) ತಟರಕ್ಷಕ ದಳ
(ಕ) ಸೀಮಾ ಸುರಕ್ಷಾ ದಳ (ಡ) ಶೀಘ್ರ ಕೃತಿ ದಳ

(3) ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸೈನಿಕ ಶಿಕ್ಷಣದ ಅಭಿರುಚಿಯನ್ನು ನಿರ್ಮಾಣ ಮಾಡಲು ............ದ ಸ್ಥಾಪನೆ ಮಾಡಲಾಯಿತು.
(ಅ) ಬಿ.ಎಸ್.ಎಫ್ (ಬ) ಸಿ.ಆರ್.ಪಿ.ಎಫ್
(ಕ) ಎನ್.ಸಿ.ಸಿ. (ಡ) ಆರ್.ಎ.ಎಫ್

**2. ಕೆಳಗಿನ ವಿಧಾನಗಳು ಸರಿಯೋ, ತಪ್ಪೊ ಎಂಬುದನ್ನು ಕಾರಣದೊಂದಿಗೆ ಸ್ಪಷ್ಟಪಡಿಸಿರಿ.**

(1) ಮಾನವೀ ಸುರಕ್ಷಿತತೆಗಾಗಿ ಆತಂಕವಾದವನ್ನು ನಷ್ಟ ಮಾಡುವದು ಆವಶ್ಯಕವಾಗಿದೆ.
(2) ಪ್ರತಿಯೊಂದು ರಾಷ್ಟ್ರವು ಸ್ವಂತಕ್ಕಾಗಿ ಭದ್ರವಾದ ಸುರಕ್ಷಾ ವ್ಯವಸ್ಥೆಯನ್ನು ನಿರ್ಮಾಣ ಮಾಡುವದು.
(3) ಭಾರತ ಮತ್ತು ಪಾಕಿಸ್ತಾನ ಇವುಗಳಲ್ಲಿ ಯಾವುದೇ ವಾದವುಳ್ಳ ಪ್ರಶ್ನೆಗಳಿಲ್ಲ.

**3. ಮುಂದಿನ ಸಂಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ಶೀಘ್ರ ಕೃತಿದಳದ ಕಾರ್ಯಗಳು
(2) ಮಾನವೀ ಸುರಕ್ಷೆ (2) ಗೃಹರಕ್ಷಕ ದಳ

**4. ಮುಂದಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ.**


(1) ರಾಷ್ಟ್ರದ ಸುರಕ್ಷೆಗೆ ಯಾವ ಅಂಶಗಳಿಂದ ಅಪಾಯ ಉಂಟಾಗುವದು?
(2) ಸೀಮಾ ಸುರಕ್ಷಾದಳದ ಕಾರ್ಯಗಳನ್ನು ಬರೆಯಿರಿ.
(3) ಮಾನವೀ ಸುರಕ್ಷೆ ಅಂದರೇನು ?

**5. ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**

(1) ಸುರಕ್ಷಾ ದಳದ ಕುರಿತು ಮುಂದಿನ ಕೋಷ್ಟಕ ಪೂರ್ಣ ಮಾಡಿರಿ.

| ಸುರಕ್ಷಾದಳದ ಹೆಸರು | ಕಾರ್ಯಗಳು | ಪ್ರಮುಖರು | ಸಧ್ಯ ಕಾರ್ಯರತರಿರುವ ಪ್ರಮುಖರ ಹೆಸರುಗಳು |
|---|---|---|---|
| ಭೂದಳ | ------- | ---- | ------- |
| ----- | ------- | ಅಡಮಿರಲ್ | ------- |
| ---- | ಭಾರತದ ವಾಯು ಸೀಮೆ ಮತ್ತು ಅವಕಾಶದ ರಕ್ಷಣೆ ಮಾಡುವದು. | ---- | ------- |

(2) ಭಾರತದ ಸುರಕ್ಷೆಯ ಮುಂದಿದ್ದ ಆವ್ಹಾನಗಳನ್ನು ಮುಂದಿನ ಸಂಕಲ್ಪನಾ ಚಿತ್ರದ ಸಹಾಯದಿಂದ ತೋರಿಸಿರಿ.




**ಉಪಕ್ರಮ:**

'ಭಾರತದ, ಸುರಕ್ಷಿತತೆಯ ಮುಂದೆ ಇದ್ದ ಆವ್ಹಾನಗಳು' ಈ ವಿಷಯದ ಮೇಲೆ ಶಾಲೆಯಲ್ಲಿ ಚರ್ಚಾಸತ್ರವನ್ನು ಆಯೋಜಿಸಿರಿ.

# 4 ಸಂಯುಕ್ತ ರಾಷ್ಟ್ರಸಂಘ

ಈ ಪ್ರಕರಣದಲ್ಲಿ ನಾವು ಹೊಸದಾಗಿ ಏನು ಕಲಿಯುವವರಿದ್ದೇವೆ? ಅಂತರರಾಷ್ಟ್ರಿಯ ಮಟ್ಟದಲ್ಲಿ ಶಾಂತತೆ ಮತ್ತು ಸುರಕ್ಷಿತತೆ ಇರಬೇಕೆಂದು ಸಂಯುಕ್ತ ರಾಷ್ಟ್ರಗಳು ಈ ಆಂತರರಾಷ್ಟ್ರಿಯ ಸಂಘಟನೆಯ ಸ್ಥಾಪನೆ ಮಾಡಲಾಯಿತು. ಈ ಸಂಘಟನೆಯ ಉದ್ದೇಶಗಳು, ತತ್ವಗಳು, ರಚನೆ ಮತ್ತು ಶಾಂತತಾ ರಕ್ಷಣೆಯಲ್ಲಿಯ ಆದರ ಪಾತ್ರ ಇವುಗಳ ಅಭ್ಯಾಸ ಪ್ರಸ್ತುತ ಪ್ರಕರಣದಲ್ಲಿ ಮಾಡುವುದಿದೆ.

## ಸಂಯುಕ್ತ ರಾಷ್ಟ್ರಗಳು: ಹಿನ್ನೆಲೆ

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಎರಡು ಮಹಾಯುದ್ಧಗಳಾದವು. ಈ ಮಹಾಯುದ್ಧಗಳಿಂದ ದೊಡ್ಡ ಪ್ರಮಾಣದಲ್ಲಿ ಜೀವ ಮತ್ತು ಆರ್ಥಿಕ ಹಾನಿಯಾಯಿತು. ಇದರಿಂದ ಜಾಗತಿಕ ಶಾಂತತೆ ಪ್ರಸ್ಥಾಪಿಸಲು ಒಂದು ಸಂಘಟನೆಯ ನಿರ್ಮಾಣ ಮಾಡಬೇಕು ಎಂಬ ಅರಿವಿನಿಂದ ಮೊದಲನೇ ಮಹಾಯುದ್ಧದ ನಂತರ ರಾಷ್ಟ್ರಸಂಘ ಮತ್ತು ಎರಡನೇ ಮಹಾಯುದ್ಧದ ನಂತರ ಸಂಯುಕ್ತ ರಾಷ್ಟ್ರಗಳು ಈ ಅಂತರರಾಷ್ಟ್ರಿಯ ಸಂಘಟನೆಗಳ ಸ್ಥಾಪನೆ ಮಾಡಲಾಯಿತು. ಮೊದಲನೆಯ ಮಹಾಯುದ್ಧದ ನಂತರ ಸ್ಥಾಪನೆಗೊಂಡ ರಾಷ್ಟ್ರಸಂಘಕ್ಕೆ ಸಾಕಷ್ಟು ಯಶಸ್ಸು ದೊರಕಲಿಲ್ಲ, ಆದರೆ ಎರಡನೆಯ ಮಹಾಯುದ್ಧದಲ್ಲಿ ಅಣುಬಾಂಬಿನ ಉಪಯೋಗವಾದ ನಂತರ ಇಂಥ ಪ್ರಕಾರದ ವಿನಾಶಕಾರಿ ಯುದ್ಧಗಳು ನಿಲ್ಲಬೇಕು ಮತ್ತು ಇದು ಎಲ್ಲ ರಾಷ್ಟ್ರಗಳ ಸಾಮೂಹಿಕ ಜವಾಬ್ದಾರಿಯಾಗಿದೆ ಎಂಬ ವಿಚಾರ ಮುಂದೆ ಬಂದಿತು. ಇಂಥ ಅರಿವು ಎಲ್ಲ ರಾಷ್ಟ್ರಗಳಲ್ಲಿ ನಿರ್ಮಾಣ ಮಾಡಲು ಸಂಯುಕ್ತ ರಾಷ್ಟ್ರಗಳು ಎಂಬ ಸಂಘಟನೆಯ ಸ್ಥಾಪನೆ ಎರಡನೆಯ ಮಹಾಯುದ್ಧ ಮುಗಿದ ನಂತರ ಮಾಡಲಾಯಿತು.

## ಸಂಯುಕ್ತ ರಾಷ್ಟ್ರಗಳ ಸ್ಥಾಪನೆಯ ಕಾಲಾನುಕ್ರಮ

ಎರಡನೆಯ ಮಹಾಯುದ್ಧದ ವೇಳೆಗೆ 14 ಆಗಸ್ಟ 1941 ರಂದು ಇಂಗ್ಲಂಡಿನ ಪ್ರಧಾನಮಂತ್ರಿ ವಿನ್‌ಸ್ಟನ್ ಚರ್ಚಿಲ ಮತ್ತು ಅಮೇರಿಕೆಯ ಅಧ್ಯಕ್ಷ ಫ್ರ್ಯಾಂಕಲಿನ್ ಡಿ. ರುಝುವೆಲ್ಟ ಇವರಲ್ಲಿ ಆಟಲಾಂಟಿಕ ಕರಾರು ಆಯಿತು. ಈ ಕರಾರಿನಂತೆ ಯುದ್ಧ ಮುಗಿದ ನಂತರ ಅಂತರರಾಷ್ಟ್ರಿಯ ಸುರಕ್ಷೆ ನಿರ್ಮಾಣಮಾಡಲು ಒಂದು ಶಾಶ್ವತವಾದ ವ್ಯವಸ್ಥೆ ನಿರ್ಮಾಣಮಾಡುವ ನಿರ್ಣಯ ತಗೆದುಕೊಳ್ಳಲಾಯಿತು ಈ ನಿರ್ಣಯದ ಮೇಲೆ 1944 ಮತ್ತು 1945 ರಲ್ಲಿ ಆದ ಮಿತ್ರರಾಷ್ಟ್ರಗಳ ಪರಿಷತ್ತಿನಲ್ಲಿ ವಿಸ್ತೃತ ಚರ್ಚೆ ಮಾಡಲಾಯಿತು ಮತ್ತು ಅದರಂತೆ ಅಂತರರಾಷ್ಟ್ರಿಯ ಸಂಘಟನೆ ಸ್ಥಾಪಿಸುವ ಕರಾರಿನ ಮಸೂದೆ ತಯಾರಿಸಲ್ಪಟ್ಟಿತು. ಅಮೇರಿಕೆಯ ಸ್ಯಾನ್ ಫ್ರಾನ್ಸಿಸ್ಕೊ ಎಂಬಲ್ಲಿ 1945ರಲ್ಲಿ 50 ರಾಷ್ಟ್ರಗಳ ಪ್ರತಿನಿಧಿಗಳು ಸವಿಸ್ತಾರವಾಗಿ ಚರ್ಚೆ ನಡೆಸಿ ಸಂಯುಕ್ತ ರಾಷ್ಟ್ರಗಳ ಸನದನ್ನು ತಯಾರಿಸಿದರು. ಈ ಸನದಿನ ಮೇಲೆ ಸಹಿ ಆಗಿ ಯುದ್ಧ ಮುಗಿಯುತ್ತಲೇ 24 ಅಕ್ಟೋಬರ 1945 ರಂದು ''ಸಂಯುಕ್ತ ರಾಷ್ಟ್ರಗಳು'' ಎಂಬ ಸಂಘಟನೆಯ ಸ್ಥಾಪನೆ ಮಾಡಲಾಯಿತು. ಸಂಯುಕ್ತ ರಾಷ್ಟ್ರಗಳು ಸಾರ್ವಭೌಮ ರಾಷ್ಟ್ರಗಳ ಸಂಘಟನೆಯಾಗಿದೆ.



**ಹೇಳಿ ನೋಡೋಣ?**

- ಯುದ್ಧ ಕಾಲದಲ್ಲಿ ಆದ ಪರಿಷತ್ತಿನಲ್ಲಿ ಭಾರತವು ಸಹಭಾಗ ವಹಿಸಿತ್ತೆ?
- ಸಂಯುಕ್ತ ರಾಷ್ಟ್ರಗಳು ದಿನವೆಂದು ಯಾವ ದಿವಸ ಆಚರಿಸಲಾಗುತ್ತದೆ?

## ಸಂಯುಕ್ತ ರಾಷ್ಟ್ರಗಳು ಈ ಸಂಘಟನೆಯ ಉದ್ದಿಷ್ಟಗಳು:

ಸಂಯುಕ್ತ ರಾಷ್ಟ್ರಗಳು ಜಗತ್ತಿನಲ್ಲಿಯ ಎಲ್ಲಕೂ ದೊಡ್ಡ ಅಂತರರಾಷ್ಟ್ರಿಯ ಸಂಘಟನೆ ಆಗಿದೆ. ಪ್ರಾರಂಭದಲ್ಲಿ ಕೇವಲ 50 ದೇಶಗಳು ಈ ಸಂಘಟನೆಯ ಸದಸ್ಯರಾಗಿದ್ದವು ಈಗ ಈ ಸಂಖ್ಯೆ 193ರ ಮೇಲೆ ಹೋಗಿದೆ. ಈ ಎಲ್ಲ ಸದಸ್ಯ ರಾಷ್ಟ್ರಗಳ ಸಂಯುಕ್ತ ರಾಷ್ಟ್ರಗಳು ವೇದಿಕೆಯ ಮೇಲೆ ಒಟ್ಟಿಗೆ ಬರುವವು ಸಂಯುಕ್ತ ರಾಷ್ಟ್ರಗಳು ಕೆಲ ನಿಶ್ಚಿತ ಉದ್ದಿಷ್ಟಗಳಿವೆ. ಸ್ವಲ್ಪದರಲ್ಲಿ ಹೇಳುವದಾದರೆ, ಸಂಯುಕ್ತ ರಾಷ್ಟ್ರ ಸಂಘಗಳು ಜಾಗತಿಕ ಶಾಂತತೆ ನಿರ್ಮಾಣ ಮಾಡಲು ಆವಶ್ಯಕ ಎಲ್ಲ ಉಪಾಯ ಯೋಜನೆಯನ್ನು ಮಾಡುತ್ತದೆ.

- ರಾಷ್ಟ್ರಗಳಲ್ಲಿ ಮೈತ್ರಿಯುತ ಸಂಬಂಧವನ್ನು ಪ್ರಸ್ಥಾಪಿಸುವದು.
- ಅಂತರರಾಷ್ಟ್ರಿಯ ಪ್ರಶ್ನೆಗಳನ್ನು ಶಾಂತತೆಯ ಮಾರ್ಗದಿಂದ ಬಿಡಿಸಿ ಅಂತರರಾಷ್ಟ್ರೀಯ ಸುರಕ್ಷೆಯನ್ನು ವೃದ್ಧಿಂಗತ ಮಾಡುವದು.
- ಮಾನವಿ ಹಕ್ಕುಗಳ ಮತ್ತು ಸ್ವಾತಂತ್ರ್ಯದ ರಕ್ಷಣೆ ಮತ್ತು ಸಂವರ್ಧನೆ ಮಾಡುವದು.

ಇದರೊಂದಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕ ಸಹಕಾರ್ಯ ಹೆಚ್ಚಿಸುವದು ಇದು ಕೂಡಾ ಸಂಯುಕ್ತ ರಾಷ್ಟ್ರಗಳು ಗುರಿಯಾಗಿದೆ.

ಸಾರ್ವಭೌಮ ರಾಷ್ಟ್ರಗಳ ರಾಜನೈತಿಕ ವಿಶೇಷಾಧಿಕಾರಗಳ ಆದರ ಮಾಡುವದು, ಎರಡನೇ ದೇಶದ ಮೇಲೆ ಆಕ್ರಮಣ ಮಾಡದೇ ಇರುವದು, ಅಂತರರಾಷ್ಟ್ರಿಯ ಕಾಯ್ದೆಯ ಮತ್ತು ಕರಾರಿನ ಪಾಲನೆ ಮಾಡುವದು ಇದು ಎಲ್ಲ ಸದಸ್ಯ ರಾಷ್ಟ್ರಗಳ ಕರ್ತವ್ಯವಾಗಿದೆ.

ಸಂಯುಕ್ತ ರಾಷ್ಟ್ರಸಂಘ ಇದು ಸಾರ್ವಭೌಮ ರಾಷ್ಟ್ರಗಳು ಒಟ್ಟಿಗೆ ಸೇರಿ ನಿರ್ಮಾಣ ಮಾಡಿದ ಸಂಘಟನೆಯಾಗಿದೆ. ಹೀಗಾಗಿ ಸಹಜವಾಗಿ ಅದು ಕೆಲ ತತ್ವಗಳ ಇಲ್ಲವೆ ನಿಯಮಗಳ ಮೇಲೆ ಆಧರಿಸಿದೆ. ಆ ತತ್ವಗಳು ಸ್ವಲ್ಪದರಲ್ಲಿ ಮುಂದಿನಂತೆ ಇವೆ.

## ಸಂಯುಕ್ತ ರಾಷ್ಟ್ರಸಂಘದ ತತ್ವಗಳು

1. ಎಲ್ಲ ಸದಸ್ಯ ರಾಷ್ಟ್ರಗಳ ದರ್ಜೆ ಸಮಾನವಾಗಿರಬಹುದು. ಭೌಗೋಲಿಕ ಆಕಾರ, ಆರ್ಥಿಕ ಮತ್ತು ಸೈನಿಕ ಸಾಮರ್ಥ್ಯ ಇವುಗಳ ಆಧಾರದ ಮೇಲೆ ರಾಷ್ಟ್ರ-ರಾಷ್ಟ್ರಗಳಲ್ಲಿ ಭೇದಭಾವ ಮಾಡಲಾಗುವದಿಲ್ಲ.

2) ಸಂಯುಕ್ತ ರಾಷ್ಟ್ರಸಂಘದ ಸದಸ್ಯ ರಾಷ್ಟ್ರಗಳು ಪರಸ್ಪರರ ಸ್ವಾತಂತ್ರ್ಯ ಮತ್ತು ಭೌಗೋಲಿಕ ಏಕಾತ್ಮತೆಯ ಆದರ ಮಾಡಬೇಕು.

3) ಎಲ್ಲ ಸದಸ್ಯ ರಾಷ್ಟ್ರಗಳು ಮತ್ತು ಅಂತರರಾಷ್ಟ್ರಿಯ ವಾದ, ತಮ್ಮ ತಮ್ಮಲ್ಲಿಯ ವಿವಾದಗಳನ್ನು ಶಾಂತತೆಯ ಮಾರ್ಗದಿಂದ ಬಿಡಿಸಿಕೊಳ್ಳಬೇಕು.

**ಸಂಯುಕ್ತ ರಾಷ್ಟ್ರಸಂಘದ ರಚನೆ:** ಸಂಯುಕ್ತ ರಾಷ್ಟ್ರಸಂಘದ ಸನದಿನಲ್ಲಿ ಈ ಸಂಘಟನೆಯ ರಚನೆ ಮತ್ತು ಕಾರ್ಯಪದ್ಧತಿಗಳ ಕುರಿತು ಮಾಹಿತಿ ನೀಡಲಾಗಿದೆ.

ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲು ಬರಬಹುದೆ?

- ಅಂತರರಾಷ್ಟ್ರಿಯ ಸುರಕ್ಷಿತತೆಗೆ ಗಂಭಿರ ಅಪಾಯ ನಿರ್ಮಾಣವಾದರೆ ಸಂಯುಕ್ತ ರಾಷ್ಟ್ರಸಂಘವು ಸಶಸ್ತ್ರ ಹಸ್ತಕ್ಷೇಪ ಮಾಡಬಹುದೆ?
- ಮಾನವಿ ಹಕ್ಕುಗಳ ಮತ್ತು ಸ್ವಾತಂತ್ರ್ಯದ ಸಂವರ್ಧನೆಯಾಗಬೇಕೆಂದು ಸಂಯುಕ್ತ ರಾಷ್ಟ್ರಸಂಘವು ಯಾವ ಹೆಜ್ಜೆಯನ್ನಿಟ್ಟಿದೆ?

ಸಂಯುಕ್ತ ರಾಷ್ಟ್ರಸಂಘದ ಆರು ಪ್ರಮುಖ ಅಂಗಗಳು ಅಥವಾ ಶಾಖೆಗಳಿವೆ.

1) ಮಹಾ ಸಭೆ 2) ಭದ್ರತಾ ಸಮಿತಿ 3) ಆರ್ಥಿಕ ಮತ್ತು ಸಾಮಾಜಿಕ ಸಮಿತಿ 4) ಅಂತರರಾಷ್ಟ್ರಿಯ ನ್ಯಾಯಾಲಯ 5) ವಿಶ್ವಸ್ತ ಸಮಿತಿ 6) ಸಚಿವಾಲಯ

**ಮಹಾಸಭೆ:** ಸಂಯುಕ್ತ ರಾಷ್ಟ್ರಸಂಘದ ಎಲ್ಲ ಸದಸ್ಯ ದೇಶಗಳು ಮಹಾಸಭೆಯ ಸದಸ್ಯರಾಗಿರುವರು. ದೇಶವು ಶ್ರೀಮಂತ ವಾಗಿರಲಿ ಇಲ್ಲವೇ ಬಡವಾಗಿರಲಿ, ದೊಡ್ಡದಾಗಿರಲಿ ಇಲ್ಲವೆ ಚಿಕ್ಕದು, ಎಲ್ಲ ಸದಸ್ಯ ರಾಷ್ಟ್ರಗಳ ಸ್ಥಾನ ಮತ್ತು ದರ್ಜೆ ಸಮಾನವಾಗಿರುವದು. ಅಂದರೆ ಪ್ರತಿಯೊಂದು ರಾಷ್ಟ್ರಕ್ಕೆ



**ಸಂಯುಕ್ತ ರಾಷ್ಟ್ರಸಂಘ : ಮಹಾಸಭೆ**

ಈ ಆರು ಅಂಗಗಳ ಜೊತೆಗೆ ಸಂಯುಕ್ತ ರಾಷ್ಟ್ರಸಂಘದ ಕಾರ್ಯಗಳಿಗೆ ಸಹಾಯ ಮಾಡುವ ಸಂಯುಕ್ತ ರಾಷ್ಟ್ರಸಂಘದ ಅನೇಕ ಸಂಲಗ್ನ ಸಂಸ್ಥೆಗಳಿವೆ ಇವುಗಳಿಗೆ ವಿಶೇಷ ಕಾರ್ಯಾತ್ಮಕ ಸಂಸ್ಥೆಗಳೆನ್ನುವರು. ವಿಶಿಷ್ಟ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡುವ ಈ ಸಂಸ್ಥೆಗಳು ಜಗತ್ತಿನ ರಾಷ್ಟ್ರಗಳಿಗೆ ಆ ಕಾರ್ಯಗಳಲ್ಲಿ ಸಹಾಯ ಮಾಡುವವು. ಅಂತರರಾಷ್ಟ್ರಿಯ ಕೂಲಿಕಾರರ ಸಂಘಟನೆ (ILO), ಅನ್ನ ಮತ್ತು ಕೃಷಿ ಸಂಘಟನೆ (FAO), ಜಾಗತಿಕ ಆರೋಗ್ಯ ಸಂಘಟನೆ (WHO) ಜಾಗತಿಕ ಬ್ಯಾಂಕ (WB) , ಅಂತರರಾಷ್ಟ್ರಿಯ ಹಣಕಾಸು ಸಂಘಟನೆ (IMF), ಸಂಯುಕ್ತ ರಾಷ್ಟ್ರಸಂಘದ ಬಾಲಕ ನಿಧಿ (UNICEF), ಸಂಯುಕ್ತ ರಾಷ್ಟ್ರಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ (UNESCO) ಹೀಗೆ ಕೆಲ ಮಹತ್ವಪೂರ್ಣ ಸಂಲಗ್ನ ಸಂಸ್ಥೆಗಳಿವೆ.

ಒಂದು ಮತ ವಿರುವದು. ಪ್ರತಿ ವರ್ಷ ಸಪ್ಟೆಂಬರ ದಿಂದ ಡಿಸೆಂಬರ ಈ ಕಾಲಾವಧಿಯಲ್ಲಿ ಮಹಾ ಸಭೆಯ ಅಧಿವೇಶನ ಇರುವದು. ಈ ಅಧಿವೇಶನದಲ್ಲಿ ಪರಿಸರ, ನಿಶಸ್ತ್ರೀಕರಣ ಇಂಥ ಮಹತ್ವದ ಜಾಗತಿಕ ವಿಷಯಗಳ ಮೇಲೆ ಚರ್ಚೆಯಾಗುವದು. ಮಹಾ ಸಭೆಯಲ್ಲಿಯ ನಿರ್ಣಯಗಳು ಬಹುಮತದಿಂದ ತಗೆದುಕೊಳ್ಳಲಾಗುವದು. ಈ ನಿರ್ಣಯಗಳು ಠರಾವಿನ ಸ್ವರೂಪದಲ್ಲಿರುತ್ತವೆ. ಅಂದರೆ ಮಹಾ ಸಭೆಯು ಕೇವಲ ಠರಾವುಗಳನ್ನು ಮಾಡುತ್ತದೆ, ಕಾಯ್ದೆಗಳನ್ನು ಮಾಡುವದಿಲ್ಲ. ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳಿಗೆ ಒಟ್ಟಿಗೆ ಸೇರಿ ಚರ್ಚೆ ಮಾಡಲು, ಮಹತ್ವದ ಜಾಗತಿಕ ಪ್ರಶ್ನೆಗಳ ಮೇಲೆ ಧೋರಣೆ ನಿರ್ಧರಿಸಲು ಇದೊಂದು ವೇದಿಕೆಯಾಗಿದೆ. ಹೀಗಾಗಿ ಮಹಾ ಸಭೆಯ ಮಹತ್ವವಿದೆ.

### ಮಹಾಸಭೆಯ ಕಾರ್ಯಗಳು:

(1) ಭದ್ರತಾ ಸಮಿತಿಯ ಅಶಾಶ್ವತ ಸದಸ್ಯರ ಆಯ್ಕೆ ಮಾಡುವದು.

(2) ಭದ್ರತಾ ಸಮಿತಿಯ ಜೊತೆಗೆ ಸಂಯುಕ್ತ ರಾಷ್ಟ್ರಸಂಘದ ಮಹಾಸಚಿವ ಮತ್ತು ಅಂತರರಾಷ್ಟ್ರಿಯ ನ್ಯಾಯಾಲಯದಲ್ಲಿಯ ನ್ಯಾಯಧೀಶರ ಆಯ್ಕೆ ಮಾಡುವದು.

(3) ಸಂಯುಕ್ತ ರಾಷ್ಟ್ರಸಂಘದ ವಾರ್ಷಿಕ ಅಂದಾಜು ಪತ್ರಿಕೆಗೆ ಮಾನ್ಯತೆಯನ್ನು ನೀಡುವದು.

**ಭದ್ರತಾ ಸಮಿತಿ :** ಭದ್ರತಾ ಸಮಿತಿಯಲ್ಲಿ ಒಟ್ಟು 15 ಸದಸ್ಯರಿರುವರು. ಅವರಲ್ಲಿ 5 ಸದಸ್ಯರು ಶಾಶ್ವತ ಮತ್ತು 10 ಸದಸ್ಯರು ಅಶಾಶ್ವತ ವಾಗಿರುವರು. ಅಶಾಶ್ವತ ಸದಸ್ಯರ

ಸಂಯುಕ್ತ ರಾಷ್ಟ್ರಸಂಘದ ಮುಖ್ಯ ಕಾರ್ಯಾಲಯವು ನ್ಯೂಯಾರ್ಕ ಎಂಬಲ್ಲಿದೆ, ಇಂಗ್ಲಿಷ, ಫ್ರೆಂಚ, ರಶಿಯನ್, ಸ್ಪ್ಯಾನಿಶ್, ಚೀನಿ ಮತ್ತು ಅರಬಿ ಇವು ಸಂಯುಕ್ತ ರಾಷ್ಟ್ರಸಂಘದ ಅಧಿಕೃತ ಭಾಷೆಗಳಾಗಿವೆ.

ಚುನಾವಣೆಯನ್ನು ಪ್ರತಿ 2 ವರ್ಷಗಳಿಗೊಮ್ಮೆ ಮಹಾ ಸಭೆಯು ಮಾಡುವದು. ಅಮೇರಿಕಾ, ರಶಿಯಾ, ಇಂಗ್ಲಂಡ, ಫ್ರಾನ್ಸ ಮತ್ತು ಚೀನ ಇವು ಭದ್ರತಾ ಸಮಿತಿಯ 5 ಶಾಶ್ವತ ಸದಸ್ಯ ರಾಷ್ಟ್ರಗಳಾಗಿವೆ. ಅವರಿಗೆ ನಕಾರಾಧಿಕಾರದ ಅಧಿಕಾರವಿದೆ. ಯಾವುದೇ ಮಹತ್ವದ ಪ್ರಶ್ನೆಗಳ ಮೇಲೆ ನಿರ್ಣಯವನ್ನು ತಗೆದುಕೊಳ್ಳಲು 5 ಶಾಶ್ವತ ಸದಸ್ಯರ ಮತ್ತು ಕನಿಷ್ಟ 4 ಅಶಾಶ್ವತ ಸದಸ್ಯರ ಒಪ್ಪಿಗೆ ಇರುವದು ಅವಶ್ಯಕವಾಗಿರುತ್ತದೆ. ಶಾಶ್ವತ ಸದಸ್ಯರಲ್ಲಿ ಯಾವನಾದರೊಬ್ಬನು ನಕಾರಾಧಿಕಾರದ ಉಪಯೋಗ ಮಾಡಿದರೆ ಅಂದರೆ ವಿರುದ್ಧ ಮತ ನೀಡಿದರೆ ನಿರ್ಣಯವನ್ನು ತಗೆದುಕೊಳ್ಳಲು ಬರುವದಿಲ್ಲ.

### ಭದ್ರತಾ ಸಮಿತಿಯ ಕಾರ್ಯಗಳು:

(1) ಅಂತರರಾಷ್ಟ್ರೀಯ ಶಾಂತತೆ ಮತ್ತು ಸುರಕ್ಷಿತತೆಯನ್ನು ಕಾಪಾಡುವದು ಇದು ಭದ್ರತಾ ಸಮಿತಿಯ ಪ್ರಮುಖ ಜವಾಬ್ದಾರಿಯಾಗಿದೆ. ಅಂತರ ರಾಷ್ಟ್ರಿಯ ಸಂಘರ್ಷದ ಪರಿಸ್ಥಿತಿಯಲ್ಲಿ ಸಂಘರ್ಷವನ್ನು ಬಗೆಹರಿಸಿ ಶಾಂತತೆಯನ್ನು ಪ್ರಸ್ತಾಪಿಸಲು ಪ್ರಯತ್ನಿಸುವದು. ಆರ್ಥಿಕ ನಿರ್ಬಂಧ ಹೇರುವದು ಇಲ್ಲವೆ ಆಕ್ರಮಣಶಾಲಿ ರಾಷ್ಟ್ರದ ವಿರುದ್ಧ ಸೈನಿಕ ಕಾರ್ಯಾಚರಣೆಯನ್ನು ಕೈಗೊಳ್ಳುವ ನಿರ್ಣಯವನ್ನು ತಗೆದುಕೊಳ್ಳುವದು ಇವುಗಳಲ್ಲಿಯ ಒಂದು ಪರ್ಯಾಯವನ್ನು ಭದ್ರತಾ ಸಮಿತಿ ಸೂಚಿಸುತ್ತದೆ.

(2) ಶಸ್ತ್ರಾಸ್ತ್ರ ನಿಯಂತ್ರಣಕ್ಕಾಗಿ ಯೋಜನೆಯನ್ನು ತಯ್ಯಾರಿಸುವ ಕೆಲಸವನ್ನು ಭದ್ರತಾ ಸಮಿತಿಯು ಮಾಡುವದು.

(3) ಮಹಾ ಸಭೆಯ ಹಾಗೆ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶ ಮತ್ತು ಸಂಯುಕ್ತ ರಾಷ್ಟ್ರಸಂಘದ ಮಹಾಸಚಿವರ ಆಯ್ಕೆ ಮಾಡುವಲ್ಲಿ ಭದ್ರತಾ ಸಮಿತಿಯ ಸಹಭಾಗವಿರುವದು.

ಭದ್ರತಾ ಸಮಿತಿ ರಚನೆಯಲ್ಲಿ ಬದಲಾವಣೆಯಾಗ ಬೇಕು ಮತ್ತು ಅದರ ಸ್ವರೂಪ ಹೆಚ್ಚು ಪ್ರಜಾಪ್ರಭುತ್ವವಾದಿಯಾಗ ಬೇಕೆಂಬ ದೃಷ್ಟಿಯಿಂದ ಸದ್ಯ ಸುಧಾರಣೆಗಳನ್ನು ಸೂಚಿಸಲಾಗುತ್ತಿದೆ. ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಶಾಶ್ವತ ಸದಸ್ಯತ್ವ ದೊರಕಬೇಕೆಂದು ಭಾರತವು ಪ್ರಯತ್ನಿಸುತ್ತಿದೆ.

**ಆರ್ಥಿಕ ಮತ್ತು ಸಾಮಾಜಿಕ ಸಮಿತಿ:** ಸಂಯುಕ್ತ ರಾಷ್ಟ್ರಗಳ ಆರ್ಥಿಕ ಮತ್ತು ಸಾಮಾಜಿಕ ಧೋರಣೆಗಳಲ್ಲಿ ಸಮನ್ವಯತೆಯನ್ನು ಸಾಧಿಸುವದು ಇದು ಈ ಸಮಿತಿಯ ಮುಖ್ಯ ಉದ್ದೇಶವಾಗಿದೆ. ಈ ಸಮಿತಿಯಲ್ಲಿ ಒಟ್ಟು 54 ಸದಸ್ಯರಿರುವರು. ಅವರ ಆಯ್ಕೆಯನ್ನು ಮಹಾ ಸಭೆಯು ಮಾಡುವದು. ಪ್ರತಿಯೊಬ್ಬ ಸಭಾಸದನ ಕಾರ್ಯಕಾಲ 3 ವರ್ಷಗಳದ್ದಿದೆ ಮತ್ತು ಪ್ರತಿ ವರ್ಷ $^1/_3$ ಸಭಾಸದರು ಹೊಸದಾಗಿ ಆಯ್ಕೆಯಾಗುವರು. ಪರಿಷತ್ತಿನ ನಿರ್ಣಯಗಳನ್ನು ಬಹುಮತದಿಂದ ತಗೆದುಕೊಳ್ಳಲಾಗುವದು.

**ಕಾರ್ಯಗಳು:**

(1) ದಾರಿದ್ರ್ಯ, ನಿರುದ್ಯೋಗ, ಆರ್ಥಿಕ ಮತ್ತು ಸಾಮಾಜಿಕ ವಿಷಮತೆ ಇಂತಹ ಪ್ರಶ್ನೆಗಳ ಕುರಿತು ಜಾಗತಿಕ ಮಟ್ಟದಲ್ಲಿ ಚರ್ಚೆ ಮಾಡುವದು ಮತ್ತು ಉಪಾಯ ಯೋಜನೆಯನ್ನು ಸೂಚಿಸುವದು

(2) ಸ್ತ್ರೀಯರ ಪ್ರಶ್ನೆ, ಸ್ತ್ರೀ ಸಬಲೀಕರಣ, ಮಾನವೀ ಹಕ್ಕು ಮೂಲಭೂತ ಸ್ವಾತಂತ್ರ್ಯ, ಜಾಗತಿಕ ವ್ಯಾಪಾರ, ಆರೋಗ್ಯ ವಿಷಯದ ಸಮಸ್ಯೆ ಇಂಥ ಪ್ರಶ್ನೆಗಳ ಮೇಲೆ ಚರ್ಚೆ ಮಾಡಿ ನಿರ್ಣಯ ಕೈಕೊಳ್ಳುವದು.

(3) ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಹಕಾರ್ಯವನ್ನು ಪ್ರಸ್ಥಾಪಿಸಲು ಪ್ರಯತ್ನಿಸುವದು.

(4) ಸಂಯುಕ್ತ ರಾಷ್ಟ್ರಗಳ ಸಂಲಗ್ನವಾಗಿರುವ ವಿವಿಧ ಸಂಘಟನೆಗಳ ಕಾರ್ಯಗಳಲ್ಲಿ ಸುಸೂತ್ರತೆ ಮತ್ತು ಸಮನ್ವಯ ಕಾಪಾಡುವದು.

**ಸಚಿವಾಲಯ:** ಸಂಯುಕ್ತ ರಾಷ್ಟ್ರಗಳ ಆಢಳಿತದ ಕಾರ್ಯ ಕಲಾಪಗಳನ್ನು ನೋಡಿಕೊಳ್ಳುವ ಹೊಣೆ ಸಚಿವಾಲಯದ ಮೇಲೆ ಇದೆ. ಸಚಿವಾಲಯದ ಪ್ರಮುಖನಿಗೆ 'ಮಹಾಸಚಿವನೆಂದು' ಕರೆಯುವರು. ಮಹಾ ಸಭೆ ಮತ್ತು ಭದ್ರತಾ ಸಮಿತಿ ಇವು ಇವರ ಆಯ್ಕೆ ಮಾಡುವವು. ಇವರ ಕಾರ್ಯಕಾಲಾವಧಿ 5 ವರ್ಷಗಳು ಇವೆ.

**ಬರೆಯುತ್ತ ಹೋಗಿರಿ**

* ಇಲ್ಲಿಯ ವರೆಗಿನ ಮಹಾಸಚಿವರ ಹೆಸರು ಬರೆಯಿರಿ.
* ಮಹಾಸಚಿವ ಇವರು ಮಹಾಸತ್ತೆಗಳ ನಾಗರಿಕನಿರಬೇಕು ಎಂಬ ಬಂಧನ ವಿದೆಯೇ?
* ಯಾವ ರಾಷ್ಟ್ರಗಳ ನಾಗರಿಕರಿಗೆ ಮಹಾಸಚಿವ ಪದವಿಗಾಗಿ ಪ್ರಾಧಾನ್ಯತೆಯನ್ನು ಕೊಡಲಾಗುತ್ತದೆ?
* ಸಧ್ಯದ ಮಹಾಸಚಿವ ಯಾರು ಮತ್ತು ಅವರು ಯಾವ ದೇಶದವರಿದ್ದಾರೆ?

**ಕಾರ್ಯಗಳು**

(1) ಹವಾಮಾನದಲ್ಲಿಯ ಬದಲಾವಣೆ, ಮಾನವೀ ಹಕ್ಕುಗಳು, ನಿಃಶಸ್ತ್ರೀಕರಣ ಇಂಥ ಜಾಗತಿಕ ಪ್ರಶ್ನೆಗಳ ಮೇಲೆ ಅಂತರರಾಷ್ಟ್ರಿಯ ಪರಿಷತ್ತನ್ನು ತುಂಬುವದು.

(2) ಸಾಮಾನ್ಯ ಸಭೆಯ ಮತ್ತು ಭದ್ರತಾ ಮಂಡಳದ ಸಭೆಗಳನ್ನು ಏರ್ಪಡಿಸುವದು.

(3) ಮಾಹಿತಿಯ ಸಂಕಲನೆ ಮಾಡುವದು.

(4) ಪ್ರಸಿದ್ಧಿ ಮಾಧ್ಯಮಗಳಿಗೆ ಮಾಹಿತಿಯನ್ನು ಪೂರೈಸುವದು.

**ಅಂತರರಾಷ್ಟ್ರೀಯ ನ್ಯಾಯಾಲಯ:** ಅಂತರರಾಷ್ಟ್ರೀಯ ನ್ಯಾಯಾಲಯ ವೆಂದರೆ ಸಂಯುಕ್ತ ರಾಷ್ಟ್ರಗಳ ನ್ಯಾಯಲಯದ ಅಂಗ ಹೌದು. ಅಂತರರಾಷ್ಟ್ರಿಯ ನ್ಯಾಯಲಯವು ನೆದರ್‍ಲ್ಯಾಂಡ ಈ ದೇಶದ 'ದ ಹೆಗ್' ಎಂಬಲ್ಲಿ ಇದೆ. ಈ ನ್ಯಾಯಾಲಯದಲ್ಲಿ ಒಟ್ಟು 15 ನ್ಯಾಯಾಧೀಶರಿರುವರು. ಅವರ ಆಯ್ಕೆ ಮಹಾಸಭೆ ಮತ್ತು ಭದ್ರತಾಸಮಿತಿಯು ಮಾಡುವದು ಪ್ರತಿಯೊಬ್ಬ ನ್ಯಾಯಾಧೀಶನ ಕಾರ್ಯಕಾಲಾವಧಿ 9 ವರ್ಷವಿರುತ್ತದೆ.

**ಕಾರ್ಯಗಳು:**

(1) ಸಂಯುಕ್ತ ರಾಷ್ಟ್ರಗಳ ಸದಸ್ಯರಿರುವ ಎರಡು ಇಲ್ಲವೆ ಹೆಚ್ಚು ರಾಷ್ಟ್ರಗಳಲ್ಲಿಯ ಜಗಳ ಬಿಡಿಸುವದು.

(2) ಅಂತರರಾಷ್ಟ್ರಿಯ ಕಾಯ್ದೆಗಳ ಯೋಗ್ಯ ಅರ್ಥ ಹಚ್ಚುವದು.

(3) ಸಂಯುಕ್ತ ರಾಷ್ಟ್ರಗಳ ಸಂಘಟನೆಯ ವಿವಿಧ ಅಂಗಗಳ ಇಲ್ಲವೆ ಸಂಲಗ್ನ ಸಂಸ್ಥೆಗಳಿಗೆ ಕಾಯ್ದೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಲಹೆಯನ್ನು ಕೊಡುವದು.

**ಅಂತರರಾಷ್ಟ್ರೀಯ ಅಪರಾಧಿ ನ್ಯಾಯಾಲಯ:** ಅಂತರರಾಷ್ಟ್ರಿಯ ಅಪರಾಧಿ ನ್ಯಾಯಾಲಯವು ಅಂತರ ಶಾಸಕೀಯ ಸಂಘಟನೆ ಮತ್ತು ಒಂದು ಅಂತರರಾಷ್ಟ್ರೀಯ ನ್ಯಾಯಾಧಿಕರಣವಾಗಿದ್ದು ಅದರ ಮುಖ್ಯಾಲಯವು ನೆದರಲ್ಯಾಂಡ ಈ ದೇಶದಲ್ಲಿ 'ದ ಹೆಗ್' ಎಂಬಲ್ಲಿ ಇದೆ ವಂಶಸಂಹಾರ, ಯುದ್ಧಕಾಲದ ಅಪರಾಧಗಳು ಮತ್ತು ಮಾನವತಾವಾದದ ವಿರುದ್ಧದ ಅಪರಾಧಗಳು ಈ ಪ್ರಕಾರದ ಅಂತರರಾಷ್ಟ್ರೀಯ ಸಮುದಾಯಕ್ಕೆ ಚಿಂತೆಯ ವಿಷಯವಾಗಿರುವ ಗಂಭೀರ ಅಪರಾಧದಲ್ಲಿ ಸಮಾವೇಶವಿದ್ದ ವ್ಯಕ್ತಿಯ ಮೇಲಿನ ಆರೋಪಗಳ ಶೋಧ ಮಾಡುವದು ಮತ್ತು ಅವರಮೇಲಿನ ವ್ಯಾಜ್ಯ (ಖಟ್ಲೆ) ನಡೆಸುವ ಕಾರ್ಯವನ್ನು ಈ ನ್ಯಾಯಾಲಯ ಮಾಡುತ್ತದೆ.

**ವಿಶ್ವಸ್ತ ಸಮಿತಿ:** ಎರಡನೆಯ ಮಹಾಯುದ್ಧದ ನಂತರದಕಾಲದಲ್ಲಿ ಯಾವ ಪ್ರದೇಶಗಳು ಅಥವಾ ವಸಾಹತುಗಳು ಅವಿಕಸಿತವಾಗಿದ್ದವೋ ಅವುಗಳ ವಿಕಾಸದ ಜವಾಬ್ದಾರಿಯನ್ನು ಕೆಲ ವಿಕಸಿತ ರಾಷ್ಟ್ರಗಳಿಗೆ ವಹಿಸಿ ಕೊಡಲಾಗಿತ್ತು. ಆ ವಿಕಸಿತ ರಾಷ್ಟ್ರಗಳು ಇಂಥ ಪ್ರದೇಶಗಳ ವಿಕಾಸಕ್ಕೆ ಸಹಾಯ ಮಾಡುವದು ಮತ್ತು ಅವರಿಗೆ ಸ್ವಾತಂತ್ರ್ಯದೊರಕಿಸಲು ಮತ್ತು ಅಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ಮಾಡಲು ಸಹಾಯ ಮಾಡುವದು ಅಪೇಕ್ಷೆಯಾಗಿತ್ತು ಮತ್ತು ಅದರ ಉತ್ತರದಾಯಿತ್ವವನ್ನು ವಿಶ್ವಸ್ತ ಸಮಿತಿಗೆ ವಹಿಸಿ ಕೊಡಲಾಗಿತ್ತು. ವಿಶ್ವಸ್ತ ಸಮಿತಿಯ ಕಾರ್ಯಗಳು ಈಗ ಕೊನೆಗೊಂಡಿವೆ.

> ವಿಶ್ವಸ್ತ ಸಮೀತಿಯ ಕಾರ್ಯವು 1 ನವ್ಹೆಂಬರ 1994 ರಂದು ಪಲಾವೂ ಎಂಬ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ ಕೊನೆಗೊಂಡಿತು. ಪಲಾವೂ ಇದು ಫಿಲಿಪಿನ್ಸ ಈ ರಾಷ್ಟ್ರದ 500 ಮಿಟರ ಪೂರ್ವಕ್ಕೆ ಇದ್ದ ಪ್ರಶಾಂತ ಮಹಾಸಾಗರದಲ್ಲಿಯ ಒಂದು ದ್ವೀಪವಿದೆ.

## ಸಹಸ್ರಕರ ವಿಕಾಸದ ಉದ್ದೇಶಗಳು

ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು 2000 ದಲ್ಲಿ ಒಟ್ಟಿಗೆ ಸೇರಿ ಹೊಸ ಸಹಸ್ರಕರ ವಿಕಾಸದ ಉದ್ದೇಶಗಳನ್ನು ನಿಶ್ಚಿತಗೊಳಿಸಿದವು ಅವುಗಳಲ್ಲಿಯ ಕೆಲವು ಮಹತ್ವದ ಉದ್ದಿಷ್ಟಗಳು ಹೀಗಿದೆ.

- ಬಡತನ ಮತ್ತು ಹಸಿವೆ ಇವುಗಳ ನಿರ್ಮೂಲನ ಮಾಡುವದು.
- ಪ್ರಾಥಮಿಕ ಶಿಕ್ಷಣದ ಸೌಲಭ್ಯವನ್ನು ದೊರಕಿಸಿ ಕೊಡುವದು.
- ಸ್ತ್ರೀ ಸಬಲೀಕರಣ ಮಾಡುವದು, ಬಾಲಮೃತ್ಯುವಿನ ಪ್ರಮಾಣ ಕಡಿಮೆ ಮಾಡುವದು.
- ಗರ್ಭಿಣಿ ಸ್ತ್ರೀಯರ ಆರೋಗ್ಯದ ಕುರಿತು ವಿಶೇಷ ಕಾಳಜಿ ವಹಿಸುವದು.
- ಏಡಸ್, ಮಲೇರಿಯಾ ಮುಂತಾದ ರೋಗಗಳೊಂದಿಗೆ ಹೋರಾಟ ಮಾಡುವದು.
- ಪರಿಸರದ ರಕ್ಷಣೆ, ವಿಕಸಿತ ಮತ್ತು ವಿಕಸಿನಶೀಲ ದೇಶಗಳಲ್ಲಿಯ ಸಹಕಾರ್ಯ ಹೆಚ್ಚಿಸುವದು.

ಈ ಉದ್ದೇಶಗಳನ್ನು ಸಾಧ್ಯಗೊಳಿಸಲು ನಿಶ್ಚಿತ ಕಾಲಾವಧಿಯನ್ನು ನಿರ್ಧರಿಸಲಾಗಿದೆ.

ಯುನಿಸೆಫ್ ಮತ್ತು ಯುನೆಸ್ಕೊ ಇವುಗಳ ಸಹಾಯದಿಂದ ಭಾರತವು ಸಹಸ್ರಕರ ವಿಕಾಸದ ಉದ್ದೇಶಗಳನ್ನು ತಲುಪಲು ಉಲ್ಲೇಖನಿಯ ಪ್ರಗತಿ ಮಾಡಿದೆ.

> ಸಂಯುಕ್ತ ರಾಷ್ಟ್ರಸಂಘದ ಬಾಲಕನಿಧಿ ಅಂದರೆ ಯುನಿಸೆಫ್ (UNICEF) ಎಂಬ ಸಂಯುಕ್ತ ರಾಷ್ಟ್ರಸಂಘದ ಸಂಲಗ್ನ ಸಂಸ್ಥೆಯಾಗಿದೆ. ಚಿಕ್ಕ ಮಕ್ಕಳಿಗೆ ಸತ್ವಯುಕ್ತ ಆಹಾರ ಮತ್ತು ಆರೋಗ್ಯ ಸೇವೆಯನ್ನು ಪೂರೈಸಲು ಯುನಿಸೆಫ್ ಕಾರ್ಯ ಮಾಡುತ್ತದೆ ಯುನಿಸೆಫ್‌ದ ಸಹಾಯದಿಂದ ಭಾರತದಲ್ಲಿ ಬಾಲ ಕುಪೋಷಣೆಯ ಸಮಸ್ಯೆಯ ಮೇಲೆ ಉಪಾಯ. ಯೋಜನೆ ಮಾಡಲು ವಿವಿಧ ಸತ್ರಗಳನ್ನು ಏರ್ಪಡಿಸಲಾಗಿದೆ.
>
> UNESCO ಈ ಸಂಯುಕ್ತ ರಾಷ್ಟ್ರಸಂಘದ ಸಂಲಗ್ನ ಸಂಸ್ಥೆಯ ಸಹಾಯದಿಂದ ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಇವುಗಳಲ್ಲಿಯ ಸಹಕಾರ್ಯ ಹೆಚ್ಚಿಸಿ ಜಗತ್ತಿನಲ್ಲಿ ಶಾಂತತೆ ಮತ್ತು ಸುರಕ್ಷಿತತೆ ಶಾಶ್ವತವಾಗಿಡುವ ಪ್ರಯತ್ನ ಮಾಡಲಾಗಿದೆ.

## ಸಂಯುಕ್ತ ರಾಷ್ಟ್ರಸಂಘ ಮತ್ತು ಶಾಂತತೆಯ ರಕ್ಷಣೆ

ಅಂತರರಾಷ್ಟ್ರಿಯ ಸಂಘರ್ಷವನ್ನು ಶಾಂತತಾಮಯ ಮಾರ್ಗದಿಂದ ಬಿಡಿಸುವದು ಇದು ಸಂಯುಕ್ತ ರಾಷ್ಟ್ರಸಂಘದ ಉದ್ದೇಶವಾಗಿದೆ. ಈ ಉದ್ದೇಶಗಳನ್ನು ಸಾಧ್ಯಗೊಳಿಸಲು ಯಾವ ಮಾರ್ಗವನ್ನು ಉಪಯೋಗಿಸಬೇಕೆಂಬುದನ್ನು ಸಂಯುಕ್ತ ರಾಷ್ಟ್ರಸಂಘದ ಸನದಿನಲ್ಲಿ ಹೇಳಲಾಗಿದೆ. ಯಾವ ರಾಷ್ಟ್ರಗಳಲ್ಲಿ ಸಂಘರ್ಷವಿದೆಯೋ ಆ ರಾಷ್ಟ್ರಗಳಿಗೆ ಒಪ್ಪಿಗೆ ಆಗುವ ಹಾಗೆ ಮಧ್ಯಸ್ಥನನ್ನು ನೇಮಿಸುವದು, ನ್ಯಾಯದ ಪ್ರಕ್ರಿಯೆಯ ಉಪಯೋಗ ಮಾಡುವದು. ಸಂಘರ್ಷ ಬಿಡಿಸಲು ಮಧ್ಯಸ್ಥ (ಪಂಚ) ನನ್ನು ನೇಮಿಸುವದು. ಅವಶ್ಯಕತೆ ಎನಿಸಿದರೆ ಸೈನ್ಯಬಲದ ಉಪಯೋಗ ಮಾಡುವದು ಮತ್ತು ಪುನಃ ಸಂಘರ್ಷ ವಾಗಬಾರದು ಎಂಬ ಕಾಳಜಿ ವಹಿಸುವದು ಇತ್ಯಾದಿ ಮಾರ್ಗಗಳ ಇವುಗಳಲ್ಲಿ ಸಮಾವೇಶವಿದೆ. ಆಧುನಿಕ ಕಾಲದಲ್ಲಿ ಆತಂಕವಾದ, ವಾಂಶಿಕ ಮತ್ತು ಧಾರ್ಮಿಕ ಸಂಘರ್ಷ ಇವುಗಳಿಂದ ಮಾನವಿ ಸುರಕ್ಷೆಗೆ ದಕ್ಕೆ ಉಂಟಾಗಿದೆ. ಅದಕ್ಕಾಗಿ ಸಂಯುಕ್ತ ರಾಷ್ಟ್ರಸಂಘದ ಶಾಂತತಾ ರಕ್ಷಣೆಯ ಕಾರ್ಯಕ್ಕೆ ಮಹತ್ವ ದೊರಕಿದೆ. ಸಂಘರ್ಷ ಉಳ್ಳ ಪ್ರದೇಶದಲ್ಲಿ ಮತ್ತೇ ಹಿಂಸೆಯ ಉದ್ರೇಕವಾಗಬಾರದು ಮತ್ತು ಆದಷ್ಟು ಬೇಗ ಸಾಮಾನ್ಯ ಸ್ಥಿತಿ ನಿರ್ಮಾಣವಾಗ ಬೇಕೆಂದು ಸಂಯುಕ್ತ ರಾಷ್ಟ್ರಸಂಘವು ಪ್ರಯತ್ನ ಮಾಡುವದು.

ಉದಾ: ಶಾಲೆಗಳನ್ನು ಪ್ರಾರಂಭಿಸುವದು, ಜನರಲ್ಲಿ ಮಾನವಿ ಹಕ್ಕುಗಳ ಕುರಿತು ಜಾಗರೂಕತೆ ನಿರ್ಮಾಣಮಾಡುವದು, ಸಾಮಾಜಿಕ, ಆರ್ಥಿಕ ರಾಜಕೀಯ ಸೌಲಭ್ಯಗಳನ್ನು ನಿರ್ಮಾಣ ಮಾಡುವದು, ಚುನಾವಣೆಗಳನ್ನು ತಗೆದುಕೊಳ್ಳುವದು ಮುಂತಾದವುಗಳು.

* ಶಿಕ್ಷಕರ ಸಹಾಯದಿಂದ ಯುಗೊಸ್ಲಾವ್ಹಿಯಾ, ನಾಮಿಬಿಯಾ. ಕಂಬೋಡಿಯಾ, ಸೋಮಾಲಿಯಾ, ಹೈತಿ, ಥಾಯಲಂಡ ಇತ್ಯಾದಿ ರಾಷ್ಟ್ರಗಳಲ್ಲಿ ಸಂಯುಕ್ತ ರಾಷ್ಟ್ರಗಳು ನಡೆಸಿದ ಶಾಂತತಾ ರಕ್ಷಣೆಯ ಅಭಿಯಾನದ ಮಾಹಿತಿ ಪಡೆಯಿರಿ.
* ಸಂಯುಕ್ತ ರಾಷ್ಟ್ರಗಳ ಶಾಂತಿಸೇನೆಗಾಗಿ ಸೈನ್ಯ ಕಳಿಸುವದರಲ್ಲಿ ಯಾವ ರಾಷ್ಟ್ರಗಳು ಮುಂಚೂಣಿಯಲ್ಲಿ (ಮುಂದೆ) ಇದ್ದಾರೆ. ಅವರ ಕೋಷ್ಟಕ ತಯ್ಯಾರಿಸಿರಿ.



ಭಾರತಿಯ ಶಾಂತಿ ಸೈನಿಕ

**ಸಂಯುಕ್ತ ರಾಷ್ಟ್ರಗಳಶಾಂತತೆಯ ರಕ್ಷಣೆ :** ಸಂಘರ್ಷವುಳ್ಳ ಪ್ರದೇಶಗಳಲ್ಲಿ ಶಾಶ್ವತವಾಗಿ ಶಾಂತತೆ ನಿರ್ಮಾಣ ವಾಗಲೆಂದು ಪೋಷಕವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಕಾರ್ಯವನ್ನು ರಾಷ್ಟ್ರಗಳ ಶಾಂತತಾ ರಕ್ಷಕರು ಸಂಘರ್ಷವುಳ್ಳ ಪ್ರದೇಶಗಳಿಗೆ ಶಾಂತತೆಯ ಕಡೆಗೆ ಮುನ್ನೆಜ್ಜೆ ಇಡಲು ಸಹಾಯ ಮಾಡುವರು. ಸಂಘರ್ಷವುಳ್ಳ ಪ್ರದೇಶದಲ್ಲಿ ಸುರಕ್ಷೆಯ ಜೊತೆಗೆ ರಾಜಕೀಯ ಮತ್ತು ಶಾಂತತೆಯನ್ನು ನಿರ್ಮಿಸಲು ಸಹಾಯ ಮಾಡಲಾಗುತ್ತದೆ ಅಂತರರಾಷ್ಟ್ರಿಯ ಶಾಂತತೆ ಮತ್ತು ಸುರಕ್ಷಿತತೆಯ ಸಂಪೂರ್ಣ ಜಗತ್ತಿನಲ್ಲಿ ರಕ್ಷಣೆ ಮತ್ತು ಸಂವರ್ಧನೆ ಮಾಡಲು ಸಂಯುಕ್ತ ರಾಷ್ಟ್ರಗಳ ಯಾವ ಅನೇಕ ವಿಧದ ಕೆಲಸಗಳನ್ನು ಮಾಡುತ್ತದೆಯೋ ಅವುಗಳಲ್ಲಿ ಶಾಂತತೆಯ ರಕ್ಷಣೆ ಇಂದೊಂದು ಕೆಲಸವಾಗಿದೆ. ಅದಕ್ಕೆ ಪೂರಕವಾಗಿದ್ದ ಅನ್ಯ ಕೃತಿಗಳಲ್ಲಿ ಮುಂದಿನ ಅಂಶಗಳ ಸಮಾವೇಶವಾಗುವದು.

* ಸಂಘರ್ಷ ಪ್ರತಿಬಂಧ ಮತ್ತು ಮಧ್ಯಸ್ಥಿಕೆ.
* ಶಾಂತತೆಯನ್ನು ಪ್ರತ್ಯಕ್ಷ ಪ್ರಸ್ಥಾಪಿಸುವದು.
* ಶಾಂತತಾ ರಕ್ಷಣೆಯ ಉಪಾಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವದು.
* ಶಾಂತತೆಯನ್ನು ಕಾಪಾಡುವದು.

## ಸಂಯುಕ್ತ ರಾಷ್ಟ್ರಗಳು ಮತ್ತು ಭಾರತ

ಸಂಯುಕ್ತ ರಾಷ್ಟ್ರಗಳ ಸ್ಥಾಪನೆಗಿಂತ ಮುಂಚೆ ಯಾವ ವಿವಿಧ ಪರಿಷತ್ತುಗಳಾದವೋ ಅವುಗಳಲ್ಲಿ ಭಾರತ ಸಹಭಾಗಿಯಾಗಿತ್ತು. ನಿರ್ವಸತಿಕರಣ, ನಿಃಶಸ್ತ್ರಿಕರಣ, ವಂಶಭೇದ ಹೀಗೆ ಅನೇಕ ಪ್ರಶ್ನೆಗಳನ್ನು ಸಂಯುಕ್ತ ರಾಷ್ಟ್ರಸಂಘದ ವೇದಿಕೆಯ ಮೇಲೆ ಮಂಡಿಸುವಲ್ಲಿ ಭಾರತದ ಸಹಭಾಗವಿತ್ತು. ಸಂಯುಕ್ತ ರಾಷ್ಟ್ರಗಳ 1946 ರಲ್ಲಿ ವರ್ಣದ್ವೇಷದ ಪ್ರಶ್ನೆಯನ್ನು ಮುಂಡಿಸುವ ಭಾರತ ಈ ದೇಶವು ಮೊದಲನೇ ದೇಶವಾಗಿತ್ತು. ಸಂಯುಕ್ತ ರಾಷ್ಟ್ರಗಳ ಮುಂದೆ ಅವಿಕಸಿತ ಮತ್ತು ವಿಕಸನಶೀಲ ರಾಷ್ಟ್ರಗಳ ಸಮಸ್ಯೆಗಳ ಮೇಲಿನ ಚರ್ಚೆಯಲ್ಲಿ ಭಾರತವು ಯಾವಾಗಲೂ ಮುಂದಾಳುತನ ವಹಿಸಿದೆ ಸಂಯುಕ್ತ ರಾಷ್ಟ್ರಗಳ ಶಾಂತಿಸೇನೆಯಲ್ಲಿ ಸಹಭಾಗಿಯಾಗಲು ಭಾರತವು ಕೇವಲ ಸ್ತ್ರೀ ಸೈನಿಕರ ಶಾಂತಿಸೇನೆಯನ್ನು ಕೂಡಾ ಕಳುಹಿಸಿದೆ. ಅಂತರರಾಷ್ಟ್ರಿಯ ಸಂಘರ್ಷ ಶಾಂತಿಮಾರ್ಗದಿಂದ ಬಿಡಿಸಬೇಕು ಎಂದು ಭಾರತವು ಪ್ರಯತ್ನಿಸುತ್ತಿದೆ. ಇದುವೇ ಇದರಿಂದ ಕಂಡು ಬರುವದು.

## ಸ್ವಾಧ್ಯಾಯ

**1. ಕೊಟ್ಟಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನಾಯ್ದು ವಿಧಾನಗಳನ್ನು ಪೂರ್ಣಗೊಳಿಸಿರಿ.**

(1) ಮುಂದಿನವುಗಳಲ್ಲಿ ಯಾವ ರಾಷ್ಟವು ಸಂಯುಕ್ತ ರಾಷ್ಟ್ರಗಳ ಭದ್ರತಾ ಸಮಿತಿಯ ಶಾಶ್ವತ ಸಭಾಸದ ಇಲ್ಲ?

ಅ) ಅಮೇರಿಕಾ ಬ) ರಶಿಯಾ
ಕ) ಜರ್ಮನಿ ಡ) ಚೀನ

(2) ಭಾರತದಲ್ಲಿ ಬಾಲಕುಪೋಷಿತರ ಸಮಸ್ಯೆಯ ಮೇಲೆ ಉಪಾಯ ಯೋಜನೆ ಮಾಡಲು ವಿವಿದ ಸತ್ರಗಳನ್ನು ಆಯೋಜಿಸುವ ಅಂತರರಾಷ್ಟ್ರಿಯ ಸಂಸ್ಥೆ .......

ಅ) ಯುನಿಸೆಫ್ ಬ) ಯುನೆಸ್ಕೊ
ಕ) ವಿಶ್ವಸ್ತ ಸಮಿತಿ ಡ) ರೆಡ್‌ಕ್ರಾಸ್

(3) ಸಂಯುಕ್ತ ರಾಷ್ಟ್ರಗಳ ಸಂಘಟನೆಯ ಇಂದು ಸದಸ್ಯರಾಗಿರುವ ರಾಷ್ಟ್ರಗಳ ಸಂಖ್ಯೆ –

ಅ) 190 ಬ) 193

ಕ) 198 ಡ) 199

**2. ಮುಂದಿನ ವಿಧಾನಗಳು ಸರಿಯೋ, ತಪ್ಪೊ ಎಂಬುದನ್ನು ಕಾರಣದೊಂದಿಗೆ ವಿವರಿಸಿರಿ.**

(1) ಮಹಾಸಭೆಯು ಜಾಗತಿಕ ಪ್ರಶ್ನೆಗಳ ಮೇಲೆ ಚರ್ಚೆ ಮಾಡುವ ವೇದಿಕೆ ಯಾಗಿದೆ.

(2) ಸಂಯುಕ್ತ ರಾಷ್ಟ್ರಗಳಲ್ಲಿಯ ಎಲ್ಲ ಸದಸ್ಯ ರಾಷ್ಟ್ರಗಳ ದರ್ಜೆ ಸಮಾನವಾಗಿರುವದಿಲ್ಲ.

(3) ಚೀನವು ಭದ್ರತಾ ಸಮಿತಿಯಲ್ಲಿ ನಕಾರಾಧಿಕಾರದ ಉಪಯೋಗ ಮಾಡಿದರೂ ಠರಾವು ಸಮ್ಮತವಾಗಬಹುದು.

(4) ಸಂಯುಕ್ತ ರಾಷ್ಟ್ರಗಳ ಕಾರ್ಯಗಳಲ್ಲಿ ಭಾರತವು ಮಹತ್ವದ ಪಾತ್ರ ವಹಿಸಿದೆ.

**3. ಮುಂದಿನ ಸಂಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ನಕಾರಾಧಿಕಾರ

(2) ಯುನಿಸೆಫ್

**4. ಮುಂದಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ**

(1) ಸಂಯುಕ್ತ ರಾಷ್ಟ್ರಗಳು ಈ ಸಂಘಟನೆಯ ಸ್ಥಾಪನೆಯ ಕಾರಣಗಳನ್ನು ಬರೆಯಿರಿ.

(2) ಸಂಯುಕ್ತ ರಾಷ್ಟ್ರಗಳ ಶಾಂತಿಸೇನೆಯ ಯಾವ ಪಾತ್ರ ವಹಿಸುವದು.


(3) ಸಂಯುಕ್ತ ರಾಷ್ಟ್ರಸಂಘದ ಉದ್ದೇಶಗಳನ್ನು ಬರೆಯಿರಿ.

**5. ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**


(1) ಸಂಯುಕ್ತ ರಾಷ್ಟ್ರಗಳ ಘಟಕಗಳ ಕುರಿತು ಮಾಹಿತಿಯನ್ನು ನೀಡುವ ಮುಂದಿನ ಕೋಷ್ಟಕವನ್ನು ಪೂರ್ಣ ಮಾಡಿರಿ.

| ಕ್ರ. | ಘಟಕಗಳು | ಸದಸ್ಯ ಸಂಖ್ಯೆ | ಕಾರ್ಯಗಳು |
|---|---|---|---|
| 1. | ಮಹಾಸಭೆ | | |
| 2. | ಭದ್ರತಾ ಸಮಿತಿ | | |
| 3. | ಅಂತರರಾಷ್ಟ್ರೀಯ ನ್ಯಾಯಾಲಯ | | |
| 4. | ಆರ್ಥಿಕ ಮತ್ತು ಸಾಮಾಜಿಕ ಪರಿಷತ್ತು | | |

(2) ಸಂಯುಕ್ತ ರಾಷ್ಟ್ರಸಂಘದ ಸ್ಥಾಪನೆಯ ಕಾಲಕ್ರಮವನ್ನು ಮುಂದಿನ ಕಾಲರೇಷೆಯ ಮೇಲೆ ತೋರಿಸಿರಿ.




(3) ಸಂಯುಕ್ತ ರಾಷ್ಟ್ರಗಳ ಸಂದರ್ಭದಲ್ಲಿ ಮುಂದಿನ ವೃಕ್ಷಕೋಷ್ಟಕವನ್ನು ಪೂರ್ಣಮಾಡಿರಿ




**ಉಪಕ್ರಮ:**

(1) ಸಂಯುಕ್ತ ರಾಷ್ಟ್ರಗಳ ಬಾಲಕರ ಮತ್ತು ಮಹಳೆಯರ ವಿಕಾಸಕ್ಕಾಗಿ ಯಾವ ಉಪಕ್ರಮ ಕೈಕೊಳ್ಳುವದು, ಅದರ ಮಾಹಿತಿ ಸಂಗ್ರಹಿಸಿರಿ.

(2) ಜಾಗತಿಕ ಆರೋಗ್ಯ ಸಂಘಟನೆಯ ಕುರಿತು ಮಾಹಿತಿಯನ್ನು ಸಂಗ್ರಹಿಸಿರಿ.

# 5 ಭಾರತ ಮತ್ತು ಅನ್ಯದೇಶಗಳು

**ಬನ್ನಿ, ಸ್ವಲ್ಪ ಪುನರ್ನಿರೀಕ್ಷಣೆ ಮಾಡೋಣ!**


ಹಿಂದಿನ ಪ್ರಕರಣದಲ್ಲಿ ನಾವು ಸಂಯುಕ್ತ ರಾಷ್ಟ್ರಸಂಘ ಈ ಅಂತರರಾಷ್ಟ್ರಿಯ ಸಂಘಟನೆ ಕುರಿತು ಮತ್ತು ಶಾಂತತಾ ರಕ್ಷಣೆಯಲ್ಲಿಯ ಅದರ ಪಾತ್ರವನ್ನು ತಿಳಿದುಕೊಂಡಿದ್ದೇವೆ. ಶಾಂತತಾ ರಕ್ಷಣೆಗಾಗಿ ಭಾರತವು ಸಂಯುಕ್ತ ರಾಷ್ಟ್ರಸಂಘಕ್ಕೆ ಯಾವಾಗಲೂ ಸಹಾಯ ಮಾಡಿದ್ದರ ಬಗ್ಗೆಯೂ ತಿಳಿದಿದೆ. ಪ್ರಸ್ತುತ ಪ್ರಕರಣದಲ್ಲಿ ನಾವು ಭಾರತ ಮತ್ತು ನೆರೆಯ ರಾಷ್ಟ್ರಗಳು ಇವುಗಳ ಸಂಬಂಧಗಳ ಚಿಕಿತ್ಸಕ ಪರಾಮರ್ಶೆ ಪಡೆದು ಕೊಳ್ಳುವವರಿದ್ದೇವೆ. ಭಾರತದಿಂದ ದೂರದಲ್ಲಿದ್ದ ಕೆಲವು ದೇಶಗಳೊಂದಿಗೆ ಭಾರತದ ಯಾವ ಪ್ರಕಾರದ ಸಂಬಂಧವಿದೆ ಇದನ್ನು ಸಹ ನಾವು ತಿಳಿದುಕೊಳ್ಳುವದಿದೆ.

**ಬನ್ನಿ ಶೋಧಿಸೋಣ ...**

* ದಕ್ಷಿಣ ಏಶಿಯಾದ ನಕಾಶೆಯ ಆಧಾರದಿಂದ ಭಾರತದ ಸೀಮಾರೇಷೆ ಯಾವ ಯಾವ ರಾಷ್ಟ್ರಗಳಿಗೆ ಅಂಟಿಕೊಂಡಿದೆ ಎಂಬುದನ್ನು ತಿಳಿದುಕೊಳ್ಳಿರಿ.
* ಭಾರತವನ್ನು ಬಿಟ್ಟು ಇತರ ಯಾವ ರಾಷ್ಟ್ರಗಳ ಸೀಮೆಗಳು ಒಂದಕ್ಕೊಂದು ಅಂಟಿಕೊಂಡಿವೆ ಇದನ್ನು ಶೋಧಿಸಿರಿ.

**ಭಾರತ ಮತ್ತು ನೆರೆಯ ರಾಷ್ಟ್ರಗಳು :**

ಭೌಗೋಲಿಕ ಮತ್ತು ರಾಜಕೀಯ ದೃಷ್ಟಿಯಿಂದ ಏಶಿಯಾ ಖಂಡದಲ್ಲಿ ಭಾರತದ ಮಹತ್ವದ ಸ್ಥಾನವಿದೆ.




ಭಾರತ ಮತ್ತು ನೆರೆಯ ದೇಶಗಳು

ಭಾರತದ ನೆರೆರಾಷ್ಟ್ರಗಳಲ್ಲಿ ಅಫಗಾಣಿಸ್ತಾನ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ಮ್ಯಾನಮಾರ, ನೇಪಾಳ, ಭೂತಾನ, ಚೀನ, ಮಾಲದೀವ ಇವುಗಳ ಸಮಾವೇಶವಿದೆ. ಸಮಾನತೆ, ಪರಸ್ಪರರ ಆದರ ಈ ಮೂಲ್ಯಗಳಿಗೆ ಭಾರತದ ಪರರಾಷ್ಟ್ರ ಧೋರಣೆಯಲ್ಲಿ ಮಹತ್ವವಿದೆ. ಈ ಮೌಲ್ಯಗಳಿಗೆ ಅನುಸರಿಸಿಯೇ ಭಾರತವು ನೆರೆಯ ರಾಷ್ಟ್ರಗಳೊಂದಿಗೆ ಸಂಬಂಧವನ್ನು ಪ್ರಸ್ಥಾಪಿಸಿದೆ. ಭಾರತೀಯ ಉಪಖಂಡದಲ್ಲಿ ಭಾರತವು ಆಕಾರದಿಂದ ಎಲ್ಲಕ್ಕೂ ದೊಡ್ಡ ದೇಶವಾಗಿದೆ. ಅಲ್ಲದೆ ಆರ್ಥಿಕ ಮತ್ತು ತಂತ್ರಜ್ಞಾನದ ದೃಷ್ಟಿಯಿಂದಲೂ ಭಾರತ ಅಧಿಕ ವಿಕಸಿತವಾಗಿದೆ. ಇದರಿಂದ ದಕ್ಷಿಣ ಆಶಿಯಾಯಿ ರಾಷ್ಟ್ರಗಳಲ್ಲಿ ಭಾರತದ ಪ್ರಭಾವ ವಿರುವದು ಸ್ವಾಭಾವಿಕವಾಗಿದೆ.

### ಭಾರತ ಮತ್ತು ಪಾಕಿಸ್ತಾನ

1947 ರಲ್ಲಿ ಭಾರತದ ವಿಭಜನೆಯಾಗಿ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ದೇಶಗಳ ನಿರ್ಮಾಣವಾಯಿತು.

**ಭಾರತ- ಪಾಕಿಸ್ತಾನ :** ಭಾರತ – ಪಾಕಿಸ್ತಾನ ಈ ಎರಡೂ ದೇಶಗಳ ಸಂಬಂಧಗಳ ಮೇಲೆ ಮೂರು ಸಮಸ್ಯೆಗಳ ಪ್ರಭಾವವಿದೆ. (1) ಎರಡೂ ರಾಷ್ಟ್ರಗಳ ಜಾಗತಿಕ ದೃಷ್ಟಿಕೋನದಲ್ಲಿಯ ಅಂತರ. (2) ಕಾಶ್ಮೀರ ಸಮಸ್ಯೆ. (3) ಅಣ್ವಸ್ತ್ರ ವಿಷಯದ ಸಂಘರ್ಷ. ಭಾರತ ಮತ್ತು ಪಾಕಿಸ್ತಾನದ ಜಗತ್ತಿನ ಕಡೆಗೆ ನೋಡುವ ದೃಷ್ಟಕೋನ ಬೇರೆಯಾಗಿವೆ.

ಭಾರತೀಯ ಜಾಗತಿಕ ದೃಷ್ಟಿಕೋನದ ಅನುಸಾರ ಭಾರತವು ಶೀತಯುದ್ಧದ ಕಾಲದ ಸೈನಿಕ ಸಂಘಟನೆಗಳಿಗೆ ವಿರೋಧ ಮಾಡಿತು ಮತ್ತು ಭಾರತ-ಪಾಕಿಸ್ತಾನ ಸಂಘರ್ಷ ದ್ವಿಪಕ್ಷಿಯ ಅಂದರೆ ತಮ್ಮ ತಮ್ಮಲ್ಲಿ ಬಿಡಿಸುವ ಪ್ರಯತ್ನ ಮಾಡಿತು. 1972ರಲ್ಲಿ ಆದ ''ಸಿಮಲಾ ಕರಾರು'' ಈ ತತ್ವದ ಮೇಲೆ ಆಧರಿಸಿತ್ತು. ಇದಕ್ಕೆ ವಿರುದ್ಧವಾಗಿ ಪಾಕಿಸ್ತಾನವು ಇಸ್ಲಾಮಿ ಜಗತ್ತಿನೊಂದಿಗೆ ಅಮೇರಿಕೆಯ ಸೈನಿಕ ಸಂಘಟನೆಯಲ್ಲಿ ಪ್ರವೇಶಿಸಿತು.

ಪಾಕಿಸ್ತಾನಕ್ಕೆ ಭಾರತದೊಂದಿಗೆ ಸಂಬಂಧ ಪ್ರಸ್ಥಾಪಿಸಲು ಕಾಶ್ಮೀರ ಇದೊಂದೇ ಮಹತ್ವದ ಪ್ರಶ್ನೆಯಾಗಿದೆ. 1965 ಕಾಶ್ಮೀರ ಪ್ರಶ್ನೆಯಿಂದ ಭಾರತ ಪಾಕಿಸ್ತಾನ ಯುದ್ಧವಾಯಿತು. ಎರಡೂ ದೇಶಗಳಲ್ಲಿಯ ಸಂಘರ್ಷ ಬಿಡಿಸಲು 1966ರಲ್ಲಿ ''ತಾಷ್ಕಂದ ಕರಾರು'' ಆಯಿತು. ಆದರೆ ಅದರಿಂದ ಏನೇನು ಸಾಧ್ಯವಾಗಲಿಲ್ಲ, 1971ರ ಯುದ್ಧವು ಒಂದು ವೇಳೆ ಬಾಂಗಲಾದೇಶದ ನಿರ್ಮಿತಿಗಾಗಿ ಇದ್ದರೂ ಸಹ ಅದಕ್ಕೂ ಕಾಶ್ಮೀರ ಪ್ರಶ್ನೆಯ ಬದಿ ಇತ್ತು. 1972 ರಲ್ಲಿಯ ಸಿಮಲಾ ಕರಾರಿನಿಂದ ಭಾರತ ಮತ್ತು ಪಾಕಿಸ್ತಾನ ಇವುಗಳಲ್ಲಿಯ ಪರಸ್ಪರ ಕೊಡ-ತಡೆದುಕೊಳ್ಳುವಿಕೆಗಾಗಿ ಒಂದು ಹೊಸ ರೂಪರೇಷೆಯನ್ನು ಸಿದ್ಧಪಡಿಸಲಾಯಿತು. 1999 ರಲ್ಲಿ ಭಾರತ ಪಾಕಿಸ್ತಾನ ಇವುಗಳಲ್ಲಿ ಕಾರಗಿಲ್ ಕ್ಷೇತ್ರದಲ್ಲಿಯ ಪಾಕಿಸ್ತಾನವು ಮಾಡಿದ ಗುಪ್ತವಾಗಿ ಭಾರತದಲ್ಲಿ ಸೇರುವ ಪ್ರಯತ್ನದಿಂದ ಪುನಃ ಸಂಘರ್ಷ ಹುಟ್ಟಿಕೊಂಡಿತು. ಇಂದೂ ಸಹ ಕಾಶ್ಮೀರ ಇದೊಂದೇ ಎರಡೂ ದೇಶಗಳ ಸಂಘರ್ಷಕ್ಕೆ ಕಾರಣವಾಗಿದೆ. ಸಂಘರ್ಷದ ಸ್ವರೂಪ ಮಾತ್ರ ಬದಲಾವಣೆ ಯಾಗಿದೆ ಮತ್ತು ಸಂಘರ್ಷದ ಈ ಹೊಸ ಪ್ರಕಾರದ ವರ್ಣನೆಯನ್ನು ಆತಂಕವಾದ (ಅಂಜಿಸುವ ನೀತಿ)ದ ಸಮಸ್ಯೆ ಎಂದು ಮಾಡಬಹುದು.

ಭಾರತ ಮತ್ತು ಪಾಕಿಸ್ತಾನ ಈ ಎರಡೂ ದೇಶಗಳು 1998 ರಲ್ಲಿ ಅಣುಪರೀಕ್ಷೆ ಮಾಡಿದವು ಮತ್ತು ಇದರಿಂದ ಈ ಕ್ಷೇತ್ರದಲ್ಲಿ ಶಾಂತತೆ ಮತ್ತು ಸುರಕ್ಷಿತತೆಕುರಿತು ಹೊಸ ಚಿಂತೆ ನಿರ್ಮಾಣವಾಗಿದೆ. ಈ ಎರಡೂ ದೇಶಗಳಲ್ಲಿ ಅಣ್ವಿಕ ಸಂಘರ್ಷ ವಾಗಬಾರದೆಂದು ಅನೇಕ ರಾಷ್ಟ್ರಗಳಿಗೆ ಅನಿಸುವದು. ಭಾರತ-ಪಾಕಿಸ್ತಾನ ಸಂಬಂಧದಲ್ಲಿಯ ಇನ್ನೊಂದು ಸಮಸ್ಯೆಯಂದರೆ 'ಸರ್ ಕ್ರೀಕ್' ಕ್ಷೇತ್ರದಲ್ಲಿಯ ಸೀಮೆಯ ಕುರಿತವಾದ ವಿವಾದವಾಗಿದೆ.

ಎರಡೂ ದೇಶಗಳು ಪರಸ್ಪರರಲ್ಲಿ ಸಂವಾದ ಸಾಧಿಸುವ ಪ್ರಯತ್ನ ಮಾಡಿವೆ. ಆದರೆ ಪಾಕಿಸ್ತಾನ ಯಾವ ಪ್ರಕಾರ ಭಾರತದ ವಿರುದ್ಧ ಆತಂಕವಾದಿಗಳಿಗೆ ಬೆಂಬಲ ಕೊಡುತ್ತಿದೆ ಮತ್ತು ಆತಂಕವಾದದ ಕೃತ್ಯಗಳನ್ನು ಮಾಡಿಸುತ್ತಿದೆ. ಇದನ್ನು ನೋಡಿದಾಗಿ ಸಂವಾದದ ಎಲ್ಲ ಪ್ರಯತ್ನಗಳು ಅಯಶಸ್ವಿ ಆಗುತ್ತಲಿವೆ.

**ಭಾರತ-ಚೀನ :** ಭಾರತ ಮತ್ತು ಚೀನ ಇವುಗಳಲ್ಲಿಯ ಸಂಘರ್ಷವು ಎರಡು ಪ್ರಶ್ನೆಗಳಿಗೆ ಸಂಬಂಧಿಸಿದೆ. 1) ಸೀಮಾ ಪ್ರಶ್ನೆ ಮತ್ತು. 2) ತಿಬೇಟದ ದರ್ಜೆ. ಭಾರತ ಮತ್ತು ಚೀನ ಇವುಗಳಲ್ಲಿ ಸೀಮೆಯಿಂದ ಯಾವ ವಾದವಿದೆಯೊ ಆದು ಅಕ್ಸಾಯಿ ಚೀನ ಮತ್ತು ಮ್ಯಾಕಮೋಹನ ಗಡಿರೇಷೆ ಕ್ಷೇತ್ರಗಳಿಗೆ ಸಂಬಂಧಿಸಿದೆ. ಚೀನದ ಬೇಡಿಕೆಯೆಂದರೆ, ಅಕ್ಸಾಯಿ ಚೀನ ಮತ್ತು ಮ್ಯಾಕ್‌ಮೋಹನ ರೇಷೆಯ ದಕ್ಷಿಣಕಡೆಯ ಪ್ರದೇಶ (ಅರುಣಾಚಲ ಪ್ರದೇಶ) ಇದು ಚೀನದ ಭೂಪ್ರದೇಶವಾಗಿದೆ. ಮ್ಯಾಕ್‌ಮೋಹನ ರೇಷೆಯು ಅಂತರರಾಷ್ಟ್ರಿಯ ಗಡಿರೇಖೆಯಾಗಿದೆ, ಇದನ್ನು ಚೀನವು ಒಪ್ಪುತ್ತಿಲ್ಲ. ಈ ಗಡಿವಾದವನ್ನು ಸಂವಾದದಿಂದ ಬಿಡಿಸಲು ಭಾರತ ಹಲವಾರು ಸಲ ಪ್ರಯತ್ನಿಸಿದೆ. ಆದರೆ ಅದಕ್ಕೆ ಅಷ್ಟೊಂದು ಯಶಸ್ಸು ದೊರಕಿಲ್ಲ, 1962ರಲ್ಲಿ ಚೀನವು ಭಾರತದ ಮೇಲೆ ದಾಳಿ ಮಾಡಿತು.

ತಿಬೇಟ ಇದು ಪಾರಂಪರಿಕ ದೃಷ್ಟಿಯಿಂದ ಒಂದು

ಸ್ವಾಯತ್ತತೆಯ ಕ್ಷೇತ್ರವಾಗಿತ್ತು. ಆದರೆ ಚೀನವು ಆ ಪ್ರದೇಶದಲ್ಲಿ ತನ್ನ ಸೈನಿಕ ನಿಯಂತ್ರಣವನ್ನು ಸತತವಾಗಿ ಹೆಚ್ಚಿಸುತ್ತಿರುವದರಿಂದ ತಿಬೇಟದ ದಲಾಯಿ ಲಾಮಾ ಇವರು ಭಾರತದಲ್ಲಿ ರಾಜಾಶ್ರಯ ಪಡೆದುಕೊಂಡರು. ಈ ಘಟನೆಯು ಎರಡೂ ದೇಶಗಳಲ್ಲಿಯ ಸಂಘರ್ಷಕ್ಕೆ ಕಾರಣೀಭೂತವಾಗಿದೆ.

ಚೀನ ಮತ್ತು ಪಾಕಿಸ್ತಾನ ಇವುಗಳಲ್ಲಿಯ ಗೆಳೆತನ, ಚೀನವು ಪಾಕಿಸ್ತಾನಕ್ಕೆ ಮಾಡುತ್ತಿರುವ ಶಸ್ತ್ರಾಸ್ತ್ರ ಪೂರೈಕೆ ಮತ್ತು ಕ್ಷೇಪಣಾಸ್ತ್ರ ಮತ್ತು ಅಣ್ವಸ್ತ್ರಗಳ ತಂತ್ರಜ್ಞಾನ ಇವುಗಳಿಂದ ಭಾರತದ ಸುರಕ್ಷಿತತೆಗೆ ಇರುವ ಅಪಾಯ (ಭೀತಿ) ಮತ್ತಷ್ಟು ಹೆಚ್ಚಾಗುತ್ತಲಿದೆ. ಇದರಿಂದ ಪಾಕಿಸ್ತಾನ ಮತ್ತು ಚೀನ ಇವುಗಳ ಗೆಳೆತನ ಹಾಗೆಯೇ ಭಾರತದ ಇನ್ನಿತರ ನೆರೆದೇಶಗಳಲ್ಲಿ ಹೆಚ್ಚುತ್ತಿರುವ ಚೀನದ ಪ್ರಭಾವವು ಭಾರತಕ್ಕಾಗಿ ಚಿಂತೆ ಮಾಡುವ ವಿಷಯವಾಗಿದೆ, ಹೀಗಿದ್ದರೂ ಭಾರತವು ಚೀನದೊಂದಿಗೆ ಸಂಬಂಧ ಸುಧಾರಿಸುವ ಸತತ ಪ್ರಯತ್ನ ಮಾಡುತ್ತಲೇ ಇದೆ. ಈ ಎರಡೂ ದೇಶಗಳಲ್ಲಿಯ ಗಡಿಪ್ರಶ್ನೆಯನ್ನು ಚರ್ಚೆಯ ಮೂಲಕ ಬಿಡಿಸುವ ಸಲುವಾಗಿ ಸಂಯುಕ್ತ ಕಾರ್ಯಕಾರಿ ಗುಂಪಿನ ಸ್ಥಾಪನೆ ಮಾಡಲಾಗಿದೆ. ಚೀನ ಮತ್ತು ಭಾರತ ಇವರಿಬ್ಬರ ಆರ್ಥಿಕ ವಿಕಾಸದ ವೇಗವು ಹೆಚ್ಚಿದ ನಂತರ ಇಬ್ಬರಲ್ಲಿಯ ವ್ಯಾಪಾರಿ ಸಂಬಂಧ ಬಲಿಷ್ಠವಾಗಲಾರಂಭಿಸಿತು. ಇಬ್ಬರಲ್ಲಿಯ ಆರ್ಥಿಕ ಮತ್ತು ವ್ಯಾಪಾರಿ ಸಂಬಂಧ ಸುಧಾರಿಸಿದ್ದರಿಂದ ರಶಿಯಾ, ಚೀನ ಮತ್ತು ಭಾರತ ಇವುಗಳಲ್ಲಿಯ ಚರ್ಚೆಗಳಿಂದಾಗಿ ಸಾವಕಾಶವಾಗಿ ಭಾರತ-ಚೀನ ಸಂಬಂಧದಲ್ಲಿ ಸುಧಾರಣೆ ಯಾಗುತ್ತಲಿದೆ. ಇವರಲ್ಲಿಯ ಗಡಿಪ್ರಶ್ನೆ ಬಿಡಿಸಲಿಲ್ಲವಾದರೂ ಅದು ಸ್ವಲ್ಪ ಹಿಂದೆ ಬಿದ್ದಿದೆ ಮತ್ತು ಇತರ ಕ್ಷೇತ್ರಗಳಲ್ಲಿಯ ಸಂಬಂಧಗಳಿಗೆ ಮಹತ್ವ ದೊರಕಿದೆ.

## ಭಾರತ ಮತ್ತು ಅನ್ಯ ನೆರೆಯ ರಾಷ್ಟ್ರಗಳು

**ಅಫಗಾಣಿಸ್ತಾನ :** ಅಫಗಾಣಿಸ್ತಾನದಲ್ಲಿ ರಾಜಕೀಯ ಅಸ್ಥಿತೆಯು ಹೆಚ್ಚಿನ ಪ್ರಮಾಣದಲ್ಲಿದೆ. ತಾಲಿಬಾನ ಎಂಬ ಆತಂಕವಾದಿ ಸಂಘಟನೆಯ ಇಲ್ಲಿಯ ವರ್ಚಸ್ಸು ಅದಕ್ಕೆ ಕಾರಣೀಭೂತವಾಗಿದೆ. ಅಫಗಾಣಿಸ್ತಾನದಲ್ಲಿ ಶಾಂತತೆ, ಸುರಕ್ಷಿತತೆ ಮತ್ತು ಸ್ಥೈರ್ಯ ತರುವದು, ಅಲ್ಲಿಯ ಹಿಂಸಾಚಾರವನ್ನು ತಡೆಹಿಡಿಯುವದು. ಪ್ರಜಾಪ್ರಭುತ್ವ ಸರಕಾರ ಸ್ಥಾಪಿಸಲು ಸಹಾಯ ಮಾಡುವದು ಇವುಗಳಿಗಾಗಿ ಭಾರತವು ಅಫಗಾಣಿಸ್ತಾನಕ್ಕೆ ಸಹಾಯವನ್ನು ಕೊಟ್ಟಿದೆ. ಅಲ್ಲದೆ ಯುದ್ಧದಿಂದಾಗಿ ನಷ್ಟವಾದ ಸಾರಿಗೆಸೌಲಭ್ಯದ ವ್ಯವಸ್ಥೆ ನಿರ್ಮಾಣ ಮಾಡುವದು, ರಸ್ತೆಗಳನ್ನು ನಿರ್ಮಿಸುವದು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ್ಯ, ಶಾಲೆಗಳು, ಆರೋಗ್ಯ ಸೌಲಭ್ಯ, ಸಿಂಚನ ಪ್ರಕಲ್ಪ (ನೀರಾವರಿ) ದ ಸ್ಥಾಪನೆ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಭಾರತವು ಅಫಗಾಣಿಸ್ತಾನಕ್ಕೆ ಸಹಾಯ ಮಾಡುತ್ತಲಿದೆ.

**ಬಾಂಗಲಾದೇಶ:** ಇಂದಿನ ಬಾಂಗಲಾದೇಶವೆಂದರೆ ಹಿಂದಿನ ಪೂರ್ವ ಪಾಕಿಸ್ತಾನ, ಪಾಕಿಸ್ತಾನದ ನಿರ್ಮಿತಿಯ ವೇಳೆಗೆ ಪಾಕಿಸ್ತಾನದ ವಿಭಜನೆ ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನವೆಂದಾಯಿತು. ಪಶ್ಚಿಮ ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನ ಇವುಗಳಲ್ಲಿ ಭಾಷೆಯ ಅಂತರವಿತ್ತು ಅಲ್ಲದೆ ಅನ್ಯ ರಾಜಕೀಯ ಸಂಘರ್ಷವೂ ಇತ್ತು. ಅದರಿಂದಲೇ ಬಾಂಗಲಾದೇಶದಲ್ಲಿ ಮುಕ್ತಿ ಚಳುವಳಿಯ ಉಗಮವಾಯಿತು ಈ ಚಳುವಳಿಯು ಬಾಂಗಲಾದೇಶವನ್ನು ಪಾಕಿಸ್ತಾನದ ವರ್ಚಸ್ವದಿಂದ ಮುಕ್ತ ಮಾಡುವ ಮುಂದಾಳುತನ ವಹಿಸಿತು. ಬಾಂಗಲಾದೇಶ ಮುಕ್ತಿ ಸಂಗ್ರಾಮದಲ್ಲಿ ಭಾರತವು ಬಾಂಗಲಾದೇಶವರಿಗೆ ಸಹಾಯ ಮಾಡಿತು. ಬಾಂಗಲಾದೇಶದ ನಿರ್ಮಿತಿಯು 1971 ರಲ್ಲಿ ಆಯಿತು. ಭಾರತದ ಮತ್ತು ಬಾಂಗಲಾದೇಶ ಇವುಗಳಲ್ಲಿಯ ನೀರು ಹಂಚಿಕೆ ಸಂಬಂಧದ ಮತ್ತು ಗಡಿಸೀಮಾರೇಷೆ ಸಂಬಂಧದ ಕೆಲವು ಕರಾರುಗಳಾಗಿದ್ದರಿಂದ ಇವರಲ್ಲಿಯ ಸಂಘರ್ಷಕೊನೆ ಗೊಂಡು ಈಗ ಇವರಲ್ಲಿಯ ವ್ಯಾಪಾರಿ ಸಂಬಂಧವು ಹೆಚ್ಚು ಧೃಡವಾಗಲು ಆರಂಭಿಸಿದೆ.

**ಶ್ರೀಲಂಕಾ :** ಶ್ರೀಲಂಕಾ ಈ ನಮ್ಮ ನೆರೆಯ ರಾಷ್ಟ್ರದೊಂದಿಗೆ ಭಾರತದ ಸಂಬಂಧ ಮೈತ್ರಿಪೂರ್ಣವಾಗಿದೆ. ಶ್ರೀಲಂಕಾದಲ್ಲಿಯ ತಮಿಳು ಜನರು ಮತ್ತು ಶ್ರೀಲಂಕಾದ ಸರಕಾರ ಇವರಲ್ಲಿಯ ಸಂಘರ್ಷದಿಂದ 1985ರ ನಂತರ ರಾಜಕೀಯ ಅಸ್ಥಿರತೆ ನಿರ್ಮಾಣವಾಗಿತ್ತು. ಆ ವೇಳೆಗೆ ಶ್ರೀಲಂಕಾ ಸರಕಾರದ ಸಹಾಯಕ್ಕಾಗಿ ಭಾರತವು ಶಾಂತಿ ಸೇನೆಯನ್ನು ಕಳುಹಿಸಿತ್ತು. ಸಾಗರ ಕ್ಷೇತ್ರದಲ್ಲಿ ಸುರಕ್ಷೆಯ ದೃಷ್ಟಿಯಿಂದ ಶ್ರೀಲಂಕಾದೊಡನೆ ಇದ್ದ ಗೆಳೆತನದ ಸಂಬಂಧ ಮಹತ್ವದ್ದಾಗಿದೆ.

**ನೇಪಾಳ:** ನೇಪಾಳ ಮತ್ತು ಭೂತಾನ ಇವು ನಾಲ್ಕೂ ಬದಿಯಿಂದ ಗುಡ್ಡದ ಭೂಭಾಗದಿಂದ ಸುತ್ತುವರೆದ ದೇಶಗಳಾಗಿವೆ. ಅವುಗಳ ಸೀಮೆಗಳು ಭಾರತದ ಮತ್ತು ಚೀನಗಳಿಗೆ ಅಂಟಿಗೊಂಡಿವೆ. ಭಾರತ ಮತ್ತು ನೇಪಾಳ ಇವುಗಳಲ್ಲಿಯ ಗೆಳೆತನದ ಸಂಬಂಧದ ತಳಹದಿ 1950 ರಂದು ಭಾರತ-ನೇಪಾಳ ಮೈತ್ರಿ ಕರಾರಿನಿಂದ ಹಾಕಲಾಯಿತು. ಈ ಕರಾರಿನಿಂದ ನೇಪಾಳದಲ್ಲಿಯ ನಾಗರಿಕರಿಗೆ ಭಾರತದಲ್ಲಿ ಸಹಜ ಪ್ರವೇಶವಷ್ಟೇ ಅಲ್ಲ, ಸರಕಾರಿ ನೌಕರಿ ಮತ್ತು ಉದ್ಯೋಗ ಮಾಡುವ ಅನುಮತಿ ದೊರಕಿತು. ನೇಪಾಳದಲ್ಲಿ ಅರಸು ಮನೆತನದ ಆಳ್ವಿಕೆ ಇತ್ತು. 1990 ರಲ್ಲಿ

ನೇಪಾಳದ ಪ್ರಜಾಪ್ರಭುತ್ವ ದೇಶಗೆ ಆಗುಹೋಗುಗಳು ನಡೆದವು. ಆರ್ಥಿಕ ಪ್ರಗತಿ ಮೂಲಭೂತ ಸೌಕರ್ಯ, ಅನ್ನದ ಅವಶ್ಯಕತೆ ಮತ್ತು ವ್ಯಾಪಾರ ಇವುಗಳಿಗಾಗಿ ಮತ್ತು ವಿದ್ಯುತ್ತಿಗಾಗಿ ನೇಪಾಳ ಭಾರತವನ್ನು ಅವಲಂಬಿಸಿದೆ. 2015 ರಲ್ಲಾದ ಭೂಕಂಪದ ವೇಳೆಗೆ ಭಾರತವು ನೇಪಾಳಕ್ಕೆ ಸಹಾಯ ಮಾಡಿತ್ತು.

**ಭೂತಾನ :** ಭೂತಾನದ ಸಂರಕ್ಷಣೆಯ ಹೊಣೆ ಭಾರತದ ಮೇಲಿದೆ. ಭೂತಾನದಲ್ಲಿ ನೀರಿನ ಪ್ರಚಂಡ ಮೂಲಗಳಿವೆ. ಈ ನೀರಿನ ಉಪಯೋಗ ಮಾಡಿ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ನಿರ್ಮಿತಿ ಮಾಡುವ ಪ್ರಕಲ್ಪಕ್ಕೆ ಭಾರತವು ಸಹಕಾರ್ಯ ಮಾಡಿದೆ.

**ಮ್ಯಾನಮಾರ :** ಮ್ಯಾನಮಾರ ಇದು ಭಾರತದ ಪೂರ್ವಕಡೆಗೆ ಇದ್ದ ಆಗ್ನೆಯ ಏಶಿಯಾಯಿ ರಾಷ್ಟ್ರಗಳಿಗೆ ಭಾರತದೊಂದಿಗೆ ಜೋಡಿಸುವ ಪ್ರವೇಶ ದ್ವಾರವಾಗಿದೆ. ಈ ಭಾಗದಲ್ಲಿ ವಿಕಸಿತವಾಗುತ್ತಿರುವ ರೈಲುಮಾರ್ಗ ಮತ್ತು ಮಹಾಮಾರ್ಗಗಳಿಂದ ದಕ್ಷಿಣ ಏಶಿಯಾ, ಮಧ್ಯ ಏಶಿಯಾ ಮತ್ತು ಆಗ್ನೆಯ ಏಶಿಯಾ ಒಂದನ್ನೊಂದು ಜೋಡಿಸಲಾಗುವವು. ಇದರಿಂದ ಈ ಪ್ರದೇಶದಲ್ಲಿಯ ವ್ಯಾಪಾರ ಮತ್ತು ಆರ್ಥಿಕ ಕೊಡ-ಕೊಳ್ಳುವಿಕೆ ಹೆಚ್ಚಾಗಬಹುದು.

**ನಿಮಗೆ ಗೊತ್ತಿದೆಯೇ ?**

**ಮ್ಯಾನಮಾರ ಮತ್ತು ಆಂಗ ಸಿ ಕ್ಯೂ:** ಮ್ಯಾನಮಾರದಲ್ಲಿ ಸೈನಿಕ ಆಢಳಿತದ ವಿರುದ್ಧ ದೀರ್ಘಕಾಲದ ವರೆಗೆ ಹೋರಾಡಿ ಪ್ರಜಾಪ್ರಭುತ್ವವನ್ನು ಪ್ರಸ್ಥಾಪಿಸುವ ಶ್ರೇಯ ಆಂಗ ಸಿ ಕ್ಯೂ ಇವರಿಗೆ ಕೊಡಲಾಗುವದು. ಅವರಿಗೆ ಶಾಂತತೆಗಾಗಿ ನೋಬಲ ಪುರಸ್ಕಾರ ದೊರಕಿದೆ.

**ಮಾಲದೀವ:** ಭಾರತ ಮತ್ತು ಮಾಲದೀವ ಇವರ ಸಂಬಂಧ ಪ್ರಾರಂಭದಿಂದಲೂ ಮೈತ್ರಿಯುತವಾಗಿದೆ. ಭಾರತದ ದಕ್ಷಿಣಕ್ಕೆ ಇರುವ ಈ ಚಿಕ್ಕ ರಾಷ್ಟ್ರ ಅನೇಕ ಕಾರಣಗಳಿಗಾಗಿ ಭಾರತವನ್ನವಲಂಬಿಸಿದೆ. 1981 ರಿಂದ ಈ ಎರಡು ರಾಷ್ಟ್ರಗಳು ವ್ಯಾಪಾರಿ ಸಂಬಂಧ ಪ್ರಸ್ಥಾಪಿಸಿವೆ. ಮೂಲಭೂತ ಕ್ಷೇತ್ರದ ವಿಕಾಸ, ಆರೋಗ್ಯ, ಸಾರಿಗೆ ಸರಕು ಹೀಗೆ ಅನೇಕ ಕ್ಷೇತ್ರಗಳಲ್ಲಿ ಭಾರತವು ಮಾಲದೀವಕ್ಕೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಸಹಾಯ ಮಾಡಿದೆ. 2006ರ ನಂತರ ಇವರಲ್ಲಿ ಸಂರಕ್ಷಣ ಕ್ಷೇತ್ರದಲ್ಲಿಯೂ ಸಹಕಾರ್ಯಕ್ಕೆ ಪ್ರಾರಂಭವಾಯಿತು. ಭಾರತವು ಮಾಲದೀವಕ್ಕೆ ಸುರಕ್ಷಾ ವ್ಯವಸ್ಥೆಯನ್ನು ಬಲಶಾಲಿಯಾಗಿ ಮಾಡಲು ಸಹಾಯ ಮಾಡಲು ಪ್ರಾರಂಭಿಸಿದೆ. ಅವಕಾಶ ಸಹಕಾರ್ಯ, ಐತಿಹಾಸಿಕ ವಸ್ತುಗಳ ಜೋಪಾನ, ಪರ್ಯಟನ ಈ ಕ್ಷೇತ್ರದಲ್ಲಿ ಎರಡೂ ರಾಷ್ಟ್ರಗಳು ಕರಾರನ್ನು ಮಾಡಿವೆ. ಅಲ್ಲದೆ ಆತಂಕವಾದದಂತಹ ಸಮಸ್ಯೆಯೊಂದಿಗೆ ಹೋರಾಡಲು ಸಹಕಾರ್ಯ ಮಾಡುವದಾಗಿ ನಿರ್ಧರಿಸಿವೆ.

## ಭಾರತ ಮತ್ತು ಅಮೇರಿಕಾ:

ಭಾರತ ಮತ್ತು ಅಮೇರಿಕಾ ಇವೆರಡೂ ಪ್ರಜಾಪ್ರಭುತ್ವ ವ್ಯವಸ್ಥೆಯುಳ್ಳ ಬಲಾಢ್ಯ ರಾಷ್ಟ್ರಗಳಾಗಿವೆ. ಅಮೇರಿಕೆಯು

**ದಕ್ಷಿಣ ಏಶಿಯಾಯಿ ಸಹಕಾರಿ ಸಂಘಟನೆ - ಸಾರ್ಕ**

ಸಾರ್ಕ ಇದು ದಕ್ಷಿಣ ಆಶಿಯಾಯಿ ರಾಷ್ಟ್ರಗಳು 1985ರಲ್ಲಿ ಸ್ಥಾಪನೆ ಮಾಡಿದ ಪ್ರಾದೇಶಿಕಸಂಘಟನೆಯಾಗಿದೆ. ದಕ್ಷಿಣ ಆಶಿಯಾಯಿ ರಾಷ್ಟ್ರಗಳಲ್ಲಿ ಆರ್ಥಿಕ ಸಹಕಾರ್ಯ ನಿರ್ಮಾಣ ಮಾಡುವದು ಮತ್ತು ಅದರ ಮೂಲಕ ಸಂಪೂರ್ಣ ದಕ್ಷಿಣ ಆಶಿಯಾದ ವಿಕಾಸ ಸಾಧಿಸುವದು ಇದು ಈ ಸಂಘಟನೆಯ ಉದ್ದೇಶವಾಗಿದೆ. ಸಾರ್ಕ ಸಂಘಟನೆ ಅಂದರೆ ಎಲ್ಲ ದಕ್ಷಿಣ ಆಶಿಯಾಯಿ ದೇಶಗಳು ಒಟ್ಟಿಗೆ ಬಂದು ತಮ್ಮ ಸಮಾನ ಪ್ರಶ್ನೆಗಳು ಮತ್ತು ಸಮಾನ ಹಿತಗಳ ಚರ್ಚೆ ಮಾಡುವ ವೇದಿಕೆಯಾಗಿದೆ. ದಾರಿದ್ರ್ಯ ನಿರ್ಮೂಲನೆ, ಕೃಷಿವಿಕಾಸ, ತಂತ್ರಜ್ಞಾನದಲ್ಲಿಯ ಕ್ರಾಂತಿ, ಇವು ದಕ್ಷಿಣ ಆಶಿಯಾಯಿ ದೇಶಗಳ ಕೆಲವು ಸಮಾನ ಹಿತಸಂಬಂಧಗಳಾಗಿವೆ. ದಕ್ಷಿಣ ಆಶಿಯಾಯಿ ದೇಶಗಳಿಗೆ ಪರಸ್ಪರರೊಂದಿಗೆ ವ್ಯಾಪಾರ ಮಾಡಲು ಅಧಿಕ ಸರಳವಾಗಲೆಂದು ಸಾರ್ಕದ ವೇದಿಕೆಯ ಮೇಲೆ ಕೆಲವು ಮಹತ್ವದ ಕರಾರುಗಳನ್ನು ಮಾಡಲಾಗಿದೆ. ಅದನ್ನನುಸರಿಸಿ ಸಂಪೂರ್ಣ ದಕ್ಷಿಣ ಆಶಿಯಾಯಿ ರಾಷ್ಟ್ರಗಳ ಒಂದು ಮುಕ್ತ ವ್ಯಾಪಾರ ಕ್ಷೇತ್ರ ನಿರ್ಮಿಸುವದಾಗಿ ನಿಶ್ಚಯಿಸಲಾಯಿತು ಸಮಾನ ವಿಕಾಸಕ್ಕಾಗಿ ದಕ್ಷಿಣ ಆಶಿಯಾಯಿ ವಿಶ್ವಿದ್ಯಾಲಯದಂತಹ ಸಂಸ್ಥೆ ಮತ್ತು ದಕ್ಷಿಣ ಆಶಿಯಾಯಿ ಮುಕ್ತ ವ್ಯಾಪಾರ ಕ್ಷೇತ್ರ ಈ ಕರಾರು ಮಾಡಲಾಗಿದೆ.

* ಸಾರ್ಕ ಈ ಸಂಘಟನೆಯ ಸ್ಥಾಪನೆಯ ಹಿಂದೆ ಇದ್ದ ಉದ್ದೇಶವೇನು? * ಸಾರ್ಕದಲ್ಲಿ ಇಂದು ಎಷ್ಟು ಸದಸ್ಯ ದೇಶಗಳಿವೆ? * ದಕ್ಷಿಣ ಆಶಿಯಾಯಿ ದೇಶಗಳ ಸಮಾನ ಹಿತ ಸಂಬಂಧಗಳು ಯಾವವು?

ಪ್ರಾರಂಭದಿಂದಲೂ ಭಾರತದ ಎಲ್ಲಕ್ಕೂ ಮಹತ್ವದ ವ್ಯಾಪಾರಿ ಪಾಲುಗಾರ ದೇಶವಾಗಿದೆ. ಅನೇಕ ಭಾರತಿಯ ಜನರು ಶಿಕ್ಷಣ ಮತ್ತು ನೌಕರಿಗಾಗಿ ಅಮೇರಿಕೆಗೆ ಹೋಗುತ್ತಿದ್ದರು. ಅಲ್ಲಿಯ ಈ ಅನಿವಾಸಿ ಭಾರತಿಯರಿಂದ ಅಮೇರಿಕಾ ಮತ್ತು ಭಾರತ ಇವುಗಳಲ್ಲಿ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳು ಹೆಚ್ಚುತ್ತ ಹೋದವು ಶೀತಯುದ್ಧದ ನಂತರ ಭಾರತ ಮತ್ತು ಅಮೇರಿಕಾ ಇವುಗಳಲ್ಲಿಯ ಸುರಕ್ಷಾ ವಿಷಯದ ಸಂಬಂಧ ಹೆಚ್ಚಿನ ಪ್ರಮಾಣದಲ್ಲಿ ಬೆಳೆದವು. ಭಾರತವು ಮುಕ್ತ ಅರ್ಥವ್ಯವಸ್ಥೆಯ ಧೋರಣೆಯನ್ನು ಸ್ವೀಕರಿಸಿದ ನಂತರ ಸಾವಕಾಶವಾಗಿ ಭಾರತದ ಮತ್ತು ಅಮೇರಿಕಾ ಇವುಗಳಲ್ಲಿಯ ವ್ಯಾಪಾರ ಸಂಬಂಧ ಅಧಿಕ ಧೃಡವಾಗುವದರಲ್ಲಾಯಿತು.

1998 ರಲ್ಲಿ ಭಾರತವು ಅಣುಪರೀಕ್ಷೆ ಮಾಡಿದ ನಂತರ ಕೆಲಕಾಲ ಭಾರತ ಮತ್ತು ಅಮೇರಿಕಾ ಸಂಬಂಧದಲ್ಲಿ ಸಂಘರ್ಷ ನಿರ್ಮಾಣವಾಗಿತ್ತು. ನಂತರ ಈ ಸಂಬಂಧ ಸುಧಾರಿಸಬೇಕೆಂದು ಭಾರತ ಮತ್ತು ಅಮೇರಿಕಾ ಇವುಗಳಲ್ಲಿ ಅನೇಕ ಚರ್ಚೆಗಳಾದವು. ಈ ಅನೇಕ ಚರ್ಚೆಗಳಿಂದ ಭಾರತವು ಅಣ್ವಸ್ತ್ರಗಳ ಉಪಯೋಗವನ್ನು ಜವಾಬ್ದಾರಿಯಿಂದ ಮಾಡಬಹುದು ಎಂಬ ವಿಶ್ವಾಸ ಅಮೇರಿಕೆಗೆ ಮೂಡಿತು. ನಂತರ ಭಾರತ-ಅಮೇರಿಕಾ ಸಂಬಂಧದಲ್ಲಿ ಆಮೂಲಾಗ್ರ ಬದಲಾವಣೆಯಾಯಿತು. 2005ರಲ್ಲಿ ಆದ ಸಂರಕ್ಷಣ ವಿಷಯದ ಸಹಕಾರ್ಯದ ಕರಾರು ಮತ್ತು 2008 ರಲ್ಲಾದ ಅಣ್ವಿಕ ಸಹಕಾರ್ಯದ ಕರಾರು ಇವು ಭಾರತ-ಅಮೇರಿಕಾ ಸಂಬಂಧದಲ್ಲಿಯ ಮಹತ್ವದ ಹಂತಗಳಾಗಿವೆ. ಕಳೆದ 5 ವರ್ಷಗಳಲ್ಲಿ ಭಾರತ ಮತ್ತು ಅಮೇರಿಕಾ ಇವರಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಸಹಕಾರ್ಯದ ಸಂಬಂಧ ನಿರ್ಮಾಣವಾಗಿದೆ.

**ಗೊತ್ತಿದೆಯೇ ನಿಮಗೆ?**

2005ರಲ್ಲಿ ಭಾರತ ಮತ್ತು ಅಮೇರಿಕಾ ಇವುಗಳಲ್ಲಿಯ ನಾಗರಿ ಅಣುಸಹಕಾರ್ಯ ಕರಾರಿಗೆ ಭಾರತದ ಆಗಿನ ಪ್ರಧಾನಮಂತ್ರಿ ಡಾ. ಮನಮೋಹನ ಸಿಂಗ ಮತ್ತು ಅಮೇರಿಕೆಯ ಅಧ್ಯಕ್ಷ ಬುಶ್ ಇವರು ಮಾನ್ಯತೆಯನ್ನು ನೀಡಿದರು 2008ರಲ್ಲಿ ಅಂತರರಾಷ್ಟ್ರಿಯ ಅಣು ಶಕ್ತಿ ಆಯೋಗವು ಈ ಕರಾರಿಗೆ ಮಾನ್ಯತೆಯನ್ನು ನೀಡಿತು. ಈ ಕರಾರಿನಿಂದ ಭಾರತಕ್ಕೆ ಇತರ ದೇಶಗಳಿಂದ ಅಣ್ವಿಕ ತಂತ್ರಜ್ಞಾನ ದೊರಕಲು ಸಾಧ್ಯವಾಯಿತು.

## ಭಾರತ ಮತ್ತು ರಶಿಯಾ

ಭಾರತ ಮತ್ತು ಸೋವ್ಹಿಯತ್ ರಶಿಯಾ ಮತ್ತು ಈಗಿನ ರಶಿಯಾ ಇವುಗಳಲ್ಲಿ ಪ್ರಾರಂಭದಿಂದಲೇ ಗೆಳೆತನದ ಸಂಬಂಧವಿತ್ತು. ಶೀತಯುದ್ಧದ ಕಾಲದಲ್ಲಿ 1971 ರಲ್ಲಿ ಇವರಲ್ಲಿ ಮೈತ್ರಿ ಕರಾರಾಯಿತು ಮತ್ತು ಅದರಿಂದ ಸಂರಕ್ಷಣೆ ವಿಷಯದ ಹಾಗೆಯೇ ಆರ್ಥಿಕ ಮತ್ತು ತಂತ್ರವೈಜ್ಞಾನಿಕ ಸಹಕಾರ್ಯಕ್ಕೆ ದೊಡ್ಡ ಚಾಲನೆ ದೊರಕಿತು. ಸೋವ್ಹಿಯತ್ ರಶಿಯಾ ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಮತ್ತು ಸೈನಿಕ ಸಹಾಯವನ್ನು ನೀಡಿತ್ತು.

ಸೋವ್ಹಿಯತ್ ರಶಿಯಾ ವಿಭಜನೆಯಾದ ನಂತರ ಭಾರತವು ರಶಿಯಾದೊಂದಿಗೆ ಸಂಬಂಧವನ್ನು ಹೆಚ್ಚಿಸುವ ಪ್ರಯತ್ನ ಮಾಡಿತು. ಪ್ರಾರಂಭದಲ್ಲಿ ರಶಿಯಾದಲ್ಲಿಯ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳಿಂದ ಸಂಬಂಧದಲ್ಲಿ ಸಾಕಷ್ಟು ಸುಧಾರಣೆಯಾಗಲಿಲ್ಲ. 1996ರ ನಂತರ ಭಾರತ ಮತ್ತು ರಶಿಯಾ ಇವುಗಳಲ್ಲಿಯ ಸಂಬಂಧ ಮೆಲ್ಲಮೆಲ್ಲನೆ ಸುಧಾರಿಸ ಹತ್ತಿತು. ಸೈನಿಕ ಸಾಮಗ್ರಿಗಳ ಉತ್ಪಾದನೆ, ಖನಿಜ ಎಣ್ಣೆಯ ಉತ್ಪಾದನೆ ಈ ಕ್ಷೇತ್ರದಲ್ಲಿ ಭಾರತ ಮತ್ತು ರಶಿಯಾ ಇವರು ಸಂಯುಕ್ತ ಪ್ರಕಲ್ಪವನ್ನು ಪ್ರಾರಂಭಿಸಿದ್ದಾರೆ.

## ಭಾರತ ಮತ್ತು ಯುರೋಪಿನ ರಾಷ್ಟ್ರಗಳು

ಯುರೋಪಿನ ರಾಷ್ಟ್ರಗಳ ಮತ್ತು ಭಾರತ ಇವುಗಳಲ್ಲಿ ವ್ಯಾಪಾರಿ ಸಂಬಂಧವಿದೆ. ಪ್ರಾಮುಖ್ಯವಾಗಿ ಜರ್ಮನಿ ಮತ್ತು ಫ್ರಾನ್ಸ ಈ ರಾಷ್ಟ್ರಗಳು ಭಾರತದಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣತೊಡಗಿಸಿದ್ದಾರೆ. ಹಾಗೆಯೇ ಭಾರತಕ್ಕೆ ಶಸ್ತ್ರಾಸ್ತ್ರ ನಿರ್ಮಿತಿಯ ತಂತ್ರಜ್ಞಾನವೂ ಕೂಡಾ ಯುರೋಪಿನ ರಾಷ್ಟ್ರಗಳಿಂದ ಸಿಗುವದು. ಅಭಿಯಾಂತ್ರಿಕ ಮತ್ತು ಮಾಹಿತಿ ತಂತ್ರಜ್ಞಾನ ಈ ಕ್ಷೇತ್ರಗಳಲ್ಲಿ ಭಾರತವು ದೊಡ್ಡ ನಿರ್ಯಾತಮಾಡುವ ದೇಶವಾಗಿದೆ. ಮುಕ್ತ ವ್ಯಾಪಾರದ ಮೇಲೆ ಒತ್ತು ಇದು ಇಬ್ಬರ ಪ್ರಮುಖ ಉದ್ದೇಶವಾಗಿದೆ. ಇದರೊಂದಿಗೆ ಭಾರತ ಮತ್ತು ಯುರೋಪಿಯನ್ ರಾಷ್ಟ್ರಗಳು ಹವಾಮಾನದಲ್ಲಿಯ ಬದಲಾವಣೆ, ಸ್ವಚ್ಛ ಶಕ್ತಿ, ಸಂರಕ್ಷಣಾ ಉತ್ಪಾದನೆ ಸಾಯಬರ ಸುರಕ್ಷೆ, ಸಂಶೋಧನೆ, ರೇಲ್ವೆ ವ್ಯವಸ್ಥಾಪನೆ, ಅಪತ್ತು ವ್ಯವಸ್ಥಾಪನೆ, ವಾಯು ಸುರಕ್ಷೆ, ಆತಂಕವಾದ ಮುಂತಾದ ಸಂದರ್ಭದಲ್ಲಿ ಅನೇಕ ಕರಾರುಗಳನ್ನು ಮಾಡಿಕೊಂಡಿವೆ ಭಾರತದ ವಿಕಾಸದ ದೃಷ್ಟಿಯಿಂದ ಈ ಸಹಕಾರ್ಯ ಅತ್ಯಂತ ಮಹತ್ವದಾಗಿದೆ.

**ಬನ್ನಿ, ಶೋಧಿಸೋಣ...**

* ಯುರೋಪಿನ ಸಂಘದ ಸ್ಥಾಪನೆ ಯಾವಾಗ ಆಯಿತು?
* ಯುರೋಪಿನ ಮಾರುಕಟ್ಟೆ, ಯುರೋಪಿನ ಚಲನ (ನಾಣ್ಯ) ಇವುಗಳ ಕುರಿತು ಮಾಹಿತಿ ಪಡೆಯಿರಿ.

## ಭಾರತ ಮತ್ತು ಆಫ್ರಿಕಾ ಖಂಡ

ಭಾರತ ಮತ್ತು ಆಫ್ರಿಕಾ ಖಂಡ ಇವುಗಳಲ್ಲಿಯ ಸಹಕಾರ್ಯಕ್ಕಾಗಿ ಭಾರತವು ವಿಚಾರಪೂರ್ವಕವಾಗಿ ಹೆಜ್ಜೆ ಇಟ್ಟಿದೆ. ಆಫ್ರಿಕೆಯೊಂದಿಗೆ ಸಮೀಪದ ಸಂಬಂಧವಿರುವದು ಇಬ್ಬರ ದೃಷ್ಟಿಯಿಂದಲೂ ಲಾಭದಾಯಕವಾಗಿದೆ. ಆಫ್ರಿಕೆಯಲ್ಲಿಯ ಅನೇಕ ದೇಶಗಳು ಭರದಿಂದ ಆರ್ಥಿಕ ಪ್ರಗತಿಯನ್ನು ಸಾಧಿಸುತ್ತಲಿವೆ. ಆಫ್ರಿಕೆಯಲ್ಲಿ ತರುಣ ವರ್ಗದ ಸರ್ವಾಂಗೀಣ ವಿಕಾಸವಾಗಲು ಸಹಾಯ ಮಾಡುವ ಸಿದ್ಧತೆಯನ್ನು ಭಾರತವು ತೋರಿಸಿದೆ. ಶಿಕ್ಷಣ, ಪರ್ಯಟನೆ ಇಂಥ ಎಲ್ಲ ಕ್ಷೇತ್ರಗಳಲ್ಲಿ ವಿಕಾಸ ವಾಗಲು ಭಾರತವು ಆರ್ಥಿಕ ಸಹಾಯ ಮಾಡುವ, ಅನುದಾನ ಕೊಡುವ ಸಿದ್ಧತೆಯನ್ನು ತೋರಿಸಿದೆ. ಹಾಗೆಯೇ ಭಾರತದ ಊರ್ಜಾಶಕ್ತಿ ಅವಶ್ಯಕತೆಯನ್ನು ಆಫ್ರಿಕೆಯಲ್ಲಿಯ ಊರ್ಜಾಶಕ್ತಿ ಸಂಪನ್ನವಾದ ದೇಶಗಳಾದ ಇಜಿಪ್ತ, ನಾಯಜೇರಿಯಾ, ಅಂಗೋಲಾ, ಸುದಾನ ಇವುಗಳು ಪೂರೈಸಬಹುದು. ಆಫ್ರಿಕೆಯೊಂದಿಗೆ ವ್ಯಾಪಾರ ಹೆಚ್ಚಿಸಲು ಭಾರತವು ಪ್ರಯತ್ನಶೀಲವಾಗಿದೆ.

2015 ರಲ್ಲಿ ಆದ ಭಾರತ ಮತ್ತು ಆಫ್ರಿಕಾ ಶಿಖರ ಪರಿಷತ್ತಿಗೆ ಆಫ್ರಿಕೆಯಲ್ಲಿದ್ದ ಎಲ್ಲ 54 ರಾಷ್ಟ್ರಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ಈ ಪರಿಷತ್ತಿನಲ್ಲಿ ಅನೇಕ ಜಾಗತಿಕ ಪ್ರಶ್ನೆಗಳ ಮೇಲೆ ಚರ್ಚೆಯಾಯಿತು ಉದಾ- ಹವಾಮಾನದ ಬದಲಾವಣೆ, ಆತಂಕವಾದ, ಸಮುದ್ರ ದರೋಡೆ ಮುಂತಾದವುಗಳು.

## ಭಾರತ ಮತ್ತು ಇಂಡೊ - ಪ್ಯಾಸಿಫಿಕ್

ಇಂಡೋ-ಪ್ಯಾಸಿಫಿಕ್ ಕ್ಷೇತ್ರದಲ್ಲಿ ಪ್ರಾಮುಖ್ಯವಾಗಿ ಜಪಾನ, ಆಷ್ಟ್ರೇಲಿಯಾ, ನ್ಯೂಝಿಲ್ಯಾಂಡ್ ಮತ್ತು ಆಗ್ನೆಯ ಏಶಿಯಾಯಿ ರಾಷ್ಟ್ರಗಳು, ಇವುಗಳ ಸಮಾವೇಶವಿದೆ. ಈ ಎಲ್ಲ ರಾಷ್ಟ್ರಗಳೊಂದಿಗೆ ಭಾರತದ ಘನಿಷ್ಠವಾದ ಆರ್ಥಿಕ ಮತ್ತು ವ್ಯಾಪಾರಿ ಸಂಬಂಧವಿದೆ. ಅಲ್ಲಿಯ ಅನೇಕ ಕಂಪನಿಗಳು ಭಾರತದಲ್ಲಿ ಹಣ ತೊಡಗಿಸಿವೆ. ಭಾರತ ಮತ್ತು ಆಷ್ಟ್ರೇಲಿಯಾ ಇವುಗಳಲ್ಲಿ ಸಾಮಾಜಿಕ ಸುರಕ್ಷೆ, ಅಪರಾಧಿಗಳ ಹಸ್ತಾಂತರಣ, ಮಾದಕ ಪದಾರ್ಥಗಳ ಕಳ್ಳವ್ಯಾಪಾರದ ವಿರುದ್ಧದ ಅಭಿಯಾನ, ಪರ್ಯಟನೆ, ಕಲಾಸಂಸ್ಕೃತಿ- ಈ ಕ್ಷೇತ್ರಗಳಲ್ಲಿ ವಿವಿಧ ಕರಾರುಗಳನ್ನು ಮಾಡಲಾಗಿದೆ ಮತ್ತು ಮೂಲಭೂತ ಸೌಲಭ್ಯ, ಆರ್ಥಿಕ ಸಹಕಾರ್ಯ, ಸಂರಕ್ಷಣೆ, ಮಾಹಿತಿ ತಂತ್ರಜ್ಞಾನ, ಅಣು ಶಕ್ತಿ, ರೈಲು ಹೀಗೆ ಅನೇಕ ಕ್ಷೇತ್ರಗಳಲ್ಲಿಯ ವಿಕಾಸಕ್ಕಾಗಿ ಜಪಾನ ಭಾರತಕ್ಕೆ ಸಹಕಾರ್ಯ ಮಾಡುವದು. ಭಾರತಕ್ಕೆ ಸಮುದ್ರ ಕ್ಷೇತ್ರದ ವಿಕಾಸಕ್ಕಾಗಿ ಮತ್ತು ಸುರಕ್ಷಿತತೆಗಾಗಿ ಆರ್ಥಿಕ ಮತ್ತು ತಾಂತ್ರಿಕ ಸಹಾಯ ಮಾಡುವದಾಗಿ ಜಪಾನವು ಮನ್ನಣೆ ನೀಡಿದೆ. ಎರಡೂ ದೇಶಗಳ ತಟರಕ್ಷಕ (ಸಮುದ್ರ ದಂಡೆ ಕಾವಲು) ದಳ ಮತ್ತು ನೌದಳಗಳಲ್ಲಿ ಸಂಯುಕ್ತ ಅಭ್ಯಾಸ ಮಾಡಲಾಗುತ್ತಿದೆ.

## ಭಾರತ ಮತ್ತು ಆಗ್ನೆಯ ಏಶಿಯಾ

ಇಂಡೋನೇಶಿಯಾ, ಮಲೇಶಿಯಾ, ಸಿಂಗಾಪೂರ, ಫಿಲಿಪೈನ್ಸ, ಥಾಯಲ್ಯಾಂಡ, ಮ್ಯಾನಮಾರ, ವ್ಹಿಯೆತನಾಮ, ಲಾವೋಸ, ಕಂಬೋಡಿಯಾ ಮತ್ತು ಬ್ರುನೆಯಿ ಈ ಆಗ್ನೆಯ ಆಶಿಯಾದಲ್ಲಿಯ ರಾಷ್ಟ್ರಗಳೊಂದಿಗೆ ಭಾರತವು ಪ್ರಾರಂಭದಿಂದಲೇ ಸ್ನೇಹ ಸಂಬಂಧಪಟ್ಟಿದೆ 1991ರ ನಂತರ ಭಾರತವು ತನ್ನ ಆರ್ಥಿಕ ಧೋರಣೆಯಲ್ಲಿ ಬದಲಾವಣೆಮಾಡಿ ಮುಕ್ತ ಅರ್ಥ ವ್ಯವಸ್ಥೆಯನ್ನು ಸ್ವೀಕರಿಸಿತು. ಆನಂತನ ಆಗ್ನೇಯ ಆಶಿಯಾಯಿ ರಾಷ್ಟ್ರಗಳೊಂದಿಗೆ ಇದ್ದ ವ್ಯಾಪಾರಿ ಸಂಬಂಧದಲ್ಲಿ ಅಧಿಕ ಹೆಚ್ಚಳವಾಯಿತು. ಆಗ್ನೆಯ ಆಶಿಯಾಯಿ ರಾಷ್ಟ್ರಗಳೊಂದಿಗೆ ವ್ಯಾಪಾರ ಹೆಚ್ಚಿಸುವ ಈ ಧೋರಣೆ 'ಪೂರ್ವದ ಕಡೆನೋಡಿ' (Look East) ಎಂದು ಗುರುತಿಸಲಾಗುವದು. 2014ರ ನಂತರ ಈ ಧೋರಣೆಯನ್ನು ಹೆಚ್ಚು ಸಕ್ರೀಯ ಮಾಡಲಾಯಿತು. 'ಕೃತಿ ಮಾಡಿರಿ' (Act East) ಎಂದು ಈ ಧೋರಣೆಯು ಸಧ್ಯ ಗುರುತಿಸಲ್ಪಡುತ್ತದೆ.

**ಭಾರತ ಮತ್ತು ಪಶ್ಚಿಮ ಏಶಿಯಾ:** ಪಶ್ಚಿಮ ಏಶಿಯಾದಲ್ಲಿಯ ದೇಶಗಳು ಪ್ರಾಮುಖ್ಯವಾಗಿ ಖನಿಜ ಎಣ್ಣೆ ಮತ್ತು ನೈಸರ್ಗಿಕ ವಾಯುವಿನ ಪೂರೈಕೆ ಮಾಡುವ ದೇಶಗಳಾಗಿವೆ. ಭಾರತದ ಪಶ್ಚಿಮ ಏಶಿಯಾಯಿ ರಾಷ್ಟ್ರಗಳೊಂದಿಗೆ ಪರಂಪರಾಗತಸಂಬಂಧಗಳಿವೆ. ಭಾರತವು ಪಶ್ಚಿಮ ಆಶಿಯಾಯಿ ರಾಷ್ಟ್ರಗಳಿಂದ ದೊರಕುವ ಖನಿಜ ಎಣ್ಣೆಯ ಮೇಲೆ ಅವಲಂಬಿಸಿದೆ. ಇರಾಣ, ಇರಾಕ, ಬಹರಿನ, ಕುವೆತ, ಸೌದಿ ಅರೇಬಿಯಾ, ಸಂಯುಕ್ತ ಅರಬ ಅಮಿರಾತಿ ಈ ರಾಷ್ಟ್ರಗಳಿಂದ ಭಾರತ ಖನಿಜ ಎಣ್ಣೆಯ ಆಯಾತ ಮಾಡುವದು ಮತ್ತು ಕೃಷಿಗಾಗಿ ಅಧುನಿಕ ತಂತ್ರಜ್ಞಾನ ನಮಗೆ ಇಸ್ರಾಯಲ್ ಈ ರಾಷ್ಟ್ರದಿಂದ ಸಿಗುವವು. ಹಾಗೆಯೇ ಸಂರಕ್ಷಣಾ ವಿಷಯದ ಆಧುನಿಕ ಸಾಮಗ್ರಿಗಳು ಕೂಡಾ ಇಸ್ರಾಯಿಲ್‌ದಿಂದ ಸಿಗುವದು. ಇದಲ್ಲದೆ ನೌಕರಿ. ವ್ಯವಸಾಯದ ನಿಮಿತ್ತವಾಗಿ ಅನೇಕ ಭಾರತೀಯರು ಅಲ್ಲಿ ವಾಸಿಸುತ್ತಿದ್ದಾರೆ. ಅವರ ಅರ್ಥಿಕ ವ್ಯವಸ್ಥೆಯಲ್ಲಿಯ ಕೊಡುಗೆ ನಮಗೆ ಮಹತ್ವದ್ದಾಗಿದೆ.

ಎಲ್ಲ ರಾಷ್ಟ್ರಗಳೊಂದಿಗೆ ಮೈತ್ರಿಪೂರ್ಣ ಸಂಬಂಧವನ್ನಿಡುವದು ಮತ್ತು ಸ್ವಂತದ ಜೊತೆಗೆಯೇ ಇತರ ರಾಷ್ಟ್ರಗಳ ವಿಕಾಸವಾಗಬಹುದು, ಇದಕ್ಕಾಗಿ ಒಬ್ಬರಿಗೊಬ್ಬರು ಸಹಾಯ ಮಾಡುವದು ಇದು ಭಾರತದ ಪರರಾಷ್ಟ್ರ ಧೋರಣೆಯ ಪ್ರಮುಖ ಉದ್ದೇಶವಾಗಿದೆ.

ಭಾರತ ಮತ್ತು ಜಗತ್ತಿನಲ್ಲಿಯ ಮಹತ್ವದ ದೇಶಗಳಲ್ಲಿಯ ಸಂಬಂಧಗಳ ಮಾಹಿತಿಯನ್ನು ನಾವು ಇಲ್ಲಿ ಪಡೆದಿದ್ದೇವೆ. ಮುಂದಿನ ಪ್ರಕರಣದಲ್ಲಿ ನಾವು ಕೆಲವು ಮಹತ್ವದ ಅಂತರರಾಷ್ಟ್ರಿಯ ಇಲ್ಲವೆ ಜಾಗತಿಕ ಸಮಸ್ಯೆಗಳ ಅಭ್ಯಾಸ ಮಾಡುವವರಿದ್ದೇವೆ.



## ಸ್ವಾಧ್ಯಾಯ

**1. ಕೆಳಗಿನಪರ್ಯಾಯಗಳಲ್ಲಿಯಯೋಗ್ಯಪರ್ಯಾಯವನ್ನಾಯ್ದು ವಿಧಾನಗಳನ್ನು ಪೂರ್ಣ ಮಾಡಿರಿ.**

(1) ಭಾರತದೊಂದಿಗೆ ಅಂತರರಾಷ್ಟ್ರೀಯ ಗಡಿರೇಖೆ (ಸೀಮೆ) ತೆರೆದಿಡುವ ದೇಶ –
(ಅ) ಪಾಕಿಸ್ತಾನ (ಬ) ಬಾಂಗಲಾದೇಶ
(ಕ) ನೇಪಾಳ (ಡ) ಮ್ಯಾನಮಾರ

(2) ಭಾರತದೊಂದಿಗೆ ಸಂಘರ್ಷಪೂರ್ಣ ಸಂಬಂಧವಿರುವ ದೇಶ –
(ಅ) ಪಾಕಿಸ್ತಾನ ಮತ್ತು ಚೀನ
(ಬ) ನೇಪಾಳ ಮತ್ತು ಭೂತಾನ
(ಕ) ಮ್ಯಾನಮಾರ ಮತ್ತು ಮಾಲದೀವ
(ಡ) ಅಫಗಾಣಿಸ್ತಾನ ಮತ್ತು ಅಮೇರಿಕಾ

(3) ಭಾರತ ಮತ್ತು ಪಾಕಿಸ್ತಾನ ಈ ದೇಶಗಳ ಸಂಬಂಧಗಳ ಮೇಲೆ ಪ್ರಭಾವ ಬೀರುವ ಅಂಶಗಳು –
(ಅ) ಎರಡೂ ರಾಷ್ಟ್ರಗಳ ಜಾಗತಿಕ ದೃಷ್ಟಿಕೋನದದಲ್ಲಿಯ ಅಂತರ
(ಬ) ಕಾಶ್ಮೀರ ಸಮಸ್ಯೆ
(ಕ) ಅಣ್ವಸ್ತ್ರ ವಿಷಯದ ಸಂಘರ್ಷ
(ಡ) ಮೇಲಿನ ಎಲ್ಲ ಸಮಸ್ಯೆಗಳು

**2. ಮುಂದಿನ ವಿಧಾನಗಳು ಸರಿಯೋ ತಪ್ಪೊ ಎಂಬುದನ್ನು ಕಾರಣದೊಂದಿಗೆ ಸ್ಪಷ್ಟಪಡಿಸಿರಿ.**

(1) ದಕ್ಷಿಣ ಏಶಿಯಾಯ ರಾಷ್ಟ್ರಗಳಲ್ಲಿ ಭಾರತದ ಸ್ಥಾನ ಮಹತ್ವದ್ದಾಗಿದೆ.
(2) ಭಾರತ – ಚೀನ ಸಂಬಂಧ ಮೈತ್ರಿಪೂರ್ಣವಾಗಿದೆ.
(3) ಶ್ರೀಲಂಕಾ ಸರಕಾರದ ಸಹಾಯಕ್ಕಾಗಿ ಭಾರತವು ಶಾಂತಿಸೇನೆಯನ್ನು ಕಳುಹಿಸಿತು

**3. ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**

1. ಮುಂದಿನ ಕೋಷ್ಟಕವನ್ನು ಪೂರ್ಣ ಮಾಡಿರಿ.

| ಕ್ರ೦. | ಆದ ಕರಾರು/ಕೊಡಕೊಳ್ಳುವಿಕೆ | ಸಂಬಂಧಿಸಿದ ದೇಶಗಳು |
|---|---|---|
| 1. | ......................... | ಭಾರತ–ಪಾಕಿಸ್ತಾನ |
| 2. | ಮ್ಯಾಕ್‌ಮೋಹನ ಗಡಿರೇಖೆ | ..................... |
| 3. | ......................... | ಭಾರತ–ಬಾಂಗಲಾದೇಶ |
| 4. | ನೈಸರ್ಗಿಕ ವಾಯುವಿನ ಆಯಾತ | ..................... |
| 5. | ......................... | ಭಾರತ–ಅಮೇರಿಕಾ |
| 6. | ಮೂಲಭೂತ ಕ್ಷೇತ್ರವಿಕಾಸ, ಸಾರಿಗೆ ಸಂಪರ್ಕ ಆರೋಗ್ಯ | ..................... |
| 7. | ......................... | ಭಾರತ–ಆಫ್ರಿಕಾ |

**4. ಟಿಪ್ಪಣಿ ಬರೆಯಿರಿ.**

(1) ಸಿಮಲಾ ಕರಾರು
(2) ಭಾರತ ಅಫಘಾಣಿಸ್ತಾನ ಮೈತ್ರಿ ಕರಾರು
(3) ಮ್ಯಾಕ್‌ಮೋಹನ ರೇಷೆ
(4) ಭಾರತ – ಅಫಗಾಣಿಸ್ತಾನ ಸಂಬಂಧ

**5. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಿಸಿರಿ.**

(1) ಭಾರತದ ಅಮೇರಿಕಾ ಇವುಗಳಲ್ಲಿಯ ಸಹಕಾರ್ಯದ ಸಂಬಂಧ ನಿರ್ಮಾಣವಾಗುವ ಹಿಂದಿನ ಹಿನ್ನೆಲೆಯನ್ನು ವಿಶದಿಸಿರಿ.
(2) ನೆರೆಯ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಪ್ರಸ್ಥಾಪಿತವಾಗಲು ಭಾರತವು ಮಾಡಿದ ಪ್ರಯತ್ನಗಳ ಕುರಿತು ಉದಾಹರಣೆಯೊಂದಿಗೆ ಮಾಹಿತಿ ಬರೆಯಿರಿ.
(3) ದಕ್ಷಿಣ ಏಶಿಯಾಯಿ ಪ್ರಾದೇಶಿಕ ಸಹಕಾರ್ಯ ಸಂಘಟನೆಯು ಯಾವ ಕಾರ್ಯ ಮಾಡುತ್ತಿದೆ?

**6. ನಿಮ್ಮ ವಿಚಾರಮತವನ್ನು ವರ್ಣಿಸಿರಿ.**

(1) ಭಾರತ – ಅಮೇರಿಕಾ ಸಂಘರ್ಷವನ್ನು ಕಡಿಮೆ ಮಾಡಲು ನೀವು ಯಾವ ಉಪಾಯವನ್ನು ಸೂಚಿಸುವಿರಿ?
(2) 'ಭಾರತದ ನೆರೆಯ ರಾಷ್ಟ್ರಗಳೊಂದಿಗೆ ಸಂಘರ್ಷಪೂರ್ಣ ಸಂಬಂಧವಿರುವದರಿಂದ ಅಂತರ್ಗತ ವಿಕಾಸ ಸಾಧಿಸಲು ಅಡಚಣಿ ಉಂಟಾಗುವದು' ಈ ವಿಧಾನಕ್ಕೆ ನಿಮ್ಮ ಸಹಮತಿ ಇದೆಯಾ? ಕಾರಣದೊಂದಿಗೆ ವಿವರಿಸಿರಿ.
(3) ಭಾರತದ ಅಮೇರಿಕೆಯೊಂದಿಗೆ ಇದ್ದ ದೃಢ ಸಂಬಂಧವು ಭಾರತದ ಆರ್ಥಿಕ ವಿಕಾಸಕ್ಕೆ ಪೋಷಕವಾಗಿದೆ ಎಂದು ನಿಮಗೆ ಅನಿಸುತ್ತದೆಯೆ? ಕಾರಣದೊಂದಿಗೆ ಸ್ಪಷ್ಟ ಪಡಿಸಿರಿ.

**ಉಪಕ್ರಮ:**

(1) ರಾಷ್ಟ್ರಪತಿ, ಪ್ರಧಾನಮಂತ್ರಿ ಇವರ ಪರರಾಷ್ಟ್ರ ಪ್ರವಾಸದ ಮಾಹಿತಿಯನ್ನು ಪಡೆದುಕೊಳ್ಳಿರಿ.
(2) ವಿವಿಧ ದೇಶಗಳ 'ಯುಥ್ ಎಕ್ಸ್ಚೇಂಜ್' ಕಾರ್ಯಕ್ರಮದ ಮಾಹಿತಿಯನ್ನು ಪಡೆದುಕೊಳ್ಳಿರಿ.

C5E9GJ

# 6 ಅಂತರರಾಷ್ಟ್ರೀಯ ಸಮಸ್ಯೆಗಳು

**ಬನ್ನಿ, ಸ್ವಲ್ಪ ಪುನರ್ನಿರೀಕ್ಷಣೆ ಮಾಡೋಣಾ!**

ಹಿಂದಿನ ಪ್ರಕರಣ ವರೆಗೆ ನಾವು ಅಂತರರಾಷ್ಟ್ರಿಯ ವ್ಯವಸ್ಥೆಯಲ್ಲಿಯ ಸಾರ್ಮಭೌಮ ರಾಜ್ಯಗಳು, ಭಾರತದ ಪರರಾಷ್ಟ್ರಧೋರಣೆ ಮತ್ತು ಭಾರತದ ಸುರಕ್ಷಾ ವ್ಯವಸ್ಥೆ ಇವುಗಳ ಅಭ್ಯಾಸ ಮಾಡಿದೆವು. ಸಂಯುಕ್ತ ರಾಷ್ಟ್ರಸಂಘ ಈ ಅಂತರರಾಷ್ಟ್ರಿಯ ಸಂಘಟನೆಯ ಉದ್ದೇಶಗಳನ್ನು ಅಭ್ಯಾಸ ಮಾಡಿದ್ದೇವೆ. ಈ ಪಾಠದಲ್ಲಿ ನಾವು ಕೆಲವೊಂದು ಮಹತ್ವದ ಅಂತರಾಷ್ಟ್ರಿಯ ಸಮಸ್ಯೆಗಳ ಅಭ್ಯಾಸ ಮಾಡುವವರಿದ್ದೇವೆ. ಕೆಲವೊಂದು ಸಮಸ್ಯೆಗಳು ಕೇವಲ ಒಂದೇ ದೇಶದ್ದಾಗಿರುವದಿಲ್ಲ, ಅವುಗಳ ಪರಿಣಾಮ ಅನೇಕ ದೇಶಗಳ ಮೇಲೆ ಮತ್ತು ಕೆಲವೊಂದು ದಿವಸಗಳ ನಂತರ ಜಗತ್ತಿನ ಎಲ್ಲ ದೇಶಗಳ ಮೇಲೆ ಆಗುವದು. ಸಂಪೂರ್ಣ ಜಗತ್ತಿಗೆ ಅಂಜಿಸುವ ಈ ಸಮಸ್ಯೆಗಳಿಗೆ 'ಅಂತರರಾಷ್ಟ್ರಿಯ ಸಮಸ್ಯೆ' ಎಂದು ಕರೆಯುವರು ಅಂತರರಾಷ್ಟ್ರಿಯ ಸಮಸ್ಯೆ ಬಿಡಿಸಲು ಎಲ್ಲ ರಾಷ್ಟ್ರಗಳು ಒಟ್ಟಾಗಿ ಪ್ರಯತ್ನ ಮಾಡುವ ಅವಶ್ಯಕತೆ ಇರುವದು. ಮಾನವಿ ಹಕ್ಕುಗಳು, ಪರ್ಯಾವರಣ ಮತ್ತು ಆತಂಕವಾದ ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳ ಅಭ್ಯಾಸವನ್ನು ಈ ಪ್ರಕರಣದಲ್ಲಿ ಮಾಡುವವರಿದ್ದೇವೆ. ವಲಸೆಗಾರರ ಪ್ರಶ್ನೆಯು ಈಗ ಅಂತರರಾಷ್ಟ್ರಿಯ ಸ್ವರೂಪವನ್ನು ಧರಿಸುತ್ತಲಿದೆ. ಆದ್ದರಿಂದ ಅದರ ವಿಚಾರವನ್ನು ನಾವು ಮಾಡುವವರಿದ್ದೇವೆ.

**ಮಾನವೀ ಹಕ್ಕುಗಳು :** ಮಾನವೀಹಕ್ಕು ಸಂಕಲ್ಪನೆಯ ಉಗಮವು ನೈಸರ್ಗಿಕ ಹಕ್ಕುಗಳ ಸಂಕಲ್ಪನೆಯಲ್ಲಿ ಇದ್ದದ್ದು ಕಂಡುಬರುವದು ನೈಸರ್ಗಿಕ ಹಕ್ಕು ಅಂದರೆ ಮನುಷ್ಯನೆಂದು ಜನಿಸಿದ್ದರಿಂದ ಯಾವ ಹಕ್ಕುಗಳು ದೊರೆಯುತ್ತವೆಯೋ ಆ ಹಕ್ಕು. ಆಗ ಮಾನವೀ ಹಕ್ಕು ಎಂದರೆ ಮನುಷ್ಯನೆಂದು ಮತ್ತು ಸಮಾಜದ ಒಂದು ಘಟಕವೆಂದು ಜೀವಿಸಲು ಅವಶ್ಯಕವಿದ್ದ ಹಕ್ಕು, ಅಮೇರಿಕಾ ಮತ್ತು ಫ್ರೆಂಚ ರಾಜ್ಯಕ್ರಾಂತಿಯ ವೇಳೆಗೆ ಸ್ವಾತಂತ್ರ್ಯ, ಸಮತೆ, ಬಂಧುತ್ವ, ನ್ಯಾಯ ಈ ಮಾನವೀ ಹಕ್ಕುಗಳ ಪುರಸ್ಕಾರ ಮಾಡಲಾಗಿತ್ತು. ಈ ಹಕ್ಕುಗಳ ಪೂರ್ತತೆಗಾಗಿ ಪ್ರಜಾಪ್ರಭುತ್ವ ಶಾಸನ ವಿರುವದು ಅವಶ್ಯಕವಾಗಿದೆ ಈ ವಿಚಾರಕ್ಕೆ ಬಲ ದೊರಕಿತು. ಆನಂತರದ ಕಾಲದಲ್ಲಿ ಯುರೋಪದಲ್ಲಿ ಅನೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ಶಾಸನ ಪದ್ಧತಿಯ ಮತ್ತು ಸಂವಿಧಾನದ ಸ್ವಿಕಾರ ಮಾಡಿದವು. ಇದರಿಂದ ಶಾಸನದ ಅಧಿಕಾರಗಳಮೇಲೆ ಮರ್ಯಾದೆ ಬಂದವು. ನಾಗರಿಕರ ಹಕ್ಕುಗಳ ಸಂರಕ್ಷಣೆ ಮಾಡುವದು ಇದು ಸರಕಾರದ ಮಹತ್ವದ ಜವಾಬ್ದಾರಿ ಯಾಗಿದೆ ಎಂದು ತಿಳಿಯಲಾಯಿತು.

**ಅಂತರರಾಷ್ಟ್ರಿಯ ವ್ಯವಹಾರದಲ್ಲಿ ಮಾನವೀ ಹಕ್ಕು ಇಲ್ಲವೆ ಸಂಕಲ್ಪನೆಯ ಉದಯ:** ಸಂಯುಕ್ತ ರಾಷ್ಟ್ರಸಂಘದ ಸ್ಥಾಪನೆಯಾದ ನಂತರ ಮಾನವೀ ಹಕ್ಕುಗಳ ವೈಶ್ವಿಕ (ವಿಶ್ವ) ಜಾಹಿರುನಾಮೆಯನ್ನು ತಯಾರಿಸಲಾಯಿತು. 10 ಡಿಸೆಂಬರ 1948ರಲ್ಲಿ ಸಂಯುಕ್ತ ರಾಷ್ಟ್ರಸಂಘದ ಮಹಾಸಭೆಯಲ್ಲಿ ಈ ಜಾಹೀರುನಾಮೆಗೆ ಬಹುಮತದಿಂದ ಮನ್ನಣೆ ಕೊಡಲಾಯಿತು. ಆನಂತರ 1966 ರಲ್ಲಿ ನಾಗರಿ ಮತ್ತು ರಾಜಕೀಯ ಹಕ್ಕುಗಳ ಅಂತರ ರಾಷ್ಟ್ರಿಯ ಕರಾರು ಮತ್ತು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಕರಾರು ಈ ಎರಡು ಕರಾರುಗಳಿಗೆ ಸಂಯುಕ್ತ ರಾಷ್ಟ್ರಸಂಘದ ಮಹಾಸಭೆಯು ಮಾನ್ಯತೆಯನ್ನು ನೀಡಿತು. ಈ ಎರಡು ಕರಾರುಗಳು ಅಂತರರಾಷ್ಟ್ರಿಯ ಕಾಯ್ದೆಯ ಭಾಗಗಳಾಗಿವೆ. ಈ ಕರಾರುಗಳ ಪಾಲನೆ ಮಾಡುವದು ಸದಸ್ಯ ರಾಷ್ಟ್ರಗಳಿಗೆ ಬಂಧನಕಾರಕವಾಗಿದೆ.

> ಮಾನವೀ ಹಕ್ಕುಗಳಲ್ಲಿ ಜೀವಿಸುವ ಹಕ್ಕು, ಅನ್ನ, ವಸ್ತ್ರ, ವಸತಿ, ಶಿಕ್ಷಣ ಮತ್ತು ಆರೋಗ್ಯ ಈ ಪ್ರಮುಖ ಹಕ್ಕುಗಳ ಸಮಾವೇಶವಿದೆ. ಈ ಹಕ್ಕುಗಳು ಮೂಲಭೂತ ಹಕ್ಕುಗಳಾಗಿವೆ. ಈ ಹಕ್ಕುಗಳು ಸರ್ವರಿಗೂ ದೊರಕಬಹುದು ಎಂಬುದನ್ನು ನೋಡುವದು ರಾಜ್ಯದ ಜವಾಬ್ದಾರಿಯಾಗಿರುವದು.

ಶೀತಯುದ್ಧದ ಕಾಲದಲ್ಲಿ ಮಾನವೀ ಹಕ್ಕುಗಳ ಪ್ರಶ್ನೆ ಸಂಯುಕ್ತ ರಾಷ್ಟ್ರಸಂಘದ ಮಹಾಸಭೆಯಲ್ಲಿ ಹಲವಾರು ಸಲ ಮಂಡಿಸಲಾಯಿತು. ಆಫ್ರಿಕೆಯಲ್ಲಿಯ ವರ್ಣದ್ವೇಷ ಇದು ಮಾನವೀ ಹಕ್ಕುಗಳ ವಿರುದ್ಧವಾಗಿದೆ ಮತ್ತು ಅಂತೆಯೇ ವರ್ಣದ್ವೇಶಿ ಆಡಳಿತದ ಮೇಲೆ ಬಹಿಷ್ಕಾರ ಹಾಕುವ ನಿರ್ಣಯವನ್ನು ತಗೆದುಕೊಳ್ಳಲಾಯಿತು. ವಸಾಹತುಗಳಿಗೆ ಸ್ವಾತಂತ್ರ. ಪ್ರಜಾಪ್ರಭುತ್ವ ವ್ಯವಸ್ಥೆಯ ಆಗ್ರಹ ಇವು ಅವರದೇ ಆದ ಕೆಲವು ಉದಾಹರಣೆಗಳೆಂದು ಹೇಳಬಹುದು.

ಆಧುನಿಕ ಕಾಲದಲ್ಲಿ ವಾಂಶಿಕ ಸಂಘರ್ಷ, ಸೀಮಾವಾದ, ಆತಂಕವಾದ ಇಂಥ ಸಮಸ್ಯೆಗಳಿಂದ ಮಾನವೀ ಹಕ್ಕುಗಳಿಗೆ ದೊಡ್ಡ ಪ್ರಮಾಣದಲ್ಲಿ ಧಕ್ಕೆಯುಂಟಾಗುತ್ತಲಿದೆ. ಇದಲ್ಲದೆ ಅನೇಕ ಜಾಗತಿಕ ಸ್ವರೂಪದ ಪ್ರಶ್ನೆಗಳು ಉದಾ. ಸಂಸರ್ಗಜನ್ಯ ರೋಗಗಳು, ಪರಿಸರಕ್ಕೆ ಇರುವ ಅಪಾಯ, ನೈಸರ್ಗಿಕ ಆಪತ್ತುಗಳಿಂದ ಮಾನವಿ ಹಕ್ಕುಗಳ ಸಂಕಲ್ಪನೆಯು ಈಗ ಹೆಚ್ಚು ವ್ಯಾಪಕವಾಗಿದೆ. ಪರಿಸರ ಸಂರಕ್ಷಣೆ, ಶಾಶ್ವತ ವಿಕಾಸ ಇವುಗಳ ಸಮಾವೇಶವನ್ನು ಮಾನವೀ ಹಕ್ಕುಗಳಲ್ಲಿ ಮಾಡಲಾಗುತ್ತದೆ.

**ಮಾನವೀ ಹಕ್ಕು ಮತ್ತು ಭಾರತ:** ಭಾರತೀಯ ಸಂವಿಧಾನದಲ್ಲಿ ಮಾನವೀ ಹಕ್ಕುಗಳಿಗೆ ಮೂಲಭೂತ ಹಕ್ಕುಗಳ ಸ್ಥಾನ ಕೊಡಲಾಗಿದೆ. ಸಂವಿಧಾನದಲ್ಲಿಯ ಮೂಲಭೂತ



**ಗೊತ್ತಿದೆಯೆ ನಿಮಗೆ?**

ಮಾನವೀ ಹಕ್ಕುಗಳ ಜಾಹಿರುನಾಮೆಯಲ್ಲಿ ಒಟ್ಟು 30 ಕಲಮುಗಳಿವೆ. ಈ ಜಾಹೀರುನಾಮೆಯಲ್ಲಿ ನಾಗರಿ ಸ್ವಾತಂತ್ರ್ಯದ ಸಂಬಂಧದ ಕಲಮುಗಳಿವೆ ಹಾಗೆಯೆ ದಿನಗೂಲಿಯ ಹಕ್ಕು, ಸಮಾನ ಕೆಲಸಕ್ಕೆ ಸಮಾನ ಸಂಬಳ ಇಂಥ ಆರ್ಥಿಕ ಹಕ್ಕುಗಳ ವ್ಯವಸ್ಥೆಯೂ ಇದೆ. ಎಲ್ಲ ಸದಸ್ಯ ರಾಷ್ಟ್ರಗಳು ತಮ್ಮ ನಾಗರಿಕರಿಗೆ ಮಾನವೀ ಹಕ್ಕುಗಳನ್ನು ಕೊಡಬೇಕು ಎಂಬ ಅಪೇಕ್ಷೆ ಇದೆ. ಮಾನವೀ ಹಕ್ಕುಗಳ ಜಾಹೀರು ನಾಮೆಯಂತೆಯೇ ಬಾಲಕರ ಹಕ್ಕುಗಳ ಜಾಹೀರುನಾಮೆ 20 ನವ್ಹೆಂಬರ 1959 ರಲ್ಲಿ ಪ್ರಸ್ತುತ ಪಡಿಸಲಾಯಿತು.

ಹಕ್ಕುಗಳ ಜೊತೆಗೆ ದುರ್ಬಲ ಘಟಕ, ಸ್ತ್ರೀಯರು, ಅಲ್ಪಸಂಖ್ಯಾತರರು ಇವರ ಸಂರಕ್ಷಣೆಯ ಹೊಣೆಯು ಸರಕಾರದ ಮೇಲಿದೆ. 1993 ರಲ್ಲಿ ಮಾನವೀ ಹಕ್ಕು ಸಂರಕ್ಷಣಾ ಕಾಯ್ದೆ ಮಾಡಲಾಯಿತು. ಈ ಕಾಯ್ದೆಯಡಿ. 'ರಾಷ್ಟ್ರೀಯ ಮಾನವೀ ಹಕ್ಕುಗಳ ಆಯೋಗ' ಮತ್ತು 'ರಾಜ್ಯ ಮಾನವೀ' ಹಕ್ಕು ಆಯೋಗ'ದ ಸ್ಥಾಪನೆ ಮಾಡಲಾಯಿತು ಮಾನವೀ ಹಕ್ಕುಗಳ ಉಲ್ಲಂಘನೆಯಾದರೆ



**ಮಾಡಿ ನೋಡಿರಿ.**

ಇಲ್ಲಿ ಕೆಲವು ಸಮಸ್ಯೆಗಳನ್ನು ಕೊಡಲಾಗಿದೆ. ಅವುಗಳ ರಾಷ್ಟ್ರಿಯ ಮತ್ತು ಅಂತರರಾಷ್ಟ್ರಿಯ ಹೀಗೆ ಎರಡು ಗುಂಪಿನಲ್ಲಿ ವರ್ಗಿಕರಣ ಮಾಡಿರಿ.

- ದುರ್ಬಲ ಘಟಕಗಳ ಸಕ್ಷಮೀಕರಣ
- ಸಾರ್ವಜನಿಕ ಅಸ್ವಚ್ಛತೆ
- ಆತಂಕವಾದ
- ಮಾನವೀ ಹಕ್ಕುಭಂಗ
- ಅರ್ಥ ವ್ಯವಸ್ಥೆಯ ಖಾಸಗಿಕರಣ
- ದಾರಿದ್ರ್ಯ, ನಿರಕ್ಷರತೆ
- ಸಾರ್ವಜನಿಕ ಸಾರಿಗೆ ಗದ್ದಲ
- ಓಝೋನಥರ ವಿರಳವಾಗುವದು
- ಅಂತರ್ಗತ ಒಡಕುತನ

ಈ ಸಂಬಂಧದಲ್ಲಿಯ ತಕರಾರನ್ನು ಗಮನಕ್ಕೆ ತಗೆದುಕೊಳ್ಳುವದು ಮತ್ತು ಆಕುರಿತು ಯೋಗ್ಯ ಉಪಾಯ ಯೋಜನೆಯನ್ನು ಮಾಡುವದು ಇದು ಮಾನವೀ ಹಕ್ಕು ಆಯೋಗದ ಜವಾಬ್ದಾರಿಯಾಗಿದೆ.

**ಪರಿಸರ :** ಸದ್ಯಕಾಲದಲ್ಲಿ ಮಾನವೀ ಹಕ್ಕುಗಳ ಸಂಕಲ್ಪನೆ ಹೆಚ್ಚು ವ್ಯಾಪಕವಾಗಿದ್ದು ಸುರಕ್ಷಿತ ಪರಸರ ಇದೊಂದು ಮಹತ್ವದ ಮಾನವೀ ಹಕ್ಕಾಗಿದೆ ಎಂದು ತಿಳಿಯಲಾಗುವದು.

**ಹೇಳಿ ನೋಡೋಣ!**

ಸದ್ಯಕೆ ಭಾರತೀಯ ಮಾನವೀ ಹಕ್ಕು ಆಯೋಗದ ಅದ್ಯಕ್ಷ ಯಾರಿದ್ದಾರೆ?

ಅಂತರರಾಷ್ಟ್ರಿಯ ಮಟ್ಟದಲ್ಲಿ ಪರಿಸರ ಸಂರಕ್ಷಣೆಯ ಅರಿವು ಮತ್ತು ಅವಶ್ಯಕತೆ 1970ರಲ್ಲಿ ಮಂಡಿಸಲಾಯಿತು. ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರುವ ಔದ್ಯೋಗಿಕರಣ, ಹೆಚ್ಚುತ್ತ ನಡೆದಿರುವ ಊರ್ಜಾಶಕ್ತಿಯ ಅವಶ್ಯಕತೆ ಇವುಗಳಿಂದ ಪರಿಸರಕ್ಕೆ ಧಕ್ಕೆ ಉಂಟಾಗುತ್ತಿದೆ, ಹೀಗೆ ಪರಿಸರದ ಅಭ್ಯಾಸ ಮಾಡುವ ತಜ್ಞರ ಅಭಿಪ್ರಾಯವಿದೆ. ಆ ಕಾರ್ಯಕರ್ತರು 22 ಎಪ್ರಿಲ 1970 ರಲ್ಲಿ ಮೊದಲ ಪಸುಂಧರಾ ದಿವಸವನ್ನು ಆಚರಿಸಿದರು. ಹೊಲದಲ್ಲಿ ಹೆಚ್ಚಾಗಿ ಉಪಯೋಗಿ ಸಲಾಗುವ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು, ವಾಹನಗಳಿಂದಾಗುವ ಧ್ವನಿಪ್ರದೂಷಣೆ, ಅಣು ಶಕ್ತಿ ಭಟ್ಟಿಗಳಿಂದ ಆಗುವ ಕಿರಣೋತ್ಸರ್ಗ, ಎಣ್ಣೆ ಸೋರುವಿಕೆ ಇಲ್ಲವೆ ರಾಸಾಯನಿಕ ವಾಯುವಿನ ಸೋರುವಿಕೆ ಈ ಎಲ್ಲವುಗಳಿಂದ ಪರಿಸರ ಅಸುರಕ್ಷಿತ ವಾಗುವದು ಮತ್ತು ವಿವಿಧ ಸಮಸ್ಯೆಗಳು ನಿರ್ಮಾಣ ವಾಗುವವು. ಈ ಅರಿವಿನಿಂದ ಪರಿಸರ ಸುರಕ್ಷೆ ಈ ಪ್ರಶ್ನೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸಲ್ಪಡಹತ್ತಿತು.

1990ರ ನಂತರ ಜಾಗತೀಕಿಕರಣದ ಅಲೆ ಬಂದನಂತರ ರಾಷ್ಟ್ರಗಳ ಪರಸ್ಪರಾವಲಂಬನ ಹೆಚ್ಚಿತು ಮತ್ತು ಅದರಿಂದ ಪರಿಸರ ಸಮಸ್ಯೆ ಬಿಡಿಸಲು ರಾಷ್ಟ್ರಗಳು ಪರಸ್ಪರರಿಗೆ ಸಹಕಾರ್ಯ ಮಾಡುವ ಅವಶ್ಯಕತೆ ಉಂಟಾಯಿತು. ವಾತಾವರಣವು ಪ್ರದೂಷಿತವಾಗಿದ್ದರಿಂದ ಇಲ್ಲವೆ ಎಣ್ಣೆಯ ಸೋರುವಿಕೆಯಿಂದ ಮತ್ತು ವಾಯು ಸೋರುವಿಕೆಯಿಂದ ಪರಿಸರಕ್ಕೆ ನಿರ್ಮಾಣವಾಗುವ ಅಪಾಯ ಇದು ಒಂದು ರಾಷ್ಟ್ರಕ್ಕೆ ಮಾತ್ರ ಸೀಮಿತವಾಗಿ ಉಳಿಯುವದಿಲ್ಲ, ಹಾಗೆಯೇ ಅದರ ಪರಿಣಾಮ ದೀರ್ಘಕಾಲದ ವರೆಗೆ ಇರುವದು. ಇದರಿಂದ ಈ ಪರಿಣಾಮಗಳ ಮೇಲೆ ಉಪಾಯ ಯೋಜನೆ ಮಾಡಲು ರಾಷ್ಟ್ರಗಳಿಗೆ ಒಟ್ಟಿಗೆ ಬಂದು ಸಹಮತಿಯಿಂದ ಮತ್ತು ಸಹಕಾರ್ಯದಿಂದ ವರ್ತಿಸುವದು ಅವಶ್ಯಕವೆನಿಸುದು.

ವನಸ್ಪತಿ ಮತ್ತು ಪ್ರಾಣಿ ಇವುಗಳ ಪ್ರಜಾತಿ ನಷ್ಟ ವಾಗುವದು ಮಣ್ಣಿನ ಕಸುವು ಕಡಿಮೆಯಾಗುವದು, ನೀರಿನ ಕೊರತೆ, ಮಳೆಯ ಪ್ರಮಾಣ ಹೆಚ್ಚು-ಕಡಿಮೆಯಾಗುವದು, ಉಷ್ಣತೆಯಲ್ಲಿ ಹೆಚ್ಚಳ, ನದಿಗಳು, ಕೆರೆಗಳು ಬತ್ತುವದು, ನದಿ ಮತ್ತು ಸಮುದ್ರಗಳ ಪ್ರದೂಷಣೆ, ಹೊಸ ರೋಗಗಳ ಹುಟ್ಟುವಿಕೆ, ಅಮ್ಲ ಮಳೆ ಓಝೋನ ಥರಗಳ ವಿರಳವಾಗುವಿಕೆ, ಇವು ಪರಿಸರದ ಹಾನಿಯ ಪರಿಣಾಮಗಳಿವೆ ಇವುಗಳಲ್ಲಿ ಕೆಲವೊಂದು ಪರಿಣಾಮಗಳು ವಿಶಿಷ್ಟ ರಾಷ್ಟ್ರಕ್ಕೆ ಸೀಮಿತ ವಾಗಿದ್ದರೂ ಅದರ ದೀರ್ಘಕಾಲದ ಪರಿಣಾಮಗಳಿಂದ ಆ ಪ್ರಶ್ನೆಗಳಿಗೆ ಜಾಗತಿಕ ಸ್ವರೂಪ ಪ್ರಾಪ್ತವಾಗುತ್ತದೆ ಮತ್ತು ಕೆಲವು ಪ್ರಶ್ನೆಗಳು ಮೂಲತ : ಜಾಗತಿಕ ಸ್ವರೂಪದ್ದಾಗಿರುತ್ತವೆ.



ಪರಿಸರ ರಕ್ಷಣೆ : ಒಂದು ಪೀಳಿಗೆಯಿಂದ ಎರಡನೇ ಪೀಳಿಗೆಯಕಡೆಗೆ.

**ಮಾಡಿ ನೋಡಿರಿ.**

* ವಿಶಿಷ್ಟ ರಾಷ್ಟ್ರಕ್ಕೆ ಮಾತ್ರ ಸೀಮಿತವಾದ ಆದರೆ ಜಾಗತಿಕ ಸ್ವರೂಪದ ಪ್ರಶ್ನೆ ನಿರ್ಮಾಣ ಮಾಡುವ ಪರಿಸರದ ಸಮಸ್ಯೆಗಳ ಉದಾಹರಣೆ ಕೊಡಿರಿ.

**ಮಾಡಿ ನೋಡಿರಿ.**

ಇಂಟರನೆಟದ ಸಹಾಯದಿಂದ ಪ್ಯಾರಿಸ ಪರಿಷತ್ತಿನ ಕುರಿತು ತಿಳಿದು ಕೊಳ್ಳಿರಿ ಮತ್ತು ಕೆಳಗಿನ ಅಂಶಗಳ ಆಧಾರದಿಂದ ಮಾಹಿತಿ ಸಂಗ್ರಹಿಸಿರಿ.

* ಸಹಭಾಗಿ ದೇಶಗಳ ಸಂಖ್ಯೆ
* ಚರ್ಚೆಯ ವಿಷಯ
* ಭಾರತವು ಇಟ್ಟ ಅಂಶಗಳು

## ಸ್ಟಾಕಹೋಮದಿಂದ ಪ್ಯಾರಿಸ ಪರಿಷತ್ತು

ಅಂತರರಾಷ್ಟ್ರಿಯ ಮಟ್ಟದಲ್ಲಿ ಪರಿಸರ ವಿಷಯದ ಆಗಿನ ಮತ್ತು ದೀರ್ಘಕಾಲದ ಸಮಸ್ಯೆಗಳ ಕುರಿತು ಚರ್ಚೆ ಮಾಡಲು ಮತ್ತು ಅವುಗಳ ಮೇಲೆ ಉಪಾಯ ಶೋಧಿಸಲು ಸ್ಟಾಕ್ ಹೋಮ ಎಂಬಲ್ಲಿ 5 ರಿಂದ 16 ಜೂನ 1972 ಈ ಕಾಲಾವಧಿಯಲ್ಲಿಸಂಯುಕ್ತ ರಾಷ್ಟ್ರಸಂಘದ ಮಾನವೀ ಪರಿಸರ ವಿಷಯದ ಪರಿಷತ್ತನ್ನು ಕರೆಯಲಾಗಿತ್ತು.

- ಈ ಪರಿಷತ್ತಿನಲ್ಲಿ ಪ್ರದೂಷಣೆಯನ್ನು ಹೊಡೆದೋಡಿಸಲು ಸಹಕಾರ್ಯ ಮಾಡುವದು ಇದು ಎಲ್ಲ ರಾಷ್ಟ್ರಗಳ ಜವಾಬ್ದಾರಿಯಾಗಿದೆ, ಎಂಬುದರ ಮೇಲೆ ಒತ್ತಡವನ್ನು ಹೇರಲಾಯಿತು.
- ವಿಕಸಿತ ದೇಶಗಳು ಪರಿಸರದ ಹಾನಿಗೆ ಹೆಚ್ಚು ಕಾರಣೀಭೂತವಾಗಿವೆ ಮತ್ತು ಆ ಹಾನಿಯನ್ನು ತಡೆಹಿಡಿಯುವ ಜವಾಬ್ದಾರಿಯನ್ನು ಅವರು ತಗೆದುಕೊಳ್ಳಬೇಕು ಎಂಬ ಭೂಮಿಕೆಯನ್ನು ವಿಕಸನಶೀಲ ರಾಷ್ಟ್ರಗಳು ತಗೆದುಕೊಂಡವು. ಇಂದೂ ಸಹ ವಿಕಸನಶೀಲ ರಾಷ್ಟ್ರಗಳು ಇದೇ ಭೂಮಿಕೆಯನ್ನು ಮಂಡಿಸುತ್ತಾರೆ.
- ಈ ಪರಿಷತ್ತಿನಲ್ಲಿ ಪರಿಸರ ಕೆಲಸ ಮಾಡುವ ಸರಕಾರೇತರ ಸಂಸ್ಥೆಗಳು ಉಪಸ್ಥಿತವಿದ್ದವು. ಇದು ಈ ಪರಿಷತ್ತಿನಮತ್ತೊಂದು ವೈಶಿಷ್ಟ್ಯ ಹೌದು.
- ಈ ಪರಿಷತ್ತಿನಲ್ಲಿ ಜಾಗತಿಕ ಸಾಮೂಹಿಕ ಸಂಪತ್ತಿನ ರಕ್ಷಣೆಯ ಅಂಶವು ಮಂಡಿಸಲ್ಪಟ್ಟಿತ್ತು. ಈ ಸಾಧನಗಳ ರಕ್ಷಣೆಯ ಜವಾಬ್ದಾರಿ ಎಲ್ಲ ರಾಷ್ಟ್ರಗಳದ್ದಾಗಿದೆ, ಇದರ ಮೇಲೆ ಒಮ್ಮತವಾಯಿತು.
- ಈ ಪರಿಷತ್ತಿನ ನಂತರವೇ ಸಂಯುಕ್ತ ರಾಷಗಳು ಈ ಸಂಘಟನೆಯು 'ಸಂಯುಕ್ತ ರಾಷ್ಟ್ರಗಳ ಪರಿಸರ ಕಾರ್ಯಕ್ರಮ' ನಿರ್ಮಾಣ ಮಾಡಿತು.
- ಈ ಪರಿಷತ್ತಿನ ನಂತರ ಅನೇಕ ಅಂತರರಾಷ್ಟ್ರಿಯ ಪರಿಸರ ವಿಷಯದ ಕರಾರುಗಳಾದವು. ಪರಿಸರ ಸಂರಕ್ಷಣೆಕುರಿತು ನಿಯಮ ತಯಾರಿಸಲಾಯಿತು. ಅಂತರರಾಷ್ಟ್ರಿಯ ಮತ್ತು ರಾಷ್ಟ್ರಿಯ ಮಟ್ಟದಲ್ಲಿಪರಿಸರ ವಿಷಯದ ಚಳುವಳಿ ದೊಡ್ಡ ಪ್ರಮಾಣದಲ್ಲಿಪ್ರಾರಂಭವಾದವು ಮತ್ತು ಪರಿಸರ ವಿಷಯದ ಅಂತರರಾಷ್ಟ್ರಿಯ ಪರಿಷತ್ತಿನಲ್ಲಿನಿರ್ಣಯ ಪ್ರಕ್ರಿಯೆಯಲ್ಲಿಯ ಸರಕಾರೇತರ ಸಂಘಟನೆಗಳ ಸಹಭಾಗ ಹೆಚ್ಚಿತು.
- ಇದರ ಮುಂದಿನ ಹಂತವೆಂದರೆ, 1992ರಲ್ಲಾದ ರಿಯೋ ದಲ್ಲಿಯ ಪರಿಸರ ಪರಿಷತ್ತು. ಈ ಪರಿಷತ್ತಿನಲ್ಲಿ ''ಶಾಶ್ವತ ವಿಕಾಸ'' ಈ ಸಂಕಲ್ಪನೆಯ ಮೇಲೆ ಒತ್ತು ಕೊಡಲಾಯಿತು. ಜೈವಿಕ ವಿವಿಧತೆ, ಹರಿತಗೃಹ ವಾಯುವಿನಿಂದ ಆಗುವ ವಾತಾವರಣದಲ್ಲಿಯ ಬದಲಾವಣೆ, ಅರಣ್ಯಗಳ ರಕ್ಷಣೆ ಮುಂತಾದ ವಿಷಯಗಳಮೇಲೆ ವಿವಿಧ ಕರಾರು ಮಾಡಲಾಯಿತು.

1997 ರಲ್ಲಿ ಕ್ಯೋಟೊ ಎಂಬಲ್ಲಿ ಜರುಗಿದ ಪರಿಷತ್ತಿನಲ್ಲಿ ವಿಕಸಿತ ದೇಶಗಳಿಗೆ ಹವಾಮಾನ ಬದಲಾವಣೆ ನಿಲ್ಲಿಸಲು ಅಳತೆಗೋಲು ತಯಾರಿಸಿ ಕೊಡಲಾಯಿತು. ಆ ಅಳತೆಗೋಲು 15 ವರ್ಷಗಳಿಗಾಗಿ ನಿರ್ಧರಿಸಲಾಯಿತು.

ಆ ನಂತರ ನವ್ವೆಂಬರ 2015 ರಲ್ಲಿ ಪ್ಯಾರಿಸ್ ಎಂಬಲ್ಲಿ ಹವಾಮಾನ ಬದಲಾವಣೆ ಈ ವಿಷಯದ ಮೇಲೆ ಪರಿಷತ್ತನ್ನು ಕರೆಯಲಾಯಿತು. ಎಲ್ಲ ರಾಷ್ಟ್ರಗಳು ಹವಾಮಾನ ಬದಲಾವಣೆಯನ್ನು ತಡೆಯಲು ಮತ್ತು ಉಷ್ಣತೆಯ ಹೆಚ್ಚಳವನ್ನು ನಿಲ್ಲಿಸಲು ಪರಸ್ಪರರ ಸಹಕಾರ್ಯದಿಂದ ಪ್ರಯತ್ನಿಸಬೇಕು ಮತ್ತು ವಿಕಸನಶೀಲ ದೇಶಗಳಿಗೆ ಅದಕ್ಕಾಗಿ ಬೇಕಾಗುವ ತಂತ್ರಜ್ಞಾನ ದೊರಕಿಸಲು ವಿಕಸಿತ ದೇಶಗಳು ಸಹಾಯ ಮಾಡಬೇಕೆಂದು ಈ ಪರಿಷತ್ತಿನಲ್ಲಿ ಕರೆ ನೀಡಲಾಯಿತು.



**ಗೊತ್ತಿದೆಯೇ ನಿಮಗೆ?**

ಮಹಾಸಾಗರ, ಆಳವಾದ ಸಮುದ್ರ ತಳಹದಿ, ವಾತಾವರಣ, ಬಾಹ್ಯ ಅವಕಾಶ, ಜನುಕೀಯ ಸಾಧನ ಸಂಪತ್ತು ಇವುಗಳ ಸಮಾವೇಶ ಜಾಗತಿಕ ಸಾಧನ ಸಂಪತ್ತುಗಳಲ್ಲಿ ಆಗುವದು. ಈ ಸಂಪತ್ತು ಜಗತಿನಲ್ಲಿಯ ಎಲ್ಲ ರಾಷ್ಟ್ರಗಳದ್ದಿರುವದರಿಂದ ಅದರ ಮೇಲ್ವಿಚಾರಣೆ ಮಾಡುವದು ಅಪೇಕ್ಷೆಯಾಗಿದೆ.

**ಆತಂಕವಾದ :** ಇದು ಇಂದಿನಕಾಲದ ಎಲ್ಲಕ್ಕೂ ದೊಡ್ಡ ಸಮಸ್ಯೆಯಾಗಿದೆ. ಜಗತ್ತಿನಲ್ಲಿಯ ಅನೇಕ ರಾಷ್ಟ್ರಗಳಿಗೆ ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಜಗತ್ತಿನಲ್ಲಿಯ ಯಾವುದೇ ರಾಷ್ಟ್ರ ಕೇವಲ ಸ್ವಬಲದಮೇಲೆ ಆತಂಕವಾದ ವನ್ನು ಎದುರಿಸುವದು ಕಠಿಣವಾಗಿದೆ. ಅಂತೆಯೇ ಆತಂಕವಾದ ಇದು ಜಾಗತಿಕ ಸಮಸ್ಯೆ ಎಂದು ತಿಳಿಯಲ್ಪಡುವದು.

### ಆತಂಕವಾದ ಅಂದರೇನು?

ರಾಜಕೀಯ ಉದ್ದೇಶಗಳನ್ನು ಸಾಧ್ಯಗೊಳಿಸಲು ಸರ್ವಸಾಮಾನ್ಯ ಮತ್ತು ನಿರಪರಾಧಿ ನಾಗರಿಕರು ವ್ಯವಸ್ಥೆಯ ವಿರುದ್ಧ ಹಿಂಸೆಯ ಉಪಯೋಗ ಮಾಡುವದು ಇಲ್ಲವೆ ಹಾಗೆ ಅಂಜಿಕೆ ಹಾಕುವದು ಮತ್ತು ಅದರ ಮೂಲಕ ಸಮಾಜದಲ್ಲಿ ಭೀತಿ ಮತ್ತು ಹೆದರಿಕೆಯನ್ನು ಪಸರಿಸುವದು ಇದಕ್ಕೆ ಆತಂಕವಾದ ಅನ್ನಬಹುದು. ಆತಂಕವಾದವು ಸಂಘಟಿತ ಮತ್ತು ನಿಯೋಜನೆಪೂರ್ವಕವಾಗಿ ಮಾಡಿದ ಹಿಂಸೆ ಹೌದು.

ಆತಂಕವಾದದ ಅಂತರರಾಷ್ಟ್ರಿಯ ರಾಜಕಾರಣದ ಮೇಲೆ ದೂರದವರೆಗಿನ ಪರಿಣಾಮವಾಗಿದೆ. ಕಳೆದ ಎರಡು ದಶಕಗಳಲ್ಲಿ ವಿವಿಧ ರಾಷ್ಟ್ರಗಳಲ್ಲಿ ಆತಂಕವಾದಿ ಸಂಘರ್ಷ ತ್ರೀವ್ರವಾದದ್ದು ಕಂಡುಬರುವದು ಆತಂಕವಾದಿ ಸಂಘರ್ಷವು ಪರಂಪರಾಗತ ಯುದ್ಧಕ್ಕಿಂತ ಭಿನ್ನವಾಗಿರುವದು. ಪರಂಪರಾಗತ ಯುದ್ಧಗಳು ಎರಡು ಇಲ್ಲವೆ ಹೆಚ್ಚು ಸಾರ್ವಭೌಮ ರಾಷ್ಟ್ರಗಳಲ್ಲಿಯ ಸಂಘರ್ಷ ವಿರುವದು. ಇಂಥ ಯುದ್ಧಗಳಲ್ಲಿ ಪ್ರಾಮುಖ್ಯವಾಗಿ ರಾಷ್ಟ್ರಗಳ ಭೌಗೋಲಿಕ ಸೀಮೆಗಳ ಸುರಕ್ಷಿತತೆಗೆ ಮಹತ್ವ ಇರುವದು. ಅಂದರೆ ರಾಷ್ಟ್ರಿಯ ಸುರಕ್ಷೆ ಭೌಗೋಲಿಕ ಸೀಮೆಗಳಿಗೆ ಸಂಬಂಧಪಟ್ಟಿದ್ದಿರುತ್ತದೆ. ಆದರೆ ಆತಂಕವಾದ ಗುಂಪು ಜಗತ್ತಿನ ಯಾವುದೇ ಮೂಲೇಯಿಂದ ಯಾವುದೇ ಸ್ಥಳದಲ್ಲಿ ಹಿಂಸಾಚಾರ ಮಾಡುಬಹುದು. ಆತಂಕವಾದಿ ದಾಳಿಯ ಉದ್ದೇಶವು ಭೌಗೋಲಿಕ ಸೀಮೆಗಳಿಗೆ ಧಕ್ಕೆಯನ್ನು ಮುಟ್ಟಿಸುವದು ಇರದೇ ದೇಶದಲ್ಲಿಯ ಆಢಳಿತಕ್ಕೆ ಆವ್ಹಾನ ಕೊಡುವದು ಇಲ್ಲವೆ ಸರಕಾರದ ಅಸ್ತಿತ್ವ ನಿರಾಕರಿಸುವದು ಇರುವದು. ಅಂದರೆ ಹೆಚ್ಚುತ್ತಿದ್ದ ಆತಂಕ ವಾದದಿಂದ ದೇಶದ ಬಾಹ್ಯ ಸುರಕ್ಷೆಯೊಂದಿಗೆ ಅಂತರ್ಗತ ಸುರಕ್ಷೆಗೂ ಧಕ್ಕೆ ಉಂಟಾಗಬಹುದು.

ಆತಂಕವಾದನ್ನು ತಡೆಯಲು ವಿವಿಧ ರಾಷ್ಟ್ರಗಳ ಸುರಕ್ಷಾ ವ್ಯವಸ್ಥೆಗಳು ಪರಸ್ಪರ ಸಹಕಾರ್ಯದಿಂದ ಕೆಲಸ ಮಾಡುವದು ಅವಶ್ಯಕವಾಗಿದೆ.

**ವಲಸೆಗಾರರ ಪ್ರಶ್ನೆ:** ಯಾವ ವ್ಯಕ್ತಿಗಳಿಗೆ ಅನಿಚ್ಛೆಯಿಂದ ಇಲ್ಲವೆ ಒತ್ತಾಯದಿಂದ ತಮ್ಮ ಮಾತೃಭೂಮಿ ಬಿಡಬೇಕಾಗುವದೋ ಮತ್ತು ಆಶ್ರಯ ದೊರಕಿಸಲು ಇಲ್ಲವೆ ಸುರಕ್ಷಿತತೆಗಾಗಿ ಎರಡನೇ ರಾಷ್ಟ್ರದಲ್ಲಿ ಹೋಗಬೇಕಾಗುವದೋ ಇಂಥ ಜನರಗೆ ವಲಸೆಗಾರ ಎಂದು ಕರೆಯವರು. ವಿಶಿಷ್ಟ ವಂಶ, ಧರ್ಮವಿದ್ದ ಜನರರನ್ನು ಹಿಂಸಿಸಿ ಇಲ್ಲವೆ ಅವರನ್ನು ಹೊರದಬ್ಬು ವದು, ಯುದ್ಧ ಇಲ್ಲವೆ ಆಪತ್ತುಗಳಿಂದ ತಮ್ಮ ದೇಶದ ತ್ಯಾಗ ಮಾಡುವಂತೆ ಒತ್ತಾಯಿಸುವದು ಇತ್ಯಾದಿಗಳಿಂದ ಜನರು ನಿರ್ವಾಸಿತರಾಗುವರು. ಇಂಥ ಪರಿಸ್ಥಿತಿಯಲ್ಲಿ ತಮ್ಮ ದೇಶ ಬಿಟ್ಟು ಬೇರೆ ರಾಷ್ಟ್ರದಕಡೆಗೆ ಆಶ್ರಯ ಬೇಡುವ ಪ್ರಸಂಗ ಬರುವದು.

**ಶೋಧಿಸಿರಿ ನೋಡೋಣ!**

* ಸಿರಿಯಾ ಈ ರಾಷ್ಟ್ರದಿಂದ ಅನೇಕ ಜನರು ವಲಸೆಗಾರರಾಗಹತ್ತಿದ್ದಾರೆ ಏಕೆ?
* ಜಗತ್ತಿನ ಇನ್ನೂ ಯಾವ ರಾಷ್ಟ್ರಗಳಿಂದ ವಲಸೆಗಾರರ ಗುಂಪು ಬರ ಹತ್ತಿದೆ?

ಎರಡನೆಯ ಮಹಾಯುದ್ಧಕ್ಕಿಂತ ಮುಂಚೆ ಜರ್ಮನಿಯಲ್ಲಿ ಜ್ಯೂ ಜನರ ಚಿತ್ರಹಿಂಸೆಯಾಯಿತು. ಅವರ ನಾಗರಿತತ್ವ ಮತ್ತು

ಸಂಪತ್ತನ್ನು ಕಸಿದುಕೊಳ್ಳಲಾಯಿತು. ಇದರಿಂದ ಜ್ಯೂ ಜನರು ನಿರ್ವಾಸಿತರಾದರು. 1971 ರಲ್ಲಿ ಪೂರ್ವ ಪಾಕಿಸ್ತಾನದಲ್ಲಿಯ ಜನತೆಯ ರಾಜಕೀಯ ಮತ್ತು ಧಾರ್ಮಿಕ ಹಿಂಸೆಯಾದರಿಂದ ಅಲ್ಲಿಯ ಜನರು ನಿರ್ವಾಸಿತ(ವಲಸೆಗಾರ)ರಾದರು ಮತ್ತು ಭಾರತದಲ್ಲಿ ಆಶ್ರಯಕ್ಕೆ ಬಂದರು. ಕಳೆದ ಕೆಲವು ವರ್ಷಗಳಿಂದ ಇರಾಕ ಮತ್ತು ಸಿರಿಯಾದಲ್ಲಿಯ ಯುದ್ಧಜನ್ಯ ಪರಿಸ್ಥಿತಿಯಿಂದ ಅಲ್ಲಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ನಿರ್ವಾಸಿತರೆಂದು ಹೊರಬೀಳುತ್ತಿದ್ದಾರೆ. ನಿರ್ವಾಸಿತ (ವಲಸೆಗಾರ) ರ ಇಂಥ ಅನೇಕ ಉದಾಹರಣೆಗಳನ್ನು ತಮಗೆ ಹೇಳಲು ಬರಬಹುದು

ಯಾವುದೇ ರಾಷ್ಟದಲ್ಲಿಯ ಜನರಿಗೆ ಯಾವಾಗ ನಿರ್ವಾಸಿತರಾಗುವದು ಅಂದರೆ ತಮ್ಮ ದೇಶವನ್ನು ಬಿಡುವ




ನಿರ್ವಾಸಿತರಿಗೆ ಸಂಯುಕ್ತ ರಾಷ್ಟ್ರಸಂಘದ ಸಹಾಯ

ವೇಳ ಬರುವದೋ ಆಗ ಅವರಿಗೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುವದು. ಮಹತ್ವದ ಸಮಸ್ಯೆಯಂದರೆ ತಮ್ಮ ದೇಶ ಬಿಟ್ಟು ಎಲ್ಲಿಗೆ ಹೋಗುವದು? ಮತ್ತು ಆ ರಾಷ್ಟ್ರವು ನಮ್ಮನ್ನು ಸ್ವೀಕರಿಸಬಹುದೇ? ಈ ಪ್ರಶ್ನೆ ಅವರ ಮುಂದಿರುವದು. ಎರಡನೆಯದೆಂದರೆ ತಮ್ಮ ಜೊತೆಗೆ ಕುಟುಂಬದಲ್ಲಿಯ ಜನರನ್ನು ಸುರಕ್ಷಿತವಾಗಿ ಕರೆದು ಕೊಂಡು ಹೋಗುವದು. ಇದರ ಪ್ರಚಂಡ ಶಾರೀರಿಕ ಮತ್ತು ಮಾನಸಿಕ ಒತ್ತಡವಿರುವದು. ಇದಲ್ಲದೆ ಕಠಿಣ ರಸ್ತೆ, ಅಡಗುತ್ತ ಹೋಗುವದು, ನೈಸರ್ಗಿಕ ಸಮಸ್ಯೆ ಅಂದರೆ ಬಿಸಿಲು, ಮಳೆ, ಬಿರುಗಾಳಿ, ಅನ್ನಧಾನ್ಯದ ಕೊರತೆ, ಅನಾರೋಗ್ಯ, ಬೆನ್ನಟ್ಟಿದ ಶತ್ರು ಮುಂತಾದ. ಸಮಸ್ಯೆಗಳು ಇದ್ದೇ ಇರುವವು. ಇದರಲ್ಲಿ ಅನೇಕ ಜನರು ಮರಣ ಹೊಂದುವರು.

ಸುರಕ್ಷಿತ ಸ್ಥಳಕ್ಕೆ ಮುಟ್ಟಿದ ನಂತರ ಹೊಸ ಸಮಸ್ಯೆಗಳು ಬರುತ್ತವೆ, ಕೆಲಸ ಬೊಗಸೆ ಶೋಧಿಸುವದು, ಇರಲು ಸ್ಥಳ, ಇತರ ದಿನನಿತ್ಯದ ಪ್ರಶ್ನೆಗಳು, ಇವುಗಳನ್ನು ಎದುರಿಸಬೇಕಾಗುವದು. ಎರಡನೆಯ ರಾಷ್ಟ್ರದಲ್ಲಿಯ ಭಾಷೆ, ಸಂಸ್ಕೃತಿ ಭಿನ್ನವಿರಬಹುದು. ಅವರೊಂದಿಗೆ ಹೊಂದಿಕೊಂಡು ಹೋಗಲು ಅಡಚಣೆಯಾಗುವದು. ಯಾವ ರಾಷ್ಟ್ರದಲ್ಲಿ ನಿರ್ವಾಸಿತರು ಆಶ್ರಯ ಪಡೆಯುವರೋ ಅಲ್ಲಿಯ ಸಮಾಜ ಅವರನ್ನು ಸ್ವೀಕರಿಸುತ್ತದೆಯೋ ಇಲ್ಲವೋ? ಎಂಬುದು ಹೇಳಲು ಬರುವದಿಲ್ಲ, ಅದಕ್ಕೆ ವಿರುದ್ಧವಾಗಿ ನಿರ್ವಾಸಿತರ ಸಂಖ್ಯೆ ಹೆಚ್ಚಾಗಿದ್ದರಿಂದ ರಾಷ್ಟ್ರದ ಮೇಲಿನ ಭಾರ ಹೆಚ್ಚಾಗಬಹುದು. ಜೀವನಾವಶ್ಯಕ ವಸ್ತುಗಳ ಕೊರತೆಯಾಗಬಹುದು. ಅಪರಾಧಗಳ ಸಂಖ್ಯೆ ಹೆಚ್ಚಾಗಬಹುದು, ಬೆಲೆ ಏರಿಕೆ ಹೆಚ್ಚಾಗಬಹುದು, ಸ್ಥಾನಿಕರ ನೌಕರಿಗೆ ಗಂಡಾಂತರ ಬರಬಹುದು, ಶಾಂತತೆ ಮತ್ತು ಸುರಕ್ಷಿತತೆ ಸಮಸ್ಯೆಗಳ ಪ್ರಶ್ನೆ ಇಂಥ ಅನೇಕ ಸಮಸ್ಯೆಗಳು ನಿರ್ಮಾಣವಾಗಬಹುದು ಇದರಿಂದ ನಿರ್ವಾಸಿತರಿಗೆ ಆಸರೆ ಕೊಡಲು ಮತ್ತು ಅವರ ಪುನರ್ವಸನ ಮಾಡಲು ಅನೇಕ ರಾಷ್ಟ್ರಗಳು ಸಿದ್ಧರಾಗುವದಿಲ್ಲ,

ನಿರ್ವಾಸಿತರ ಕುರಿತು ಅಂತರರಾಷ್ಟ್ರಿಯ ಮಟ್ಟದಲ್ಲಿ 1951 ರಲ್ಲಿ ಕೆಲ ವ್ಯವಸ್ಥೆಗಳನ್ನು ಮಾಡಲಾಯಿತು ಅದಕ್ಕನುಸರಿಸಿ. ನಿರ್ವಾಸಿತರಿಗೆ ಅವರ ಇಚ್ಛೆಯ ವಿರುದ್ಧ ಅವರ ಮೂಲ ದೇಶಕ್ಕೆ ಕಳಿಸಲು ಬರುವದಿಲ್ಲ, ಹೀಗೆ ವ್ಯವಸ್ಥೆ ಮಾಡ ಲಾಯಿತು. ಹಾಗೆಯೇ ಅವರ ಪ್ರಶ್ನೆಬಿಡಿಸಲು ಸಂಯುಕ್ತ ರಾಷ್ಟ್ರ ಸಂಘದ ಉಚ್ಚ ಆಯುಕ್ತರ ಕಾರ್ಯಲಯವನ್ನು ಸ್ಥಾಪಿಸಲಾಯಿತು ಮಾನವೀ ಹಕ್ಕುಗಳ ಜೋಪಾಸನೆ ಮತ್ತು ಅದರ ಸಂವರ್ಧನೆ ಎಲ್ಲ ರಾಷ್ಟ್ರಗಳು ಮಾಡಿದರೆ ಅನ್ಯಾಯ, ಶೋಷಣೆ ಮತ್ತು ಹಿಂಸಾಚಾರ ಕಡಿಮೆಯಾಗ ಬಹುದು. ಎಲ್ಲ ಜನರಿಗೆ ಸುರಕ್ಷಿತವಾಗಿ ತಮ್ಮ ವಿಕಾಸ ಸಾಧಿಸಲು ಬರಬಹುದು.

ಪರಿಸರದ ರಕ್ಷಣೆ ಮಾಡಿ ಮತ್ತು ಆತಂಕವಾದದ ಸಂಪೂರ್ಣ ನಿರ್ಮೂಲನೆ ಮಾಡಿದರೆ ಮಾನವಿ ಹಕ್ಕು ಹೆಚ್ಚು ಪ್ರಭಾವಿಶಾಲಿಯಾಗಿ ಕಾರ್ಯರೂಪಕ್ಕೆ ತರಲು ಬರಬಹುದು. ಜಗತ್ತಿನಲ್ಲಿ ಯಾವುದೇ ಜನಸಮೂಹ ನಿರ್ವಾಸಿತರಾಗಲು ಬರುವದಿಲ್ಲ, ಇದಕ್ಕಾಗಿ ಪ್ರಯತ್ನ ಮಾಡಿದರೆ ಮಾನವೀ ಅಸುರಕ್ಷಿತತೆ ಕಡಿಮೆಯಾಗಮಹುದು. ಇದಕ್ಕಾಗಿ ಎಲ್ಲ ರಾಷ್ಟ್ರಗಳು ಒಟ್ಟಿಗೆ ಬರಬೇಕು, ತಮ್ಮಲ್ಲಿಯ ಸಹಕಾರ್ಯ ಹೆಚ್ಚಿಸಬೇಕು, ಕಠೋರ ಕೃತಿ ಮಾಡಬೇಕು ಮತ್ತು ಪ್ರತ್ಯಕ್ಷದಲ್ಲಿ ಬದಲಾವಣೆಯ ಪ್ರಯತ್ನ ಮಾಡಬೇಕಾಗುವರು.

ಮಂದಿನ ವರ್ಷ ನಾವು ಈ ಆಧಾರದಿಂದ ಸ್ವತಂತ್ರ ಭಾರತವು ಯಾವ ಆಗುಹೋಗುಗಳನ್ನು ಮಾಡಿದೆ ಎಂಬುದರ ಅಭ್ಯಾಸ ಮಾಡುವವರಿದ್ದೇವೆ.

## ಸ್ವಾಧ್ಯಾಯ

**1. ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆರಿಸಿ ವಿಧಾನಗಳನ್ನು ಪೂರ್ಣಮಾಡಿರಿ.**

(1) ಮುಂದಿನವುಗಳಲ್ಲಿ ಯಾವ ಸಮಸ್ಯೆಯು ಅಂತರರಾಷ್ಟ್ರಿಯ ಸ್ವರೂಪದ್ದಿದೆ.
- (ಅ) ಮಹಾರಾಷ್ಟ್ರ - ಕರ್ನಾಟಕ ಸೀಮಾವಾದ
- (ಬ) ಕಾವೇರಿ ನೀರಿನ ಹಂಚಿಕೆ
- (ಕ) ವಲಸೆಗಾರರ ಪ್ರಶ್ನೆ
- (ಡ) ಆಂಧ್ರ ಪ್ರದೇಶದಲ್ಲಿಯ ನಕ್ಸಲಿವಾದ

(2) ಮುಂದಿನವುಗಳಲ್ಲಿ ಯಾವ ಹಕ್ಕಿನ ಸಮಾವೇಶವು ಮಾನವಿ ಹಕ್ಕುಗಳಲ್ಲಿ ಆಗುವದಿಲ್ಲ
- (ಅ) ದಿನಗೂಲಿಯ ಹಕ್ಕು
- (ಬ) ಮಾಹಿತಿಯ ಹಕ್ಕು
- (ಕ) ಬಾಲಕರ ಹಕ್ಕು
- (ಡ) ಸಮಾನ ಕೆಲಸಕ್ಕೆ ಸಮಾನ ವೇತನ

(3) ಮುಂದಿನವುಗಳಲ್ಲಿ ಯಾವ ದಿವಸವನ್ನು ಅಂತರರಾಷ್ಟ್ರಿಯ ಮಟ್ಟದಲ್ಲಿ ಆಚರಿಸಲಾಗುವದು?
- (ಅ) ಶಿಕ್ಷಕ ದಿವಸ
- (ಬ) ಬಾಲ ದಿವಸ
- (ಕ) ವಸುಂಧರಾ ದಿವಸ
- (ಡ) ಧ್ವಜ ದಿವಸ

**2. ಮುಂದಿನ ವಿಧಾನಗಳು ಸರಿಯೋ ತಪ್ಪೋ ಎಂಬುದನ್ನು ಕಾರಣದೊಂದಿಗೆ ವಿವರಿಸಿರಿ.**

(1) ಪರಿಸರ ಹಾನಿಯಮೇಲೆ ಉಪಾಯ ಯೋಜನೆಯನ್ನು ಶೋಧಿಸಲು ಎಲ್ಲ ರಾಷ್ಟ್ರಗಳು ಸಹಕಾರ್ಯ ಮಾಡುವದು ಅವಶ್ಯಕವಾಗಿದೆ.

(2) ವಲಸೆಗಾರರಿಗೆ ಆಶ್ರಯ ಕೊಡಲು ರಾಷ್ಟ್ರಗಳು ಸಿದ್ಧವಾಗುವವು.

**3. ಮುಂದಿನ ಸಂಕಲ್ಪನೆಯನ್ನು ಸ್ಪಷ್ಟ ಪಡಿಸಿರಿ.**

(1) ಮಾನವೀ ಹಕ್ಕುಗಳು (2) ಪರಿಸರದ ಹಾನಿ
(3) ಆತಂಕವಾದ

**4) ಕೊಟ್ಟ ಸೂಚನೆಯಂತೆ ಕೃತಿ ಮಾಡಿರಿ.**

**ಮುಂದಿನ ಸಂಕಲ್ಪನಾಚಿತ್ರವನ್ನು ಪೂರ್ಣಮಾಡಿರಿ.**

ಕಾರಣಗಳು
1.
2.
3.
4.

ಪರಿಸರದ ಹಾನಿ

ದೃಶ್ಯ ಪರಿಣಾಮ
1.
2.
3.
4.

ಉಪಾಯ ಯೋಜನೆ
1.
2.
3.
4.

**5) ಮುಂದಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರಗಳನ್ನು ಬರೆಯಿರಿ.**

(1) ಮಾನವೀ ಹಕ್ಕು ಪ್ರಸ್ಥಾಪಿಸಲು ಮಾಡಿದ ಭಾರತದ ಪಾತ್ರ ಸ್ಪಷ್ಟಪಡಿಸರಿ.

(2) ಆತಂಕವಾದದಿಂದ ಯಾವ ಪರಿಣಾಮಗಳಾಗುತ್ತವೆ ಎಂಬುದನ್ನು ಹೇಳಿ ಆತಂಕ ವಾದವನ್ನು ತಡೆಹಿಡಿಯಲು ಉಪಾಯವನ್ನು ಸೂಚಿಸಿರಿ

### ಉಪಕ್ರಮ

(1) ರಾಜ್ಯ ಬಾಲಹಕ್ಕು ಆಯೋಗದ ಮಾಹಿತಿಯನ್ನು ಶಿಕ್ಷಕರ ಸಹಾಯದಿಂದ ಪಡೆದು ಕೊಳ್ಳಿರಿ.

(2) ಚೀನದಲ್ಲಿಯ 'ಗುಬ್ಬಿ ಹೊಡೆಯಿರಿ' ಆಂದೋಲನ ಮತ್ತು ಭಾರತದಲ್ಲಿಯ ಚಿಪಕೋ ಆಂದೋಲನ' ಇವುಗಳ ಮಾಹಿತಿಯನ್ನು ಪಡೆದುಕೊಳ್ಳಿರಿ.


(3) ದೊಡ್ಡ ಆಣೆಕಟ್ಟಿನಿಂದ ಸಮಸ್ಯೆಗಳು ನಿರ್ಮಾಣವಾಗುತ್ತವೆಯೆ? ನಿಮ್ಮ ಮತವನ್ನು ಬರೆಯಿರಿ.


(4) ಶಾಲೆಯಲ್ಲಿ ಆಚರಿಸಿದ ವಸುಂಧರಾ ದಿನದ ಅಹವಾಲನ್ನು ಬರೆಯಿರಿ.


C5N5I7

# छत्रपती शिवाजी महाराज स्मृतिग्रंथ

- सामान्य रयतेच्या कल्याणासाठी स्थापन केलेल्या स्वराज्य स्थापनेची कथा उलगडणारे पुस्तक.
- छत्रपती शिवाजी महाराजांच्या उत्तुंग कार्य व त्यामागची तेवढीच उत्तुंग व उदात्त भूमिका वाचकांसमोर आणणारे प्रेरणादायी वाचन साहित्य.
- इतिहास वाचनासाठी पूरक असे संदर्भ पुस्तक.







- इतिहास वाचनासाठी पूरक अशी संदर्भ पुस्तके.
- निवडक लेखक, इतिहासकारांचे प्रेरणादायी लेख.

**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५











ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

इतिहास व राज्यशास्त्र इ. ९ वी (कन्नड माध्यम)

₹ 54.00